ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಜಿರಳೆ’ಯ ಸದ್ದು...

ಕಾಕ್ರೋಚ್ ಜನತಾ ಪಾರ್ಟಿ ಇದೇ ಶನಿವಾರ ಹಮ್ಮಿಕೊಂಡಿರುವ ಪ್ರತಿಭಟನೆಗಾಗಿ ಮುಂಬೈನಲ್ಲಿ ವ್ಯಕ್ತಿಯೊಬ್ಬರು ಭಿತ್ತಿಪತ್ರವನ್ನು ರಚಿಸುವುದರಲ್ಲಿ ತಲ್ಲೀನರಾಗಿದ್ದರು



ರಾಜಹಂಸ...

ನವಿ ಮುಂಬೈನ ಸೀವುಡ್ಸ್‌ನಲ್ಲಿ ಎರಡು ರಾಜಹಂಸಗಳು ಮುದ್ದಾಗಿ ಕಾಣಿಸಿಕೊಂಡಿದ್ದು ಹೀಗೆ...





ಪಂಚ ಗ್ಯಾರಂಟಿ ಯೋಜನೆಗಳ ಪ್ರಣಾಳಿಕೆ ಮೂಲಕ ಬಡ ಜನರ ನೆಮ್ಮದಿಯ ಜೀವನಕ್ಕೆ ನಾಂದಿ ಹಾಡಿದ ರೂವಾರಿ,
ನಾಡು ಕಂಡ ಧೀಮಂತ ನಾಯಕ, ಧ್ವನಿ ಇಲ್ಲದ ಸಮುದಾಯಗಳ, ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿರುವ ದೂರದೃಷ್ಟಿಯುಳ್ಳ ರಾಜಕಾರಣಿ,
ಖ್ಯಾತ ಶಿಕ್ಷಣ ತಜ್ಞ, ಮಾತೃ ಹೃದಯಿ, ಯುವಕರ ವಿದ್ಯಾರ್ಥಿಗಳ ಆಶಾಕಿರಣ ನಮ್ಮ ನೆಚ್ಚಿನ ನಾಯಕ
2ನೇ ಬಾರಿ ಉಪಮುಖ್ಯಮಂತ್ರಿಗಳಾಗಿ
ಪ್ರಮಾಣ ವಚನ ಸ್ವೀಕರಿಸಿದ
ಡಾ|| ಜಿ. ಪರಮೇಶ್ವರ ರವರಿಗೆ
ಅಭಿನಂದನೆಗಳು
ಸುನೀಲ್ ಪ್ರಕಾಶ್
ಶುಭಕೋರುವವರು :
ಡಾ. ಜಿ.ಪರಮೇಶ್ವರ
ಅಭಿಮಾನಿಗಳ ಬಳಗ
ಮಾಗಡಿ ಜಯರಾಮು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಆಯುಷ್ ಶೆಟ್ಟಿ ಮುನ್ನಡೆ
ಭಾರತದ ಯುವ ತಾರೆ, ಕನ್ನಡಿಗ ಆಯುಷ್ ಶೆಟ್ಟಿ ಅವರು ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಪ್ರಿಕ್ವಾರ್ಟರ್ ಫೈನಲ್ ಪ್ರವೇಶಿಸಿದರು



ಸೆನ್ಸೆಕ್ಸ್ 74,346 | ನಿಫ್ಟಿ 23,405 | $/₹ 95.76 | ಚಿನ್ನ (Std. 10g) ₹1,60,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,78,000 (ಬೆಂಗಳೂರು)

13 ಸಚಿವರ ‘ಡಿಕೆ ಸರ್ಕಾರ’ ಅಸ್ತಿತ್ವಕ್ಕೆ

ಪರಮೇಶ್ವರ ಡಿಸಿಎಂ, ಸ್ತ್ರೀಶಕ್ತಿ ಇಲ್ಲದ ಸಂಪುಟ • ಯತೀಂದ್ರ ಒಬ್ಬರೇ ಹೊಸಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷಕ್ಕೆ ಬಲ ತುಂಬುವ ಸುದೀರ್ಘ ಹೋರಾಟದ ಪರಂಪರೆಯ ಡಿ.ಕೆ. ಶಿವಕುಮಾರ್, ಅಧಿಕಾರ ಹಸ್ತಾಂತರದ ಗೊಂದಲಗಳನ್ನೆಲ್ಲ ಕಳೆದುಕೊಂಡು ‘ಶುಭಮುಹೂರ್ತ’ದಲ್ಲಿ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ಬುಧವಾರ ಸಂಜೆಯಿಂದಲೇ ಅವರ ಸರ್ಕಾರ ಕಾರ್ಯಾರಂಭ ಮಾಡಿದೆ. ನೂತನ ಮುಖ್ಯಮಂತ್ರಿಯಾಗಿ ಲೋಕಭವನದ ಗಾಜಿನ ಮನೆಯಲ್ಲಿ ಸಂಭ್ರಮದ ನಡುವೆಯೇ, ಶಿವಕುಮಾರ್ ಪ್ರಮಾಣವಚನ ಸ್ವೀಕರಿಸಿದರು.

ಉಪ ಮುಖ್ಯಮಂತ್ರಿಯಾಗಿ ಜಿ. ಪರಮೇಶ್ವರ ಮತ್ತು ಸಂಪುಟ ದರ್ಜೆಯ ಸಚಿವರುಗಳಾಗಿ 12 ಶಾಸಕರು ಕೂಡ ಇದೇ ಸಂದರ್ಭದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಸಂಪುಟದಲ್ಲಿ ಸ್ಥಾನ ಪಡೆದಿರುವವರ ಪೈಕಿ ಯತೀಂದ್ರ ಸಿದ್ದರಾಮಯ್ಯ ಮಾತ್ರ ಹೊಸ ಮುಖ. ಸಭಾಧ್ಯಕ್ಷರಾಗಿದ್ದ ಯು.ಟಿ. ಖಾದರ್ ಅವರಿಗೆ ಸಚಿವ ಹುದ್ದೆ ನೀಡಿರುವುದು ಹೊರತುಪಡಿಸಿದರೆ, ಉಳಿದ ಎಲ್ಲರೂ ಸಿದ್ದರಾಮಯ್ಯ ನೇತೃತ್ವದ ಸಂಪುಟದಲ್ಲಿದ್ದವರೇ. ಮೊದಲ ಕಂತಿನ ಸಂಪುಟದಲ್ಲಿ ಮಹಿಳೆಯರಿಗೆ ಅವಕಾಶ ಸಿಕ್ಕಿಲ್ಲ.

ಲೋಕಭವನದ ಪೂರ್ವಾಭಿಮುಖವಾಗಿ ಸಿದ್ಧಪಡಿಸಲಾದ ವೇದಿಕೆಯಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧಿಕಾರ ಮತ್ತು ಗೋಪ್ಯತಾ ಪ್ರಮಾಣವಚನ ಬೋಧಿಸಿದರು.

ನಾಡಿನ ಸರ್ವ ಸಮುದಾಯಗಳ 40ಕ್ಕೂ ಹೆಚ್ಚು ಸ್ವಾಮೀಜಿಗಳು, ಧರ್ಮ ಗುರುಗಳು, ವಿವಿಧ ಕ್ಷೇತ್ರಗಳ ಗಣ್ಯರು ಈ ಮಹತ್ವದ ಕ್ಷಣಕ್ಕೆ ಸಾಕ್ಷಿಯಾದರು.

▸7



ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸೌಧದ ಮುಂದೆ ಜನರತ್ತ ಕೈಬೀಸಿದರು – ಪಿಟಿಐ ಚಿತ್ರ

ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್

ಇನ್ನು ಮುಂದೆ ಶಾಲಾ–ಕಾಲೇಜುಗಳ ಎಲ್ಲ ವಿದ್ಯಾರ್ಥಿಗಳಿಗೂ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತ ಬಸ್ ಪಾಸ್ ವಿತರಿಸುವ ಸಂಬಂಧ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಚೊಚ್ಚಲ ಸಚಿವ ಸಂಪುಟ ಸಭೆ ಮಹತ್ವದ ತೀರ್ಮಾನ ತೆಗೆದುಕೊಂಡಿದೆ. ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಶಿವಕುಮಾರ್ ಅವರು ಈ ಮಾಹಿತಿ ನೀಡಿದರು. ‘ಈವರೆಗೆ ವಿದ್ಯಾರ್ಥಿನಿಯರಿಗೆ ಮಾತ್ರ ಉಚಿತ ಪಾಸ್ ನೀಡಲಾಗುತ್ತಿತ್ತು. ಗಂಡು ಮಕ್ಕಳಿಗೆ ಉಚಿತ ಪಾಸ್ ಸಿಗುತ್ತಿರಲಿಲ್ಲ. ಇನ್ನು ಮುಂದೆ ಪ್ರಾಥಮಿಕ ಶಾಲಾ ಹಂತದಿಂದ ಪದವಿ ಕಾಲೇಜು ಹಂತದವರೆಗೆ ಎಲ್ಲರಿಗೂ ಉಚಿತ ಪಾಸ್ ನೀಡಲಾಗುವುದು’ ಎಂದರು.

‘ರಾಜ್ಯದಲ್ಲಿ 10 ಸಾವಿರ ಭಾರತ್ ಜೋಡೊ ಯುವಕ ಸಂಘಗಳನ್ನು ಸ್ಥಾಪಿಸಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿ 6,000 ಮತ್ತು ನಗರ ಪ್ರದೇಶಗಳಲ್ಲಿ 4,000 ಸಂಘಗಳನ್ನು ಸ್ಥಾಪಿಸಲಾಗುವುದು. ಪ್ರತಿ ಸಂಘಕ್ಕೆ ಸರ್ಕಾರದ ವತಿಯಿಂದ ₹10 ಲಕ್ಷ ನೆರವು ನೀಡಲಾಗುವುದು. ಈ ಸಂಘಗಳ ಮೂಲಕ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಮತ್ತು ನಾಯಕತ್ವ ರೂಪಿಸುವುದಕ್ಕೆ ಆದ್ಯತೆ ನೀಡಲಾಗುವುದು’ ಎಂದು ಶಿವಕುಮಾರ್ ತಿಳಿಸಿದರು.


ಕೆಪಿಸಿಸಿಗೆ ಹರಿಪ್ರಸಾದ್ ಸಾರಥ್ಯ

ನವದೆಹಲಿ: ನೂತನ ಮುಖ್ಯಮಂತ್ರಿ ಹಾಗೂ ಸಚಿವರ ಪದಗ್ರಹಣದ ಬೆನ್ನಲ್ಲೇ, ಕೆಪಿಸಿಸಿ ಅಧ್ಯಕ್ಷರಾಗಿ ವಿಧಾನ ಪರಿಷತ್ ಹಿರಿಯ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ಎಐಸಿಸಿ ಬುಧವಾರ ರಾತ್ರಿ ನೇಮಕ ಮಾಡಿದೆ.

ಹರಿಪ್ರಸಾದ್ ಅವರು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ, ಸಚಿವರ ಮೊದಲ ಪಟ್ಟಿಯಲ್ಲಿ ಅವರ ಹೆಸರು ಇರಲಿಲ್ಲ. ಈ ನಡುವೆ, ಕೆಪಿಸಿಸಿ ಅಧ್ಯಕ್ಷರಾಗುವಂತೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ಹರಿಪ್ರಸಾದ್ ಅವರ ಮನವೊಲಿಸಿದರು. ಆ ಬಳಿಕ, ಅಧ್ಯಕ್ಷ ಗಾದಿ ವಹಿಸಿಕೊಳ್ಳಲು ಒಪ್ಪಿದರು. ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್ ಅವರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇಮಕ ಮಾಡಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಡಿಗ ಸಮುದಾಯದ ಅವರು ನಾಲ್ಕು ಅವಧಿಗೆ ರಾಜ್ಯಸಭಾ ಸದಸ್ಯರಾಗಿ ದ್ದರು. ಆರು ವರ್ಷಗಳಿಂದ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ಜೂನ್ 30ಕ್ಕೆ ಅವರ ಪರಿಷತ್ ಸದಸ್ಯತ್ವ ಮುಗಿಯಲಿದೆ. ಪರಿಷತ್ ಚುನಾವಣೆಗೆ ಮತ್ತೆ ಅವರನ್ನು ಕಣಕ್ಕಿಳಿಸಲಾಗಿದೆ. ಹೈಕಮಾಂಡ್ ಜತೆಗೆ ನಿಕಟ ಸಂಪರ್ಕ ಹೊಂದಿರುವ ಅವರು ಈ ಹಿಂದೆ 19 ರಾಜ್ಯಗಳ ಉಸ್ತುವಾರಿಯಾಗಿ ಕೆಲಸ ಮಾಡಿದ್ದರು. ಅವರು ಪ್ರಸ್ತುತ ಹರಿಯಾಣದ ಉಸ್ತುವಾರಿಯಾಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಬಲ ಆಕಾಂಕ್ಷಿಯಾಗಿದ್ದರು. ಅವರು ಅಧ್ಯಕ್ಷ ಗಾದಿಯ ಜತೆಗೆ ಸಚಿವ ಸ್ಥಾನಕ್ಕೂ ಪಟ್ಟು ಹಿಡಿದಿದ್ದರು. ಇದಕ್ಕೆ ಹೈಕಮಾಂಡ್ ಸಮ್ಮತಿ ಸೂಚಿಸಿರಲಿಲ್ಲ. ಆ ನಂತರ, ಹರಿಪ್ರಸಾದ್ ಹೆಸರು ಮುನ್ನೆಲೆಗೆ ಬಂದಿತ್ತು.

ಪ್ರಬಲ ಒಕ್ಕಲಿಗ ಸಮುದಾಯದ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿದ್ದಾರೆ. ಜಾತಿ ಸಮೀಕರಣದ ಆಧಾರದಲ್ಲಿ ಈಡಿಗ (ಬಿಲ್ಲವ) ಸಮು ದಾಯದ ಹರಿಪ್ರಸಾದ್ ಅವರಿಗೆ ಪಕ್ಷವು ರಾಜ್ಯ ಘಟಕದ ಚುಕ್ಕಾಣಿ ನೀಡಿದೆ. ಕೆಲವೇ ತಿಂಗಳುಗಳಲ್ಲಿ ನಡೆಯಲಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸುವ ಸವಾಲು ಅವರ ಮುಂದಿದೆ. ಮುಖ್ಯಮಂತ್ರಿ ಜತೆಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ ಸಂಘಟನೆಗೆ ಚುರುಕು ಮುಟ್ಟಿಸುವ ಹೊಣೆಯೂ ಅವರ ಎದುರಿಗೆ ಇದೆ.



ಬಿ.ಕೆ.ಹರಿಪ್ರಸಾದ್

ಹೈಕೋರ್ಟ್‌ಗೆ ಆರು ನ್ಯಾಯಮೂರ್ತಿಗಳ ನೇಮಕ: ಕೊಲಿಜಿಯಂ



ನವದೆಹಲಿ: ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಆರು ವಕೀಲರನ್ನು ನೇಮಕ ಮಾಡಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದಲ್ಲಿ ಮಂಗಳವಾರ ನಡೆದ ಕೊಲಿಜಿಯಂ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸುಪ್ರೀಂ ಕೋರ್ಟ್ ವಕೀಲ ರಾಘವೇಂದ್ರ ಸೀತಾರಾಮ್ ಶ್ರೀವತ್ಸ, ಹೈಕೋರ್ಟ್ ವಕೀಲರಾದ ಹೇಮಾ ಕುಲಕರ್ಣಿ, ಸುಬ್ರಹ್ಮಣ್ಯ ರಂಗರಾವ್, ತಡಗವಾಡಿ ಪ್ರಕಾಶ್ ವಿವೇಕಾನಂದ, ಬಕ್ಕೇಶ್ವರ ಪ್ರಮೋದ್ ಮತ್ತು ಹೊಂಬೇಗೌಡ ಶಾಂತಿ ಭೂಷಣ ಅವರ ಹೆಸರನ್ನು ಶಿಫಾರಸು ಮಾಡಲಾಗಿದೆ.

ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಮೂವರು ನ್ಯಾಯಾಂಗ ಅಧಿಕಾರಿಗಳನ್ನು ನೇಮಿಸಲು ಕೇಂದ್ರ ಸರ್ಕಾರ ಇತ್ತೀಚೆಗೆ ಅನುಮೋದನೆ ನೀಡಿತ್ತು. ಇದರಿಂದಾಗಿ ಹೈಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆ 48ಕ್ಕೆ ಏರಿತ್ತು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸಂಪುಟದಲ್ಲಿ ಜಾತಿ ಲೆಕ್ಕಾಚಾರ

ಒಕ್ಕಲಿಗ–2, ರೆಡ್ಡಿ ಒಕ್ಕಲಿಗ–1, ವೀರಶೈವ–ಲಿಂಗಾಯತ–3, ಪರಿಶಿಷ್ಟ ಜಾತಿ–3, ಪರಿಶಿಷ್ಟ ಪಂಗಡ–1, ಕುರುಬ–2, ಕ್ರೈಸ್ತ–1, ಮುಸ್ಲಿಂ–1

ಮೊದಲ ಹಂತದ ಸಂಪುಟದಲ್ಲಿ ನಾಲ್ವರು ದಲಿತರು, ಇಬ್ಬರು ಒಕ್ಕಲಿಗ, ಮೂವರು ಲಿಂಗಾಯತ, ಅಲ್ಪಸಂಖ್ಯಾತ ಮತ್ತು ಕುರುಬ ಸಮುದಾಯದ ತಲಾ ಇಬ್ಬರು, ಒಬ್ಬರು ರೆಡ್ಡಿ ಸಮುದಾಯದವರಿಗೆ ಅವಕಾಶ ನೀಡಲಾಗಿದೆ. ಆದರೆ, ಪ್ರಾದೇಶಿಕವಾರು ಹಂಚಿಕೆ ಆಗಿಲ್ಲ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಕ್ಕಲಿಗ. ದಲಿತರ ಪೈಕಿ ಜಿ. ಪರಮೇಶ್ವರ, ಪ್ರಿಯಾಂಕ್ ಖರ್ಗೆ ಬಲಗೈ ಸಮುದಾಯದವರು. ಕೆ.ಎಚ್. ಮುನಿಯಪ್ಪ ಎಡಗೈ ಗುಂಪಿನವರು. ಲಿಂಗಾಯತ ಸಮುದಾಯದಿಂದ ಎಂ.ಬಿ. ಪಾಟೀಲ, ಶರಣಪ್ರಕಾಶ್ ಪಾಟೀಲ, ಈಶ್ವರ್ ಖಂಡ್ರೆಗೆ ಅವಕಾಶ ನೀಡಲಾಗಿದೆ. ಪರಿಶಿಷ್ಟ ಪಂಗಡದಿಂದ ಸತೀಶ ಜಾರಕಿಹೊಳಿ, ಒಕ್ಕಲಿಗ ಸಮುದಾಯದಿಂದ ಕೃಷ್ಣ ಬೈರೇಗೌಡ ಸ್ಥಾನ ಪಡೆದಿದ್ದಾರೆ. ಅಲ್ಪಸಂಖ್ಯಾತ ಸಮುದಾಯದಿಂದ ಯು.ಟಿ. ಖಾದರ್ ಮತ್ತು ಕೆ.ಜೆ. ಜಾರ್ಜ್, ರೆಡ್ಡಿ ಸಮುದಾಯದಿಂದ ರಾಮಲಿಂಗಾರೆಡ್ಡಿ, ಕುರುಬ ಸಮುದಾಯದಿಂದ ಬೈರತಿ ಸುರೇಶ್, ಯತೀಂದ್ರ ಸಿದ್ದರಾಮಯ್ಯ ಅವರಿಗೆ ಅವಕಾಶ ನೀಡಲಾಗಿದೆ.

ಸಂಪುಟದಲ್ಲಿ ಯಾರ್‍ಯಾರು?

- ಕೆ.ಎಚ್. ಮುನಿಯಪ್ಪ
- ಕೆ.ಜೆ. ಜಾರ್ಜ್
- ಎಂ.ಬಿ. ಪಾಟೀಲ
- ರಾಮಲಿಂಗಾರೆಡ್ಡಿ
- ಸತೀಶ ಜಾರಕಿಹೊಳಿ
- ಕೃಷ್ಣ ಬೈರೇಗೌಡ
- ಪ್ರಿಯಾಂಕ್ ಖರ್ಗೆ
- ಯು.ಟಿ. ಖಾದರ್
- ಈಶ್ವರ್ ಖಂಡ್ರೆ
- ಯತೀಂದ್ರ ಸಿದ್ದರಾಮಯ್ಯ
- ಬೈರತಿ ಸುರೇಶ್
- ಶರಣಪ್ರಕಾಶ್ ಪಾಟೀಲ



ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು. ಅವರ ಅಧಿಕಾರದ ಅವಧಿಗೆ ಶುಭಾಶಯಗಳು. ಕೇಂದ್ರವು ಜನರ ಕಲ್ಯಾಣಕ್ಕಾಗಿ ಕರ್ನಾಟಕ ಸರ್ಕಾರದೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸಲಿದೆ
ನರೇಂದ್ರ ಮೋದಿ, ಪ್ರಧಾನಮಂತ್ರಿ

ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗಿ, ಕರ್ನಾಟಕವನ್ನು ಯಶಸ್ವಿಯಾಗಿ ಮುನ್ನಡೆಸುತ್ತೀರಿ ಎಂಬ ಅದಮ್ಯ ವಿಶ್ವಾಸ ನನಗಿದೆ. ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ. ಮತ್ತಷ್ಟು ಯಶಸ್ಸು ನಿಮ್ಮದಾಗಲಿ
ಸೋನಿಯಾ ಗಾಂಧಿ, ಕಾಂಗ್ರೆಸ್ ವರಿಷ್ಠೆ

ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿರುವ ಶಿವಕುಮಾರ್ ಅವರಿಗೆ ಹೃತ್ಪೂರ್ವಕ ಶುಭಾಶಯಗಳು ಮತ್ತು ಅಭಿನಂದನೆಗಳು. ನಿಮ್ಮ ನಾಯಕತ್ವದಲ್ಲಿ ಕರ್ನಾಟಕ ರಾಜ್ಯವು ಎಲ್ಲ ಕ್ಷೇತ್ರಗಳಲ್ಲಿಯೂ ಸಶಕ್ತವಾಗಿ ಮುನ್ನಡೆಯಲಿ. ತಮಗೆ ದೊರೆತಿರುವ ಅವಕಾಶದಲ್ಲಿ ಜನರಿಗೆ ಒಳ್ಳೆಯದನ್ನು ಮಾಡಿ ಎಂದು ಹಾರೈಸುತ್ತೇನೆ
ಎಚ್.ಡಿ.ದೇವೇಗೌಡ, ಜೆಡಿಎಸ್ ವರಿಷ್ಠ


ಶ್ರೀ ಭುವನೇಶ್ವರಿ ಒಕ್ಕಲಿಗರ ಸಂಘ
ಬೆಂಗಳೂರು ಪೂರ್ವ ತಾಲ್ಲೂಕು
ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಗಳು
ಸನ್ಮಾನ್ಯ ಶ್ರೀ ಡಿ.ಕೆ ಶಿವಕುಮಾರ್
ರವರಿಗೆ
ಶುಭಾಶಯಗಳು
ಶುಭಕೋರುವವರು : ಎಲ್ಲಾ ನಿರ್ದೇಶಕರು ಹಾಗೂ ಪದಾಧಿಕಾರಿಗಳು ಶ್ರೀ ಭುವನೇಶ್ವರಿ ಒಕ್ಕಲಿಗರ ಸಂಘ

ಗುರುವಾರ, ಜೂನ್ 4, 2026 ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸಂಭ್ರಮ...
ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರಿಂದ ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತೆಯರು ಬಣ್ಣ ಹಚ್ಚಿಕೊಂಡು ಸಂಭ್ರಮಿಸಿದರು



ಸೆಮಿಗೆ ಮುನ್ನಡೆದ ಮೆನ್ಸಿಕ್
ಜೆಕ್ ಗಣರಾಜ್ಯದ ಜೇಕಬ್ ಮೆನ್ಸಿಕ್ ಅವರು ಬ್ರೆಜಿಲ್‌ನ ಜೊವೊ ಫೊನ್ಸೆಕಾ ಅವರನ್ನು ಸೋಲಿಸಿ, ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್‌ಗೆ ಮುನ್ನಡೆದರು

ಸಂಧ್ಯಾ ಸುರಕ್ಷಾ: 15.99 ಲಕ್ಷ ಪಿಂಚಣಿ ರದ್ದು 4 | ‘ಅರಾವಳಿ’ ಪರಿಶೀಲನೆಗೆ ಸಮಿತಿ 11

ದೆಹಲಿ ಅಗ್ನಿ ದುರಂತ: 21 ಸಾವು

ಹೋಟೆಲ್‌ನ ಕಿಟಕಿ ಗಾಜು ಒಡೆದು ಕೆಳಗೆ ಜಿಗಿದ ಕೆಲವರು • ಹಲವರ ಜೀವ ಉಳಿಸಿದ ಸ್ಥಳೀಯರು

ನವದೆಹಲಿ (ಪಿಟಿಐ): ದಕ್ಷಿಣ ದೆಹಲಿಯ ಮಾಳವೀಯ ನಗರದ ಐದು ಅಂತಸ್ತಿನ ಹೋಟೆಲ್‌ನಲ್ಲಿ ಬುಧವಾರ ಬೆಳಿಗ್ಗೆ ಸಂಭವಿಸಿದ ಭಾರಿ ಪ್ರಮಾಣದ ಅಗ್ನಿ ದುರಂತದಲ್ಲಿ ಕನಿಷ್ಠ 21 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಬೆಂಕಿಯಿಂದ ತಪ್ಪಿಸಿಕೊಳ್ಳಲು ಮಹಿಳೆಯೊಬ್ಬರು ಮಗುವಿನೊಂದಿಗೆ ಮೂರನೇ ಮಹಡಿಯಿಂದ ಜಿಗಿದಿರುವ ಘಟನೆಯೂ ಈ ವೇಳೆ ನಡೆದಿದೆ. ಕಟ್ಟಡದೊಳಗೆ ಸಿಲುಕಿದ್ದವರನ್ನು ರಕ್ಷಿಸಲು ಸ್ಥಳೀಯರು ನಾನಾ ರೀತಿಯಲ್ಲಿ ನೆರವಾಗಿ, ಹಲವರ ಪ್ರಾಣ ರಕ್ಷಿಸುವಲ್ಲಿ ಸಫಲರಾಗಿದ್ದಾರೆ.

ಮೃತಪಟ್ಟವರಲ್ಲಿ ಆರು ಜನರು ವಿದೇಶಿಯರಾಗಿದ್ದು, ಮುಖ್ಯವಾಗಿ ಮಧ್ಯ ಏಷ್ಯಾ ಮತ್ತು ಆಫ್ರಿಕಾದ ದೇಶಗಳಿಗೆ ಸೇರಿದವರಾಗಿದ್ದಾರೆ. ಗಾಯಗೊಂಡವರ ಪೈಕಿ ಒಂಬತ್ತು ಜನರ ಸ್ಥಿತಿ ಗಂಭೀರವಾಗಿದ್ದು, ಮೃತರ ಸಂಖ್ಯೆ ಹೆಚ್ಚಾಗಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಗಾಯಗೊಂಡವರನ್ನು ಚಿಕಿತ್ಸೆಗಾಗಿ ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

‘ಬೆಂಕಿ ಅವಘಡದಲ್ಲಿ ಸಿಲುಕಿದ್ದ 40ಕ್ಕೂ ಹೆಚ್ಚು ಜನರನ್ನು ರಕ್ಷಿಸಿ ಆಸ್ಪತ್ರೆಗೆ ಸಾಗಿಸಲಾಯಿತು. ಅವರಲ್ಲಿ 21 ಜನರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು’ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಬೆಂಕಿ ಅವಘಡ ಸಂಭವಿಸಿದ ಹೋಟೆಲ್‌ನ ಹೆಸರು ‘ಫ್ಲರಿಷ್ ಸ್ಟೇ ಬಿ ಆ್ಯಂಡ್ ಬಿ’ ಆಗಿದ್ದು, ಅದು ಇಲ್ಲಿನ ಜನದಟ್ಟಣೆ ಪ್ರದೇಶವಾದ ‘ಹೌಜ್ ರಾಣಿ’ಯಲ್ಲಿದೆ. ಅಗ್ನಿಶಾಮಕ ದಳದ ಅಧಿಕಾರಿ ಎ.ಕೆ.ಮಲಿಕ್ ಪ್ರಕಾರ, ಕಟ್ಟಡವು ತಳಮಹಡಿ, ನೆಲಮಹಡಿ ಮತ್ತು 5 ಅಂತಸ್ತುಗಳನ್ನು ಒಳಗೊಂಡಿದೆ.

ಕಟ್ಟಡದ ನೆಲಮಹಡಿಯಲ್ಲಿ ರೆಸ್ಟೋರೆಂಟ್, ಉಳಿದ ಭಾಗದಲ್ಲಿ ಹೋಟೆಲ್ ಇತ್ತು. ಆದರೆ ಹೋಟೆಲ್ ಕೇವಲ ಒಂದು ಪ್ರವೇಶ ಮತ್ತು ಒಂದು ನಿರ್ಗಮನ ದ್ವಾರವನ್ನು ಮಾತ್ರ ಹೊಂದಿತ್ತು ಎಂದು ಪೊಲೀಸರು ಹೇಳಿದ್ದಾರೆ.

4B



ಬೆಂಕಿ ಅವಘಡದಲ್ಲಿ ಸಿಲುಕಿದ್ದ ಕೆಲ ಜನರನ್ನು ಸ್ಥಳೀಯರು ರಕ್ಷಿಸಿದರು —ಎಪಿ / ಪಿಟಿಐ ಚಿತ್ರ

ಮೃತರ ಕುಟುಂಬಕ್ಕೆ ₹2 ಲಕ್ಷ ಪರಿಹಾರ

ಅಗ್ನಿ ದುರಂತದಲ್ಲಿ ಮೃತಪಟ್ಟವರಿಗೆ ಕಂಬನಿ ಮಿಡಿದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಮೃತರ ಕುಟುಂಬದವರಿಗೆ ತಲಾ ₹2 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50,000 ಪರಿಹಾರ ಘೋಷಿಸಿದ್ದಾರೆ.

ಗಾಯಾಳುಗಳು ಶೀಘ್ರವೇ ಚೇತರಿಸಿಕೊಳ್ಳಲಿ ಎಂದು ಹಾರೈಸಿರುವ ಅವರು, ಸಂತ್ರಸ್ತರಿಗೆ ಎಲ್ಲ ರೀತಿಯ ಸಹಾಯ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಖರ್ಗೆ ಆಗ್ರಹ: ‘ಬೆಂಕಿ ಅವಘಡದಿಂದ ತೀವ್ರ ದುಃಖಿತನಾಗಿದ್ದೇನೆ’ ಎಂದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ದೆಹಲಿಯ ಅಧಿಕಾರಿಗಳು ಸಂತ್ರಸ್ತರಿಗೆ ತ್ವರಿತವಾಗಿ ವೈದ್ಯಕೀಯ ಆರೈಕೆ ಸೇರಿದಂತೆ ಎಲ್ಲ ಪರಿಹಾರಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.



ಹೋಟೆಲ್‌ನ ಕಿಟಕಿಯಿಂದ ಕೆಳಗೆ ಜಿಗಿಯಲು ಮುಂದಾದ ವಿದೇಶಿಯರು –ಎಪಿ / ಪಿಟಿಐ

ಸುರಕ್ಷತಾ ಮಾನದಂಡ ಉಲ್ಲಂಘನೆ

ಮುಚ್ಚಿದ ಗಾಜಿನ ಕಿಟಕಿಗಳು, ದುರಂತದ ಸಮಯದಲ್ಲಿ ಕಾರ್ಯನಿರ್ವಹಿಸದ ಸೆನ್ಸರ್ ಚಾಲಿತ ಬಾಗಿಲುಗಳು, ಅಗ್ನಿ ಸುರಕ್ಷತಾ ಮಾನದಂಡಗಳ ಉಲ್ಲಂಘನೆ, ಅತಿಯಾದ ಕೊಠಡಿಗಳಿಂದಾಗಿ ದುರಂತದ ತೀವ್ರತೆ ಹೆಚ್ಚಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

4B

ಮಗುವಿನೊಂದಿಗೆ ಜಿಗಿದ ಮಹಿಳೆ

ಮೂರನೇ ಮಹಡಿಯಲ್ಲಿ ಸಿಲುಕಿದ್ದ ಮಹಿಳೆಯೊಬ್ಬರು ತನ್ನ ಮಗುವನ್ನು ತೋಳುಗಳಲ್ಲಿ ಗಟ್ಟಿಯಾಗಿ ಹಿಡಿದು ಕೆಳಕ್ಕೆ ಜಿಗಿದರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

ಒಳಗೆ ಸಿಲುಕಿರುವವರನ್ನು ರಕ್ಷಿಸಲು ಸ್ಥಳೀಯ ನಿವಾಸಿಗಳು ಹಾಸಿಗೆಗಳನ್ನು ಹರಡಿದ ಬಳಿಕ, ಆ ಮಹಿಳೆ ಮಗುವನ್ನು ಹಿಡಿದು ಹಾರಿದರು. ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಹಿಳೆಗೆ ಕೆಲ ಗಾಯಗಳಾಗಿದ್ದು, ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸಲಾಯಿತು ಎಂದು ಅವರು ವಿವರಿಸಿದರು.

ಸಿಲುಕಿದ್ದವರ ಕಿರುಚಾಟ

‘ಕಟ್ಟಡದಿಂದ ಹಲವು ಬಾರಿ ಸ್ಫೋಟದಂತಹ ಶಬ್ದಗಳು ಕೇಳಿ ಬಂದಿತು. ಒಳಗಿನಿಂದ ಕಿರುಚಾಟ ಜೋರಾಗಿ ಬರುತ್ತಿತ್ತು. ಸಹಾಯಕ್ಕಾಗಿ ಕೂಗುತ್ತಿದ್ದರು. ಕೆಲವರು ಕಿಟಕಿಗಳಿಂದ ಹಾರಿದರು. ಅವರ ರಕ್ಷಣೆಗಾಗಿ ಕಟ್ಟಡದ ಕಡೆಗೆ ಧಾವಿಸಿದರು’ ಎಂದು ಸ್ಥಳೀಯ ನಿವಾಸಿ ಅನಿತಾ ಚೌಧರಿ ಪ್ರತಿಕ್ರಿಯಿಸಿದರು.

4B

ಅಭಿಷೇಕ್ ಬ್ಯಾನರ್ಜಿ ನಾಯಕತ್ವ ವಿರೋಧಿಸಿ ಹೊರಬಂದ 58 ಶಾಸಕರು

ಟಿಎಂಸಿ ಬಂಡಾಯ ಬಣವೇ ವಿಪಕ್ಷ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಟಿಎಂಸಿ ಪಕ್ಷವು ಸೋಲುಂಡ ಬಳಿಕ ಪಕ್ಷದೊಳಗೆ ‘ಬಂಡಾಯ’ದ ಬೆಳವಣಿಗೆಗಳು ನಡೆದಿದ್ದವು. ಈಗ ಪಕ್ಷವು ಇಬ್ಭಾಗವಾಗಿದೆ. ಪಕ್ಷದ ಉಚ್ಚಾಟಿತ ಶಾಸಕ ರುತಬ್ರತಾ ಬ್ಯಾನರ್ಜಿ ಅವರನ್ನು ವಿರೋಧ ಪಕ್ಷದ ನಾಯಕನ್ನಾಗಿ ನೇಮಿಸಬೇಕು ಎಂದು ಕೋರಿ 58 ಬಂಡಾಯ ಶಾಸಕರು ನೀಡಿದ ಪತ್ರವನ್ನು ಸ್ಪೀಕರ್ ಪುರಸ್ಕರಿಸಿದ್ದಾರೆ.



ರುತಬ್ರತಾ ಬ್ಯಾನರ್ಜಿ

‘ನಮ್ಮದೇ ನಿಜವಾದ ಟಿಎಂಸಿ ಮತ್ತು ಪಶ್ಚಿಮ ಬಂಗಾಳದಲ್ಲಿ ನಮ್ಮದೇ ಪ್ರಮುಖ ವಿರೋಧ ಪಕ್ಷ’ ಎಂದು ಶಾಸಕ ರುತಬ್ರತಾ ಘೋಷಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಶಿವಸೇನಾ ಮತ್ತು ಎನ್‌ಸಿಪಿ ಪಕ್ಷಗಳು ಇಬ್ಭಾಗವಾದ ಮಾದರಿಯಲ್ಲಿಯೇ ಟಿಎಂಸಿಯಲ್ಲಿ ಕೂಡ ಬೆಳವಣಿಗೆಗಳು ನಡೆದವು. ಈ ಮೂಲಕ ಮಮತಾ ಬ್ಯಾನರ್ಜಿ ಅವರ ನೇತೃತ್ವದ ಮೂಲ ಪಕ್ಷವು ಈಗ ರಾಜ್ಯದಲ್ಲಿ ಅಧಿಕೃತ ವಿರೋಧ ಪಕ್ಷದ ಸ್ಥಾನವನ್ನು ಕಳೆದುಕೊಂಡಂತಾಗಿದೆ.

ಸ್ಪೀಕರ್ ರತೀಂದ್ರ ಬೋಸ್ ಅವರು ತಮ್ಮ ಬಣ ನೀಡಿದ ಪತ್ರವನ್ನು ಮಾನ್ಯ ಮಾಡಿರುವ ಬಗ್ಗೆ ಶಾಸಕ ರುತಬ್ರತಾ ಅವರು ಮಾಧ್ಯಮಗೋಷ್ಠಿ ನಡೆಸಿ, ಮಾಹಿತಿ ಹಂಚಿಕೊಂಡಿದ್ದಾರೆ. ‘ಸಭೆಗೆ ಗೈರಾಗಿದ್ದ ಇಬ್ಬರು ಶಾಸಕರು ಕೂಡ ನಮಗೆ ಬೆಂಬಲ ನೀಡಿದ್ದಾರೆ’ ಎಂದಿರುವ ಅವರು, ‘ಮಮತಾ ಬ್ಯಾನರ್ಜಿ ಅವರು ನಮಗೆ ಮಾರ್ಗದರ್ಶನ ಮಾಡಬೇಕು’ ಎಂದು ಕೋರಿದ್ದಾರೆ.

ಬಂಡಾಯ ಶಾಸಕರು ವಿಧಾನಸಭೆಯಲ್ಲಿ ಬುಧವಾರ ಸಭೆ ನಡೆಸಿದ್ದರು. ಸಭೆಯಲ್ಲಿ 58 ಶಾಸಕರು ಹಾಜರಿದ್ದರು. ಸಭೆಯ ಬಳಿಕ ಈ ಎಲ್ಲ ಶಾಸಕರ ಸಹಿ ಇದ್ದ ಪತ್ರವನ್ನು ಸ್ಪೀಕರ್ ಅವರಿಗೆ ನೀಡಲಾಯಿತು. ಟಿಎಂಸಿ ನಾಯಕತ್ವಕ್ಕೆ ಹತ್ತಿರದಲ್ಲಿರುವ ಕೆಲವು ನಾಯಕರು ಈ ಸಭೆಯಲ್ಲಿ ಭಾಗವಹಿಸಿರಲಿಲ್ಲ.

4B

> ಅವರಿಗೆ ಸಮಸ್ಯೆಗಳಿದ್ದರೆ, ಪಕ್ಷದೊಳಗೆ ಅದನ್ನು ಚರ್ಚಿಸಬಹುದಿತ್ತು. ಇದನ್ನು ಬಿಟ್ಟು ಅವರು ಪಕ್ಷದ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದ್ದಾರೆ
> **ಕುನಾಲ್ ಘೋಷ್,** ಟಿಎಂಸಿ ಶಾಸಕ


> ನಮ್ಮದೇ ನೈಜ ಟಿಎಂಸಿ. ಸರ್ಕಾರದ ಎಲ್ಲ ನೀತಿಗಳನ್ನು ವಿರೋಧಿಸಬೇಕು ಎಂಬ ಒಂದೇ ಕಾರಣಕ್ಕೆ ವಿರೋಧ ವ್ಯಕ್ತಪಡಿಸುವುದಿಲ್ಲ
> **ರುತಬ್ರತಾ ಬ್ಯಾನರ್ಜಿ,** ಟಿಎಂಸಿ ಉಚ್ಚಾಟಿತ ಶಾಸಕ

> ಮಮತಾ ಹಿಂದೆ ತಾವು ಮಾಡಿದ್ದರ ಫಲವನ್ನು ಉಣ್ಣುತ್ತಿದ್ದಾರೆ. ಟಿಎಂಸಿ ಕಾರ್ಯಕರ್ತರು ಭ್ರಮನಿರಸನಗೊಂಡಿದ್ದರೆ, ಕಾಂಗ್ರೆಸ್ ಬಾಗಿಲು ತೆರೆದಿದೆ
> **ಅಧೀರ್ ರಂಜನ್ ಚೌಧರಿ,** ಪಶ್ಚಿಮ ಬಂಗಾಳ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ

ಅಭಿಷೇಕ್ ನಾಯಕತ್ವಕ್ಕೆ ವಿರೋಧ

ಫಲಿತಾಂಶ ಹೊರಬಿದ್ದ ಬಳಿಕ ಮಮತಾ ಬ್ಯಾನರ್ಜಿ ಅವರ ನಿವಾಸದಲ್ಲಿ ನೂತನ ಶಾಸಕರ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಯಾರಾಗಬೇಕು ಎಂಬ ಚರ್ಚೆ ನಡೆದಿತ್ತು. ಸ್ಪೀಕರ್ ಅವರಿಗೆ ನೀಡುವ ಪತ್ರಕ್ಕಾಗಿ ಶಾಸಕರ ಸಹಿ ಸಂಗ್ರಹ ಮಾಡಲಾಗಿತ್ತು. ‘70ರಲ್ಲಿ 14 ಶಾಸಕರ ಸಹಿಗಳನ್ನು ನಕಲು ಮಾಡಲಾಗಿದೆ’ ಎಂದು ದೂರಿ ರುತಬ್ರತಾ ಮತ್ತು ಶಾಸಕ ಸಂದೀಪನ್ ಅವರು ಮೇ 27ರಂದು ಸ್ಪೀಕರ್ ಅವರಿಗೆ ದೂರು ನೀಡಿದ್ದರು.

‘ಮೇ 6ರಂದು ನಡೆದ ಸಭೆಯಲ್ಲಿ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಿರಲಿಲ್ಲ. ಆದರೆ, ವಿರೋಧ ಪಕ್ಷದ ನಾಯಕನ ಆಯ್ಕೆ ನಡೆದಿದೆ ಎಂದು ಪಕ್ಷ ಸುಳ್ಳು ಹೇಳಿದೆ’ ಎಂದೂ ದೂರಲಾಗಿತ್ತು. ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಕಾರಣ ನೀಡಿ ಈ ಇಬ್ಬರು ಶಾಸಕರನ್ನು ಟಿಎಂಸಿ ಜೂನ್ 1ರಂದು ಉಚ್ಚಾಟಿಸಿತ್ತು.



ಅಭಿಷೇಕ್ ಬ್ಯಾನರ್ಜಿ

4B

ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯವಾಗದು

ಪಕ್ಷವೊಂದರಿಂದ ಹೊರಬಂದು ಬಣ ಕಟ್ಟಿಕೊಂಡು, ಈ ಬಣದಲ್ಲಿನ ಶಾಸಕರ ಸಂಖ್ಯೆಯು ಒಟ್ಟು ಆ ಪಕ್ಷದಿಂದ ಆಯ್ಕೆಯಾದ ಶಾಸಕರ ಸಂಖ್ಯೆಯ ಮೂರನೇ ಎರಡರಷ್ಟಿದ್ದರೆ, ಬಂಡಾಯ ಶಾಸಕರ ಮೇಲೆ ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯವಾಗದು. ರಾಜ್ಯದಲ್ಲಿ ಒಟ್ಟು 80 ಟಿಎಂಸಿ ಶಾಸಕರಿದ್ದಾರೆ. ಮೂರನೇ ಎರಡರಷ್ಟು ಶಾಸಕರು ಎಂದರೆ, 54 ಶಾಸಕರಾಗುತ್ತಾರೆ. ಇಲ್ಲಿ 60 ಶಾಸಕರು ಬಂಡಾಯ ಗುಂಪಿನಲ್ಲಿದ್ದಾರೆ.

ಪರಿಷತ್: ಮೋಹನ್, ಶಿವಣ್ಣಗೆ ಹೈಕಮಾಂಡ್ ಮಣೆ

ಹರಿಪ್ರಸಾದ್, ತಿಪ್ಪಣ್ಣಪ್ಪಗೆ ಮತ್ತೆ ಅವಕಾಶ



ಮೋಹನ್



ಮಳವಳ್ಳಿ ಶಿವಣ್ಣ

ನವದೆಹಲಿ: ಕರ್ನಾಟಕ ವಿಧಾನ ಪರಿಷತ್ ಚುನಾವಣೆಗೆ ನಾಲ್ವರು ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಬುಧವಾರ ಪ್ರಕಟಿಸಿದೆ.

ಹಾಲಿ ಸದಸ್ಯರಾದ ಬಿ.ಕೆ. ಹರಿಪ್ರಸಾದ್ ಹಾಗೂ ತಿಪ್ಪಣ್ಣಪ್ಪ ಕಮಕನೂರ ಅವರಿಗೆ ಪಕ್ಷ ಮತ್ತೆ ಅವಕಾಶ ನೀಡಿದೆ. ಮತ್ತಿಬ್ಬರು ಅಭ್ಯರ್ಥಿಗಳನ್ನಾಗಿ ಎಐಸಿಸಿ ಕಾರ್ಯದರ್ಶಿ ಪಿ.ವಿ.ಮೋಹನ್ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಳವಳ್ಳಿ ಶಿವಣ್ಣ ಅವರನ್ನು ಪಕ್ಷ ಆಯ್ಕೆ ಮಾಡಿದೆ.

ಶಿವಣ್ಣ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು. ಒಬಿಸಿ ಸಮುದಾಯದ ಮೋಹನ್ ಅವರು ಕೇರಳಂ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸಹ ಉಸ್ತುವಾರಿಯಾಗಿ ಕೆಲಸ ಮಾಡಿದ್ದರು.

ಅಭ್ಯರ್ಥಿಗಳ ಆಯ್ಕೆಯಲ್ಲಿ ಒಬಿಸಿ ಸಮುದಾಯಕ್ಕೆ ಪಕ್ಷ ಹೆಚ್ಚಿನ ಆದ್ಯತೆ ನೀಡಿದೆ.

ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಚುನಾಯಿತರಾದ ಏಳು ಸದಸ್ಯರ ಅವಧಿ ಜೂನ್ 30ಕ್ಕೆ ಮುಗಿಯಲಿದ್ದು, ಆ ಸ್ಥಾನಗಳಿಗೆ ಜೂನ್ 18ಕ್ಕೆ ಚುನಾವಣೆ ನಡೆಯಲಿದೆ.

ವಿಧಾನಸಭೆಯ ಈಗಿನ ಬಲ 222 ಇದ್ದು, ಕಾಂಗ್ರೆಸ್‌ನಿಂದ ನಾಲ್ವರು ಮತ್ತು ಬಿಜೆಪಿಯಿಂದ ಇಬ್ಬರು ಸದಸ್ಯರು ಚುನಾಯಿತರಾಗುವುದು ಖಚಿತವಾಗಿದೆ. ಎರಡು ಸ್ಥಾನಗಳಿಗೆ ಬಿಜೆಪಿಯಲ್ಲಿ ಪೈಪೋಟಿ ಜೋರಾಗಿದೆ. ನಳಿನ್ ಕುಮಾರ್ ಕಟೀಲ್, ಶರಣು ತಳ್ಳಿಕೆರೆ, ರಘು ಕೌಟಿಲ್ಯ, ವೆಂಕಟೇಶ ದೊಡ್ಡೇರಿ, ಮಂಜುಳಾ, ನೆ.ಲ.ನರೇಂದ್ರಬಾಬು, ಎಂ.ಡಿ. ಲಕ್ಷ್ಮೀನಾರಾಯಣ, ಲಿಂಗರಾಜಪಾಟೀಲ, ಶ್ರುತಿ, ಎನ್.ಮಹೇಶ್ ಅವರ ಹೆಸರನ್ನು ಪಕ್ಷದ ರಾಜ್ಯ ಘಟಕವು ವರಿಷ್ಠರಿಗೆ ಕಳುಹಿಸಿದೆ. ಅಭ್ಯರ್ಥಿಗಳ ಆಖೈರುಗೊಳಿಸಲು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿಯು ಭಾನುವಾರ ಸಭೆ ನಡೆಸಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಸಾಧ್ಯತೆ.

ವಿಮರ್ಶಾ ಲೇಖನ: ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರಹಮ್ಮಿಕೊಂಡಿರುವರಾಜ್ಯಮಟ್ಟದ 'ತತ್ವಪದ ವಿಮರ್ಶಾ ಲೇಖನ ಸ್ಪರ್ಧೆ'ಗೆ ಲೇಖನಗಳನ್ನು ಕಳಿಸುವ ಅವಧಿಯನ್ನು ಜುಲೈ 10ರವರೆಗೆ ವಿಸ್ತರಿಸಲಾಗಿದೆ.

18ರಿಂದ 40 ವರ್ಷದೊಳಗಿನವರು ಈ ವಿಮರ್ಶಾ ಲೇಖನ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಯ ವಿಷಯ ಹಾಗೂ ಅರ್ಜಿ ನಮೂನೆ https://kanakadasaresearchcenter.karnataka.gov.in/ನಲ್ಲಿಲಭ್ಯವಿದೆ. ಆಸಕ್ತರು ಯಾವುದಾದರು ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು, ವಿಮರ್ಶಾ ಲೇಖನವನ್ನು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು–560056 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9743545865

ಕಲಾತಂಡ ನೋಂದಣಿಗೆ ಸೂಚನೆ

ರಾಮನಗರ: ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ 'ಇಂಡಿಯನ್ ಕೌನ್ಸಿಲ್ ಕಲ್ಚರಲ್ ರಿಲೇಷನ್ಸ್ (ಐಸಿಸಿಆರ್) ಹಾಗೂ ಕರ್ನಾಟಕ ಸರ್ಕಾರದ ನಡುವೆ ಸಾಂಸ್ಕೃತಿಕ, ಕಲೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ರಾಜ್ಯದಲ್ಲಿನ ಕಲಾವಿದರು, ಕಲಾ ತಂಡಗಳು ನಿಗದಿತ ನಮೂನೆಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಜೂನ್ 12ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಅರ್ಜಿಯನ್ನು www.kannadasiri.karnataka.gov.in ನಲ್ಲಿ ಹಾಗೂ ಜಿಲ್ಲಾ ಕಚೇರಿಯಲ್ಲಿ ಪಡೆಯಬಹುದು.

ಹೆಚ್ಚಿನ ಮಾಹಿತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿರುವ ಕಚೇರಿ ಸಂಪರ್ಕಿಸಬೇಕು ಎಂದು ಇಲಾಖೆ ಸಹಾಯಕ ನಿರ್ದೇಶಕ ಕೆ. ಸತೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಯಮ ಮೀರಿ ಕಾಂಪೌಂಡ್: ನೋಟಿಸ್

ಎನ್‌ಬಿಸಿ ಪ್ರಕಾರ ಗರಿಷ್ಠ 5 ಅಡಿ ಎತ್ತರ; ಕಾನೂನು ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕಟ್ಟಡ ಸಂಹಿತೆ (ಎನ್‌ಬಿಸಿ) ನಿಯಮಗಳನ್ನು ಉಲ್ಲಂಘಿಸಿ, ಅತಿ ಎತ್ತರದ ಕಾಂಪೌಂಡ್ ನಿರ್ಮಿಸಿರುವ ವಸತಿ ಹಾಗೂ ವಾಣಿಜ್ಯ ಕಟ್ಟಡಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡಲು ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಾರ್ವಜನಿಕ ಜೀವ ಮತ್ತು ಆಸ್ತಿಗೆ ಅಪಾಯ ಉಂಟುಮಾಡುವ ಶಿಥಿಲಾವಸ್ಥೆಯ ಹಾಗೂ ಅಪಾಯಕಾರಿ ಕಟ್ಟಡಗಳನ್ನು ಗುರುತಿಸಿ, ಅವುಗಳನ್ನು ತೆರವುಗೊಳಿಸಬೇಕು. ಈ ಸಂಬಂಧ ಕೈಗೊಂಡ ಕ್ರಮಗಳ ಕುರಿತು ವಾರದಲ್ಲಿ ವರದಿ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದರು.

ರಸ್ತೆಗಳ ಸಮಗ್ರ ಅಭಿವೃದ್ಧಿ, ಮಳೆನೀರು ಕಾಲುವೆ ಹೂಳೆತ್ತುವುದು, ಜಂಕ್ಷನ್ ಅಭಿವೃದ್ಧಿ, ಕಟ್ಟಡಗಳ ಸುರಕ್ಷತೆ, ಕೆಲಸದಲ್ಲಿ ಬಾಕಿ ಅರ್ಜಿಗಳ ವಿಲೇವಾರಿ 'ಇತ್ಯಾದಿಗೆ ಸಂಬಂಧಿಸಿದ ಕಾರ್ಯಗಳ ಪ್ರಗತಿ ಪರಿಶೀಲಿಸಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಮಗ್ರ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಸಿವಿಲ್ ಕಾಮಗಾರಿ ಪೂರ್ಣಗೊಂಡಿರುವ ಪ್ಯಾಕೇಜುಗಳಲ್ಲಿ ರಸ್ತೆಗಳನ್ನು ಜೂನ್ 9ರೊಳಗೆ ಡಾಂಬರೀಕರಣ ಮಾಡಬೇಕು. ಇನ್ನುಳಿದ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಕೈಗೊಂಡು ನಿಗದಿತ ಗಡುವಿನೊಳಗೆ ಪೂರ್ಣಗೊಳಿಸುವಂತೆ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಸೂಚಿಸಿದರು.

ಕಾಂಕ್ರೀಟ್ ಮತ್ತು ಕಚ್ಚಾ ಮಳೆ ನೀರುಗಾಲುವೆಗಳ ಹೂಳು ತೆರವು ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು. ಮಳೆ ನೀರು ನಿಲುಗಡೆ ಸಮಸ್ಯೆ ಉಂಟಾಗುತ್ತಿರುವ ಪ್ರದೇಶಗಳನ್ನು ಸಂಚಾರ ಪೊಲೀಸರು ಗುರುತಿಸಿದ್ದು, ಅಂತಹ ಕಡೆ ಆದ್ಯತೆ ಮೇಲೆ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಕ್ರಿಯಾ ಯೋಜನೆ: ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ವಲಯಕ್ಕೆ ಒಂದರಂತೆ, ಎರಡು ವಾರ್ಡ್‌ಗಳಲ್ಲಿ ಪೌರ ಕಾರ್ಮಿಕರು, ಗ್ಯಾಂಗ್ ಮ್ಯಾನ್, ಆಟೊ ಟಿಪ್ಪರ್, ಸ್ವಚ್ಛತಾ ಕಾರ್ಮಿಕರನ್ನು ನಿಯೋಜಿಸಿಕೊಂಡು ಸಂಪೂರ್ಣ ವಾರ್ಡ್ ಅನ್ನು ಸ್ವಚ್ಛಗೊಳಿಸಬೇಕು. ಸರ್ಕಾರಿ ಕಟ್ಟಡಗಳಿಗೆ ಬಣ್ಣ ಬಳಿಯುವುದು ಸೇರಿದಂತೆ ಸಮಗ್ರ ಸ್ವಚ್ಛತಾ ಕಾರ್ಯ ಕೈಗೊಳ್ಳಲು ಕ್ರಿಯಾ ಯೋಜನೆ ರೂಪಿಸುವಂತೆ ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದರು.

ಕಸದ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಲು ಸೂಚನೆ

ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಕಸ ನಿರ್ವಹಣೆ ಸಮಸ್ಯೆಯನ್ನು ನಿವಾರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಪದ್ಮನಾಭ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಆರ್. ಅಶೋಕ ಅವರ ನೇತೃತ್ವದಲ್ಲಿ ಸಾರ್ವಜನಿಕ ಅಹವಾಲುಗಳನ್ನು ಆಲಿಸಿ, ಗುತ್ತಿಗೆದಾರರು ಹಾಗೂ ಕಸ ಸಂಗ್ರಹ ಮಾಡುವ ಆಟೊಗಳ ಚಾಲಕರಿಗೆ ಸೂಚನೆ ನೀಡಿದರು.

ಪ್ರತಿ ವಾರ್ಡ್‌ಗೂ ಕಡ್ಡಾಯವಾಗಿ ಕಸ ಸಂಗ್ರಹಿಸುವ ಆಟೊಗಳ ವ್ಯವಸ್ಥೆ ಮಾಡಬೇಕು. ಪ್ರತಿ ದಿನ ಬೆಳಿಗ್ಗೆ 6 ರಿಂದ ಆರಂಭಗೊಂಡು ಸಾರ್ವಜನಿಕರ ಮನೆಗಳ ಬಳಿ ಹೋಗಿ ಕಸ ಸಂಗ್ರಹಿಸಬೇಕು. ಒಂದು ವೇಳೆ ಆಟೊ ಬಾರದಿದ್ದರೆ ಸಾರ್ವಜನಿಕರು ನೇರವಾಗಿ ಗುತ್ತಿಗೆದಾರರಿಗೆ ಕರೆ ಮಾಡಬಹುದು. ಆಟೊಗಳ ಮೇಲೆ ಕಡ್ಡಾಯವಾಗಿ ಸಂಪರ್ಕ ಸಂಖ್ಯೆ ಹಾಕಬೇಕು ಎಂದು ಆರ್. ಅಶೋಕ ಸೂಚಿಸಿದರು.

ಆಟೊಗಳ ಸಂಚಾರದ ಮೇಲೆ ನಿಗಾ ಇಡಲು ಸಾರ್ವಜನಿಕರ ಕಡೆಯಿಂದ ಸ್ವಯಂಸೇವಕರನ್ನು ನಿಯೋಜಿಸಲಾಗುತ್ತಿದ್ದು, ಪ್ರತಿನಿತ್ಯ ಹಾಜರಾತಿಯನ್ನು ಶಾಸಕರ ಕಚೇರಿಗೆ ಸಲ್ಲಿಸಬೇಕು ಎಂದರು.

ವಾರ್ಡ್‌ಗಳಲ್ಲಿ ನಿಗದಿಪಡಿಸಿರುವ ಆಟೊಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವಂತೆ ಘನತ್ಯಾಜ್ಯ ನಿರ್ವಹಣಾ ಗುತ್ತಿಗೆದಾರರು ನೋಡಿಕೊಳ್ಳಬೇಕು. ನಿಗದಿಯಂತೆ ಕಸದ ಆಟೊಗಳಿಗೆ ಬಿಲ್ ಪಾವತಿಯಲ್ಲಿ ಕಡಿತ ಮಾಡಬೇಕು ಎಂದು ಸೂಚಿಸಿದರು.

'ಘನತ್ಯಾಜ್ಯ ನಿರ್ವಹಣಾ ಗುತ್ತಿಗೆದಾರರಿಗೆ ಒಂದು ವಾರದ ಗಡುವು ನೀಡುತ್ತಿದ್ದು, ಈ ಅವಧಿಯಲ್ಲಿ ವಾರ್ಡ್‌ಗಳಲ್ಲಿನ ಕಸದ ಸಮಸ್ಯೆ ಸಂಪೂರ್ಣವಾಗಿ ಪರಿಹಾರ ಆಗಬೇಕು. ಇಲ್ಲದಿದ್ದರೆ, ಅಂತಹ ಗುತ್ತಿಗೆದಾರರನ್ನು 'ಕಪ್ಪುಪಟ್ಟಿ'ಗೆ ಸೇರಿಸಲಾಗುವುದು' ಎಂದು ಆಯುಕ್ತರು ಹೇಳಿದರು.

ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) 40 ವರ್ಷ ಮೀರಿದ ಅಧಿಕಾರಿಗಳು ಮತ್ತು ನೌಕರರಿಗೆ ಬಿಎಂಟಿಸಿ ಹಾಗೂ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಳ್ಳುತ್ತಿರುವ ಹೃದಯ ಆರೋಗ್ಯ ತಪಾಸಣಾ ಕಾರ್ಯಕ್ರಮದ ಪ್ರಗತಿಯನ್ನು ಪರಿಶೀಲಿಸಲು ಸಂಸ್ಥೆಯ ಅಧ್ಯಕ್ಷ ವಿ.ಎಸ್.ಆರಾಧ್ಯ, ನಿರ್ದೇಶಕ ಅಬ್ದುಲ್ ಅಹದ್ ಅವರು ಆಸ್ಪತ್ರೆಗೆ ಭೇಟಿ ನೀಡಿದ್ದರು.

ನೌಕರರೊಂದಿಗೆ ಸಂವಾದ ನಡೆಸಿ, ಆರೋಗ್ಯ ದತ್ತಾಂಶ, ನಿಯಮಿತ ಆರೋಗ್ಯ ತಪಾಸಣೆ ಮತ್ತು ಆರೋಗ್ಯಕರ ಜೀವನಶೈಲಿಯ ಕುರಿತು ಮಾಹಿತಿ ಹಂಚಿಕೊಂಡರು. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಬಿ.ದಿನೇಶ್, ಅಧೀಕ್ಷಕ ಡಾ.ಪ್ರಭಾಕರ್ ಅವರೊಂದಿಗೆ ಸಭೆ ನಡೆಸಿದರು.

ಇದುವರೆಗೆ ಒಟ್ಟು 13,500ಕ್ಕೂ ಅಧಿಕ ನೌಕರರು ಮತ್ತು ಅಧಿಕಾರಿಗಳು ಉಚಿತವಾಗಿ ಹೃದಯ ಆರೋಗ್ಯ ತಪಾಸಣೆಗೆ ಒಳಗಾಗಿದ್ದಾರೆ ಎಂದು ಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ರಾಜ್ಯ ಸರ್ಕಾರಕ್ಕೆ ವಿಧಾನ ಪರಿಷತ್ತಿನ ಸದಸ್ಯ ಎಚ್.ವಿಶ್ವನಾಥ್ ಮನವಿ

'ಗ್ರಂಥಾಲಯಗಳಿಗೆ ಪುಸ್ತಕ ಖರೀದಿ ಮುಂದುವರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ನಗರದ ಐದು ವಲಯ ಗ್ರಂಥಾಲಯಗಳಲ್ಲಿ ಈ ಹಿಂದಿನಂತೆ ಪುಸ್ತಕಗಳ ಖರೀದಿ ಪ್ರಕ್ರಿಯೆಯನ್ನು ಮುಂದುವರಿಸಬೇಕು' ಎಂದು ವಿಧಾನ ಪರಿಷತ್ತಿನ ಸದಸ್ಯ ಎಚ್.ವಿಶ್ವನಾಥ್ ಅವರು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'ಬೆಂಗಳೂರು ನಗರದ ವ್ಯಾಪ್ತಿಯನ್ನು 369 ವಾರ್ಡ್‌ಗಳಿಗೆ ವಿಸ್ತರಿಸಿರುವ ಸಂದರ್ಭದಲ್ಲಿ, ಈ ಹಿಂದಿನಂತೆ ಗ್ರಂಥಾಲಯಗಳಿಗೆ ಆಯ್ಕೆಯಾದ ಪುಸ್ತಕಗಳ ಕನಿಷ್ಠ 100 ಪ್ರತಿಗಳನ್ನು ಖರೀದಿಸುವ ವ್ಯವಸ್ಥೆ ಮುಂದುವರಿಸುವುದು ಅತ್ಯಗತ್ಯ. ಈಗಾಗಲೇ ಏಕಗವಾಕ್ಷಿ ಸೇರಿ ವಿವಿಧ ಯೋಜನೆಗಳು ಸ್ಥಗಿತಗೊಂಡಿವೆ. ಇದರ ಜತೆಗೆ ಹಲವು ಜಿಲ್ಲೆಗಳಲ್ಲಿ ಅನುದಾನದ ನೆಪ ಹೇಳಿ ಪುಸ್ತಕಗಳ ಖರೀದಿ ಕಡಿಮೆ ಮಾಡಲಾಗುತ್ತಿದೆ. ಇದು ಕನ್ನಡ ಪುಸ್ತಕೋದ್ಯಮಕ್ಕೆ ಗಂಭೀರ ಹೊಡೆತ ನೀಡುತ್ತಿದೆ' ಎಂದಿದ್ದಾರೆ.

'ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಕನ್ನಡ ಭಾಷೆಯಲ್ಲಿಯೇ ಇಂದು ಲೇಖಕರು, ಪ್ರಕಾಶಕರು ತಮ್ಮ ಪುಸ್ತಕಗಳ 400–500 ಪ್ರತಿಗಳನ್ನು ಮಾರಾಟ ಮಾಡಲು ಪರದಾಡುವ ಸ್ಥಿತಿಯಿದೆ. ಇಂತಹ ಪರಿಸ್ಥಿತಿಯಲ್ಲಿ ಅವರು ತಮ್ಮ ಸಾಹಿತ್ಯಿಕ, ಪ್ರಕಾಶನ ಬದುಕನ್ನು ಕಟ್ಟಿಕೊಳ್ಳುವುದಾದರೂ ಹೇಗೆ? ಇದು ಕೇವಲ ಲೇಖಕ ಅಥವಾ ಪ್ರಕಾಶಕರ ಸಮಸ್ಯೆ ಯಾಗಿರದೆ, ಕನ್ನಡ ಸಾಹಿತ್ಯದ ಭವಿಷ್ಯದ ಪ್ರಶ್ನೆಯಾಗಿದೆ' ಎಂದಿದ್ದಾರೆ.

'ಒಂದು ಕಾಲದಲ್ಲಿ ದೇಶದಲ್ಲಿಯೇ ಅತ್ಯುತ್ತಮ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯನ್ನು ಹೊಂದಿದ್ದ ಕರ್ನಾಟಕ, ಇಂದು ಪುಸ್ತಕ ಖರೀದಿಯಲ್ಲಿ ನಿರಾಸಕ್ತಿ, ಆಡಳಿತಾತ್ಮಕ ನಿರ್ಲಕ್ಷ್ಯದಿಂದ ತನ್ನ ವೈಭವ ಕಳೆದುಕೊಳ್ಳುತ್ತಿದೆ. ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಗ್ರಂಥಾಲಯ ತೆರಿಗೆ ಸಂಗ್ರಹವಾಗುತ್ತಿದ್ದು, ಈ ಹಿಂದೆ ಇದ್ದಂತೆ ಕನಿಷ್ಠ 100 ಪ್ರತಿಗಳ ಖರೀದಿ ವ್ಯವಸ್ಥೆ ಮುಂದುವರಿಸುವುದು ನ್ಯಾಯಸಮ್ಮತ' ಎಂದು ಹೇಳಿದ್ದಾರೆ.

'ಹೈ–ಲೈಫ್ ಪ್ರದರ್ಶನ' ನಾಳೆಯಿಂದ



ಬೆಂಗಳೂರು: ದೇಶದ ಅಗ್ರಗಣ್ಯ ವಿನ್ಯಾಸಕರು ರೂಪಿಸಿರುವ ವಿನ್ಯಾಸಗಳನ್ನು 'ಹೈ ಲೈಫ್ ಎಕ್ಸಿಬಿಷನ್'ನಲ್ಲಿ ಪ್ರದರ್ಶಿಸಲಾಗುತ್ತದೆ.

ದ ಲಲಿತ್ ಅಶೋಕ್‌ದಲ್ಲಿ ಜೂನ್ 5ರಿಂದ 7ರವರೆಗೆ ನಡೆಯಲಿರುವ ಈ ಪ್ರದರ್ಶನದಲ್ಲಿ, ಹಬ್ಬದ ವಸ್ತ್ರ, ಸಮಕಾಲೀನ ಫ್ಯಾಷನ್, ಐಷಾರಾಮಿ, ಸೊಗಸಾದ ಆಭರಣಗಳು ಮತ್ತು ವಿಶೇಷ ಶೈಲಿಯ ಅಕ್ಸೆಸರೀಸ್‌ಗಳು ಪ್ರದರ್ಶನದಲ್ಲಿರಲಿವೆ.

ಫ್ಯಾಷನ್ ಮತ್ತು ಲೈಫ್ ಸ್ಟೈಲ್‌ನ ನವೀನ ವಿನ್ಯಾಸಗಳು ಹಾಗೂ ಸಂಗ್ರಹಗಳು ಇರಲಿವೆ ಎಂದು ಪ್ರಕಟಣೆ ತಿಳಿಸಿದೆ.

ಟೇಕ್ವಾಂಡೊ: ಪರೀಕ್ಷಿತ್‌ಗೆ ಕಂಚು

ಪ್ರಜಾವಾಣಿ ವಾರ್ತೆ



ಪರೀಕ್ಷಿತ್

ಬೆಂಗಳೂರು: ಪರೀಕ್ಷಿತ್ ಅವರು ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ಈಚೆಗೆ ನಡೆದ 12ನೇ ತಿರಕ್ ಟೇಕ್ವಾಂಡೊ ಅಂತರರಾಷ್ಟ್ರೀಯ ಚಾಂಪಿಯನ್‌ಷಿಪ್‌ನ 10 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. ಪರೀಕ್ಷಿತ್ ಅವರು ಮೃತ್ಯುಂಜಯ ತಗಡೂರು ಹಾಗೂ ಸುಧಾ ಅವರ ಪುತ್ರ.

ನಗರದಲ್ಲಿ ಇಂದು

ಬೆಂಗಳೂರು ಹವಾಮಾನ ಸಮಾವೇಶ: ಉದ್ಘಾಟನೆ: ಮಂಜುಳಾ ಅರವಿಂದ ಲಿಂಬಾವಳಿ, ಕೆ.ಸಿ.ರಾಮಮೂರ್ತಿ, ಮದನ್ ಪದಕಿ, ಕ್ಲೆಮೆಂಟ್ ಜಯಕುಮಾರ್, ಆಯೋಜನೆ: ವಿಮೋವೇ ಫೌಂಡೇಶನ್, ಸ್ಥಳ: ಸಿಎಂಆರ್‌ಐಟಿ, ಎಇಸಿಎಸ್ ಬಡಾವಣೆ, ವೈಟ್ ಫೀಲ್ಡ್, ಬೆಳಿಗ್ಗೆ 10

'ದಿ ಇನ್‌ಕ್ರೆಡಿಬಲ್ ಶೆಫ್ ಚಾಲೆಂಜ್' ಅಡುಗೆ ಸ್ಪರ್ಧೆ: ಉದ್ಘಾಟನೆ: ದಾಮೋದರನ್, ವಿಜಯಭಾಸ್ಕರನ್, ಆಯೋಜನೆ: ಸೌತ್ ಇಂಡಿಯಾ ಶೆಫ್ಸ್ ಅಸೋಸಿಯೇಷನ್, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11

ನಾಲ್ವಡಿ ಜಯಂತಿ, ಎಂ.ವೆಂಕಟಸ್ವಾಮಿ ಅವರ 78ನೇ ಹುಟ್ಟುಹಬ್ಬ ಮತ್ತು ಪರಿವರ್ತನಾ ಸಮಾವೇಶ: ಉದ್ಘಾಟನೆ: ಎಚ್.ಡಿ.ಕುಮಾರಸ್ವಾಮಿ, ಅತಿಥಿ: ಡಾ.ಜಿ.ಪರಮೇಶ್ವರ, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಟೌನ್‌ಹಾಲ್, ಬೆಳಿಗ್ಗೆ 11

ನಾಲ್ವಡಿ ಜಯಂತಿ, ಕನ್ನಡ ಕಟ್ಟಾಳು ಮತ್ತು ನವ ಕನ್ನಡಿಗ ಪ್ರಶಸ್ತಿ ಪ್ರದಾನ: ಉದ್ಘಾಟನೆ: ರಂಜನ್ ಕುಮಾರ್, ಅತಿಥಿ: ಧರ್ಮೇಂದ್ರ ಕುಮಾರ್ ಆರೇನಹಳ್ಳಿ, ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಹಳೇ ಎಚ್‌ಎಎಲ್ ಸಭಾಂಗಣ, ಎಚ್‌ಎಎಲ್, ಮಧ್ಯಾಹ್ನ 3.30

ಪೌರಾಣಿಕ ನಾಟಕೋತ್ಸವ– ವಿಷಜ್ವಾಲೆ ನಾಟಕ ಪ್ರದರ್ಶನ: ತಂಡ: ಕುಶಲಾ ಕಲಾವಿದರು, ಆಯೋಜನೆ: ಪುಟ್ಟಿ ಕಲಾ ವೇದಿಕೆ, ಸ್ಥಳ: ಸಂಸಬಯಲು ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 4

26ನೇ ವರ್ಷದ ಪ್ರವಚನ ವಾಹಿನಿ: ಸಂಕಷ್ಟಹರ ಗಣಪತಿ ಪೂಜೆ: ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ಪರಹಿತ ಪಾಷಾಣ' ನಾಟಕ: ರಚನೆ: ಬಿ.ಚಂದ್ರಶೇಖರ್, ನಿರ್ದೇಶನ:ಪ್ರಕಾಶ್ ಬೆಳವಾಡಿ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

---

ಮೈಸೂರು ಸಕ್ಕರೆ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಮಾನ್ಯತೆಗೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ – 571 402.
ಬೆಂಗಳೂರು ಕಛೇರಿ : ಮೈಷುಗರ್ ಕಟ್ಟಡ, ಜೆ.ಸಿ. ರಸ್ತೆ, ಬೆಂಗಳೂರು–560002.

ಸಂಖ್ಯೆ:ಎಂಎಸ್‌ಕೋ/ಎಸ್ಟೇಟ್/37/2026–27 ದಿನಾಂಕ:26.05.2026

ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿಗೆ ಸೇರಿದ ಬೆಂಗಳೂರು ಜೆ.ಸಿ. ರಸ್ತೆಯಲ್ಲಿರುವ ಮೈಷುಗರ್‌ನ ಖಾಲಿ ಜಾಗ ಮತ್ತು ಕಟ್ಟಡಗಳನ್ನು ಮಾಸಿಕ ನೆಲಬಾಡಿಗೆ/ಬಾಡಿಗೆಯ ಆಧಾರದ ಮೇಲೆ ನೀಡಲಾಗುವುದು. ಈ ಸಂಬಂಧ ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ : 9620514321 ಮತ್ತು 9448740861 ರಲ್ಲಿ ಸಂಪರ್ಕಿಸುವುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು

ವಾಸಾಸಂಇ/ವಾಪ್ರ/ಜಿಎ/857/2026–27

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ–ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಷೇರುದಾರರಿಗೆ ಸೂಚನೆ – ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿ, ಎರಡನೇ 100–ದಿನಗಳ ಪ್ರಚಾರ – "ಸಕ್ಷಮ ನಿವೇಶಕ್" ಮತ್ತು ಭೌತಿಕ ಭದ್ರತೆಗಳ ವರ್ಗಾವಣೆ ಹಾಗೂ ಡೀಮ್ಯಾಟ್‌ಗಾಗಿ ವಿಶೇಷ ಕಿಟಕಿ

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿಗಳ ಪ್ರಾಧಿಕಾರ (ಲೆಕ್ಕಪತ್ರ, ಪರಿಶೋಧನೆ, ವರ್ಗಾವಣೆ ಮತ್ತು ಹಿಂದಿರುಗಿಸುವುದು) ನಿಯಮ, 2016 ಆಗಿಂದಾಗ್ಗೆ ಬದಲಾವಣೆಯಾದ ಪ್ರಕಾರವಾಗಿ ("ಸದರಿ ನಿಯಮಗಳು") ಓದಿಕೊಂಡಂತೆ ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳಿಗೆ ಅನುಗುಣವಾಗಿ ಈ ಸೂಚನೆಯನ್ನು ಪ್ರಕಟಿಸಲಾಗಿದೆ.

ಈ ನಿಯಮಗಳು, ಇನ್ನಿತರ ವಿಷಯಗಳೊಂದಿಗೆ, ಸತತವಾಗಿ ಏಳು ವರ್ಷಗಳಿಗೆ ಕೇಂದ್ರ ಸರ್ಕಾರ ಸ್ಥಾಪಿಸಿದ ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿಗೆ (ಐಇಪಿಎಫ್) ಲಾಭಾಂಶಗಳನ್ನು ಪಾವತಿಸದೆ ಅಥವಾ ಷೇರುದಾರರು ಪಡೆಯದೆ ಇರುವ ಎಲ್ಲಾ ರೀತಿಯ ಷೇರುಗಳಿಗೆ ಸಂಬಂಧಿಸಿದಂತೆ ವರ್ಗಾವಣೆಯನ್ನು ಒದಗಿಸುವುದು. ಅದರಂತೆ, ಸದರಿ ನಿಯಮದ ಅಡಿಯಲ್ಲಿ ಯಾರ ಷೇರುಗಳು ಐಇಪಿಎಫ್ ಡೀಮ್ಯಾಟ್ ಖಾತೆಗೆ 2026 ರ ಸೆಪ್ಟೆಂಬರ್ ತಿಂಗಳಲ್ಲಿ ವರ್ಗಾಯಿಸಲು ಅನ್ವಯಿಸುವಂತಹ ಸಂಬಂಧಿತ ಷೇರುದಾರರಿಗೆ ಸೂಚನೆ ನೀಡಿದೆ. ಕಂಪನಿಯು ಇಂತಹ ಷೇರುದಾರರ ಮತ್ತು ಐಇಪಿಎಫ್ ಡೀಮ್ಯಾಟ್ ಖಾತೆಗೆ ವರ್ಗಾಯಿಸಲು ನಿಶ್ಚಯಿಸಿರುವ ಷೇರುಗಳ ವಿವರಗಳನ್ನು ತನ್ನ ವೆಬ್‌ಸೈಟ್ @ <https://www.timken.com/en-in/investors/statutory-compliances/> (ಐಇಪಿಎಫ್_ಎಫ್‌ವೈ 2018–19" ಕ್ಕೆ ವರ್ಗಾಯಿಸಬೇಕಾದ ಟಿಐಎಲ್ ಷೇರುಗಳು) ರಲ್ಲಿ ಅಪ್‌ಲೋಡ್ ಮಾಡಲಾಗಿದೆ. ಕಂಪನಿಯು ಸಂಬಂಧಿತ ಷೇರುದಾರರಿಗೆ ಅಗತ್ಯವಿರುವ ಕ್ರಮ ಕೈಗೊಳ್ಳಲು ಲಭ್ಯವಿರುವ ಇತ್ತೀಚಿನ ವಿಳಾಸಕ್ಕೆ ಪ್ರತ್ಯೇಕವಾದ ಸಂದೇಶವನ್ನು ರವಾನಿಸಿದೆ.

ಹಣಕಾಸು ವಾರ್ಷಿಕ 2018–19 ಕ್ಕೆ ಹಾಗೂ ಮುಂದಿನ ಸಾಲುಗಳಿಗೆ ಐಇಪಿಎಫ್‌ಗೆ ವರ್ಗಾಯಿಸದೆ ಉಳಿದಿರುವ ಷೇರುಗಳ ಬಗ್ಗೆ ಕಂಪನಿಯು ಘೋಷಿಸಿರುವ ಪಡೆಯದೆ ಉಳಿದ ಅಂತಿಮ ಲಾಭಾಂಶವನ್ನು ಪಡೆಯಲು ಅಂತಹ ಷೇರುದಾರರಿಗೆ ಕಂಪನಿ / ರಿಜಿಸ್ಟ್ರಾರ್ ಹಾಗೂ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗೆ ತಮ್ಮ ಮನವಿಯ ಅರ್ಜಿಯನ್ನು ಸಲ್ಲಿಸಲು ಸೂಚನೆ ನೀಡಲಾಗಿದೆ, ಅಂತಯೇ ಐಇಪಿಎಫ್‌ಗೆ ಷೇರುಗಳನ್ನು ವರ್ಗಾಸಲಾಗುವುದಿಲ್ಲ. ತಾವುಗಳು ಗಮನಿಸಬೇಕಾದ ಅಂಶವೇನೆಂದರೆ ಮೇಲಿನ ನಿಗಧಿತ ದಿನದೊಳಗೆ ತಮಗೆ ಸಲ್ಲಬೇಕಾದ ಲಾಭಾಂಶಕ್ಕಾಗಿ 10 ಸೆಪ್ಟೆಂಬರ್ 2026 ರ ಒಳಗೆ ಅರ್ಜಿ ಸಲ್ಲಿಸಲು ವಿಫಲವಾದರೆ, ಕಂಪನಿಯು ಮುಂದೆ ಷೇರುದಾರರಿಗೆ ಯಾವುದೇ ಸೂಚನೆ ನೀಡದೆ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವುದಲ್ಲದೆ ಬೇರೆ ದಾರಿ ಇರುವುದಿಲ್ಲ. ಷೇರುದಾರರಿಗೆ ತಿಳಿಸುವುದೇನೆಂದರೆ ಐಇಪಿಎಫ್‌ಗೆ ಷೇರುಗಳನ್ನು ವರ್ಗಾಯಿಸುವ ಉದ್ದೇಶ: ಕಂಪನಿಯು ತಾವು ಹೊಂದಿರುವ ಮೂಲ ಷೇರು ಪ್ರಮಾಣ ಪತ್ರ (ಗಳು)ದ ಬದಲಾಗಿ ಷೇರು ಪ್ರಮಾಣ ಪತ್ರ (ಗಳ)ದ ಪ್ರತಿಯನ್ನು ನೀಡುವುದು ಮತ್ತು ಇಂತಹ ಸಂದರ್ಭದಲ್ಲಿ, ಮೂಲ ಷೇರು ಪ್ರಮಾಣ ಪತ್ರ (ಗಳ)ದ ನೋಂದಾಯಿಸಲಾದ ತಮ್ಮ ಹೆಸರು ನಿಯಮಾನುಸಾರ ರದ್ದುಗೊಳ್ಳುತ್ತದೆ.

ಈ ಮೂಲಕ ಸೂಚಿಸುವುದೇನೆಂದರೆ ಐಇಪಿಎಫ್‌ಗೆ ವರ್ಗಾಯಿತಗೊಂಡ ಷೇರುಗಳು ಹಾಗೂ ಲಾಭಾಂಶಗಳು, ಯಾವುದೇ ಇದ್ದಲ್ಲಿ, ಇದನ್ನು ಐಇಪಿಎಫ್ ಪ್ರಾಧಿಕಾರದಿಂದ ನಿಯಮದ ಅನುಸಾರ ಇವೆಲ್ಲವನ್ನು ಅನುಸರಿಸಿ ಪಡೆಯಬಹುದು. ಈ ವಿಷಯದ ಬಗ್ಗೆ ಸ್ಪಷ್ಟತೆಗಾಗಿ, ನಮ್ಮ ಆರ್‌ಟಿಎ, ಸಿಬಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ರಸ್ಸೆಲ್ ಕೋರ್ಟ್, 5ನೇ ಮಹಡಿ, 20, ಸರ್ ಆರ್ ಎನ್ ಮುಖರ್ಜಿ ರಸ್ತೆ, ಕೋಲ್ಕತಾ – 700001 ದೂರವಾಣಿ ಸಂಖ್ಯೆ 033: 4011 6700/6725, ಇ–ಮೇಲ್: investor.helpdesk@in.mpms.mufg.com, ವೆಬ್‌ಸೈಟ್: www.in.mpms.mufg.com ಮೂಲಕ ಇವರನ್ನು ದಯವಿಟ್ಟು ಸಂಪರ್ಕಿಸಿ.

ಮುಂದೆ, ಕಂಪನಿಯು ಎರಡನೇ 100–ದಿನಗಳ ಪ್ರಚಾರ – "ಸಕ್ಷಮ ನಿವೇಶಕ್" ಅನ್ನು 1 ಏಪ್ರಿಲ್, 2026 ರಿಂದ 9 ಜುಲೈ, 2026 ರವರೆಗೆ ಹಮ್ಮಿಕೊಂಡಿರುವುದನ್ನು ಹೆಮ್ಮೆಯಿಂದ ಘೋಷಿಸುತ್ತಿದೆ. ಈ ಒಂದು ಹೆಜ್ಜೆಯ ಉದ್ದೇಶ ಅಮೂಲ್ಯ ಷೇರುದಾರರ ಸಕ್ರಿಯ ಪಾಲ್ಗೊಳ್ಳುವಿಕೆ ಹಾಗೂ ದಾಖಲೆಗಳ ಅಪ್‌ಡೇಟ್‌ಗಾಗಿ ಮತ್ತು ಕಾನೂನುಬದ್ಧ ಹಕ್ಕುಗಳನ್ನು ಪಡೆಯಲು ಬೆಂಬಲ ನೀಡುವುದು, ಆದ ಕಾರಣ ಷೇರುಗಳನ್ನು ಹಾಗೂ ಪಡೆಯದೆ ಉಳಿದಿರುವ ಲಾಭಾಂಶಗಳನ್ನು ಐಇಪಿಎಫ್ ಪ್ರಾಧಿಕಾರಕ್ಕೆ ವರ್ಗಾವಣೆಯನ್ನು ತಡೆಗಟ್ಟುವುದು. ನಾವು ತಮ್ಮಲ್ಲಿ ವಿನಂತಿಸುವುದೇನೆಂದರೆ ಪರಿಷ್ಕರಿಸಿ ಹಾಗೂ ತಮ್ಮ ಪ್ಯಾನ್ ಅನ್ನು ನಾಮ ನಿರ್ದೇಶನ ವಿವರಗಳನ್ನು, ಸಂಪರ್ಕದ [illegible] ಫಾರಂ ಐಎಸ್‌ಆರ್–1 [illegible] ಫಾರಂ ಐಎಸ್‌ಆರ್–2 [illegible] ಫಾರಂ ಐಎಸ್‌ಆರ್–3 [illegible] ಫಾರಂ ಎಸ್‌ಎಚ್–13 [illegible] https://www.timken.com/en-in/about/timken-in-india/ (ಭಾಗ "Download KYC or Nomination Forms") [illegible] ಆರ್‌ಟಿಎ [illegible] ರಸ್ಸೆಲ್ ಕೋರ್ಟ್, 5ನೇ ಮಹಡಿ, 20, ಸರ್ ಆರ್ ಎನ್ ಮುಖರ್ಜಿ ರಸ್ತೆ, ಕೋಲ್ಕತಾ – 700001, ದೂರವಾಣಿ ಸಂಖ್ಯೆ +91 033 6906 6200, ಫ್ಯಾಕ್ಸ್ ಸಂಖ್ಯೆ 033 – 4011 6739, ಇಮೇಲ್: investor.helpdesk@in.mpms.mufg.com, ವೆಬ್‌ಸೈಟ್: www.in.mpms.mufg.com <http://www.in.mpms.mufg.com> ಇವರಿಗೆ ಕಳುಹಿಸುವುದು.

ಮುಂದೆ, ಸರ್ಕಾರ ಹೊರಡಿಸಿದ [illegible] ದಿನಾಂಕ 30 ಜನವರಿ, 2026 [illegible] ಭೌತಿಕ ಭದ್ರತೆಗಳ ವರ್ಗಾವಣೆ [illegible] 01 ಏಪ್ರಿಲ್, 2019 [illegible] 05 ಫೆಬ್ರವರಿ, 2026 ರಿಂದ 04 ಫೆಬ್ರವರಿ, 2027 ರವರೆಗೆ [illegible]

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/–
ಮಂದಾರ್ ಪಡತರ್ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾನ್ಸ್‌ಯುಲ್
ಸ್ಥಳ : ಬೆಂಗಳೂರು
ದಿನಾಂಕ: 3 ಜೂನ್, 2026

ಆರೋಪಿತ ವ್ಯಕ್ತಿಯ ಹಾಜರಾತಿ ಅವಶ್ಯಕತೆ ಕುರಿತ ಘೋಷಣೆ

ಸಿಆರ್‌ಪಿಸಿ ಸೆಕ್ಷನ್ 82 ನೋಡಿರಿ

ಅದಾಗ್ಯೂ, ನನ್ನ ಎದುರು ಒಂದು ದೂರು ದಾಖಲಾಗಿದ್ದು, ಸದರಿ ದೂರಿನಲ್ಲಿ ಆರೋಪಿತ ವ್ಯಕ್ತಿ **ಮೆ. ಎಂ.ಎಂ. ಕ್ರಿಯೇಶನ್ಸ್** (ಇದರ ಅಧಿಕೃತ ಸಹಿದಾರರು/ಪಾಲುದಾರರು ಆಗಿರುವ **ರಾಜು ಎಂ ಮತ್ತು ಲೋಕೇಶ್ ಆರ್.ಪಿ. ಮೂಲಕ**) **ವಿಳಾಸ** 44, 1ನೇ ಮಹಡಿ, 7ನೇ ಮುಖ್ಯರಸ್ತೆ ಜೆ.ಸಿ. ಕೈಗಾರಿಕಾ ಬಡಾವಣೆ ಯೆಲೆರಹನಾಹಿತಿಸ್, ಬೆಂಗಳೂರು–560062, **ಮತ್ತೊಂದು ವಿಳಾಸ:** 3384 ಚಂದ್ರ ನಗರ, ಕುಮಾರಸ್ವಾಮಿ ಬಡಾವಣೆ ಬೆಂಗಳೂರು ದಕ್ಷಿಣ, **ಮಗದೊಂದು ವಿಳಾಸ:** ನಂ.44, 2ನೇ ಮಹಡಿ, 7ನೇ ಮುಖ್ಯರಸ್ತೆ ಜೆಸಿ ಇಂಡಸ್ಟ್ರಿಯಲ್ ಅತ್ರಾ ಕೊನಕಪುರ ಪಾರ್ಟ್ ಸಿಟಿ, ಬೆಂಗಳೂರು, ರಾಜ್ಯ ಕರ್ನಾಟಕ–560062, ಎಂಬ ಆಸಾಮಿಯು ಅಪರಾಧ ಎಸಗಿರುತ್ತಾನೆ (ಅಥವಾ ಅಪರಾಧ ಎಸಗಿರುವ ಗುಮಾನಿ ಮೇರೆಗೆ) ಎಂದು **ದೆಹಲಿಯ ಉತ್ತರ ರೋಹಿಣಿ ಪೊಲೀಸ್ ಠಾಣೆಯಲ್ಲಿ ಎನ್‌ಐ ಆಕ್ಟ್‌ನ ಸೆಕ್ಷನ್ 138ರ ಅಡಿಯಲ್ಲಿ ನಂ. 440/22** ಪ್ರಕರಣ ದಾಖಲಾಗಿರುತ್ತದೆ ಮತ್ತು ಸದರಿ ಪ್ರಕರಣವು ಬಂಧನ ವಾರೆಂಟ್ ಹೊರಡಿಸುವ ಹಂತಕ್ಕೆ ತಲುಪಿದ್ದು, ಸದರಿ ಆರೋಪಿತರ ಮೇಲೆ ಬಂಧನ ವಾರೆಂಟ್ ಹೊರಡಿಸಲಾಗಿದ್ದು, ಆರೋಪಿತರು ಉಲ್ಲೇಖಿತ ವಿಳಾಸದಲ್ಲಿ ಪತ್ತೆಯಾಗಿರುವುದಿಲ್ಲ, ಹಾಗೂ ಇದರಿಂದಾಗಿ ಸದರಿ ಆರೋಪಿತ ವ್ಯಕ್ತಿ ತಲೆಮರೆಸಿಕೊಂಡಿದ್ದಾರೆ (ಅಥವಾ ಸದರಿ ವಾರಂಟ್ ಸ್ವೀಕರಿಸುವುದನ್ನು ತಡೆಗಟ್ಟಲು ಆತ ತನ್ನನ್ನು ತಾನು ಅಡಗಿಸಿಟ್ಟುಕೊಂಡಿದ್ದಾನೆ) ಎಂದು ಮನವರಿಕೆಯಾಗಿದೆ;

ದೆಹಲಿಯ ಉತ್ತರ ರೋಹಿಣಿ ಪೊಲೀಸ್ ಠಾಣೆಯಲ್ಲಿ ಎನ್‌ಐ ಆಕ್ಟ್‌ನ ಸೆಕ್ಷನ್ 138ರ ಅಡಿಯಲ್ಲಿ ದಾಖಲಾಗಿರುವ ಪ್ರಕರಣ ಸಂ. 440/22ರ ಪ್ರಕರಣಕ್ಕೆ ಸಂಬಂಧಿತ ಆರೋಪಿತ ವ್ಯಕ್ತಿ **ಮೆ.ಎಂ.ಎಂ. ಕ್ರಿಯೇಶನ್ಸ್** (ಇದರ ಅಧಿಕೃತ ಸಹಿದಾರರು/ ಪಾಲುದಾರರು ಆಗಿರುವ **ರಾಜು ಎಂ ಮತ್ತು ಲೋಕೇಶ್ ಆರ್.ಪಿ. ಮೂಲಕ**) ಇವರುಗಳು, ದಿನಾಂಕ **17.07.2026** ರೊಳಗೆ ಸದರಿ ನ್ಯಾಯಾಲಯಕ್ಕೆ ಹಾಜರಾಗಿ, ಸದರಿ ದೂರಿಗೆ ಉತ್ತರ ನೀಡುವುದು ಅವಶ್ಯವಾಗಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

ಆದೇಶದ ಮೇರೆಗೆ: ಶ್ರೀಮತಿ. ಎಬ್ಬಾನಿ ಅಗರ್ವಾಲ್
ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್ ಕ್ಲಾಸ್–03,
ನಾರ್ಥ್–ವೆಸ್ಟ್, ಕೋರ್ಟ್ ನಂ. 107, 1ನೇ ಮಹಡಿ,
ರೋಹಿಣಿ ಕೋರ್ಟ್, ದೆಹಲಿ

DP/7093/RD/20256
(Court Matter)

THE KARNATAKA STATE CRICKET ASSOCIATION
M.Chinnaswamy Stadium, Cubbon Road, Bangalore-560001

TENDER NOTIFICATION

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant, registered class II and above KPWD/CPWD/Equivalent contractors for the balance work of formation of ground at Davangere Cricket Ground

The details of issue/submission of tender document are as follows :-

1.	Name of work	Balance work of formation of ground at Davangere Cricket Ground
2.	Estimated Cost	Rs.82,53,555/- plus GST
3.	Earnest Money Deposit	Rs.83,000/- should be enclosed in the Technical bid cover
4.	Cost of tender form	Rs.10,000/- plus GST (Non Refundable)
5.	Date of issue of tender form	05/6/2026 to 20/6/2026
6.	Pre-bid meeting	22/6/2026 at 4.30 p.m
7.	Last date of submission of filled tender form two covers bid system (Technical & Commercial Separately)	24/6/2026 before 5.00 p.m
8.	Opening of the tender If any delay will be intimated to the vendors.	The same day at 5.30 p.m.
9.	Completion of work by	150 days from the date of work order.

Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr.H.A.Venkatesprasad, AGM Civil Engineering Dept, Mobile No. 9945604515

(Chief Executive Officer)
KSCA

ನೈಋತ್ಯ ರೈಲ್ವೆ
ರೈಲ್ವೆ ಸಚಿವಾಲಯ
(ನೈಋತ್ಯ ರೈಲ್ವೆ ನಿರ್ಮಾಣ ಸಂಸ್ಥೆ)
ಅಧಿಸೂಚನೆ

ಬೆಂಗಳೂರು, 14 ಮೇ 2026

ಎಸ್.ಒ.2527(ಇ) ರೈಲ್ವೆ ಅಧಿನಿಯಮ, 1989 (1989ರ 24)ರ 20ಎ ಪ್ರಕರಣದ ಉಪ–ಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಾಗ ಕೇಂದ್ರ ಸರ್ಕಾರವು (ರೈಲ್ವೆ ಸಚಿವಾಲಯ, ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಸಾರ್ವಜನಿಕ ಉದ್ದೇಶಕ್ಕಾಗಿ, ಭೂಮಿಯನ್ನು ಇಲ್ಲಿ ಲಗತ್ತಿಸಲಾದ ಅನುಸೂಚಿಯಲ್ಲಿ ನೀಡಲಾಗಿರುವ ಸಂಕ್ಷಿಪ್ತ ವಿವರಣೆ ಎಂದು ತೃಪ್ತಿಪಟ್ಟ ನಂತರ, ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾಗಿದೆ, ಅವುಗಳೆಂದರೆ. ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆಯ "ನಾಯಂಡಹಳ್ಳಿ ಮತ್ತು ಕೆಂಗೇರಿ ನಿಲ್ದಾಣಗಳ ನಡುವೆ (ವಲಗೆರಹಳ್ಳಿ– ಗ್ರಾಮ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ)" ನಡುವೆ ಕಿ.ಮೀ: 10/900 – 11/000 ರಲ್ಲಿ ಕಂದಾವಣೆ ಸಂಖ್ಯೆ 10 ರ ಬದಲಿಗೆ ರಸ್ತೆ ಕೆಳಸೇತುವೆ ನಿರ್ಮಾಣ, ಈ ಮೂಲಕ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಘೋಷಿಸುತ್ತದೆ:

ಸದರಿ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್ ನಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಸದರಿ ಅಧಿನಿಯಮದ 20 ಡಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಂಥ ಭೂಮಿಯನ್ನು ಆಕ್ಷೇಪಣೆ ಸಲ್ಲಿಸಬಹುದು ಮತ್ತು ಅಂಥ ಭೂಮಿಯನ್ನು ಮೇಲೆ ಹೇಳಿದ ಉದ್ದೇಶಕ್ಕಾಗಿ ಬಳಸಬಹುದು:

ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು ಸಕ್ಷಮ ಪ್ರಾಧಿಕಾರ, ಬೆಂಗಳೂರು ವಿಶೇಷ ಭೂಸ್ವಾಧೀನ ಅಧಿಕಾರಿ ಮತ್ತು ಪ್ರಾದೇಶಿಕ ಆಯುಕ್ತರು, ಬೆಂಗಳೂರು ಪ್ರಾದೇಶಿಕ ಆಯುಕರಿಗೆ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನಕ್ಕಾಗಿ ಸಲ್ಲಿಸತಕ್ಕದ್ದು, ಅಂದರೆ "ನಾಯಂಡಹಳ್ಳಿ ಮತ್ತು ಕೆಂಗೇರಿ ನಿಲ್ದಾಣಗಳ ನಡುವೆ (ವಲಗೆರಾಜಹಳ್ಳಿ– ಗ್ರಾಮ, ಬೆಂಗಳೂರು ದಕ್ಷಿಣ ತಾಲ್ಲೂಕು) ನಡುವೆ ಕಿ.ಮೀ.: 10/900 – 11/000 ರಲ್ಲಿ ಎಲ್.ಸಿ. ಸಂಖ್ಯೆ 10 ರ ಬದಲಿಗೆ ರಸ್ತೆ ಕೆಳಸೇತುವೆ ನಿರ್ಮಾಣ, ಬೆಂಗಳೂರು ಜಿಲ್ಲೆ)" ಎಂದು ಲಿಖಿತವಾಗಿ ಮತ್ತು ಅದರ ಆಧಾರಗಳನ್ನು ನಿಗದಿಪಡಿಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆದಾರನಿಗೆ ವೈಯಕ್ತಿಕವಾಗಿ ಅಥವಾ ವಕೀಲರಿಂದ ಆಲಿಸಲ್ಪಡುವ ಅವಕಾಶವನ್ನು ನೀಡತಕ್ಕದ್ದು, ಮತ್ತು ಅಂಥ ಎಲ್ಲ ಆಕ್ಷೇಪಣೆಗಳನ್ನು ಆಲಿಸಿದ ನಂತರ ಮತ್ತು ಅಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ, ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಭಾವಿಸಿದಂತೆ, ಆದೇಶದ ಮೂಲಕ, ಆಕ್ಷೇಪಣೆಗಳನ್ನು ಅನುಮತಿಸಬಹುದು ಅಥವಾ ನಿರಾಕರಿಸಬಹುದು:

ಸದರಿ ಅಧಿನಿಯಮದ 20 ಡಿ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮವಾಗಿರತಕ್ಕದ್ದು:

ಈ ಅಧಿಸೂಚನೆಯಡಿ ಬರುವ ಭೂ ಯೋಜನೆಗಳು ಮತ್ತು ಇತರ ವಿವರಗಳು ಲಭ್ಯವಿದ್ದು, ಆಸಕ್ತ ವ್ಯಕ್ತಿಯು ಸಕ್ಷಮ ಪ್ರಾಧಿಕಾರದ ಮೇಲೆ ತಿಳಿಸಿದ ಕಚೇರಿಯಲ್ಲಿ ಪರಿಶೀಲಿಸಬಹುದು.

ವೇಳಾಪಟ್ಟಿ

ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆಯಲ್ಲಿ ಕಿ.ಮೀ. 10/900 ರಿಂದ ಕಿ.ಮೀ. 11/000 ರವರೆಗಿನ ಭೂಮಿಯಲ್ಲಿ ಬರುವ ರಚನೆಗಳೊಂದಿಗೆ ಅಥವಾ ಇಲ್ಲದೆ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ — ತಾಲ್ಲೂಕು: ಬೆಂಗಳೂರು ದಕ್ಷಿಣ
ಜಿಲ್ಲೆ: ಬೆಂಗಳೂರು — ಗ್ರಾಮ: ವಲಗೆರಹಳ್ಳಿ

ಕ್ರ. ಸಂ.	ಸಮೀಕ್ಷೆ / ಪ್ಲಾಟ್ ನಂ.	ಭೂಮಿಯ ವಿಧ	ಭೂಮಿಯ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಘಟಕಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	69	ಒಣ	ಖಾಸಗಿ	0 ಜಿ–1.26 ಎ	0.0040
2	71	ಒಣ	ಖಾಸಗಿ	3 ಜಿ–0.21 ಎ	0.1532
3	72	ಒಣ	ಖಾಸಗಿ	9 ಜಿ–0.47 ಎ	0.4593
4	78	ಒಣ	ಖಾಸಗಿ	0 ಜಿ–1.26 ಎ	0.0040
		ಒಟ್ಟು		12 ಜಿ–3.20 ಎಎನ್	0.6205

ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

(ಪ್ರದೀಪ್ ಪುರಿ)
ಮುಖ್ಯ ಇಂಜಿನಿಯರ್-III/ನಿರ್ಮಾಣ/ಸಾಮಾನ್ಯ
ನೈಋತ್ಯ ರೈಲ್ವೆ, ಬೆಂಗಳೂರು ಕಂಟೋನ್ಮೆಂಟ್

PUB/176/AAMO/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

---

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: SG-SWR-PROJ UBL-KAVACH-RM ದಿನಾಂಕ: 29.05.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಲೋಂಡಾ – ಹುಬ್ಬಳ್ಳಿ – ಅರಸೀಕೆರೆ ವಿಭಾಗದಲ್ಲಿ ಕವಚ್ ಉಪಕರಣಗಳಿಗಾಗಿ ಪ್ರಸ್ತಾವಿತ ರಿಲೇ ರೂಂ ಮಾರ್ಪಾಡು / ವಿಸ್ತರಣೆ ಅಥವಾ ಹೊಸ ನಿರ್ಮಾಣ ಕಾಮಗಾರಿಗಳು.	ರೂ. 4,58,75,786.72

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.06.2026, 11:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ ಯೋಜನೆಗಳು/ಹುಬ್ಬಳ್ಳಿ

PUB/182/AAMO/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

---

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142, ಪೋ: 7338590199
ಇ–ಮೇಲ್: eeyediyur1@gmail.com

ಟೆಂಡರ್ ಪ್ರಕಟಣೆ
ಸಂಖ್ಯೆ–06/2026–27 ದಿನಾಂಕ : 29.05.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 20 ಕಾಮಗಾರಿಗಾಗಿ Quality Cost Based Selection (QCBS) ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.16.82 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.3.62 ಲಕ್ಷ ರೂಪಾಯಿಗಳು.

ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 02 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 05.06.2026 ಮಧ್ಯಾಹ್ನ 4.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 15.06.2026 ಬೆಳಗ್ಗೆ 10.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.06.2026 ಬೆಳಗ್ಗೆ 10.01 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡಿಯೂರು.

DIPR/TUM/89/KSMCA/2026-27

ಪುರಸಭಾ ಕಾರ್ಯಾಲಯ, ಜಿಗಣಿ
ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು–560105.
ದೂ: 080–29760400, E-Mail: itstaff_ulb_jigani@yahoo.com, jiganideo@gmail.com

ಸಂ:ಜಿ.ಪು.ಕಾ/ತಾಂ.ಶಾ/ಟೆಂ.ಪ್ರ/03/2026–27 ದಿನಾಂಕ: 03.06.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಎಸ್.ಸಿ.ಎಸ್.ಪಿ, ಟಿ.ಎಸ್.ಪಿ. ಶೇ.7.25%, ಎಸ್.ಎಫ್.ಸಿ ಕ್ಯಾಪಿಟಲ್ ಅಸೆಟ್ ಯೋಜನೆ ಮತ್ತು 2018–19ನೇ ಸಾಲಿನಿಂದ 2025–26ನೇ ಸಾಲಿನವರೆಗೆ ಎಸ್.ಎಫ್.ಸಿ ಕುಡಿಯುವ ನೀರು ಅನುದಾನದಡಿ ಉಳಿಕೆಯಾಗಿರುವ ಮೊತ್ತಕ್ಕೆ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಯನ್ನು ನಿರ್ವಹಿಸಲು ಕೆಪಿಪಿ ಪೋರ್ಟಲ್ ಮುಖಾಂತರ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆದು ಭಾಗವಹಿಸಬಹುದಾಗಿರುತ್ತದೆ.

Sl. No.	Indent Number	Est. Cost Rs. in Lakhs
1	DMA/2026-27/WS/WORK_INDENT57706/Call-3	0.96
2	DMA/2026-27/WS/WORK_INDENT57707/Call-3	0.48
3	DMA/2026-27/WS/WORK_INDENT57708/Call-3	0.30
4	DMA/2026-27/WS/WORK_INDENT57710/Call-3	6.14
5	DMA/2025-26/WS/WORK_INDENT55532/Call-3	1.70

1. ಕಾಮಗಾರಿಗಳ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 12.06.2026ರ ಸಂಜೆ 4.30 ಗಂಟೆಯವರೆಗೆ. 2.** ಟೆಂಡರ್‌ನ್ನು ತೆರೆಯುವ **ದಿನಾಂಕ: 15.06.2026ರ ಬೆಳಿಗ್ಗೆ 11.00 ಗಂಟೆಯ ನಂತರ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸ ಬಹುದಾಗಿರುತ್ತದೆ, ದೂರವಾಣಿ ಸಂಖ್ಯೆ: 080–29760400 ಇಮೇಲ್:itstaff_ulb_jigani@yahoo.com. **3.** ಪುರಸಭೆಯ ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಗಳ ಬಿಲ್ಲನ್ನು ಪಾವತಿಸಲಾಗುವುದು.

ಸಹಿ/–
ಮುಖ್ಯಾಧಿಕಾರಿಗಳು,
ಪುರಸಭೆ, ಜಿಗಣಿ

ವಾಸಾಸಂಇ/ವಾಪ್ರ/ಜಿಎ/954/2026–27

‘ಅದ್ವೈತ: ಎಲ್ಲ ಕಾಲದ, ಜಗದ ತತ್ತ್ವ’

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ

ಪ್ರಜಾವಾಣಿ ವಾರ್ತೆ



ವಿಸ್ಮಯ ಬುಕ್‌ಹೌಸ್ ಬುಧವಾರ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು. ಸೌಮ್ಯನಾಥ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿ, ಎಚ್‌.ಡಿ. ದೇವೇಗೌಡ, ಮಂಜುನಾಥ್ ಭಟ್, ಎಂ.ಕೆ. ವೆಂಕಟರಾಮ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಅದ್ವೈತ ಯಾವುದೇ ಧರ್ಮ, ದೇಶಕ್ಕೆ ಸೇರಿದ್ದಲ್ಲ. ಇದು ಎಲ್ಲ ಕಾಲದ, ಜಗತ್ತಿನ ತತ್ತ್ವ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಎಂ.ಕೆ. ವೆಂಕಟರಾಮ್ ಅವರ ರಿಲಿಜಿಯನ್, ಧರ್ಮ ಆ್ಯಂಡ್ ಅದ್ವೈತ ಕೃತಿ ಮತ್ತು ಅದರ ಕನ್ನಡ ಆವೃತ್ತಿ ‘ಮತ, ಧರ್ಮ ಮತ್ತು ಅದ್ವೈತ ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸನಾತನ ಧರ್ಮ ಎನ್ನುವುದು ಕೂಡ ಯಾರಿಗೂ ಸೇರಿದ್ದಲ್ಲ, ಮನುಷ್ಯನ ಅಸ್ತಿತ್ವ, ಭೂಮಿಯ ಅಸ್ತಿತ್ವ, ಸೌರವ್ಯೂಹದ ಅಸ್ತಿತ್ವ ಬರುವ ಮೊದಲೇ, ಅಂದರೆ ಈ ಜಗತ್ತಿನ ಸೃಷ್ಟಿಗೆ ಕಾರಣವಾದ ವ್ಯವಸ್ಥೆಯೇ ಸನಾತನ ಧರ್ಮ. ಅದು ಭಾರತಕ್ಕೆ ಸೇರಿದ್ದಲ್ಲ, ವಿಶ್ವಕ್ಕೆ ಸೇರಿದ್ದು ಎಂದರು.

ದ್ವೈತ, ವಿಶಿಷ್ಠಾದ್ವೈತ, ಅದ್ವೈತ ಮತಾವಲಂಬಿಗಳು ಕಿತ್ತಾಡಿಕೊಳ್ಳುತ್ತಾರೆ. ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ ಎಂಬ ಮಾತು ಇದೆ. ಇದು ಒಂದಕ್ಕೊಂದು ಪೂರಕವಾದ ಮೆಟ್ಟಿಲುಗಳು. ನಮ್ಮನ್ನು ಮೇಲೆತ್ತಲು ಪೂರ್ವಜರು ನೀಡಿದ ದಾರಿ ಇದು. ಆದರೆ, ಕ್ರಮೇಣ ದಾರಿ ತಪ್ಪಿರಬಹುದು ಎಂದು ಹೇಳಿದರು.

ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು. ಅದ್ವೈತ ಕುರಿತು ಸರ್ಕಾರಿ ಸಂಸ್ಕೃತ ಕಾಲೇಜು ಪ್ರಾಂಶುಪಾಲ ಮಂಜುನಾಥ ಭಟ್ ಮಾತನಾಡಿದರು. ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ಚಿತ್ರದುರ್ಗ ಮಾದಾರ ಚನ್ನಯ್ಯ ಮಠದ ಮಾದಾರ ಚನ್ನಯ್ಯ ಸ್ವಾಮೀಜಿ. ಲೇಖಕ ಎಂ.ಕೆ. ವೆಂಕಟರಾಮ್ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎಚ್‌.ಕೆ. ರಾಮು, ಸಾಹಿತಿ ಸಿ.ನಾಗಣ್ಣ, ವಿಸ್ಮಯ ಬುಕ್‌ಹೌಸ್ ಪ್ರಕಾಶಕ ಪ್ರಕಾಶ್ ಚಿಕ್ಕಪಾಳ್ಯ ಉಪಸ್ಥಿತರಿದ್ದರು.

ಅನುವಾದಿತ ಬರಹಗಳಿಗೆ ಆಹ್ವಾನ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಚಾತುರ್ಮಾಸಿಕ ವಿದ್ವತ್ ಪತ್ರಿಕೆಗೆ ಅನುವಾದಿತ ಬರಹಗಳನ್ನು ಅನುವಾದಕರು, ಲೇಖಕರಿಂದ ಆಹ್ವಾನಿಸಿದೆ.

ಅನುವಾದಿತ ಲೇಖನ, ಕಥೆ, ಕವನ, ತಾತ್ವಿಕ ಲೇಖನ, ಕೃತಿ ವಿಮರ್ಶೆ ಸೇರಿ ವಿವಿಧ ಪ್ರಕಾರದಲ್ಲಿ ಅನುವಾದಿತ ಬರಹಗಳನ್ನು ಪರಿಗಣಿಸಲಾಗುತ್ತದೆ. ಕನ್ನಡದಿಂದ ಇಂಗ್ಲಿಷ್‌ಗೆ, ಇಂಗ್ಲಿಷ್‌ನಿಂದ ಕನ್ನಡಕ್ಕೆ, ಅನ್ಯ ಭಾರತೀಯ ಭಾಷೆಗಳಿಂದ ಕನ್ನಡ ಅಥವಾ ಇಂಗ್ಲಿಷ್‌ಗೆ ಅನುವಾದಿಸಿದ ಕಥೆ, ಕವಿತೆ, ವೈಚಾರಿಕ ಲೇಖನಗಳನ್ನು ಕಳುಹಿಸಬಹುದಾಗಿದೆ. ಅನುವಾದದ ಸಿದ್ಧಾಂತದ ಬಗೆಗೆ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಸ್ವತಂತ್ರ ಲೇಖನಗಳು ಅಥವಾ ಅನುವಾದಗಳು, ಕನ್ನಡದಲ್ಲಿ ಅನುವಾದಿತ ಕೃತಿಗಳ ಅವಲೋಕನವನ್ನು ಇದೇ 30ರೊಳಗೆ ಇ–ಮೇಲ್ ವಿಳಾಸ kbbp-bengaluru@ka.gov.inಗೆ ಕಳುಹಿಸಬೇಕು ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ದತ್ತಪ್ಪ ಸಾಗನೂರು ತಿಳಿಸಿದ್ದಾರೆ.

ಕುಂದುಕೊರತೆ ಇತ್ಯರ್ಥ: ಜೂನ್ 8ಕ್ಕೆ ಅಂಚೆ ಅದಾಲತ್



ಬೆಂಗಳೂರು: ಬೆಂಗಳೂರು ದಕ್ಷಿಣ ವಿಭಾಗದ ಅಂಚೆ ಸೇವೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು ಕೊರತೆಗಳನ್ನು ಇತ್ಯರ್ಥ ಪಡಿಸಲು ಜೂನ್ 8ರ ಬೆಳಿಗ್ಗೆ 11ಕ್ಕೆ ‘ಅಂಚೆ ಅದಾಲತ್’ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ಅಂಚೆ ಅಧೀಕ್ಷಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಯನಗರದ ಪ್ರಧಾನ ಅಂಚೆ ಕಚೇರಿಯ 2ನೇ ಮಹಡಿಯಲ್ಲಿ ಇರುವ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಅಂಚೆ ಅದಾಲತ್ ನಡೆಯಲಿದೆ.

ಸ್ಪೀಡ್ ಪೋಸ್ಟ್, ಪಾರ್ಸೆಲ್, ಮನಿ ಆರ್ಡರ್, ಉಳಿತಾಯ ಬ್ಯಾಂಕ್ ಖಾತೆ, ನಗದು ಪ್ರಮಾಣ ಪತ್ರಗಳು ಹಾಗೂ ಕೌಂಟರ್ ಸೇವೆಗಳಿಗೆ ಸಂಬಂಧಿಸಿದ ದೂರುಗಳನ್ನು ಸಾರ್ವಜನಿಕರು ಜೂನ್ 6ರ ಸಂಜೆ 4 ಗಂಟೆಯೊಳಗಾಗಿ ಹಿರಿಯ ಅಂಚೆ ಅಧೀಕ್ಷಕರು, ಬೆಂಗಳೂರು ದಕ್ಷಿಣ ವಿಭಾಗ, ಬೆಂಗಳೂರು–560041 ಈ ವಿಳಾಸಕ್ಕೆ ಅಂಚೆ ಅಥವಾ dobangaloresouth.ka@indiapost.gov.in ಇ–ಮೇಲ್ ವಿಳಾಸಕ್ಕೆ ಕಳಿಸಬಹುದು ಎಂದು ಕೋರಿದ್ದಾರೆ.

ಗುರುವಾರ • ಜೂನ್ 4, 2026
ಪ್ರಜಾವಾಣಿ

ಸಾಂಸ್ಕೃತಿಕ ಮುನ್ನೋಟ

ಸಂಗೀತ ಸಂಜೆ

ಬೆಂಗಳೂರು: ಭಾವುರಾವ್ ದೇಶಪಾಂಡೆ ಸ್ಮಾರಕ ಟ್ರಸ್ಟ್ ಇದೇ 7ರಂದು ಸಂಜೆ 5 ಗಂಟೆಗೆ 'ಮಾಸದ ಮಾಧುರ್ಯ' ಸಂಗೀತ ಸಂಜೆಯನ್ನು ಮಲ್ಲೇಶ್ವರದ ಜಗನ್ನಾಥ ಭವನದಲ್ಲಿ ಹಮ್ಮಿಕೊಂಡಿದೆ.

ಸಂಗೀತಾ ಎಲ್. ನಾಯ್ಕ್ ಅವರಿಂದ ಗಾಯನ ನಡೆಯಲಿದ್ದು, ತಬಲಾದಲ್ಲಿ ಕೌಶಿಕ ಭಟ್ಟ ಹಾಗೂ ಹಾರ್ಮೋನಿಯಂನಲ್ಲಿ ವಿಘ್ನೇಶ ಭಾಗವತ ಅವರು ಸಾಥ್ ನೀಡಲಿದ್ದಾರೆ. ಮಲ್ಲೇಶ್ವರದ ಬಿಜೆಪಿ ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಪ್ತಕ ಸಂಸ್ಥಾಪಕ ಜಿ.ಎಸ್. ಹೆಗಡೆ ಅವರು ಉಪಸ್ಥಿತರಿರುತ್ತಾರೆ. ಪ್ರವೇಶ ಉಚಿತ ಇರಲಿದೆ.



'ಕಥೆಗಾರ' ನಾಟಕ

ಬೆಂಗಳೂರು: ಕಲಾಧ್ಯಾನ್ ಇನ್‌ಸ್ಟಿಟ್ಯೂಟ್ ಫಾರ್ ಆರ್ಟ್ಸ್ ಇದೇ 7ರಂದು ಸಂಜೆ 7 ಗಂಟೆಗೆ ಜಯನಗರದ ವಿವೇಕ ಸಭಾಂಗಣದಲ್ಲಿ 'ಕಥೆಗಾರ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ವಿವೇಕ್ ಎಂ.ರಾವ್ ಅವರು ರಚಿಸಿ ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ಎರಡು ತಾಳಮದ್ದಳೆ



ಬೆಂಗಳೂರು: ಮಹಾನಗರದಲ್ಲೊಂದು ಮಾತಿನ ಮಂಟಪ-2ರ ಸರಣಿಯಡಿ ಇದೇ 7ರಂದು ಮಧ್ಯಾಹ್ನ 2 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ದಿಗ್ಗಜ ಕಲಾವಿದರಿಂದ ಎರಡು ತಾಳಮದ್ದಳೆ ಹಮ್ಮಿಕೊಳ್ಳಲಾಗಿದೆ.

ಹಲವು ಕವಿಗಳಿಂದ ಸಂಪಾದಿಸಲ್ಪಟ್ಟ 'ಕರ್ಣಬೇಧನ' ಹಾಗೂ ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿ ಅವರು ರಚಿಸಿದ 'ಭೀಷ್ಮ ವಿಜಯ' ತಾಳಮದ್ದಳೆ ಪ್ರದರ್ಶನ ಕಾಣಲಿದೆ. ಹಿಮ್ಮೇಳದಲ್ಲಿ ಪ್ರಸನ್ನ ಭಟ್ ಬಾಳ್ಕಲ್, ಕಾವ್ಯಶ್ರೀ ಅಜೇರು (ಭಾಗವತಿಕೆ), ಅಕ್ಷಯ್ ಆಚಾರ್ಯ ಬಿದ್ಕಲ್ ಕಟ್ಟೆ, ಅಕ್ಷಯ್ ರಾವ್ ವಿಟ್ಲ (ಮದ್ದಳೆ), ಮನೋಜ್ ಆಚಾರ್ಯ, ಶಿಖಿನ್ ಶರವೂರು (ಚೆಂಡೆ), ಮುಮ್ಮೇಳದಲ್ಲಿ ಸಂಕದಗುಂಡಿ ಗಣಪತಿ ಭಟ್, ಪವನ್ ಕಿರಣಕೆರೆ, ಹರೀಶ್ ಬೊಳಂತಿಮೊಗರು, ಸುಣ್ಣಂಬಳ ವಿಶ್ವೇಶ್ವರ ಭಟ್, ಜಬ್ಬಾರ್ ಸಮೋ, ರಾಧಾಕೃಷ್ಣ ಕಲ್ಚಾರ್, ವಾಸುದೇವ ರಂಗಾಭಟ್ ಹಾಗೂ ಅವಿನಾಶ್ ಉಬರಡ್ಕ ಭಾಗವಹಿಸಲಿದ್ದಾರೆ.

ಯಾವುದೇ ಸಭಾ ಕಾರ್ಯಕ್ರಮ ಇರುವುದಿಲ್ಲ. ತಾಳಮದ್ದಳೆಯ ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯವಿದೆ. ಸಂಪರ್ಕಕ್ಕೆ: 9900802670

'ರಿದಮ್ಸ್ ಆಫ್ ಲೈಫ್' ಸಂಗೀತ–ನೃತ್ಯ




ಬೆಂಗಳೂರು: ದಿ ಸೆಂಟರ್ ಫಾರ್ ಪೀಸ್ ಆ್ಯಂಡ್ ಪರ್ಫಾರ್ಮಿಂಗ್ ಆರ್ಟ್ಸ್ ವತಿಯಿಂದ ಇದೇ 5ರಂದು ಸಂಜೆ 7.30ಕ್ಕೆ ರಾಮಗೊಂಡನಹಳ್ಳಿಯಲ್ಲಿರುವ ಜಾಗೃತಿ ರೆನೈಸಾನ್ಸ್‌ನ ಜಾಗೃತಿ ಥಿಯೇಟರ್‌ನಲ್ಲಿ 'ರಿದಮ್ಸ್ ಆಫ್ ಲೈಫ್' ಶಾಸ್ತ್ರೀಯ ಸಂಗೀತ–ನೃತ್ಯ ಕಾರ್ಯಕ್ರಮ ಹಮ್ಮಿಕೊಂಡಿದೆ.

ಒಪೆರಾ, ಒಡಿಸ್ಸಿ, ಭರತನಾಟ್ಯ ಸೇರಿದಂತೆ ವಿವಿಧ ಕಲಾ ಪ್ರಕಾರಗಳ ಸಂಗಮವಾಗಿರುವ ಈ ಕಾರ್ಯಕ್ರಮದಲ್ಲಿ, ದೇಶದ ವಿವಿಧ ಭಾಗಗಳ ಕಲಾವಿದರು ಒಂದೇ ವೇದಿಕೆಯಲ್ಲಿ ತಮ್ಮ ಕಲಾ ಪ್ರದರ್ಶನ ನೀಡಲಿದ್ದಾರೆ. ಒಪೆರಾ ಗಾಯಕಿ ಆಸ್ಥಾ ಮೊಹಾಪಾತ್ರ, ಒಡಿಸ್ಸಿ ನೃತ್ಯಗಾರ್ತಿ ಬೈಸಾಲಿ ಮೊಹಾಂತಿ, ಭರತನಾಟ್ಯ ಕಲಾವಿದೆ ರಕ್ಷಾ ಕಾರ್ತಿಕ್ ಮತ್ತು ಶಾಸ್ತ್ರೀಯ ನೃತ್ಯಗಾರ್ತಿ ರಂಜನಿ ಮಿತ್ರ ಪಾಲ್ಗೊಳ್ಳಲಿದ್ದಾರೆ.

'ಕ್ಷಣಗಳು, ನೆನಪುಗಳು ಮತ್ತು ನಾವು ಬದುಕುವ ಅನೇಕ ಜೀವನಗಳ ಒಂದು ಸಂಜೆಯ ಅನುಭವ' ಎಂಬ ಪರಿಕಲ್ಪನೆಯಡಿ ನಡೆಯುವ ಈ ಕಾರ್ಯಕ್ರಮವು, ಸಂಗೀತ, ಲಯ ಮತ್ತು ನೃತ್ಯದ ಮೂಲಕ ಜೀವನದ ಕಥೆಗಳು, ಭಾವನೆಗಳು ಹಾಗೂ ಚಿಂತನೆಗಳನ್ನು ಪ್ರೇಕ್ಷಕರ ಮುಂದಿಡಲಿದೆ.

ಭಾರತೀಯ ನಾದ ಸೌರಭ ಸಂಗೀತೋತ್ಸವ



ವಾಗೀಶ ಭಟ್

ಬೆಂಗಳೂರು: ಸರಸ್ವತೀ ಸಂಗೀತ ವಿದ್ಯಾಲಯವು ಇದೇ 7ರಂದು ಸಂಜೆ 4.30ಕ್ಕೆ ಜಯನಗರದ 9ನೇ ಬ್ಲಾಕ್‌ನಲ್ಲಿರುವ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ಭಾರತೀಯ ನಾದ ಸೌರಭ ಸಂಗೀತೋತ್ಸವ ಹಮ್ಮಿಕೊಂಡಿದೆ.

ವಾಗೀಶ ಭಟ್ ಅವರು ಹಿಂದೂಸ್ತಾನಿ ಗಾಯನ ಪ್ರಸ್ತುತಪಡಿಸಲಿದ್ದು, ಮಧುಸೂದನ್ ಮುತಾಲಿಕ್ (ತಬಲಾ), ಶಿವಕುಮಾರ್ ಮಹಂತ (ಹಾರ್ಮೋನಿಯಂ), ಸ್ಮೃತಿ ಎಸ್. ಭಟ್ (ಗಾಯನ), ಎಂ. ಪ್ರಣವ್ ಪೈ (ತಬಲಾ) ಹಾಗೂ ಪ್ರಣವ್ ಪಡಿಯಾರ್ (ಹಾರ್ಮೋನಿಯಂ) ಅವರಿಂದ ಸಂಗೀತ ಕಛೇರಿ ನಡೆಯಲಿದೆ. ಎನ್.ಎಸ್. ಪ್ರಸಾದ್ ಅವರಿಂದ ಮ್ಯಾಂಡೋಲಿನ್ ಹಾಗೂ ಸತೀಶ್ ಹಂಪಿಹೊಳಿ ಅವರಿಂದ ತಬಲಾ ವಾದನ ಹಮ್ಮಿಕೊಳ್ಳಲಾಗಿದೆ.

ಸರಸ್ವತೀ ಸಂಗೀತ ವಿದ್ಯಾಲಯದ ಗಾಂಧಾರ ಮಂದಾಕಿನ ಮಹಿಳಾ ವೃಂದದಿಂದ ಸಮೂಹ ಗಾಯನ ನಡೆಯಲಿದೆ.

ಹಾಕಿ ಆಟಗಾರರಿಗೆ ವಂಚನೆ ತನಿಖೆಗೆ ಯೋಗ್ಯ: ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬಡ ಹಾಕಿ ಆಟಗಾರರನ್ನು ವಂಚಿಸಿದಂತೆ ಕ್ರಿಕೆಟಿಗರನ್ನೂ ವಂಚಿಸಲಿಕ್ಕಾಗುತ್ತದೆಯೇ' ಎಂದು ಪ್ರಶ್ನಿಸಿರುವ ಹೈಕೋರ್ಟ್, 'ಹಾಕಿ ಆಟಗಾರರನ್ನು ನಂಬಿಸಿ ವಂಚಿಸಿರುವ ಪ್ರಕರಣ ತನಿಖೆಗೆ ಯೋಗ್ಯ' ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ 'ಗೇಮ್ ಹಾಕಿ ಕುಚ್ ನಹೀ ಬಾಕಿ' (ಆಟವೇನೊ ಹಾಕಿ ಆದರೆ, ಉಳಿದಿಲ್ಲ ಏನೂ ಬಾಕಿ) ಎಂದು ಅರ್ಜಿದಾರರನ್ನು ಛೇಡಿಸಿದೆ.

ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು ಎಂದು ಕೋರಿ, 'ಖೇಲೊ ಮಾಸ್ಟರ್ ಸಂಸ್ಥೆಯ ಖಜಾಂಜಿ ಎ.ಎನ್.ಸೋಮಯ್ಯ, ಅಧ್ಯಕ್ಷ ಎಚ್.ಎಂ.ಪ್ರಸನ್ನ, ಕಾರ್ಯದರ್ಶಿ ಎನ್.ಮಧು ಮತ್ತು ತಂಡದ ಮ್ಯಾನೇಜರ್ ಪಿ.ಕೆ.ತೇಜಶ್ರೀ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಈ ವೇಳೆ ದೂರುದಾರರ ಪರ ವಕೀಲರು, 'ಆಟಗಾರರ ಹೆಸರಿನಲ್ಲಿ ಮತ್ತು ಪ್ರಾಯೋಜಕತ್ವದ ನೆಪದಲ್ಲೂ ಹಣ ಸಂಗ್ರಹಿಸಲಾಗಿದೆ. ಅದನ್ನು ಅರ್ಜಿದಾರರು ತಮ್ಮ ಖಾತೆಗೆ ಹಾಕಿಸಿಕೊಂಡಿದ್ದಾರೆ' ಎಂದು ಆರೋಪಿಸಿದರು.

ಇದನ್ನು ಒಪ್ಪದ ಅರ್ಜಿದಾರರ ಪರ ವಕೀಲರು, 'ಮೊದಲಿಗೆ ಕೊರಿಯಾದಲ್ಲಿ ನಡೆಯುವ ಹಾಕಿ ಟೂರ್ನಿಗೆ ಕರೆದೊಯ್ಯಲಾಗುವುದು ಎಂದು 15 ಆಟಗಾರರಿಂದ ತಲಾ ₹15 ಸಾವಿರ ವಸೂಲಿ ಮಾಡಲಾಗಿತ್ತು. ಆಟಗಾರರು ವೀಸಾಗೆ ಅಗತ್ಯ ದಾಖಲೆ ಒದಗಿಸಲು ವಿಫಲರಾಗಿದ್ದಾರೆ ಎಂಬ ಕಾರಣಕ್ಕೆ ಪ್ರವಾಸ ಸಾಧ್ಯವಾಗಲಿಲ್ಲ. ನಂತರ ಆಸ್ಟ್ರೇಲಿಯಾದಲ್ಲಿ ಟೂರ್ನಿ ನಡೆಸಲಾಗುತ್ತದೆ ಎಂದು ಪ್ರತಿಯೊಬ್ಬ ಆಟಗಾರನಿಂದ ₹1.50 ಲಕ್ಷ ಸಂಗ್ರಹಿಸಲಾಗಿತ್ತು. ಅದಕ್ಕೂ ಆಟಗಾರರು ವೀಸಾ ಪಡೆಯಲು ದಾಖಲೆ ಒದಗಿಸಲು ವಿಫಲವಾದರು ಎಂದು ಕೈಬಿಡಲಾಯಿತು. ಆದರೆ, ಶ್ರೀಲಂಕಾದಲ್ಲಿ ನಡೆದಿದ್ದ ಟೂರ್ನಿಗೆ ಮಾತ್ರವೇ ಆಟಗಾರರನ್ನು ಕರೆದೊಯ್ಯಲಾಗಿತ್ತು' ಎಂದು ಸಮಜಾಯಿಷಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಭಾರತದಲ್ಲೇ ಕುಳಿತು ನೀವು ಲೋಕವನ್ನೆಲ್ಲಾ ದರ್ಶನ ಮಾಡಿಸಿದ್ದೀರಿ' ಎಂದು ಅರ್ಜಿದಾರರನ್ನು ಕುಟುಕಿತಲ್ಲದೇ, ಪದಾಧಿಕಾರಿಗಳ ವಿರುದ್ದ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಸ್ಪಷ್ಟವಾಗಿ ನಿರಾಕರಿಸಿತಲ್ಲದೆ, 'ಇದು ತನಿಖೆ ನಡೆಯಲೇಬೇಕಾದ ಪ್ರಕರಣವಾಗಿದೆ. ಆಟವೇನೊ ಹಾಕಿ ಆದರೆ, ಏನೂ ಉಳಿದಿಲ್ಲ ಬಾಕಿ' ಎಂದು ಅರ್ಜಿದಾರರನ್ನು ವ್ಯಂಗ್ಯ ಮಾಡಿತು.

'ಅಂತಿಮ ವರದಿ ಸಲ್ಲಿಸಿದ ಬಳಿಕ ಅದನ್ನು ಪ್ರಶ್ನಿಸುವ ಸ್ವಾತಂತ್ರ್ಯ ಕಲ್ಪಿಸಿ, ಅರ್ಜಿ ಹಿಂಪಡೆಯಲು ಅವಕಾಶ ಮಾಡಿಕೊಡಬೇಕು' ಎಂದು ಅರ್ಜಿದಾರರ ಮನವಿಯನ್ನು ಪುರಸ್ಕರಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿತು.

'ನಮ್ಗೇನ್ ಬೆಲೆನೇ ಇಲ್ವಾ?' ನಾಟಕ

ಬೆಂಗಳೂರು: ಪಯಣ ರಂಗ ತಂಡವು ಇದೇ 5ರಂದು ಸಂಜೆ 7.15ಕ್ಕೆ ಮಲ್ಲೇಶ್ವರದ ಸೇವಾಸದನದಲ್ಲಿ 'ನಮ್ಗೇನ್ ಬೆಲೆನೇ ಇಲ್ವಾ?' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಅರುಣ್ ಸೂರ್ಯ ಅವರು ಈ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಇದೊಂದು ಪ್ರಯೋಗಾತ್ಮಕ ಕನ್ನಡ ನಾಟಕವಾಗಿದ್ದು, ನಿಜ ಜೀವನದ ಘಟನೆಗಳಿಂದ ಸ್ಫೂರ್ತಿ ಪಡೆದಿದೆ. ಒಂದು ರೋಚಕ ಹಾಗೂ ರಂಜನೀಯ ಪ್ರಯಾಣಕ್ಕೆ ಕರೆದೊಯ್ಯುತ್ತದೆ. ಒಂದೇ ವೇದಿಕೆಯ ಮೇಲೆ ಎರಡು ನಾಟಕಗಳು ಏಕಕಾಲದಲ್ಲಿ ತೆರೆದುಕೊಳ್ಳುತ್ತವೆ ಎಂದು ಆಯೋಜಕರು ತಿಳಿಸಿದ್ದಾರೆ.

ಬುಕ್ ಮೈ ಶೋದಲ್ಲಿ ಟಿಕೆಟ್‌ಗಳು ಲಭ್ಯ. ಸಂಪರ್ಕಕ್ಕೆ: 6363333506





'ಸುಯೋಧನ' ನಾಟಕ ಪ್ರದರ್ಶನ

ಬೆಂಗಳೂರು: ಬಿಂಕ ಬಿನ್ನಾಣರು ರಂಗ ತಂಡವು ಇದೇ 7ರಂದು ಸಂಜೆ 7 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ 'ಸುಯೋಧನ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನಾಟಕವನ್ನು ಎಸ್.ವಿ. ಕೃಷ್ಣಶರ್ಮ ಅವರು ರಚಿಸಿದ್ದು, ಶಿವು ಹೊನ್ನಿಗನಹಳ್ಳಿ ಅವರು ನಿರ್ದೇಶಿಸಿದ್ದಾರೆ. ಇದು 1.45 ಗಂಟೆಯ ಪೌರಾಣಿಕ ನಾಟಕವಾಗಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

'ರಂಗಹಸಿರು' ಹಾಸ್ಯೋತ್ಸವ

ಬೆಂಗಳೂರು: ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರವು ಇದೇ 6ರಂದು ಸಂಜೆ 5.30ಕ್ಕೆ ಅರಮನೆ ರಸ್ತೆಯಲ್ಲಿರುವ ಕೊಂಡಜ್ಜಿ ಬಸಪ್ಪ ರಂಗಮಂದಿರದಲ್ಲಿ 'ರಂಗಹಸಿರು' ಹಾಸ್ಯೋತ್ಸವ ಹಾಗೂ ಪರಿಸರ ಗೀತೆಗಳ ಗಾಯನ ಹಮ್ಮಿಕೊಂಡಿದೆ.

ಸಂಸ್ಥೆಯ 19ನೇ ವಾರ್ಷಿಕೋತ್ಸವ ಹಾಗೂ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಂಗಭೂಮಿ, ಕಿರುತೆರೆ, ಚಲನಚಿತ್ರ ಕ್ಷೇತ್ರದ ಕಲಾವಿದರು ಭಾಗವಹಿಸುತ್ತಾರೆ.

'ಜವ' ನಾಟಕ ಪ್ರದರ್ಶನ

ಬೆಂಗಳೂರು: ಸಂಕೇತ್ ನಾಟಕ ವತಿಯಿಂದ ಇದೇ 5ರಂದು ಸಂಜೆ 7.30ಕ್ಕೆ ರಂಗಶಂಕರದಲ್ಲಿ 'ಜವ' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಎಸ್. ಸುರೇಂದ್ರನಾಥ್ ಅವರು ರಚಿಸಿ ನಿರ್ದೇಶಿಸಿದ್ದಾರೆ. ಇದು ಪ್ರೇಮಕತೆ ಆಧಾರಿತ ನಾಟಕವಾಗಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

'ರಾಗಸಂಧಾನ' ಸಂಗೀತ ನಾಟಕ



ರವೀಂದ್ರ ಗುರುರಾಜ ಕಾಟೋಟಿ

ಬೆಂಗಳೂರು: ಬಿಜಾಪುರೆ ಹಾರ್ಮೋನಿಯಂ ಫೌಂಡೇಷನ್ 'ನ್ಯೂ ಮಾರ್ಕ್' ಕಲಾ ಸರಣಿಯಡಿ ಇದೇ 5ರಂದು ಸಂಜೆ 6.30ಕ್ಕೆ ಜೆ.ಸಿ.ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ 'ರಾಗಸಂಧಾನ' ಸಂಗೀತ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರವೀಂದ್ರ ಗುರುರಾಜ ಕಾಟೋಟಿ ಅವರ ಪರಿಕಲ್ಪನೆ ಮತ್ತು ರಾಗ ಸಂಯೋಜನೆಯಡಿ ಈ ನಾಟಕ ಮೂಡಿಬರಲಿದ್ದು, ಕೊರ್ಗಿ ಶಂಕರನಾರಾಯಣ ಅವರು ರಚಿಸಿ ನಿರ್ದೇಶಿಸಿದ್ದಾರೆ.

ಎಚ್.ಎಸ್. ವೇಣುಗೋಪಾಲ್ (ಕೊಳಲು), ರವೀಂದ್ರ ಗುರುರಾಜ ಕಾಟೋಟಿ (ಹಾರ್ಮೋನಿಯಂ), ಸುಮಿತ್ ನಾಯಿಕ್ (ತಬಲಾ) ವಾದ್ಯ ಸಹಕಾರ ನೀಡಲಿದ್ದಾರೆ. ಸಿದ್ಧಾರ್ಥ ಬೆಳ್ಮಣ್ಣು, ದೀಪ್ತಿ ರಾಧಾಕೃಷ್ಣ, ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ದೀಪಿಕಾ ಭಟ್ ಅವರು ವೇದಿಕೆ ಮೇಲೆ ರಂಜಿಸಲಿದ್ದಾರೆ. ಟಿಕೆಟ್‌ಗಳಿಗೆ: 7019927140

ಸಿನಿಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: 'ಸಂವಾದ ಬದುಕು–ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್ ಸಂಸ್ಥೆ'ಯು ಚಲನಚಿತ್ರ ನಿರ್ಮಾಣಕ್ಕೆ ಸಂಬಂಧಿಸಿದ 6 ತಿಂಗಳ ಉಚಿತ ಕೋರ್ಸ್‌ಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ.



ಸಿನಿಮಾ, ಸಾಕ್ಷ್ಯಚಿತ್ರ, ವೆಬ್ ಸೀರಿಸ್, ಯೂಟ್ಯೂಬ್ ಕಂಟೆಂಟ್ ಕ್ರಿಯೇಷನ್‌ನಲ್ಲಿ ಆಸಕ್ತಿ ಇರುವವರಿಗೆ ಅವಕಾಶ ನೀಡಲಾಗುತ್ತದೆ. ಸಿನಿಮಾ ಭಾಷೆ, ಚಿತ್ರಕಥೆ, ನಿರ್ದೇಶನ, ಎಡಿಟಿಂಗ್, ಗ್ರಾಫಿಕ್ ವಿನ್ಯಾಸ, ಬೆಳಕು, ಪೋಸ್ಟ್ ಪ್ರೊಡಕ್ಷನ್ ಹಾಗೂ ಮಾರುಕಟ್ಟೆ ಕುರಿತು ತರಬೇತಿ ನೀಡಲಾಗುತ್ತದೆ. ಪರಿಣತ ತಂತ್ರಜ್ಞರೊಂದಿಗೆ ಸಂವಾದವನ್ನೂ ನಡೆಸಲಾಗುತ್ತದೆ.

ಗ್ರಾಮೀಣ ಹಾಗೂ ಬಡತನದ ಹಿನ್ನೆಲೆಯಿಂದ ಬಂದವರಿಗೆ ಆದ್ಯತೆ ನೀಡಲಾಗುವುದು. ಕೋರ್ಸ್ ಜೂನ್ 25ರಿಂದ ಆರಂಭವಾಗಲಿದ್ದು, ಆಯ್ಕೆಯಾದವರಿಗೆ ವಸತಿ ವ್ಯವಸ್ಥೆ ಇದೆ. ಅಭ್ಯರ್ಥಿಗಳು ತಮ್ಮ ಆಸಕ್ತಿ ಮತ್ತು ಅನುಭವವನ್ನು 300ರಿಂದ 500 ಪದಗಳಲ್ಲಿ ಬರೆದು, ಗೂಗಲ್ ಫಾರ್ಮ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೊ.99720 89471, 99450 65060 ಹಾಗೂ ಇ-ಮೇಲ್ massmedia@samvadabaduku.org ಸಂಪರ್ಕಿಸಬಹುದು ಎಂದು ಕಾರ್ಯಕ್ರಮ ನಿರ್ದೇಶಕ ಮುರಳಿ ಮೋಹನ್ ಕಾಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕೆ.ಪಿ.ಸಿ.ಸಿ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯದ
ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದ
ಶ್ರೀ ಡಿ.ಕೆ.ಶಿವಕುಮಾರ್ ರವರಿಗೆ
ಶುಭಾಶಯಗಳು
ಎನ್.ಎನ್. ಶ್ರೀನಿವಾಸಯ್ಯ
ಅಧ್ಯಕ್ಷರು,
ಕುವೆಂಪುನಗರ ಬ್ಲಾಕ್ ಕಾಂಗ್ರೆಸ್ ಸಮಿತಿ
ಎಂ.ಜಯಗೋಪಾಲ ಗೌಡ
ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ
ಅಧ್ಯಕ್ಷರು, ಬ್ಯಾಟರಾಯನಪುರ ಬ್ಲಾಕ್ ಕಾಂಗ್ರೆಸ್ ಸಮಿತಿ
ಮಹೇಶ್‌ಕುಮಾರ್ ಎನ್.ಕೆ.
ಅಧ್ಯಕ್ಷರು,
ಜಾಲಾ ಬ್ಲಾಕ್ ಕಾಂಗ್ರೆಸ್ ಸಮಿತಿ

ಬೆದರಿಸಿ ₹1.50 ಕೋಟಿ ಸುಲಿಗೆ

500 ಗ್ರಾಂ ಆಭರಣವನ್ನೂ ದೋಚಿದ್ದ ಮಹಿಳೆ • ಅಮೃತಹಳ್ಳಿ ಪೊಲೀಸರ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಏಜೆಂಟ್‌ಗೆ ಬೆದರಿಸಿ ₹1.50 ಕೋಟಿ ಹಾಗೂ 500 ಗ್ರಾಂ ಚಿನ್ನದ ಆಭರಣ ಸುಲಿಗೆ ಮಾಡಿದ್ದ ದಂಪತಿ ವಿರುದ್ಧ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಹೆಬ್ಬಾಳದ ಕೆಂಪಾಪುರ ನಿವಾಸಿ, ರಿಯಲ್ ಎಸ್ಟೇಟ್ ಏಜೆಂಟ್ ಎ.ಎಸ್. ರವಿರಾಜ್ ನೀಡಿದ ದೂರಿನ ಮೇಲೆ ಸೌಮ್ಯಾ ಹಾಗೂ ಅಂಬರೀಷ್ ದಂಪತಿ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗು ತ್ತಿದೆ ಎಂದು ಪೊಲೀಸರು ಹೇಳಿದರು.

ದೂರುದಾರ ರವಿರಾಜ್ ಅವರು 18 ವರ್ಷದ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಒಬ್ಬ ಮಗ ಇದ್ದಾನೆ. ಈ ಮಧ್ಯೆ ಕೌಟುಂಬಿಕ ಕಾರಣಕ್ಕೆ ಪತ್ನಿ ಮತ್ತು ಮಗನಿಂದ ಪ್ರತ್ಯೇಕವಾಗಿ ವಾಸವಾಗಿದ್ದರು. ಈ ಮಧ್ಯೆ ಎಂಟು ವರ್ಷಗಳ ಹಿಂದೆ ಸಾಮಾಜಿಕ ಜಾಲತಾಣದ ಮೂಲಕ ಸೌಮ್ಯಾ ಪರಿಚಯವಾಗಿದ್ದು, ಬಳಿಕ ಇಬ್ಬರೂ ಪರಸ್ಪರ ಪ್ರೀತಿಸಿ ಸಹ ಜೀವನ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಈಗಾಗಲೇ ತನಗೆ ಮದುವೆಯಾಗಿದ್ದು, ಪತಿಯಿಂದ ವಿಚ್ಛೇದನ ಪಡೆಯಲು ಅರ್ಜಿ ಸಲ್ಲಿಸಿದ್ದೇನೆ ಎಂದು ಸೌಮ್ಯಾ ಹೇಳಿದ್ದರು. ಅಲ್ಲದೆ, 'ವಿಚ್ಛೇದನ ಪಡೆದ ಬಳಿಕ ಮದುವೆಯಾಗೋಣ' ಎಂದು ನಂಬಿಸಿದ್ದರು. ಫ್ಲಾಟ್ ಬಾಡಿಗೆ ಪಡೆದಾಗಲೂ ಬಾಡಿಗೆ ಕರಾರು ಪತ್ರಕ್ಕೆ ಪತ್ನಿ ಎಂದೇ ಸಹಿ ಮಾಡಿದ್ದರು ಎಂದು ರವಿರಾಜ್ ಅವರು ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಬೆದರಿಸಿ ಸುಲಿಗೆ: ಈ ಮಧ್ಯೆ ಹಣಕಾಸು ವಿಚಾರಕ್ಕೆ ಇಬ್ಬರ ನಡುವೆ ಜಗಳ ನಡೆಯುತ್ತಿತ್ತು. ಸೌಮ್ಯಾ ಅವರು ಕೇಳಿದಾಗಲೆಲ್ಲ ಹಣ ನೀಡುತ್ತಿದ್ದೆ. 2026ರ ಮೇ ವರೆಗೆ ಸುಮಾರು ₹1.50 ಕೋಟಿ ಹಾಗೂ 500 ಗ್ರಾಂ ಚಿನ್ನಾಭರಣ ಪಡೆದುಕೊಂಡಿದ್ದಾರೆ ಎಂದು ರವಿರಾಜ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಅಂಬರೀಷ್ ಅವರೊಂದಿಗೆ ಮದುವೆ ಆಗಿರುವುದನ್ನು ಸೌಮ್ಯಾ ಮುಚ್ಚಿಟ್ಟಿದ್ದರು. ಅದನ್ನು ಪ್ರಶ್ನಿಸಿದಾಗ 'ಅದು ನನ್ನ ವೈಯಕ್ತಿಕ ವಿಚಾರ' ಎಂದು ಬೆದರಿಕೆ ಹಾಕಿದ್ದರು. ಅಲ್ಲದೇ, ಅಂಬರೀಶ್ ಕೂಡ ಕರೆ ಮಾಡಿ ಪ್ರಾಣ ಬೆದರಿಕೆ ಹಾಕಿದ್ದಾರೆ. ಮೇ 26ರಂದು ಕರೆ ಮಾಡಿದ ದಂಪತಿ, ಅಶ್ಲೀಲ ವಿಡಿಯೊ ಮತ್ತು ಫೋಟೊಗಳು ನಮ್ಮ ಬಳಿ ಇವೆ. ಅವುಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಬೆದರಿಕೆ ಒಡ್ಡಿ ಮತ್ತಷ್ಟು ಹಣಕ್ಕೆ ಬೇಡಿಕೆ ಒಡ್ಡಿದ್ದರು' ಎಂದು ರವಿರಾಜ್ ದೂರಿನಲ್ಲಿ ವಿವರಿಸಿದ್ದಾರೆ.

'ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ದೂರುದಾರರಿಗೆ ಹಣ ವರ್ಗಾವಣೆ ಮಾಡಿರುವ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಅಲ್ಲದೇ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ' ಎಂದು ಪೊಲೀಸರು ಹೇಳಿದರು. ಅಮೃತ ಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೂಡಿಕೆ: ಯುವತಿಗೆ ₹41 ಲಕ್ಷ ವಂಚನೆ

ಅಪರಾಧ ಸುದ್ದಿ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡಲಾಗುವುದೆಂದು ನಂಬಿಸಿ ಯುವತಿಗೆ ₹41 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ಸೈಬರ್ ವಂಚಕರ ವಿರುದ್ಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾರತ್‌ಹಳ್ಳಿಯ 30 ವರ್ಷದ ಯುವತಿ ನೀಡಿದ ದೂರಿನ ಮೇಲೆ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ ಎಂದು ಸೈಬರ್ ಅಪರಾಧ ಠಾಣೆಯ ಪೊಲೀಸರು ತಿಳಿಸಿದ್ದಾರೆ. ಯುವತಿಗೆ ಮೂರು ಪ್ರತ್ಯೇಕ ಮೊಬೈಲ್ ಸಂಖ್ಯೆಗಳಿಂದ ಕರೆ ಮಾಡಿದ್ದ ಸೈಬರ್ ವಂಚಕರು, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರಲಿದೆ ಎಂಬುದಾಗಿ ನಂಬಿಸಿದ್ದರು. ಬಳಿಕ, ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಸಿ, ಲಿಂಕ್ ವೊಂದನ್ನು ಕಳುಹಿಸಿದ್ದರು. ಅದಾದ ಮೇಲೆ ದೂರುದಾರರು, ಲಿಂಕ್ ಮೇಲೆ ಕ್ಲಿಕ್ ಮಾಡಿ ನೋಂದಣಿ ಮಾಡಿಕೊಂಡಿದ್ದರು. ಆರಂಭದಲ್ಲಿ ಯುವತಿ ಆ್ಯಪ್ ಮೂಲಕ ₹30 ಸಾವಿರ ಹೂಡಿಕೆ ಮಾಡಿದ್ದರು. ಇನ್ನೂ ಹೆಚ್ಚಿನ ಹಣ ಹೂಡಿಕೆ ಮಾಡುವಂತೆ ಸೈಬರ್ ವಂಚಕರು ಯುವತಿಯ ಮನವೊಲಿಸಿದ್ದರು. ಅದಕ್ಕೆ ಒಪ್ಪಿದ್ದ ಯುವತಿ ಬೇರೆ ಬೇರೆ ಬ್ಯಾಂಕ್‌ನ ಮೂರು ಖಾತೆಗಳಿಂದ ₹41 ಲಕ್ಷ ಹೂಡಿಕೆ ಮಾಡಿದ್ದರು ಎಂದು ಮೂಲಗಳು ಹೇಳಿವೆ.

ಕೆಲವು ತಿಂಗಳು ಕಳೆದ ಮೇಲೆ ಹೂಡಿಕೆ ಮಾಡಿದ್ದ ಹಣವನ್ನು ವಾಪಸ್ ಪಡೆಯಲು ದೂರುದಾರೆ ಮುಂದಾಗಿದ್ದರು. ಆಗ ವಂಚಕರು ಇನ್ನೂ ಹೆಚ್ಚಿನ ಹಣ ಹೂಡಿಕೆ ಮಾಡುವಂತೆ ಸೂಚಿಸಿದ್ದರು. ಆಗ ವಂಚನೆ ನಡೆದಿರುವುದು ಯುವತಿಯ ಅರಿವಿಗೆ ಬಂದು ದೂರು ನೀಡಿದ್ದಾರೆ ಎಂದು ಸೈಬರ್ ಪೊಲೀಸರು ಹೇಳಿದರು.

'ಜ.12ರಂದು ಯುವತಿಗೆ ಸೈಬರ್ ವಂಚಕರು ಕರೆ ಮಾಡಿದ್ದರು. ಅದಾದ ಮೇಲೆ ಹಂತಹಂತವಾಗಿ ಯುವತಿ ಹೂಡಿಕೆ ಮಾಡಿದ್ದಾರೆ. ಯುವತಿ ವಿಳಂಬವಾಗಿ ದೂರು ನೀಡಿದ್ದರಿಂದ ಹಣ ಯಾವ್ಯಾವ ಖಾತೆಗೆ ವರ್ಗಾವಣೆ ಯಾಗಿದೆ ಎಂಬುದು ಪತ್ತೆಯಾಗಿಲ್ಲ. ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಕಾನ್‌ಸ್ಟೆಬಲ್ ಮೇಲೆ ಹಲ್ಲೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯನಿರತ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ನಡೆಸಿದ್ದ ಇಬ್ಬರ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜ್ಞಾನಭಾರತಿ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಲಕ್ಷ್ಮಣ ನಾಯಕ್ ಅವರ ಮೇಲೆ ಹಲ್ಲೆ ನಡೆಸಿದ ಮುಬಾರಕ್ ಹಾಗೂ ಶಾಹಿದ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಲಕ್ಷ್ಮಣ ನಾಯಕ್ ಅವರನ್ನು ಜೂನ್ 1ರ ಸಂಜೆ 'ನಮ್ಮೂರ ತಿಂಡಿ' ಜಂಕ್ಷನ್ ಬಳಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಲಕ್ಷ್ಮಣ ನಾಯಕ್ ಅವರು ಜಂಕ್ಷನ್ ಬಳಿ ಕರ್ತವ್ಯದಲ್ಲಿ ಇರುವಾಗ, ದ್ವಿಚಕ್ರ ವಾಹನದಲ್ಲಿ ಮೂವರು ಬರುತ್ತಿದ್ದರು. ದ್ವಿಚಕ್ರ ವಾಹನವನ್ನು ಕಾನ್‌ಸ್ಟೆಬಲ್ ತಡೆದು, ಪ್ರಕರಣ ದಾಖಲಿಸಲು ಮುಂದಾಗಿದ್ದರು. ಆಗ, ಆರೋಪಿಗಳಾದ ಮುಬಾರಕ್ ಹಾಗೂ ಶಾಹಿದ್ ಅವರು ಕಾನ್‌ಸ್ಟೆಬಲ್ ಅವರನ್ನು ತಳ್ಳಿ ಅವಾಚ್ಯ ಶಬ್ದದಿಂದ ನಿಂದನೆ ಮಾಡಿದ್ದರು. ಅಲ್ಲದೇ ಸಮವಸ್ತ್ರದ ಬಟನ್ ಕಿತ್ತುಹಾಕಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ 2 ನಿಮಿಷ

ರೈಲುಗಳ ಸಂಚಾರದಲ್ಲಿ ವ್ಯತ್ಯಯ

ಬೆಂಗಳೂರು: ಚತುಷ್ಪಥ ಯೋಜನೆಯ ಕಾಮಗಾರಿ ಮತ್ತು ವೈಟ್‌ಫೀಲ್ಡ್ ಯಾರ್ಡ್ ನವೀಕರಣ ಕಾಮಗಾರಿಯಿಂದಾಗಿ ಕಂಟೋನ್ಮೆಂಟ್-ವೈಟ್‌ಫೀಲ್ಡ್ ನಡುವೆ ರೈಲುಗಳ ಸಂಚಾರ ರದ್ದು, ಭಾಗಶಃ ರದ್ದು, ಮಾರ್ಗ ಬದಲಾವಣೆ ಮಾಡಲಾಗಿದೆ.

ರದ್ದು: ಬೆಂಗಳೂರು-ಬಂಗಾರಪೇಟೆ-ಬೆಂಗಳೂರು ರೈಲು, ಬಂಗಾರಪೇಟೆ-ಬೆಂಗಳೂರು-ಬಂಗಾರಪೇಟೆ, ಬಂಗಾರ ಪೇಟೆ-ಎಸ್‌ಎಂವಿಟಿ-ಬಂಗಾರಪೇಟೆ, ಬಂಗಾರಪೇಟೆ- ವೈಟ್‌ಫೀಲ್ಡ್-ಬಂಗಾರಪೇಟೆ, ವೈಟ್‌ಫೀಲ್ಡ್- ಮಾರಿಕುಪ್ಪಂ-ವೈಟ್‌ಫೀಲ್ಡ್, ಬೆಂಗಳೂರು-ವೈಟ್‌ಫೀಲ್ಡ್-ಬೆಂಗಳೂರು, ಬಾಣಸ ವಾಡಿ- ಕುಪ್ಪಂ-ಬಾಣಸವಾಡಿ, ಕುಪ್ಪಂ-ಬೆಂಗಳೂರು- ಕುಪ್ಪಂ, ಕೆ.ಆರ್.ಪುರ-ಕುಪ್ಪಂ-ಕೆ.ಆರ್.ಪುರ, ಮಾರಿಕುಪ್ಪಂ-ಕೆ.ಆರ್.ಪುರ- ಮಾರಿಕುಪ್ಪಂ, ಬೆಂಗಳೂರು- ಮಾರಿಕುಪ್ಪಂ-ಬೆಂಗಳೂರು, ಬೆಂಗಳೂರು-ಜೋಲಾರ್ ಪೆಟ್ಟೈ- ಬೆಂಗಳೂರು, ಕುಪ್ಪಂ-ಬಂಗಾರ ಪೇಟೆ-ಕುಪ್ಪಂ ಮೆಮು ರೈಲುಗಳನ್ನು ತಾತ್ಕಾಲಿಕವಾಗಿ ರದ್ದು ಮಾಡಲಾಗಿದೆ.

ಎಂಜಿಆರ್ ಚೆನ್ನೈ ಸೆಂಟ್ರಲ್-ಅಶೋಕಪುರಂ- ಎಂಜಿಆರ್ ಚೆನ್ನೈ ಸೆಂಟ್ರಲ್ ಎಕ್ಸ್‌ಪ್ರೆಸ್, ಅಶೋಕಪುರಂ-ಕೆಎಸ್‌ಆರ್ ಬೆಂಗಳೂರು- ಅಶೋಕ ಪುರಂ ಎಕ್ಸ್‌ಪ್ರೆಸ್, ಎಂಜಿಆರ್ ಚೆನ್ನೈ ಸೆಂಟ್ರಲ್-ಕೆಎಸ್‌ಆರ್ ಬೆಂಗಳೂರು-ಎಂಜಿಆರ್ ಚೆನ್ನೈ ಸೆಂಟ್ರಲ್, ಯಶವಂತಪುರ-ಎಂ.ಜಿ.ಆರ್. ಚೆನ್ನೈ ಸೆಂಟ್ರಲ್-ಯಶವಂತಪುರ ಎಕ್ಸ್‌ಪ್ರೆಸ್, ಎಸ್‌ಎಸ್‌ಎಸ್ ಹುಬ್ಬಳ್ಳಿ- ಕೊಲ್ಲಂ ಎಕ್ಸ್‌ಪಿಎಲ್-ಎಸ್‌ಎಸ್‌ಎಸ್ ಹುಬ್ಬಳ್ಳಿ, ಮೈಸೂರು- ಎಂಜಿಆರ್ ಚೆನ್ನೈ-ಮೈಸೂರು, ದಾನಾಪುರ-ಕೆ.ಆರ್.ಪುರ-ದಾನಾಪುರ ಎಕ್ಸ್‌ಪ್ರೆಸ್ ರೈಲುಗಳು ತಾತ್ಕಾಲಿಕ ರದ್ದಾಗಿವೆ.



ಭಾಗಶಃ ರದ್ದು: ಅನಂತ-ಪುರ - ಕೆಎಸ್‌ಆರ್ ಬೆಂಗಳೂರು ಮೆಮು ರೈಲು ಸಹಿತ ಕೆಲವು ರೈಲುಗಳು ಜುಲೈ 3ರ ನಂತರ ಭಾಗಶಃ ರದ್ದಾಗಲಿವೆ. ಕೆಲವು ರೈಲುಗಳು ಮಾರ್ಗ ಮಧ್ಯೆ ಕೆಲ ನಿಮಿಷ ಸ್ಥಗಿತ ಗೊಳ್ಳಲಿರುವುದ-ರಿಂದ ವಿಳಂಬವಾಗಿ ಚಲಿಸಲಿವೆ. ಜುಲೈ 7ರಿಂದ ಎಲ್ಲ ರೈಲುಗಳು ನಿಗದಿಯಂತೆ ಸಂಚರಿಸಲಿವೆ.

ವಾಹನ ಸಂಚಾರ ಮಾರ್ಪಾಡು

ಬೆಂಗಳೂರು: ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ 'ಲೌರಿ' ಕೆಳಸೇತುವೆ ರಸ್ತೆಯಲ್ಲಿ (ಐ.ಟಿ.ಐ ಬಿಎಂಟಿಸಿ ಡಿಪೊ 24ರ ಕಡೆಯಿಂದ) ರೈಲ್ವೆ ಇಲಾಖೆಯಿಂದ ಸೇತುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಂಡಿದ್ದು, ಜೂನ್ 4ರಿಂದ ಏಳು ದಿನ ವಾಹನ ಸಂಚಾರ ಮಾರ್ಪಾಡು ಮಾಡಲಾಗಿದೆ.

ವಾಹನ ಸಂಚಾರ ನಿರ್ಬಂಧಿತ ರಸ್ತೆ: ಐ.ಟಿ.ಐ ಬಿಎಂಟಿಸಿ 24ರ ಡಿಪೊ 'ಲೌರಿ' ಕೆಳಸೇತುವೆ ಕಡೆಯಿಂದ ವೈಟ್‌ಫೀಲ್ಡ್ ಹಾಗೂ ಹೊರ ವರ್ತುಲ ರಸ್ತೆ ಕಡೆಗೆ ಸಂಚರಿಸುವ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ನಿರ್ಬಂಧಿಸಲಾದ ರಸ್ತೆಗೆ ಪರ್ಯಾಯ ಮಾರ್ಗ: ಐ.ಟಿ.ಐ ಬಿಎಂಟಿಸಿ 24ರ ಡಿಪೊ 'ಲೌರಿ' ಕೆಳಸೇತುವೆ ಕಡೆಯಿಂದ ವೈಟ್‌ಫೀಲ್ಡ್ ಮತ್ತು ಹೊರ ವರ್ತುಲ ರಸ್ತೆ ಕಡೆಗೆ ಹೋಗುವ ವಾಹನಗಳು ಕೆ.ಆರ್. ಪುರ ಹ್ಯಾಂಗಿಂಗ್ ಬ್ರಿಡ್ಜ್ – ಹಳೆ ಮದ್ರಾಸ್ ರಸ್ತೆಯ ಮೂಲಕ ಸಾಗಿ ಫ್ಲೈಓವರ್‌ನಲ್ಲಿ ಯು-ಟರ್ನ್ ಪಡೆದು ಐಟಿಪಿಎಲ್ ಹಾಗೂ ಹೊರ ವರ್ತುಲ ರಸ್ತೆಯ ಕಡೆಗೆ ಸಂಚರಿಸಬಹುದಾಗಿದೆ.

ಹೊರ ವರ್ತುಲ ರಸ್ತೆ ಹಾಗೂ ಐಟಿಪಿಎಲ್ ಕಡೆಯಿಂದ ಐಟಿಐ ಕಾಲೊನಿ, ರಾಮಮೂರ್ತಿನಗರ, ಕೆ.ಆರ್.ಪುರ ಹೊರ ವರ್ತುಲ ರಸ್ತೆಯ ಕಡೆಗೆ ಹೋಗುವ ವಾಹನಗಳು ಫ್ಲೈಓವರ್‌ನಲ್ಲಿ ಯು-ಟರ್ನ್ ಪಡೆದು ಹಳೆ ಮದ್ರಾಸ್ ರಸ್ತೆಯ ಕೆ.ಆರ್. ಪುರ ಹ್ಯಾಂಗಿಂಗ್ ಬ್ರಿಡ್ಜ್ ಮೂಲಕ ರಾಮಮೂರ್ತಿನಗರ ಹಾಗೂ ಕೆ.ಆರ್.ಪುರದ ಕಡೆಗೆ ಸಂಚರಿಸಬಹುದು ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಂಘೈ ಸಹಕಾರ ಸಂಸ್ಥೆ ಶೃಂಗದಲ್ಲಿ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ

ಭಾರತ–ಕಿರ್ಗಿಸ್ತಾನ್ ಪಾಲುದಾರಿಕೆ ವೃದ್ಧಿಗೆ ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ವಲಯದಲ್ಲಿ ಪರಸ್ಪರ ಸಹಕಾರ ಹೊಂದುವ ನಿಟ್ಟಿನಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಕಿರ್ಗಿಸ್ತಾನ್ ಗಣರಾಜ್ಯದ ಆರ್ಥಿಕ ಮತ್ತು ವಾಣಿಜ್ಯ ಸಚಿವ ಬಕಿತ್ ಸಿಡಿಕೋವ್ ಅವರೊಂದಿಗೆ ಬಿಷ್ಕೇಕ್‌ನಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.



ಕಿರ್ಗಿಸ್ತಾನ್ ಗಣರಾಜ್ಯದ ಬಿಷ್ಕೇಕ್‌ನಲ್ಲಿ ಎಚ್‌.ಡಿ. ಕುಮಾರಸ್ವಾಮಿ ಮಾತನಾಡಿದರು

ಆರ್ಥಿಕವಾಗಿ ತೊಡಗಿಸಿಕೊಳ್ಳುವಿಕೆ, ಕೈಗಾರಿಕಾ ಸಹಕಾರ ಮತ್ತು ವ್ಯಾಪಾರ ಪಾಲುದಾರಿಕೆಯನ್ನು ಗಟ್ಟಿಗೊಳಿಸುವ ಮಾರ್ಗಗಳ ಬಗ್ಗೆ ಉಭಯ ದೇಶಗಳ ನಾಯಕರು ಚರ್ಚಿಸಿದರು. ಸಚಿವ ಕುಮಾರಸ್ವಾಮಿ ಅವರೊಂದಿಗೆ ಕಿರ್ಗಿಸ್ತಾನ್ ಗಣರಾಜ್ಯದಲ್ಲಿನ ಭಾರತದ ರಾಯಭಾರಿ ಬೀರೇಂದರ್ ಸಿಂಗ್ ಯಾದವ್ ಕೂಡ ಭಾಗಿಯಾಗಿದ್ದರು.

ಯುರೇಷಿಯಾ (ಏಷ್ಯಾ-ಯುರೋಪ್) ಭಾಗದಲ್ಲಿ ಪ್ರಾದೇಶಿಕ ಸಹಕಾರ, ಆರ್ಥಿಕ ಒಗ್ಗೂಡುವಿಕೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ನಿರಂತರವಾಗಿ ಪ್ರತಿಪಾದಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ಶಾಂಘೈ ಸಹಕಾರ ಸಂಸ್ಥೆ (ಎಸ್‌ಸಿಒ) ಸದಸ್ಯ ರಾಷ್ಟ್ರಗಳೊಂದಿಗೆ ತನ್ನ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿರುವುದರಿಂದ ಈ ಸಭೆ ಮಹತ್ವದ್ದಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದರು.

ಭದ್ರತೆ, ಆರ್ಥಿಕ ಅಭಿವೃದ್ಧಿ, ಸಂಪರ್ಕ, ಏಕತೆ, ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಗೌರವ ಮತ್ತು ಪರಿಸರ ಸಂರಕ್ಷಣೆಯನ್ನು ಒಳಗೊಂಡ 'ಸುರಕ್ಷಿತ ಶಾಂಘೈ ಸಹಕಾರ ಸಂಸ್ಥೆಯ' ಅಗತ್ಯತೆ ಪ್ರಧಾನಿ ನರೇಂದ್ರ ಮೋದಿ ಅವರ ದೃಷ್ಟಿಕೋನವಾಗಿದೆ ಎಂದು ಹೇಳಿದರು.

ಮೇಕ್ ಇನ್ ಇಂಡಿಯಾ, ಸ್ಟಾರ್ಟ್-ಅಪ್ ಇಂಡಿಯಾ, ಪಿಎಂ ಗತಿಶಕ್ತಿ ಮತ್ತು ಉತ್ಪಾದನೆ ಸಂಬಂಧಿತ ಪ್ರೋತ್ಸಾಹಕ (ಪಿಎಲ್‌ಐ) ಯೋಜನೆಗಳಂತಹ ಪ್ರಮುಖ ಉಪಕ್ರಮಗಳ ಬಗ್ಗೆ ಶಾಂಘೈ ಸಹಕಾರ ಸಂಸ್ಥೆ ವೇದಿಕೆಗಳಲ್ಲಿ ಎಚ್‌.ಡಿ. ಕುಮಾರಸ್ವಾಮಿ ಅವರು ಪ್ರಸ್ತಾಪಿಸಿದರು.

ಸೌತಡ್ಕ: 70 ಟನ್ ಗಂಟೆ ₹3.51 ಕೋಟಿಗೆ ಮಾರಾಟ

ಉಪ್ಪಿನಂಗಡಿ: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ ಗ್ರಾಮದ ಸೌತಡ್ಕ ಶ್ರೀಮಹಾಗಣಪತಿ ಕ್ಷೇತ್ರದ ಸುಮಾರು 70 ಟನ್ ಹರಕೆ ಗಂಟೆಗಳ ವಿಲೇವಾರಿಗೆ ಇದೇ 4ರಂದು (ಗುರುವಾರ) ಚಾಲನೆ ದೊರೆಯಲಿದೆ.

ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಕಂಚಿನ ಗಂಟೆಗಳನ್ನು ಹರಕೆ ರೂಪದಲ್ಲಿ ಒಪ್ಪಿಸುತ್ತಾರೆ. ಹಾಗಾಗಿ ಈ ದೇವಾಲಯವು 'ಗಂಟೆ ಗಣಪತಿ' ದೇವಸ್ಥಾನ ಎಂದೂ ಪ್ರಸಿದ್ಧಿ ಪಡೆದಿದೆ.

ದೇವಸ್ಥಾನದಲ್ಲಿ ದಾಸ್ತಾನಿದ್ದ ಸುಮಾರು 70 ಟನ್‌ಗಳಷ್ಟು ಕಂಚಿನ ಗಂಟೆಗಳ ಹರಾಜು ಪ್ರಕ್ರಿಯೆ ಪೂರ್ಣಗೊಂಡಿದೆ. ಗಂಟೆಗಳ ತೂಕ ಪರಿಶೀಲನೆ ಹಾಗೂ ವಿಲೇವಾರಿ ಕಾರ್ಯ ಗುರುವಾರ ನಡೆಯಲಿದೆ.

₹3.51 ಕೋಟಿಗೆ ಬಿಡ್: ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಡೆದ ಟೆಂಡರ್ ಪ್ರಕ್ರಿಯೆಯಲ್ಲಿ ನಾಲ್ವರು ಬಿಡ್‌ದಾರರು ಭಾಗ ವಹಿಸಿದ್ದರು. ಅತೀ ಹೆಚ್ಚು ಮೊತ್ತ ದಾಖಲಿಸಿದ್ದ (₹3,51,16,900) ಧಾರವಾಡದ ಉದ್ಯಮಿ ಈಶ್ವರಲಾಲ್ ಕೆ. ಅಗ್ನಿಹೋತ್ರಿ ಟೆಂಡರ್ ಪಡೆದಿದ್ದಾರೆ.

ಮಾರಕಾಸ್ತ್ರ ಹಿಡಿದು ಗಲಾಟೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಕಾಸ್ತ್ರ ಹಿಡಿದು ಗಲಾಟೆ ಮಾಡಿದ ಎಂಟು ಮಂದಿ ಅಪರಿಚಿತರ ವಿರುದ್ಧ ಕೆ.ಜಿ ಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ಠಾಣೆಯ ಕಾನ್‌ಸ್ಟೆಬಲ್ ಮಿಥುನ್ ಅಗ್ನಿ ಅವರನ್ನು ಸಾಮಾಜಿಕ ಜಾಲತಾಣ ವೀಕ್ಷಣಾ ವಿಭಾಗದ ಕರ್ತವ್ಯಕ್ಕೆ ನೇಮಕ ಮಾಡಲಾಗಿತ್ತು. ಮಿಥುನ್ ಅಗ್ನಿ ಅವರು ಕೆ.ಜಿ ಹಳ್ಳಿ ಠಾಣೆಯ 'ಎಕ್ಸ್' ಖಾತೆ ಪರಿಶೀಲನೆ ನಡೆಸುತ್ತಿದ್ದರು. ಕರ್ನಾಟಕ ಪೋರ್ಟ್ ಫೋಲಿಯೊ ಹೆಸರಿನ 'ಎಕ್ಸ್' ಖಾತೆಗೆ ವಿಡಿಯೊವೊಂದನ್ನು ಅಪ್‌ಲೋಡ್ ಮಾಡಲಾಗಿತ್ತು. ಎಂಟು ಮಂದಿ ಆರೋಪಿಗಳು ದ್ವಿಚಕ್ರ ವಾಹನ ದಲ್ಲಿ ಬಂದು, ಮಾರಕಾಸ್ತ್ರ ಹಿಡಿದು ಪರಸ್ಪರ ಹೊಡೆದಾಟ ಮಾಡಿಕೊಳ್ಳುತ್ತಿರುವ ದೃಶ್ಯ ಸೆರೆಯಾಗಿತ್ತು. ಆ ದೃಶ್ಯಾವಳಿ ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಹರಿತವಾದ ಆಯುಧ ಹಿಡಿದು ಗಲಾಟೆ ಮಾಡುತ್ತಾ ಸಾರ್ವಜನಿಕರನ್ನು ಭಯಭೀತಿಗೊಳಿಸಿ, ಸಮಾಜದಲ್ಲಿ ಶಾಂತಿಭಂಗ ಉಂಟು ಮಾಡಿರುವುದು ಕಂಡುಬಂದಿದೆ. ವಿಡಿಯೊ ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಐದನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಆಗ್ರಹ

'ಸ್ಥಳೀಯ ಸಂಸ್ಥೆಗಳ ಚುನಾವಣೆ ಶೀಘ್ರ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನನೆಗುದಿಗೆ ಬಿದ್ದಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಆದಷ್ಟು ಬೇಗ ನಡೆಸುವಂತೆ ಐದನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಹಾಗೂ ಮಾಜಿ ಸಂಸದರಾದ ಸಿ. ನಾರಾಯಣಸ್ವಾಮಿ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪ್ರಜಾಪ್ರಭುತ್ವದ ಬಲವರ್ಧನೆ ಹಾಗೂ ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನವನ್ನು ಪಡೆಯುವ ದೃಷ್ಟಿಯಿಂದ ನೂತನ ಮುಖ್ಯಮಂತ್ರಿಯವರು ಈ ಬಗ್ಗೆ ಗಮನ ಹರಿಸಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.



ಕಾರ್ಯಕ್ರಮದಲ್ಲಿ ಸಿ.ನಾರಾಯಣಸ್ವಾಮಿ, ಎ.ನವೀನ್ ಜೋಸೆಫ್, ಎಂ.ಸನಾವುಲ್ಲಾ, ಡಾ.ಕೆ.ಗಾಯತ್ರಿ, ಜ್ಯೋತಿ ವೆಂಕಟೇಶ್, ಡಾ.ಎನ್‌.ಶಿವಣ್ಣ, ಟಿ.ಎಂ.ವಿಜಯ ಭಾಸ್ಕರ್ ಮೊದಲಾದವರು ಪಾಲ್ಗೊಂಡಿದ್ದರು

ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆಯ ಕರ್ನಾಟಕ ಶಾಖೆಯು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಂಟಿ ಸಹಯೋಗದಲ್ಲಿ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ನೂತನ ಶೈಕ್ಷಣಿಕ ವಿಭಾಗದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ವಿತರಣೆ- 5ನೇ ಕರ್ನಾಟಕ ರಾಜ್ಯ ಹಣಕಾಸು ಆಯೋಗದ ವರದಿ' ಎಂಬ ವಿಷಯದ ಕುರಿತು ಪ್ರಧಾನ ಭಾಷಣ ಮಾಡಿದ ಅವರು, ಸಕಾಲಕ್ಕೆ ಚುನಾವಣೆ ನಡೆಯದ ಕಾರಣಕ್ಕಾಗಿ ಅಪಾರ ಮೊತ್ತದ ಅನುದಾನ ಅಲಭ್ಯವಾಗಿದೆ ಎಂದು ವಿವರಿಸಿದರು.

1993ರಲ್ಲಿ ಜಾರಿಗೊಂಡ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ದೆಸೆಯಿಂದಾಗಿ ಸ್ಥಳೀಯ ಸಂಸ್ಥೆಗಳ ಸಬಲೀಕರಣ ಮತ್ತು ಅಧಿಕಾರ ವಿಕೇಂದ್ರೀಕರಣದ ಹೊಸ ಮನ್ವಂತರಕ್ಕೆ ನಾಂದಿಯಾಯಿತೆಂದು ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

ಕೇಂದ್ರ ಹಣಕಾಸು ಆಯೋಗದ ಷರತ್ತುಗಳ ಪಾಲನೆಯಲ್ಲಿ ವಿಫಲವಾದ ಕಾರಣ ಹಣಕಾಸಿನ ನೆರವು ಸ್ಥಗಿತಗೊಂಡು ರಾಜ್ಯದ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಕಾರ್ಯಗಳಿಗೆ ಆರ್ಥಿಕವಾಗಿ ಹಿನ್ನಡೆಯಾಗಿದ್ದು ಪ್ರಗತಿ ಕುಂಠಿತವಾಗಿದೆ ಎಂದು ವಿಷಾದಿಸಿದರು.

ಹಿಂದಿನ ಬಿಬಿಎಂಪಿ- ಈಗಿನ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯ ವಿಳಂಬದಿಂದಾಗಿ ರಾಜ್ಯದ ರಾಜಧಾನಿ ಬೆಂಗಳೂರು ಮಹಾನಗರ ಸುಮಾರು 10 ಸಾವಿರ ಕೋಟಿಗಳಷ್ಟು ಕೇಂದ್ರ ಹಣಕಾಸು ನೆರವಿನಿಂದ ವಂಚಿತವಾಗಿದೆ ಎಂದು ಅವರು ವಿಶ್ಲೇಷಿಸಿದರು.

ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳು ಹಾಗೂ ವಿವಿಧ ಸಬ್ಸಿಡಿ ಮತ್ತು ಪಿಂಚಣಿ ಬಾಬ್ತುಗಳಿಗೆ ವಾರ್ಷಿಕ ಸುಮಾರು ಒಂದು ಲಕ್ಷ ಕೋಟಿ ವ್ಯಯಿಸುತ್ತಿದೆ ಎಂದು ವಿವರಿಸಿದರು.

ಇದರ ಪರಿಣಾಮವಾಗಿ ತಲಾ ಆದಾಯದಲ್ಲಿ ಕರ್ನಾಟಕ ರಾಜ್ಯ ದೇಶದಲ್ಲೇ ಮೊದಲ ಸ್ಥಾನಕ್ಕೇರಿದೆ ಎಂದು ತಿಳಿಸಿದ ಅವರು, ಆಸ್ತಿ ತೆರಿಗೆ ಸಂಗ್ರಹದ ಮೂಲಕ ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಆದಾಯ ಸಂಪನ್ಮೂಲ ಕ್ರೋಢೀಕರಿಸಬಹುದೆಂದು ಅಭಿಪ್ರಾಯಪಟ್ಟರು.

ಸಂವಾದ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಮುಖ್ಯ ಕಾರ್ಯದರ್ಶಿ ಹಾಗೂ ಐಐಪಿಎ ಕರ್ನಾಟಕ ಶಾಖೆಯ ಅಧ್ಯಕ್ಷ ತ.ಮ.ವಿಜಯ ಭಾಸ್ಕರ್ ಮಾತನಾಡಿ, ಅಧಿಕಾರ ವಿಕೇಂದ್ರೀಕರಣದ ನೀತಿಯನ್ನು ಪ ರಿ ಣಾ ಮ ಕಾ ರಿ ಯಾ ಗಿ ಅನುಷ್ಠಾನಗೊಳಿಸಿರುವ ದಕ್ಷಿಣದ ರಾಜ್ಯಗಳು ಹೆಚ್ಚಿನ ಅಭಿವೃದ್ಧಿ ಸಾಧಿಸಿವೆ ಎಂದು ವಿಶ್ಲೇಷಿಸಿದರು.

ರಾಜ್ಯ ಹಣಕಾಸು ಆಯೋಗದ ಸದಸ್ಯರಾದ ಎಂ. ಸನಾವುಲ್ಲಾ, ಹಿರಿಯ ಪ್ರಾಧ್ಯಾಪಕರಾದ ಡಾ. ಕೆ.ಗಾಯತ್ರಿ ಮತ್ತು ಡಾ.ಎನ್. ಶಿವಣ್ಣ ವರದಿಯ ವಿವಿಧ ಆಯಾಮಗಳ ಬಗ್ಗೆ ಬೆಳಕು ಚೆಲ್ಲಿದರು.

ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಆಯೋಗದ ಅಧ್ಯಕ್ಷರಾದ ಡಿ.ಆರ್.ಪಾಟೀಲ್, ಕುಲಸಚಿವರಾದ ಎ. ನವೀನ್ ಜೋಸೆಫ್, ಐಐಪಿಎ ಕಾರ್ಯದರ್ಶಿ ಡಾ. ಡಿ.ಜೀವನ್ ಕುಮಾರ್, ಉಪಸ್ಥಿತರಿದ್ದರು. ಕಲಾ ನಿಕಾಯದ ಡೀನರಾದ ಪ್ರೊ. ಜ್ಯೋತಿ ವೆಂಕಟೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಡಾ.ಮಾಲಿನಿ.ಎಂ. ಕಾರ್ಯಕ್ರಮ ನಿರೂಪಿಸಿದರು.

ನಿಧನ ವಾರ್ತೆ

ಚಂದ್ರಮ್ಮ ಕಾಳೇಗೌಡ



ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಎಸ್.ಜೆ.ಕಾಳೇಗೌಡ ಅವರ ಪತ್ನಿ ಚಂದ್ರಮ್ಮ ಕಾಳೇಗೌಡ (84) ಅವರು ವಯೋಸಹಜ ಅನಾರೋಗ್ಯದಿಂದ ಬುಧವಾರ ನಿಧನರಾದರು.

ಪತಿ, ಪುತ್ರಿ ಹಾಗೂ ಮೂವರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಸುಮನಹಳ್ಳಿ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕ್ಷುಲ್ಲಕ ಕಾರಣಕ್ಕೆ ಮಹಿಳೆಯ ಕೊಲೆ

ರಾಮನಗರ: ಸೊಪ್ಪು ಮತ್ತು ತರಕಾರಿ ಬೆಳೆದಿದ್ದ ಜಾಗದಲ್ಲಿ ಹಸು ಮೇಯಿಸಿದ್ದನ್ನು ಪ್ರಶ್ನಿಸಿದ ಮಹಿಳೆಯನ್ನು ವ್ಯಕ್ತಿಯೊಬ್ಬ ಥಳಿಸಿ ಕೊಲೆ ಮಾಡಿರುವ ಘಟನೆ ನಗರದ ಬಾಲಗೇರಿಯಲ್ಲಿ ನಡೆದಿದೆ.

ತಬಸ್ಸುಮ್ (50) ಮೃತ ಮಹಿಳೆ. ಕೊಲೆ ಮಾಡಿದ ಆರೋಪದ ಮೇಲೆ ಅದೇ ಬಡಾವಣೆಯ ಶ್ರೀನಿವಾಸ್ ಅಲಿಯಾಸ್ ಸೀನ ಎಂಬುವರನ್ನು ರಾಮನಗರ ಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಿಮ್ಹಾನ್ಸ್, ಮರ್ಕ್ಯುರಿ ಫೌಂಡೇಷನ್ ಒಡಂಬಡಿಕೆ

ಸಂಗೀತ-ಆರೋಗ್ಯಕ್ಕೆ ಕೇಂದ್ರ ಸ್ಥಾಪನೆ

ಬೆಂಗಳೂರು: ಸಂಗೀತ, ಮಿದುಳು, ಮನಸ್ಸು ಮತ್ತು ಆರೋಗ್ಯಕ್ಕೆ ರಾಷ್ಟ್ರೀಯ ಕೇಂದ್ರ ಸ್ಥಾಪಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಮತ್ತು ಮರ್ಕ್ಯುರಿ ಫೌಂಡೇಷನ್ ಒಡಂಬಡಿಕೆ ಮಾಡಿಕೊಂಡಿವೆ.

ಸಂಗೀತ ಸಂಯೋಜಕ ಇಳೆಯರಾಜ ಅವರ ಆಶ್ರಯದಲ್ಲಿ ಈ ಕೇಂದ್ರ ನಿರ್ಮಾಣವಾಗುತ್ತಿದೆ. ಈ ಕೇಂದ್ರವು ಸಂಗೀತ, ನರವಿಜ್ಞಾನ, ಮಾನಸಿಕ ಆರೋಗ್ಯ ಹಾಗೂ ಸಮಗ್ರ ಆರೋಗ್ಯ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳಲಿದೆ. ಈ ಕ್ಷೇತ್ರಗಳಲ್ಲಿ ಕೇಂದ್ರವು ಶಿಕ್ಷಣ ನೀಡುವ ಜತೆಗೆ, ಜಾಗೃತಿಯನ್ನೂ ಮೂಡಿಸಲಿದೆ ಎಂದು ನಿಮ್ಹಾನ್ಸ್ ತಿಳಿಸಿದೆ.

ಸಂಗೀತವು ಮಾನಸಿಕ ಆರೋಗ್ಯ ವೃದ್ಧಿಗೆ ಸಹಕಾರಿಯಾಗಿದ್ದು, ಪುರಾವೆ ಆಧಾರಿತ ವಿಧಾನಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಕಲೆ ಮತ್ತು ನರವಿಜ್ಞಾನದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ ಎಂದು ಹೇಳಲಾಗಿದೆ.



ನಗರದಲ್ಲಿ ಸಂಗೀತ, ಮಿದುಳು, ಮನಸ್ಸು ಮತ್ತು ಆರೋಗ್ಯಕ್ಕೆ ರಾಷ್ಟ್ರೀಯ ಕೇಂದ್ರ ಸ್ಥಾಪನೆಯ ಒಪ್ಪಂದದ ಪ್ರತಿಯನ್ನು ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರಭಾ ಎಸ್‌. ಚಂದ್ರ ಹಾಗೂ ಇಳೆಯರಾಜ ಬುಧವಾರ ಪ್ರದರ್ಶಿಸಿದರು



ರಾಜಾಜಿನಗರ ಕ್ರಿಕೆಟರ್ಸ್ ತಂಡವು ಕೆಎಸ್‌ಸಿಎ 16 ವರ್ಷದೊಳಗಿನವರ ಇಂಟರ್ ಕ್ಲಬ್ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು. (ನಿಂತವರು) ಎಡದಿಂದ; ವಿನಯ್ ಕುಮಾರ್ ಎನ್‌.ಪಿ. (ಮುಖ್ಯ ಕೋಚ್), ಧಾತ್ವಿಕ್ ಉಮೇಶ್, ದೇಬರಾಜ್ ನಂದಿ, ಚೇತನ್ ಸಿ.,ನೀರಜ್ ಎಂ., ರಾಘವ್ ಎಸ್‌.ವಿ., ಅರ್ನವ್ ಡೇರೆ (ನಾಯಕ), ಯಶಿತ್ ನಾರಾಯಣ್ (ಕೋಚ್), ನಿರಂಜನ್ ಅಶೋಕ್, ಹರ್ಷ (ಮ್ಯಾನೇಜರ್), ಪ್ರಭಾವ್ ಪೈಡಾ, ಕುಶಾಲ್ ಕೆ.ಎ, ರೋಹಿತ್ ಕುಮಾರ್, ಅಭಿರಾಜ್ (ಮಂಡಿಯೂರಿದವರು) ಆರಿದ್ತ್ ಪಿ., ತೇಜಸ್, ರಾಜೀವ್ ಮೆಹ್ತಾ, ಅರ್ಣವ್ ಕಷ್ಯಾ, ಕರಣ್ ಎಸ್‌., ಸ್ಪರ್ಶ್ ಸುರೇಶ್, ಜೀವನ್ ಕೃಷ್ಣ ಚಿತ್ರದಲ್ಲಿದ್ದಾರೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈಚೆಗೆ ನಡೆದ ಫೈನಲ್ ಪಂದ್ಯದಲ್ಲಿ ರಾಜಾಜಿನಗರ ತಂಡವು 5 ರನ್‌ಗಳಿಂದ ಬೆಂಗಳೂರು ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು. ಚಿತ್ರ: ಕೆಎಸ್‌ಸಿಎ

ಒಲಿಂಪಿಕ್ ತರಬೇತಿ ಕೇಂದ್ರ ಸ್ಥಾಪನೆಗೆ 100 ಎಕರೆ ಭೂಮಿ ನೀಡಲು ಕೇಂದ್ರ ಕ್ರೀಡಾ ಸಚಿವಾಲಯದ ಬೇಡಿಕೆ

ಜ್ಞಾನಭಾರತಿಯಲ್ಲಿ ಜಾಗ ನೀಡಲು ವಿ.ವಿ ನಕಾರ

ಪ್ರಜಾವಾಣಿ ವಾರ್ತೆ

ಅಂಕಿ ಅಂಶ

1,201 ಎಕರೆ	ಜ್ಞಾನಭಾರತಿ ಕ್ಯಾಂಪಸ್ ಒಟ್ಟು ವಿಸ್ತೀರ್ಣ
278 ಎಕರೆ	26 ಶೈಕ್ಷಣಿಕ ಸಂಸ್ಥೆಗಳಿಗೆ ನೀಡಲಾದ ಭೂಮಿ
34.4 ಎಕರೆ	ಒತ್ತುವರಿ ಆಗಿರುವುದು
43.24 ಎಕರೆ	ವಿವಾದಿತ ಭೂಮಿ
19 ಎಕರೆ	ಕೋರ್ಟ್‌ನಲ್ಲಿ ಬಗೆಹರಿಯಬೇಕಾದ ಭೂಮಿ

ಬೆಂಗಳೂರು: ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಒಲಿಂಪಿಕ್ ತರಬೇತಿ ಕೇಂದ್ರ ಸ್ಥಾಪನೆಗೆ ಅಗತ್ಯವಿರುವ 100 ಎಕರೆ ಭೂಮಿ ನೀಡುವ ಪ್ರಸ್ತಾವವನ್ನು ಬೆಂಗಳೂರು ವಿಶ್ವವಿದ್ಯಾಲಯವು ತಿರಸ್ಕರಿಸಿದೆ.

ಒಲಿಂಪಿಕ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಅಥ್ಲೀಟ್‌ಗಳಿಗೆ ತರಬೇತಿ ನೀಡಲು ಕೇಂದ್ರ ಯುವ ಮತ್ತು ಕ್ರೀಡಾ ಸಚಿವಾಲಯವು ಜ್ಞಾನಭಾರತಿಯಲ್ಲಿ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಯೋಜಿಸಿತ್ತು.

'ಜ್ಞಾನಭಾರತಿಗೆ ಸೇರಿದ 81 ಎಕರೆ ಭೂಮಿಯನ್ನು ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್) ಮತ್ತು ನೇತಾಜಿ ಸುಭಾಷ್ ದಕ್ಷಿಣ ಕೇಂದ್ರ (ಎನ್‌ಎಸ್‌ಎಸ್‌ಸಿ) ಸ್ಥಾಪನೆಗೆ 1974ರಲ್ಲಿಯೇ ನೀಡಲಾಗಿತ್ತು. ಇದೀಗ ಹೆಚ್ಚುವರಿಯಾಗಿ ಕೇಳಿರುವ 100 ಎಕರೆ ಭೂಮಿ ವಿಶ್ವವಿದ್ಯಾಲಯದಲ್ಲಿ ಲಭ್ಯವಿಲ್ಲ. ಹೀಗಾಗಿ, ಕೇಂದ್ರ ಸರ್ಕಾರದ ಕೋರಿಕೆಯನ್ನು ನಿರಾಕರಿಸಲಾಗಿದೆ' ಎಂದು ಕುಲಪತಿ ಎಸ್.ಎಂ.ಜಯಕರ ಹೇಳಿದ್ದಾರೆ.

ಮುಖ್ಯಾಂಶಗಳು

- 1974ರಲ್ಲಿ ಸಾಯ್‌ಗೆ 81 ಎಕರೆ ಭೂಮಿ
- ಸಾಯ್‌ಗೆ ಹೊಂದಿಕೊಂಡಂತೆ ಹೆಚ್ಚುವರಿ ಜಾಗಕ್ಕೆ ಬೇಡಿಕೆ
- ಬೆಂಗಳೂರು ವಿ.ವಿ ಕುಲಪತಿ ನಕಾರ

ಸ್ಥಳಾವಕಾಶ ಕೊರತೆ: 'ಅಂತರ-ರಾಷ್ಟ್ರೀಯ ಮಟ್ಟದ ತರಬೇತಿ ಕೇಂದ್ರಗಳಲ್ಲಿ ಮಲ್ಟಿಪಲ್ ಟರ್ಫ್, ಪೂಲ್, ಟ್ರ್ಯಾಕ್ಸ್, ಒಳಾಂಗಣಗಳು, ಕ್ರೀಡಾ ವಿಜ್ಞಾನ ಸೌಲಭ್ಯಗಳು ಇರುತ್ತವೆ. 'ಸಾಯ್'ನಲ್ಲಿ ಒಲಿಂಪಿಕ್ ಮಟ್ಟದಲ್ಲಿ ತರಬೇತಿ ನೀಡಲು ಸ್ಥಳಾವಕಾಶದ ಕೊರತೆಯಿದೆ. ಅದಕ್ಕೆ



ಬೆಂಗಳೂರು ವಿಶ್ವವಿದ್ಯಾಲಯ

ಹೊಂದಿಕೊಂಡಂತೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಬಳಕೆಯಾಗದ 100 ಎಕರೆ ಭೂಮಿಯನ್ನು ನೀಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ಕೇಂದ್ರ ಕ್ರೀಡಾ ಸಚಿವ ಮನ್‌ಸುಖ್ ಮಾಂಡವಿಯಾ ಕೋರಿದ್ದರು.

'ಹೊಸ ಕೇಂದ್ರ ಸ್ಥಾಪನೆಯಿಂದ ಹೆಚ್ಚುವರಿಯಾಗಿ 500 ರಾಷ್ಟ್ರೀಯ ಕ್ರೀಡಾಪಟುಗಳು, ತರಬೇತುದಾರರು, ಕ್ರೀಡಾ ತಂತ್ರಜ್ಞರಿಗೆ ಅವಕಾಶ ಸಿಗಲಿದೆ. ಅಂತರರಾಷ್ಟ್ರೀಯ ಕ್ರೀಡಾ ಶಿಬಿರಗಳನ್ನು ಆಯೋಜಿಸುವ ಸಾಮರ್ಥ್ಯ ದೊರೆಯಲಿದೆ. ಬೆಂಗಳೂರನ್ನು ರಾಷ್ಟ್ರೀಯ ಒಲಿಂಪಿಕ್ ಉತ್ಕೃಷ್ಟತಾ ಕೇಂದ್ರವಾಗಿ ಪರಿವರ್ತಿಸುವ ಅವಕಾಶ ಸಿಗಲಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

ಪ್ರಸ್ತಾವ ತಿರಸ್ಕಾರ: ಕೇಂದ್ರ ಕ್ರೀಡಾ ಸಚಿವರ ಪತ್ರದ ಅನುಸಾರ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಕಾರ್ಯನಿರ್ವಾಹಕ ನಿರ್ದೇಶಕರ ಸೂಚನೆಯಂತೆ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಅವರೊಂದಿಗೆ ಸಭೆ ನಡೆಸಿದ್ದರು. ಆಗ, '300ಕ್ಕೂ ಹೆಚ್ಚು ಎಕರೆ ಪ್ರದೇಶವನ್ನು ವಿವಿಧ ಶೈಕ್ಷಣಿಕ ಸಂಸ್ಥೆಗಳಿಗೆ ನೀಡಲಾಗಿದೆ. ಹೀಗಾಗಿ, ಯಾವುದೇ ಭೂಮಿ ಇಲ್ಲ' ಎಂದು ಕುಲಪತಿ ಪ್ರತಿಕ್ರಿಯಿಸಿದ್ದಾರೆ.

1974ರಲ್ಲಿ ಸಾಯ್ ಸ್ಥಾಪನೆ

81.2 ಎಕರೆ ಭೂಮಿಯಲ್ಲಿ ಏ.13, 1974ರಲ್ಲಿ ಆಂಧ್ರಪ್ರದೇಶ, ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳ ಪ್ರಾದೇಶಿಕ ಕೇಂದ್ರವಾಗಿ ಸಾಯ್ ಸ್ಥಾಪನೆಯಾಗಿತ್ತು. ಟಾಪ್ಸ್, ಖೇಲೊ ಇಂಡಿಯಾ, ರಾಷ್ಟ್ರೀಯ ಉತ್ಕೃಷ್ಟತಾ ಕೇಂದ್ರದ ಯೋಜನೆಗಳು ಇಲ್ಲಿ ಅನುಷ್ಠಾನಗೊಳ್ಳುತ್ತಿವೆ.
ಸಾಯ್ ಕೇಂದ್ರದಿಂದ 300 ಕ್ರೀಡಾಪಟುಗಳು ಹಾಕಿ, ಅಥ್ಲೆಟಿಕ್ಸ್, ಟೇಬಲ್ ಟೆನಿಸ್, ವಾಲಿಬಾಲ್, ಕಬಡ್ಡಿ, ವಾಟರ್ ಪೋಲೊ ಸೇರಿದಂತೆ ವಿವಿಧ ಕ್ರೀಡಾಸ್ಪರ್ಧೆಗಳಿಗೆ ತರಬೇತಿ ಪಡೆಯುತ್ತಿದ್ದಾರೆ. ಒಲಿಂಪಿಕ್, ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್‌ಗಳಿಗೆ ಅಭ್ಯಾಸ ನಡೆಸಿದ್ದಾರೆ. 8 ವಿದ್ಯಾರ್ಥಿ ನಿಲಯಗಳಿದ್ದು, 1 ಸಾವಿರ ಮಂದಿಗೆ ವಸತಿ ಸೌಲಭ್ಯವಿದೆ




ಡಿ.ಕೆ. ಶಿವಕುಮಾರ್ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವುದನ್ನು ನೋಡಲು ಲೋಕಭವನದ ಮುಂದೆ ಸೇರಿದ್ದ ಜನಸ್ತೋಮ (ಎಡಚಿತ್ರ) ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಆಗಮಿಸಿದ ನೊಣವಿನಕೆರೆಯ ಶ್ರೀ ಕಾಡಸಿದ್ದೇಶ್ವರ ಮಠದ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ

ಪ್ರಜಾವಾಣಿ ಚಿತ್ರಗಳು: ಎಂ. ಎಸ್. ಮಂಜುನಾಥ್

ಪದಗ್ರಹಣ ಸಮಾರಂಭ: ಹಲವರಿಗೆ ನಿರಾಸೆ

ಪಾಸ್ ಇದ್ದರೂ ಲೋಕಭವನಕ್ಕೆ ಸಿಗದ ಪ್ರವೇಶ; ಗಣ್ಯರ ಪರದಾಟ • ಹೈರಾಣಾದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಭವನದ ಗಾಜಿನ ಮನೆಯಲ್ಲಿ ಮುಖ್ಯಮಂತ್ರಿ ಮತ್ತು ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಕ್ಷಣವನ್ನು ಕಣ್ತುಂಬಿಕೊಳ್ಳಲು ಬಂದ ಹಲವರಿಗೆ ನಿರಾಸೆ ಉಂಟಾಯಿತು.

ಲೋಕಭವನಕ್ಕೆ ಗಣ್ಯರು ಹಾಗೂ ಆಹ್ವಾನಿತರಿಗೆ ಮಾತ್ರ ಪ್ರವೇಶ ಕಲ್ಪಿಸಿ, ಪಾಸ್ ನೀಡಲಾಗಿತ್ತು. ಮಧ್ಯಾಹ್ನ 3 ಗಂಟೆವರೆಗೂ ಪಾಸ್ ಇದ್ದವರನ್ನು ಒಳಗೆ ಬಿಡಲಾಯಿತು. ನಂತರ ಬಂದವರನ್ನು ಸ್ಥಳಾವಕಾಶದ ಕೊರತೆ ಹೇಳಿ ಪೊಲೀಸರು ಒಳಗೆ ಬಿಡಲಿಲ್ಲ.

ಪ್ರವೇಶ ದ್ವಾರದಲ್ಲಿ ನೂಕುನುಗ್ಗಲು ಉಂಟಾಯಿತು. ಪೊಲೀಸರು ಮತ್ತು ಗಣ್ಯರು, ಕಾರ್ಯಕರ್ತರ ನಡುವೆ ಮಾತಿನ ಚಕಮಕಿಯೂ ನಡೆಯಿತು. ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದ ಗಣ್ಯರನ್ನು ನಿಯಂತ್ರಿಸಲು ಪೊಲೀಸರು ಹೈರಾಣಾದರು. ಕೆಲವರನ್ನು ಬಲವಂತವಾಗಿ ಪೊಲೀಸರು ಎಳೆದೊಯ್ದರು.

‘ಆಹ್ವಾನ ಪತ್ರಿಕೆ ಇದ್ದರೂ ಒಳಗೆ ಏಕೆ ಬಿಡುತ್ತಿಲ್ಲ? ನೋಡಿ ಇದು ನಮಗೆ ಕೊಟ್ಟಿರುವ ಆಹ್ವಾನ ಪತ್ರಿಕೆ. ಜಾಗವಿಲ್ಲವೆಂದು ಮೊದಲೇ ಹೇಳಿದ್ದರೆ ಬರುತ್ತಿರಲಿಲ್ಲ’ ಎಂದು ಕೆಲವರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.


ಹಿರಿಯ ಪೊಲೀಸ್ ಅಧಿಕಾರಿಗಳು ಮಧ್ಯೆ ಪ್ರವೇಶಿಸಿ, ಸ್ಥಳಾವಕಾಶದ ಕೊರತೆ ಇರುವುದನ್ನು ಮನವರಿಕೆ ಮಾಡಲು ಪ್ರಯತ್ನಿಸಿದರು.

ಅನ್ಯ ಮಾರ್ಗವಿಲ್ಲದೇ ಲೋಕ ಭವನದ ಪ್ರವೇಶ ದ್ವಾರ, ತಿಮ್ಮಯ್ಯ ವೃತ್ತ ಹಾಗೂ ವಿಧಾನಸೌಧ ಮುಂಭಾಗ ಹಾಕಲಾಗಿದ್ದ ಎಲ್‌ಇಡಿ ಪರದೆಗಳಲ್ಲೇ ಸಾವಿರಾರು ಮಂದಿ ಸಮಾರಂಭ ವೀಕ್ಷಿಸಿ ಸಂಭ್ರಮಿಸಿದರು. ಸಮಾರಂಭ ವೀಕ್ಷಿಸುವ ಸಲುವಾಗಿ ನಗರದ ಹಲವೆಡೆ ಪರದೆಗಳನ್ನು ಅಳವಡಿಸಲಾಗಿತ್ತು.

ವಿವಿಧ ಜಿಲ್ಲೆಗಳಿಂದಲೂ ಮುಖ್ಯಮಂತ್ರಿ ಹಾಗೂ ಸಚಿವರ ಬೆಂಬಲಿಗರು ಅಪಾರ ಸಂಖ್ಯೆಯಲ್ಲಿ ಬಂದಿದ್ದರು. ನಗರದಲ್ಲಿಯೂ ಕೆಲವು ಭಾಗಗಳಿಂದ ಮೆರವಣಿಗೆ ಮೂಲಕವೂ ಆಗಮಿಸಿದ್ದರು.

ಪ್ರಮಾಣ ವಚನ ಸ್ಥಳಕ್ಕೆ ತೆರಳಲು ಸುಮಾರು ಇಪ್ಪತ್ತು ನಿಮಿಷ ಪ್ರವೇಶದ್ವಾರದ ಮುಂದೆ ರಸ್ತೆಯಲ್ಲೇ ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸಿದ್ದರಾಮಯ್ಯ ಹಾಗೂ ಗಣ್ಯರು ಕಾಯಬೇಕಾಯಿತು.

ನಗರದ ಪ್ರಮುಖ ವೃತ್ತ, ರಸ್ತೆಗಳಲ್ಲಿ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ರಾಹುಲ್ ಗಾಂಧಿ ಅವರ ಫ್ಲೆಕ್ಸ್, ಹೋರ್ಡಿಂಗ್ಸ್ ರಾರಾಜಿಸಿದವು. ಕೆ.ಆರ್. ವೃತ್ತ, ಹಡ್ಸನ್ ವೃತ್ತ, ಪುರಭವನ, ಮೈಸೂರು ರಸ್ತೆ, ಕನಕಪುರ ರಸ್ತೆ, ಬಳ್ಳಾರಿ ರಸ್ತೆ, ಬನ್ನೇರುಘಟ್ಟ ರಸ್ತೆ, ಮಾಗಡಿ ರಸ್ತೆ ಸೇರಿ ಹಲವೆಡೆ ಡಿ.ಕೆ.ಶಿವಕುಮಾರ್‌ಗೆ ಶುಭಾಶಯ ಕೋರುವ ಫ್ಲೆಕ್ಸ್ , ಬ್ಯಾನರ್, ಹೋರ್ಡಿಂಗ್ಸ್‌ಗಳನ್ನು ಅಳವಡಿಸಲಾಗಿತ್ತು.



ನಟ ಶಿವರಾಜ್ ಕುಮಾರ್ ಮತ್ತು ಗೀತಾ ಶಿವರಾಜ್ ಕುಮಾರ್

ವಾಹನ ಸವಾರರ ಪರದಾಟ

ಪದಗ್ರಹಣ ಸಮಾರಂಭದ ಹಿನ್ನೆಲೆಯಲ್ಲಿ ಲೋಕಭವನ ಹಾಗೂ ವಿಧಾನಸೌಧ ಸುತ್ತಲಿನ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿ ಸವಾರರು ಪರದಾಡಿದರು.

ಸುಗಮ ಸಂಚಾರ ದೃಷ್ಟಿಯಿಂದ ಮಧ್ಯಾಹ್ನ 12 ರಿಂದ ರಾತ್ರಿ 8ರವರೆಗೆ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿತ್ತು.

ಕ್ವೀನ್ಸ್ ರಸ್ತೆ, ಚಾಲುಕ್ಯ ರಸ್ತೆ, ತಿಮ್ಮಯ್ಯ ವೃತ್ತ, ವಿಧಾನಸೌಧ ಸುತ್ತಮುತ್ತ, ಕೆ.ಆರ್.ಸರ್ಕಲ್, ಕಬ್ಬನ್ ಪಾರ್ಕ್ ರಸ್ತೆ, ಇನ್‌ಫೆಂಟ್ರಿ ರಸ್ತೆಯಲ್ಲೂ ವಿಪರೀತ ದಟ್ಟಣೆ ಉಂಟಾಗಿತ್ತು. ವಾಹನಗಳು ಆಮೆಗತಿಯಲ್ಲಿ ಸಾಗುತ್ತಿದ್ದವು.

ಲೋಕಭವನದಿಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವರು ಕಾರಿನಲ್ಲಿ ವಿಧಾನಸೌಧಕ್ಕೆ ಬಂದರು. ಕಲಾತಂಡಗಳು ಮುಖ್ಯಮಂತ್ರಿ ಮತ್ತು ಸಚಿವರನ್ನು ಸ್ವಾಗತಿಸಿದವು. ಆ ವೇಳೆ ವಿಧಾನಸೌಧ ಮುಂಭಾಗದ ರಸ್ತೆಯಲ್ಲಿ ವಾಹನಗಳ ಸಾಲು ಕಂಡು ಬಂತು.



ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ



ಅನಿಲ್ ಕುಂಬ್ಳೆ ದಂಪತಿ

ಸಮಾರಂಭಕ್ಕೆ ಪೊಲೀಸ್ ಕಟ್ಟೆಚ್ಚರ

ಲೋಕಭವನ ಸುತ್ತಮುತ್ತಲ ಭಾಗದಲ್ಲಿ ಪೊಲೀಸ್ ಕಟ್ಟೆಚ್ಚರ ವಹಿಸಿತ್ತು. ಬಂದೋಬಸ್ತ್‌ಗಾಗಿ ಎರಡು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು.

ಲೋಕಭವನ ಸುತ್ತಲಿನ ಪ್ರದೇಶದಲ್ಲಿ ಮೂವರು ಜಂಟಿ ಪೊಲೀಸರು ಆಯುಕ್ತರು, ಡಿಸಿಪಿಗಳು, ಎಸಿಪಿಗಳು ಮತ್ತು ಇನ್‌ಸ್ಪೆಕ್ಟರ್‌ಗಳು, ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು, ಕೆಎಸ್‌ಆರ್‌ಪಿ ತುಕಡಿ ಸಿಬ್ಬಂದಿ ಸೇರಿ ಸಾವಿರ ಪೊಲೀಸರನ್ನು ಭದ್ರತೆಗೆ ನಿಯೋಜನೆ ಮಾಡಲಾಗಿತ್ತು. ಮಫ್ತಿ ಪೊಲೀಸರು ಸಹ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಲೋಕಭವನ, ವಿಧಾನಸೌಧದ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ, ಗಣ್ಯರು ಮತ್ತು ಆಹ್ವಾನಿತರನ್ನು ಮಾತ್ರ ಸಮಾರಂಭದ ಸ್ಥಳಕ್ಕೆ ಬಿಡಲಾಯಿತು.





ಕೆನ್ನೆಯ ಮೇಲೆ ‘ಡಿಕೆ’ ಎಂದು ಬರೆಸಿಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತೆಯರು

ಜನರು ಏನಂತಾರೆ?

ಬೆಂಗಳೂರು: ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸುವುದನ್ನು ನೋಡಲು ಹಳೆ ಮೈಸೂರು ಭಾಗದ ಜಿಲ್ಲೆಗಳಲ್ಲದೇ ದೂರದ ಗದಗ, ವಿಜಯಪುರದಿಂದಲೂ ಜನರು ರಾಜಧಾನಿಗೆ ಬಂದಿದ್ದರು. ಸಂಭ್ರಮವನ್ನು ಕಣ್ತುಂಬಿಕೊಂಡ ನಾಗರಿಕರು ಗ್ಯಾರಂಟಿ ಯೋಜನೆಗಳ ಮುಂದುವರಿಕೆ, ಯುವಕರಿಗೆ ಉದ್ಯೋಗ, ಬೆಂಗಳೂರು ಅಭಿವೃದ್ಧಿಗೆ ಆದ್ಯತೆ ನೀಡುವರೆಂಬ ನಿರೀಕ್ಷೆಗಳನ್ನು ‘ಪ್ರಜಾವಾಣಿ’ ಜೊತೆ ಹಂಚಿಕೊಂಡರು.

ಅಭಿವೃದ್ಧಿಗೆ ವೇಗ ಸಿಗಲಿ



ಬೆಂಗಳೂರಿನಲ್ಲಿ ಮೂಲಸೌಕರ್ಯ ಮತ್ತಷ್ಟು ಸುಧಾರಿಸಬೇಕು. ಟ್ರಾಫಿಕ್ ಸಮಸ್ಯೆ ಬಗೆಹರಿಸಬೇಕು. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾಡಿದ್ದು, ಅಭಿವೃದ್ಧಿಗೆ ವೇಗ ಸಿಗಬೇಕು. ಯೋಜನೆಗಳ ಅನುಷ್ಠಾನ ಸೇರಿದಂತೆ ಆಡಳಿತಾತ್ಮಕ ನಿರ್ಧಾರಗಳನ್ನು ತ್ವರಿತವಾಗಿ ತೆಗೆದುಕೊಳ್ಳಬೇಕು. ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವುದೇ ಆದ್ಯತೆ ಆಗಬೇಕು.

ಸಾದತ್‌ಉಲ್ಲಾ ಖಾನ್, ಸಂಪಂಗಿರಾಮನಗರ

ಯೋಜನೆ ಮುಂದುವರಿಸಿ



ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸದೇ ಮುಂದುವರಿಸಬೇಕು. ಉಚಿತ ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ನೀಡಬೇಕು. ಮನೆಗೆಲಸ ಮಾಡುವ ಮಹಿಳೆಯರು, ಬೀದಿಬದಿ ವ್ಯಾಪಾರಿಗಳು, ಕೂಲಿ ಕಾರ್ಮಿಕರಿಗೆ ಸಹಾಯವಾಗುವಂಥ ಯೋಜನೆಗಳನ್ನು ಜಾರಿಗೊಳಿಸಬೇಕು.

ಗೀತಾ, ಬೀದಿಬದಿ ವ್ಯಾಪಾರಿ, ಶಾಂತಿನಗರ

ಮೆಟ್ರೊ ವಿಸ್ತರಿಸಿ



ಮೆಟ್ರೊ ಸೇವೆಯನ್ನು ಎಲ್ಲ ಕಡೆಗೂ ವಿಸ್ತರಿಸಬೇಕು. ಯುವಕರು ನಿರುದ್ಯೋಗ ಸಮಸ್ಯೆ ಎದುರಿಸುತ್ತಿದ್ದಾರೆ. ಅವರಿಗೆ ಉದ್ಯೋಗ ನೀಡಲು ಇಲಾಖೆಗಳಲ್ಲಿ ನೇಮಕಾತಿಗೆ ಕ್ರಮವಹಿಸಬೇಕು.

ಆಲೆನ್ ಅಭಿಜಿತ್, ಕೊತ್ತನೂರು

ಉತ್ತಮ ಆಡಳಿತ ಕೊಡಲಿ



ಸಿದ್ಧರಾಮಯ್ಯ ಅವರು ಉತ್ತಮ ಆಡಳಿತ ನೀಡಿದ್ದರು. ಅದೇ ಮಾದರಿಯಲ್ಲಿ ಜನಪರ ಸರ್ಕಾರವನ್ನು ಡಿ.ಕೆ.ಶಿವಕುಮಾರ್ ಮುನ್ನಡೆಸಬೇಕು. ಕಟ್ಟಕಡೆಯ ವ್ಯಕ್ತಿಗೂ ಎಲ್ಲ ಸೌಕರ್ಯಗಳು ಸಿಗಬೇಕು. ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿ ಮಾಡಬೇಕು

ಮಹಾಲಿಂಗ ಲಮಾಣಿ, ಶಿರಹಟ್ಟಿ, ಗದಗ

ಬ್ರ್ಯಾಂಡ್ ಬೆಂಗಳೂರು ಆಗಲಿ



ಎಲ್ಲ ನಗರಗಳು ಬ್ರ್ಯಾಂಡ್ ಬೆಂಗಳೂರು ರೀತಿ ಆಗಬೇಕು. ರಾಜ್ಯವನ್ನು ಜಾಗತಿಕ ಕೇಂದ್ರವನ್ನಾಗಿ ಮಾಡಲು ಶ್ರಮಿಸಲಿ. ರಾಜ್ಯವು ಸರ್ವ ಜನಾಂಗದ ಶಾಂತಿಯ ತೋಟವಾಗಲಿ

ಶಿವಕುಮಾರ್, ಕನಕಪುರ

ನೇಮಕಾತಿ ನಡೆಸಲಿ



ಯುವಕರು, ಮಹಿಳೆಯರು, ಹಿಂದುಳಿದವರ ಕಲ್ಯಾಣಕ್ಕೆ ಶ್ರಮಿಸಬೇಕು. ಕಳೆದ 8 ವರ್ಷಗಳಿಂದ ಯಾವುದೇ ಉದ್ಯೋಗ ನೇಮಕಾತಿ ನಡೆದಿಲ್ಲ. ಕರ್ನಾಟಕ ಲೋಕಸೇವಾ ಆಯೋಗದ ಅವ್ಯವಸ್ಥೆಯನ್ನು ಸರಿಪಡಿಸಿ, ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಬೇಕು

ಸಂತೋಷ್ ಕುಮಾರ್ ನಾಯ್ಕ್, ಹುಣಸಗಿ, ಯಾದಗಿರಿ

ಒಳ್ಳೆಯ ಕೆಲಸಗಳು ಆಗುತ್ತವೆ



ಬೆಲೆ ಏರಿಕೆ ಆಗುತ್ತಿರುವುದನ್ನು ತಡೆಗಟ್ಟಲಿ. ಶ್ರಮಿಕರು, ಕಾರ್ಮಿಕರಿಗೆ ಒಳ್ಳೆಯ ಕೆಲಸ ಮಾಡಿಕೊಡಬೇಕು. ಸೌಲಭ್ಯಗಳಿಗಾಗಿ ಕಚೇರಿಗಳಿಗೆ ಓಡಾಡುವುದನ್ನು ತಪ್ಪಿಸಬೇಕು. ತಮಿಳುನಾಡಿನಲ್ಲಿ ಒಳ್ಳೆಯ ಸರ್ಕಾರ ಬಂದಿದೆ. ಇಲ್ಲಿಯೂ ಮಹಿಳೆಯರು– ಮಕ್ಕಳಿಗೆ ಉತ್ತಮ ಯೋಜನೆಗಳು ಬರಲಿ

ಎಸ್ತರ್, ಆಟೊ ಚಾಲಕಿ, ಕೋರಮಂಗಲ

100 ಅಡಿ ಕಟೌಟ್: ವಿಜಯೋತ್ಸವ

ರಾಜರಾಜೇಶ್ವರಿನಗರ: ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು 100 ಅಡಿ ಕಟೌಟ್ ನಿಲ್ಲಿಸಿ, ಪಟಾಕಿ ಸಿಡಿಸಿ ಉತ್ಸವ ಆಚರಿಸಿದರು.

ಮಾಗಡಿ ರಸ್ತೆಯ ಸುಮನಹಳ್ಳಿ ವೃತ್ತದಲ್ಲಿ ಶಿವಕುಮಾರ್ ಕಟೌಟ್‌ಗೆ ವಿವಿಧ ಹೂವುಗಳಿಂದ ಶೃಂಗರಿಸಲಾಗಿತ್ತು. ಕಾರ್ಯಕರ್ತರು ಸಡಗರ, ಸಂಭ್ರಮದಿಂದ ವಿವಿಧ ಬಣ್ಣ ಬಣ್ಣದ ಹೂವುಗಳನ್ನು ಎರಚಿದರು.

ಸುಮನಹಳ್ಳಿ ಜಂಕ್ಷನ್‌ನಲ್ಲಿ ಬೃಹತ್ ಎಲ್‌ಇಡಿ ಸ್ಕ್ರೀನ್ ಅಳವಡಿಸಿ ಪ್ರಮಾಣವಚನ ಕಾರ್ಯಕ್ರಮ ವೀಕ್ಷಿಸಲು ಅನುವು ಮಾಡಿಕೊಡಲಾಗಿತ್ತು. ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಅವರ ಅಭಿಮಾನಿಗಳು ಅಲ್ಲಲ್ಲಿ ಪೆಂಡಲ್ ಹಾಕಿ ಕುಡಿಯುವ ನೀರು, ತಂಪು ಪಾನೀಯ ವ್ಯವಸ್ಥೆ ಮಾಡಿದ್ದರು.

ಕುಸುಮಾ ಮಾತನಾಡಿ, ‘ಅಭಿವೃದ್ಧಿಯ ಚಿಂತಕರು, ಎಲ್ಲ ವರ್ಗದ ಬಡವರು, ಶ್ರಮಿಕರು, ಕಾರ್ಮಿಕರು, ರೈತರ ಸಮಸ್ಯೆ, ನೋವು ನಲಿವನ್ನು ಕಂಡಿರುವ ಪಕ್ಷದ ನಿಷ್ಠಾವಂತರನ್ನು ಗುರುತಿಸುವ ಶಿವಕುಮಾರ್ ಅವರು ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಕೆಲಸ ಮಾಡಲಿದ್ದಾರೆ’ ಎಂದರು.

ಕಾಂಗ್ರೆಸ್ ಮುಖಂಡ ಕೊಟ್ಟಿಗೆಪಾಳ್ಯ ಎನ್.ಶೇಖರ್, ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ, ಲಗ್ಗೆರೆ ಪಾಲಿಕೆ ಮಾಜಿ ಸದಸ್ಯೆ ರೂಪ ಲಿಂಗೇಶ್ವರ್, ಕಾಂಗ್ರೆಸ್ ಮುಖಂಡರಾದ ಕೆ.ಗಿರೀಶ್‌ಗೌಡ, ಮುರಳಿ ಪ್ರೇಮ್, ಪಶ್ಚಿಮ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಎಲ್.ಪ್ರವೀಣ್ ಕುಮಾರ್, ಎನ್.ಎಸ್.ಯು.ಐ ಆರ್.ಆರ್. ನಗರ ಕ್ಷೇತ್ರದ ಅಧ್ಯಕ್ಷ ಚರಣ್‌ಗೌಡ, ಲಗ್ಗೆರೆಯ ರಮೇಶ್‌ಗೌಡ, ವಾರ್ಡ್ ಅಧ್ಯಕ್ಷ ಚೇತನ್ ಉಪಸ್ಥಿತರಿದ್ದರು.

ರಾಜರಾಜೇಶ್ವರಿ ನಗರ, ಬಂಗಾರಪ್ಪ ನಗರ, ಐಡಿಯಲ್ ಹೋಮ್ಸ್, ಬೆಮೆಲ್ ಬಡಾವಣೆಯಲ್ಲಿ ಕಾಂಗ್ರೆಸ್ ಮುಖಂಡ ರಾಜೇಶ್ ಗೂಳಿಗೌಡ ನೇತೃತ್ವದಲ್ಲಿ ವಿವಿಧೆಡೆ ಪಟಾಕಿ ಸಿಡಿಸಿ, ಸಿಹಿ ಹಂಚಿ ಅದ್ದೂರಿಯಾಗಿ ಸಂಭ್ರಮಾಚರಣೆ ಆಚರಿಸಿದರು.

ಗ್ಲೋಬಲ್ ನಂದೀಶ್, ಕೆಪಿಸಿಸಿ ಹಿಂದುಳಿದ ವಿಭಾಗದ ಉಪಾಧ್ಯಕ್ಷ ಶ್ರೀಕಾಂತ್, ಬಂಗಾರಪ್ಪನಗರದ ಶಿವನಂಜಯ್ಯ ಉಪಸ್ಥಿತರಿದ್ದರು.



ಸುಮನಹಳ್ಳಿ ವೃತ್ತದಲ್ಲಿ ಡಿ.ಕೆ. ಶಿವಕುಮಾರ್ ಅವರ 100 ಅಡಿ ಕಟೌಟ್ ನಿಲ್ಲಿಸಲಾಗಿದೆ

ಕೆಲಸ ಮಾಡಿದವರಿಗೆ ಪಾಲಿಕೆ ಟಿಕೆಟ್: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಕಾರ್ಯಕರ್ತರು ಎಸ್‌ಐಆರ್ ಬಗ್ಗೆ ಗಮನಹರಿಸಬೇಕು. ಇದರಿಂದ ಸಮಸ್ಯೆಯಿದೆ. ಪಶ್ಚಿಮ ಬಂಗಾಳ, ಅಸ್ಸಾಂ ಸೇರಿದಂತೆ ಅನೇಕ ಕಡೆ ಏನಾಗಿದೆ ಎಂದು ತಿಳಿದಿದೆ. ಎಲ್ಲರೂ ಸಭೆ ನಡೆಸಿ ಅರಿವು ಮೂಡಿಸಬೇಕು. ಮತ ಇಲ್ಲ ಎಂದರೆ ಗೃಹಲಕ್ಷ್ಮೀ ಸೇರಿದಂತೆ ಸರ್ಕಾರದ ಸೌಲಭ್ಯಗಳು ಸಿಗುವುದಿಲ್ಲ’ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಎಚ್ಚರಿಸಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರನ್ನು ಉದ್ದೇಶಿಸಿ ಮಾತನಾಡಿದರು.

‘ಮೂರು- ನಾಲ್ಕು ವಾರ್ಡ್‌ಗಳನ್ನು ಸೇರಿ ಶಾಸಕರನ್ನು ಒಳಗೊಂಡ ಸಮಿತಿ ಮಾಡಲಾಗುವುದು. ಅವರು ಎಸ್‌ಐಆರ್ ಬಗ್ಗೆ ಸಭೆ ಮಾಡಲಿದ್ದಾರೆ. ನಂತರ ಪಾಲಿಕೆ ಚುನಾವಣೆಗೂ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದಾರೆ. ತಳಮಟ್ಟದಲ್ಲಿ ಕೆಲಸ ಮಾಡಬೇಕು. ಹಿಂದೆ ತಿರುಗಿದರೆ ಟಿಕೆಟ್ ಸಿಗಲ್ಲ. ಜನರ ನಡುವೆ ಕೆಲಸ ಮಾಡಬೇಕು’ ಎಂದರು.

‘ಎಸ್‌ಐಆರ್ ಬಗೆಗಿನ ಸಭೆಗೆ ಬಾರದ ಪಕ್ಷದ ಕಾರ್ಯದರ್ಶಿಗಳನ್ನು ಎಐಸಿಸಿ ಅವರು ವಜಾ ಮಾಡಿದ್ದಾರೆ. ಇದರ ಬಗ್ಗೆ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಇರಬೇಕು’ ಎಂದರು.

‘ಕಾಂಗ್ರೆಸ್ ಕಚೇರಿ ನಮಗೆ ದೇವಾಲಯ ಇದ್ದಂತೆ. ನಾನು ಅದಕ್ಕಾಗಿ ಕಚೇರಿಗೆ ಬಂದಿದ್ದೇನೆ. ಮಹಾತ್ಮ ಗಾಂಧಿ ಅವರ ನೆನಪಿನಲ್ಲಿ ನೂರು ಕಚೇರಿಗಳಿಗೆ ಅಡಿಪಾಯ ಹಾಕಲಾಗಿದೆ. ಮುಖ್ಯಮಂತ್ರಿ ಆದ ತಕ್ಷಣ ಕಾಂಗ್ರೆಸ್ ಕಚೇರಿ ಬಿಡುವವನಲ್ಲ. ಕಾರ್ಯಕರ್ತರೇ ನನ್ನ ಉಸಿರು. ವಿದ್ಯಾರ್ಥಿ ನಾಯಕನಾಗಿ ರಾಜಕೀಯಕ್ಕೆ ಬಂದವನು. ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷನಾಗಿದ್ದೆ. ಕಾರ್ಯಕರ್ತನಿಗೆ ಒಂದಲ್ಲ ಒಂದು ಅವಕಾಶ ಸಿಗುತ್ತದೆ. ನಾನು ಕುಳಿತಿರುವ ಕುರ್ಚಿ ಈ ರಾಜ್ಯದ ಜನರದ್ದು’ ಎಂದರು.

ಹರಿಪ್ರಸಾದ್ ಅವರಿಗೆ ಅಭಿನಂದನೆಗಳು: ‘ಪಕ್ಷದ ನೂತನ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ಅವರು ಚುಕ್ಕಾಣಿ ಹಿಡಿದಿದ್ದಾರೆ. ಅವರು ಪಕ್ಷದ ಹಿರಿಯ ನಾಯಕರು. 5 ಬಾರಿ ರಾಜ್ಯಸಭಾ ಸದಸ್ಯರಾಗಿದ್ದರು. ಈಗ ಎರಡನೇ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗುತ್ತಿದ್ದಾರೆ. ಸಾಮಾನ್ಯ ಕಾರ್ಯಕರ್ತನಿಗೆ 36 ವರ್ಷಗಳ ಕಾಲ ಪಕ್ಷವು ಅಧಿಕಾರ ನೀಡಿದೆ’ ಎಂದರು.

‘ಅಧಿಕಾರ ಹಸ್ತಾಂತರ ಅಷ್ಟೇ ಆಗುತ್ತಿದೆ. ಆದರೆ, ಕಾರ್ಯಕರ್ತರು ಹೊಸ ಸರ್ಕಾರ ಬಂದಷ್ಟು ಖುಷಿಯಲ್ಲಿದ್ದಾರೆ ಎಂದು ವಿಪಕ್ಷದವರು ಮಾತನಾಡುತ್ತಿದ್ದಾರೆ. ನಿಮ್ಮ ಉತ್ಸಾಹ ನನಗೆ ಶಕ್ತಿ ನೀಡಿದೆ’ ಎಂದರು.

‘ಸೀಟ್‌ಗಾಗಿ ನಾವು ಫೈಟ್ ಮಾಡುತ್ತಿದ್ದೇವೆ. ವೇದಿಕೆಯ ಮುಂಭಾಗ ನಿಂತಿರುವವರು ಕುರ್ಚಿಯಿದ್ದ ಕಡೆ ಕುಳಿತುಕೊಳ್ಳಬೇಕು’ ಎಂದು ಹಾಸ್ಯ ಚಟಾಕಿ ಹಾರಿಸಿದರು.



ಕೆಪಿಸಿಸಿ ಕಚೇರಿಯಲ್ಲಿ ಕಾರ್ಯಕರ್ತರಿಗೆ ಕೈ ಮುಗಿದ ಡಿ.ಕೆ ಶಿವಕುಮಾರ್

ಸಚಿವರ ಪಟ್ಟಿ:ಅಂತಿಮ ಕ್ಷಣದ ಬದಲಾವಣೆ

ಬೆಂಗಳೂರು: ಭಾರಿ ಕುತೂಹಲ ಮೂಡಿಸಿದ್ದ ಸಚಿವರ ಪಟ್ಟಿಯು ಬುಧವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಹೊರಬಿತ್ತು. ಹೈಕಮಾಂಡ್ ನಾಯಕರ ಜೊತೆ ಚರ್ಚಿಸಿ, ಪಟ್ಟಿಗೆ ಅಂತಿಮ ಸ್ಪರ್ಶ ನೀಡಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಮತ್ತು ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ರಾತ್ರಿ ದೆಹಲಿಯಿಂದ ವಾಪಸಾಗಿದ್ದರು.

ತಡರಾತ್ರಿ ಮತ್ತೆ ಸಭೆ ಸೇರಿದ್ದ ಕಾಂಗ್ರೆಸ್ ವರಿಷ್ಠರು ಹಿರಿಯ ಮತ್ತು ಅನುಭವಿ ಶಾಸಕರನ್ನು ಒಳಗೊಂಡ ಪಟ್ಟಿಯನ್ನು ಅಂತಿಮಗೊಳಿಸಿದ್ದರು. ಸಿದ್ದರಾಮಯ್ಯ ಅವರ ಒತ್ತಡಕ್ಕೆ ಮಣಿದು ಜಿ. ಪರಮೇಶ್ವರ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ಕರುಣಿಸಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಪ್ತರಾಗಿರುವ ಶರಣಪ್ರಕಾಶ ಪಾಟೀಲ ಹೆಸರು ಕೊನೆ ಕ್ಷಣದಲ್ಲಿ ಪಟ್ಟಿಗೆ ಸೇರ್ಪಡೆ ಆಗಿತ್ತು.

7 ವರ್ಷ ಬಳಿಕ ಒಕ್ಕಲಿಗರಿಗೆ ಸಿ.ಎಂ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿ ಶಿವಕುಮಾರ್, ಈ ಸ್ಥಾನಕ್ಕೆ ಏರಿದ ಒಕ್ಕಲಿಗ ಸಮುದಾಯದ ಎಂಟನೇ ವ್ಯಕ್ತಿ. ಸರ್ಕಾರದ ಮುಖ್ಯಸ್ಥನ ಹುದ್ದೆಯ ಮೇಲೆ ಹಳೆಯ ಮೈಸೂರು ಭಾಗದ ಒಕ್ಕಲಿಗ ಸಮುದಾಯದವರ ಹಿಡಿತವನ್ನು ಮುಂದುವರಿಸಿದ್ದಾರೆ.

ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಒಕ್ಕಲಿಗ (ಮರುಸು ಒಕ್ಕಲಿಗ/ ಹೊಸದೇವರು) ಸಮುದಾಯದವರು. ಕೆಂಗಲ್ ಹನುಮಂತಯ್ಯ ಸಹ ಒಕ್ಕಲಿಗರು. ಈ ಇಬ್ಬರೂ ಹಳೆಯ ಮೈಸೂರು ಭಾಗದವರು.

ಶಿವಮೊಗ್ಗದ ಕಡಿದಾಳ್ ಮಂಜಪ್ಪ ಅವರು ಮುಖ್ಯಮಂತ್ರಿ ಆಗುವ ಮೂಲಕ, ಮಲೆನಾಡು ಒಕ್ಕಲಿಗರೂ ರಾಜ್ಯದ ಅತ್ಯುನ್ನತ ಹುದ್ದೆಗೆ ಏರಿದಂತಾಗಿತ್ತು. ಈ ಮೂವರೂ ಕಾಂಗ್ರೆಸ್ ಪಕ್ಷದವರು.

ಮುಖ್ಯಮಂತ್ರಿ ಹುದ್ದೆಗೆ ಏರಿದ ಪ್ರಬಲ ಒಕ್ಕಲಿಗ ನಾಯಕ ಎಚ್.ಡಿ.ದೇವೇಗೌಡರು. ಒಕ್ಕಲಿಗ ಸಮುದಾಯದಿಂದ ಮುಖ್ಯಮಂತ್ರಿಯಾದ ಮೊದಲ ಕಾಂಗ್ರೆಸ್ಸೇತರ ನಾಯಕ ಎಂಬ ಹೆಗ್ಗಳಿಕೆ ಅವರದು. ದೇವೇಗೌಡರು ಮುಖ್ಯಮಂತ್ರಿ ಆಗುವ ಮೂಲಕ ಮತ್ತೆ ಆ ಹುದ್ದೆ ಮೈಸೂರು ಭಾಗದ ಒಕ್ಕಲಿಗ ಸಮುದಾಯದ ತೆಕ್ಕೆಗೆ ಬಂತು. ಅವರ ನಂತರ ಆ ಹುದ್ದೆಗೆ ಕಾಂಗ್ರೆಸ್‌ನಿಂದ ಎಸ್.ಎಂ.ಕೃಷ್ಣ ಆಯ್ಕೆಯಾದರು. ದೇವೇಗೌಡ ಅವರ ಮಗ ಎಚ್.ಡಿ.ಕುಮಾರಸ್ವಾಮಿ ಸಹ ಎರಡು ಬಾರಿ ಮುಖ್ಯಮಂತ್ರಿ ಹುದ್ದೆ ನಿರ್ವಹಿಸಿದ್ದಾರೆ. ಈ ಮೂವರೂ ಹಳೆಯ ಮೈಸೂರು ಭಾಗದವರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ, ದಕ್ಷಿಣ ಕನ್ನಡ ಭಾಗದ ಒಕ್ಕಲಿಗರಾದ ಡಿ.ವಿ. ಸದಾನಂದ ಗೌಡ ಅವರು ಮುಖ್ಯಮಂತ್ರಿಯಾಗಿದ್ದರು.

ಕುಮಾರಸ್ವಾಮಿ ಅವರು 2019ರಲ್ಲಿ ಮುಖ್ಯಮಂತ್ರಿ ಹುದ್ದೆಯಿಂದ ಇಳಿದಿದ್ದರು. ಏಳು ವರ್ಷಗಳ ನಂತರ ಒಕ್ಕಲಿಗ ಮತ್ತು ಹಳೆಯ ಮೈಸೂರು ಭಾಗದ ಒಕ್ಕಲಿಗ ನಾಯಕರಿಗೆ ಈ ಹುದ್ದೆ ಒಲಿದಿದೆ.



ಕಾಂಗ್ರೆಸ್ ಕಚೇರಿ ಎದುರು ಅಳವಡಿಸಿದ್ದ ಎಲ್‌ಇಡಿ ಪರದೆಯಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಕಾರ್ಯಕರ್ತರು ಮತ್ತು ಸಾರ್ವಜನಿಕರು ವೀಕ್ಷಿಸಿದರು

ರಾಜ್ಯದ ಸ್ಥಿತಿ ಬದಲಾಗದು: ಅಶೋಕ

ಬೆಂಗಳೂರು: ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಮುಖ್ಯಮಂತ್ರಿ ಬದಲಾಗುವುದರಿಂದಲೇ ರಾಜ್ಯದ ಪರಿಸ್ಥಿತಿ ಬದಲಾಗುವುದಿಲ್ಲ ಎಂದಿದ್ದಾರೆ.

‘ಮುಖ್ಯಮಂತ್ರಿ ಬದಲಾವಣೆಯಿಂದ ರಾಜ್ಯದ ಜನರಲ್ಲಿ ಯಾವುದೇ ಹೊಸ ನಿರೀಕ್ಷೆ ಮೂಡಿಲ್ಲ. ಕಳೆದ ಮೂರು ವರ್ಷಗಳಲ್ಲಿ ಭ್ರಷ್ಟಾಚಾರ, ವರ್ಗಾವಣೆ ದಂಧೆ, ಕಮಿಷನ್ ಸಂಸ್ಕೃತಿ ಮತ್ತು ಆಡಳಿತ ವೈಫಲ್ಯಗಳಿಂದ ರಾಜ್ಯವನ್ನು ಸಂಕಷ್ಟಕ್ಕೆ ತಳ್ಳಿದ ಸರ್ಕಾರದ ಮುಖ್ಯಸ್ಥರು ಮಾತ್ರ ಬದಲಾದಂತಿದೆ. ಮನಃಸ್ಥಿತಿ ಮತ್ತು ವ್ಯವಸ್ಥೆ ಬದಲಾಗುವ ಯಾವ ಲಕ್ಷಣವೂ ಕಾಣುತ್ತಿಲ್ಲ’ ಎಂದಿದ್ದಾರೆ.

ಜನರು ನಾಯಕತ್ವ ಬದಲಾವಣೆಗಿಂತ ಹೆಚ್ಚಾಗಿ ಆಡಳಿತದ ದಿಕ್ಕು ಬದಲಾಗುತ್ತದೆ, ಸರ್ಕಾರದ ಆದ್ಯತೆಗಳು ಬದಲಾಗುತ್ತವೆ ಎಂದು ನಿರೀಕ್ಷಿಸಿದ್ದರು. ಆದರೆ, ಇಂದು ಸಚಿವ ಸಂಪುಟವನ್ನು ನೋಡಿದಾಗ, ಕರ್ನಾಟಕವನ್ನು ಈ ದುಸ್ಥಿತಿಗೆ ತಳ್ಳಿದ ಅದೇ ಹಳೆಯ ಭ್ರಷ್ಟ ಮುಖಗಳು ಮತ್ತೆ ಅಧಿಕಾರದ ಕೇಂದ್ರದಲ್ಲಿರುವುದು ಕಾಣುತ್ತಿದೆ. ರಾಜ್ಯವನ್ನು ಲೂಟಿ ಮಾಡಿದವರು, ಅಭಿವೃದ್ಧಿಯನ್ನು ಹಿಮ್ಮೆಟ್ಟಿಸಿದವರು ಮತ್ತು ಜನರ ವಿಶ್ವಾಸವನ್ನು ಕಳೆದುಕೊಂಡವರು ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಹೀಗಾಗಿ ಇದು ಹೊಸ ಸರ್ಕಾರವಲ್ಲ, ಹಳೆಯ ಸರ್ಕಾರದ ಮಾರುವೇಷ ಮಾತ್ರ ಎಂಬ ಭಾವನೆ ಜನರಲ್ಲಿ ಮೂಡಿದೆ ಎಂದು ಟೀಕಿಸಿದ್ದಾರೆ.

ಭ್ರಷ್ಟಾಚಾರ, ಅಧಿಕಾರದ ದುರುಪಯೋಗ ಮತ್ತು ಜನವಿರೋಧಿ ರಾಜಕಾರಣವನ್ನು ಬದಿಗೊತ್ತಿ, ಸಾಮಾನ್ಯರ ಪರವಾದ ಜನಸ್ನೇಹಿ ಸರ್ಕಾರ ನೀಡುವ ಇಚ್ಛಾಶಕ್ತಿ ಇದ್ದಾಗ ಮಾತ್ರ ಬದಲಾವಣೆ ಸಾಧ್ಯ. ರಾಜ್ಯದ ಜನರು ಭರವಸೆಗಳಿಗಿಂತ ಫಲಿತಾಂಶಗಳನ್ನು ನೋಡಲು ಬಯಸುತ್ತಿದ್ದಾರೆ. ಕುಸಿದ ಆಡಳಿತದ ಅವಶೇಷಗಳ ಮೇಲೆ ಹೊಸ ಸರ್ಕಾರ ಕಟ್ಟುವುದು ಸುಲಭವಲ್ಲ. ಮುಖ್ಯಸ್ಥರು ಮಾತ್ರ ಬದಲಾದ ಹೊಸ ಸರ್ಕಾರದಿಂದ ಕನ್ನಡಿಗರು ಯಾವುದೇ ಹೆಚ್ಚಿನ ನಿರೀಕ್ಷೆಯನ್ನೂ ಇಟ್ಟುಕೊಂಡಿಲ್ಲ ಎಂದಿದ್ದಾರೆ.

10 ಲಕ್ಷ ಲಾಡು ವಿತರಣೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಂಭ್ರಮ ಆಚರಿಸಲು ಶಾಸಕ ಎನ್.ಶ್ರೀನಿವಾಸ್ ಅವರು ಕ್ಷೇತ್ರದಾದ್ಯಂತ ಮನೆಗಳಿಗೆ 10 ಲಕ್ಷ ಲಾಡುಗಳನ್ನು ಕಾರ್ಯಕರ್ತರು, ಮುಖಂಡರ ಮೂಲಕ ಹಂಚಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ 300ಕ್ಕೂ ಹೆಚ್ಚು ಬಾಣಸಿಗರು ಎರಡು ದಿನ 10 ಲಕ್ಷ ಲಾಡುಗಳನ್ನು ಸಿದ್ದಪಡಿಸಿದರು. ಸ್ಥಳೀಯ ವಿಧಾನಸಭಾ ಕ್ಷೇತ್ರದ 90 ಸಾವಿರ ಮನೆಗಳಿಗೆ 68 ಸಾವಿರ ಕೆ.ಜಿ ಲಾಡುಗಳನ್ನು 750 ಗ್ರಾಂ ಬಾಕ್ಸ್‌ಗಳ ಮೂಲಕ ಕಾರ್ಯಕರ್ತರು ಮುಖಂಡರಿಂದ ವಿತರಿಸಿದರು.



ಎನ್. ಶ್ರೀನಿವಾಸ್

ಶ್ರೀನಿವಾಸ್ ಮಾತನಾಡಿ, ‘ಪಕ್ಷದ ಶಿಸ್ತಿನ ಸಿಪಾಯಿ ಆಗಿ ನಿಷ್ಠೆಯಿಂದ ದುಡಿದ ಪ್ರತಿಫಲವಾಗಿ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ದೊರೆತಿದೆ. ಕೆಲಸ ಮಾಡುವ ಸಾಮಾನ್ಯ ಕಾರ್ಯಕರ್ತನಿಗೂ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆ ದೊರೆಯುತ್ತದೆ ಎನ್ನುವುದಕ್ಕೆ ಶಿವಕುಮಾರ್ ಅವರೇ ಸಾಕ್ಷಿ, ಅವರು ಎಲ್ಲ ಕಾರ್ಯಕರ್ತರಿಗೂ ಪ್ರೇರಕ ಶಕ್ತಿಯಾಗಿದ್ದಾರೆ’ ಎಂದರು.

ಪಟ್ಟಣದ ನಗರಸಭೆ ಬಳಿ, ಕಸಬಾ, ಸೋಂಪುರ, ತ್ಯಾಮಗೊಂಡ್ಲು, ಸೋಲೂರು ಹೋಬಳಿಗಳ ಪ್ರಮುಖ ಸ್ಥಳಗಳಲ್ಲಿ ಎಲ್‌ಇಡಿ ಪರದೆಗಳ ಮೂಲಕ ಪ್ರಮಾಣವಚನ ಸ್ವೀಕರಿಸುವ ಸಮಾರಂಭವನ್ನು ವೀಕ್ಷಿಸಲು ಸಾರ್ವಜನಿಕರು, ಕಾರ್ಯಕರ್ತರಿಗೆ ಅವಕಾಶ ಕಲ್ಪಿಸಲಾಗಿತ್ತು.

ನೆಲಮಂಗಲ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ. ನಾಗರಾಜು, ಮಾಜಿ ಅಧ್ಯಕ್ಷ ಎಂ.ನಾರಾಯಣಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ, ನಗರ ಅಧ್ಯಕ್ಷ ಸಿ.ಪ್ರದೀಪ್ ಉಪಸ್ಥಿತರಿದ್ದರು.

ಸಂಧ್ಯಾ ಸುರಕ್ಷಾ: 15.99 ಲಕ್ಷ ಪಿಂಚಣಿ ರದ್ದು

3.93 ಲಕ್ಷ ಮಂದಿಗೆ ಮಾತ್ರ ಮಾಸಾಶನ

• 3 ತಿಂಗಳಿನಿಂದ ಬಾರದ ನೆರವಿನ ಹಣ

• ಸಂತೋಷ ಜಿಗಳಿಕೊಪ್ಪ

ಹಾವೇರಿ: ಸಂಧ್ಯಾ ಸುರಕ್ಷಾ ಯೋಜನೆಯಡಿ ₹1,200 ಮಾಸಾಶನ ಪಡೆಯುತ್ತಿದ್ದ ರಾಜ್ಯದ 23.13 ಲಕ್ಷ ಮಂದಿ ಪೈಕಿ, 15.99 ಲಕ್ಷ ಜನರ ಪಿಂಚಣಿಯನ್ನು ರಾಜ್ಯ ಸರ್ಕಾರ ತಾತ್ಕಾಲಿಕವಾಗಿ ರದ್ದುಪಡಿಸಿದೆ. ನಕಲಿ ದಾಖಲೆ ಸಲ್ಲಿಸಿ ಪಿಂಚಣಿ ಪಡೆಯುತ್ತಿದ್ದ ವ್ಯಕ್ತಿಗಳನ್ನು ಸಮೀಕ್ಷೆ ಮೂಲಕ ಪತ್ತೆ ಮಾಡಿರುವ ರಾಜ್ಯ ಸರ್ಕಾರ, ಈ ಕ್ರಮ ಕೈಗೊಂಡಿದೆ.

ರಾಜ್ಯದಲ್ಲಿ ವಾಸವಿರುವ 65 ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಿನ ವೃದ್ಧರಿಗೆ ಆರ್ಥಿಕ ಬಲ ತುಂಬಲು ರಾಜ್ಯ ಸರ್ಕಾರ, 2007ರಿಂದ ಸಂಧ್ಯಾ ಸುರಕ್ಷಾ ಯೋಜನೆ ಜಾರಿಗೊಳಿಸಿದೆ. ರೈತರು, ಕೃಷಿ ಕಾರ್ಮಿಕರು, ನೇಕಾರರು, ಮೀನುಗಾರರು, ಅಸಂಘಟಿತ ವಲಯದ ಕಾರ್ಮಿಕರಿಗೆ ಪ್ರತಿ ತಿಂಗಳು ಪಿಂಚಣಿ ನೀಡಲಾಗುತ್ತಿದೆ.

ಕೆಲ ತಿಂಗಳ ಹಿಂದೆ ನಕಲಿ ಪಿಂಚಣಿದಾರರ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ ಕಂದಾಯ ಇಲಾಖೆಯ ಅಧಿಕಾರಿಗಳು, 'ಅರ್ಹರ ಬದಲು ಅನರ್ಹರಿಗೆ ಮಾಸಾಶನ ಸಿಗುತ್ತಿದೆ. ನಕಲಿ ಪಿಂಚಣಿದಾರರನ್ನು ಗುರುತಿಸಿ ಕ್ರಮ ಕೈಗೊಳ್ಳಬೇಕಿದೆ' ಎಂದಿದ್ದರು.

'ರಾಜ್ಯದಲ್ಲಿ ಇರುವ 23.13 ಲಕ್ಷ ಪಿಂಚಣಿದಾರರ ದಾಖಲೆಗಳ ಬಗ್ಗೆ ಅನುಮಾನವಿತ್ತು. ಅದಕ್ಕೆ ಪಿಂಚಣಿದಾರರಿಂದ ವೈಯಕ್ತಿಕವಾಗಿ ಜಿಪಿಎಸ್ ಫೋಟೊ ಸಮೇತ ದಾಖಲೆ ಪಡೆದು ಪರಿಶೀಲನೆ ನಡೆಸಿದೆವು. ಮೃತರು, ನಕಲಿ ದಾಖಲೆ ಸಲ್ಲಿಸಿದವರು, ತಪ್ಪು ಮಾಹಿತಿ ಕೊಟ್ಟವರು ಸೇರಿ ವಿವಿಧ ಕಾರಣದಿಂದ 15.99 ಲಕ್ಷ ಜನರ ಪಿಂಚಣಿ ರದ್ದುಪಡಿಸಲಾಗಿದೆ' ಎಂದು ಕಂದಾಯ ಇಲಾಖೆ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಇಷ್ಟು ದಿನ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿ ಅನರ್ಹರು ಸಹ ಪಿಂಚಣಿ ಪಡೆದಿರುವುದು ಸಮೀಕ್ಷೆಯಿಂದ ಗೊತ್ತಾಗಿದೆ. ರಾಜ್ಯದಲ್ಲಿ ಶೇ 85.97ರಷ್ಟು ಸಮೀಕ್ಷೆ ಮುಗಿದಿದ್ದು, 3.20 ಲಕ್ಷ ಪಿಂಚಣಿ ಪರಿಶೀಲನೆ ಬಾಕಿಯಿದೆ' ಎಂದರು.



ಅನರ್ಹ ಪಿಂಚಣಿದಾರರ ಪತ್ತೆಗೆ ಸಮೀಕ್ಷೆ ನಡೆಯುತ್ತಿದ್ದು, ಹಲವರ ಪಿಂಚಣಿ ರದ್ದಾಗಿದೆ. ಸಮೀಕ್ಷೆ ಶೇ 100ರಷ್ಟು ಪೂರ್ಣಗೊಂಡ ಬಳಿಕ ಖಜಾನೆ ಮೂಲಕ ಅರ್ಹರ ಖಾತೆಗೆ ಪಿಂಚಣಿ ಹಣ ಜಮೆ ಆಗಲಿದೆ

ನಾಗರಾಜ, ಹೆಚ್ಚುವರಿ ಜಿಲ್ಲಾಧಿಕಾರಿ, ಹಾವೇರಿ

ನನಗೆ ಮಕ್ಕಳಿಲ್ಲ. ಆಸ್ಪತ್ರೆ ಖರ್ಚು, ಮಾತ್ರೆ ಖರೀದಿಸಲು ಹಣ ಬೇಕು. ಪಿಂಚಣಿಯೇ ಆಧಾರವಾಗಿದೆ. ಮೂರು ತಿಂಗಳಿನಿಂದ ಪಿಂಚಣಿ ಬಂದಿಲ್ಲ. ಕೈಗಡ ಸಾಲ ಪಡೆದು ಮಾತ್ರೆ ಖರೀದಿಸಿದ್ದೇನೆ

ಚಂದ್ರವ್ವ, ಹಾವೇರಿ ತಾಲ್ಲೂಕು

ನನಗೆ 75 ವರ್ಷ ವಯಸ್ಸು. ಗ್ರಾಮ ಲೆಕ್ಕಾಧಿಕಾರಿ ನೋಟಿಸ್ ಕೊಟ್ಟಿದ್ದರು. ಎಲ್ಲ ದಾಖಲೆ ಕೊಟ್ಟಿದ್ದೇನೆ. ಆದರೆ, ಮೂರು ತಿಂಗಳಿನಿಂದ ಪಿಂಚಣಿ ಬಂದಿಲ್ಲ

ಸೋಮಣ್ಣ ಬಿ., ರಾಣೆಬೆನ್ನೂರು ತಾಲ್ಲೂಕು

ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚು

ರಾಜ್ಯದ 31 ಜಿಲ್ಲೆಗಳಲ್ಲೂ ಸಮೀಕ್ಷೆ ನಡೆದಿದೆ. ಮಾಸಾಶನ ರದ್ದು ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇರುವ ಬೆಳಗಾವಿ ಜಿಲ್ಲೆಯಲ್ಲಿ 1.33 ಲಕ್ಷ ಜನರ ಪಿಂಚಣಿ ರದ್ದುಪಡಿಸಲಾಗಿದೆ. ಎರಡನೇ ಸ್ಥಾನದಲ್ಲಿರುವ ಮೈಸೂರಿನಲ್ಲಿ 1.06 ಲಕ್ಷ ಮಂದಿ ಪಿಂಚಣಿ ರದ್ದಾಗಿದೆ.

3 ತಿಂಗಳಿನಿಂದ ಬಾರದ ಮಾಸಾಶನ: ಪಿಂಚಣಿದಾರರ ಸಮೀಕ್ಷೆ ನಡೆಯುತ್ತಿರುವುದರಿಂದ, ಮೂರು ತಿಂಗಳಿನಿಂದ ಯಾವುದೇ ವೃದ್ಧರಿಗೆ ಮಾಸಾಶನ ನೀಡಿಲ್ಲ. ಇದರಿಂದಾಗಿ ಅರ್ಹ ವೃದ್ಧರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಔಷಧಿ ಖರ್ಚಿಗೂ ಪರದಾಡುತ್ತಿದ್ದಾರೆ.

'ಜನರ ಸೋಮಾರಿ ಮಾಡುತ್ತಿರುವ ಸರ್ಕಾರಗಳು'

ಹೊಸದುರ್ಗ: 'ಸರ್ಕಾರಗಳು ಜನರಿಗೆ ಉದ್ಯೋಗ ನೀಡಿ, ಸ್ವಾವಲಂಬಿ ಆಗಿಸುವ ಬದಲು, ವಿವಿಧ ಯೋಜನೆಗಳ ಮೂಲಕ ಸೋಮಾರಿಗಳನ್ನಾಗಿ ಮಾಡುತ್ತ ಕಾಯಕವನ್ನು ಕಸಿದುಕೊಳ್ಳುತ್ತಿರುವುದು ನೋವಿನ ಸಂಗತಿ' ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಶಿವಕುಮಾರ ಕಲಾಸಂಘದ ಸಹಯೋಗದಲ್ಲಿ ತಾಲ್ಲೂಕಿನ ಸಾಣೇಹಳ್ಳಿಯಲ್ಲಿ ಬುಧವಾರ ಆಯೋಜಿಸಿದ್ದ ಯುವಜನ ರಂಗತರಬೇತಿ ಶಿಬಿರದಲ್ಲಿ ಅವರು ಮಾತನಾಡಿದರು.

'ಮನುಷ್ಯ ಹಸಿವಿಗಾಗಿ ತಪ್ಪು ದಾರಿ ತುಳಿಯದಂತೆ ತಡೆಯಲು ಅವನಿಗೆ ಅನ್ನ ಕೊಡುವುದಕ್ಕಿಂತ, ಅನ್ನ ಗಳಿಸುವ ಕಾಯಕವನ್ನು ಕಲಿಸಬೇಕು. ಆದರೆ, ಇಂದಿನ ವ್ಯವಸ್ಥೆ ಕಾಯಕ ಸಂಸ್ಕೃತಿಯನ್ನೇ ಹಾಳುಮಾಡುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ವಿವಿಧೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರದಿಂದ ಮುಂದಿನ ಐದು ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬಾಗಲಕೋಟೆ, ಗದಗ, ಬೆಳಗಾವಿ, ಧಾರವಾಡ, ಹಾವೇರಿ ಹಾಗೂ ಕೊಪ್ಪಳ ಜಿಲ್ಲೆಗೆ ಗುರುವಾರ ಹಾಗೂ ಶುಕ್ರವಾರ 'ಆರೆಂಜ್ ಅಲರ್ಟ್' ನೀಡಲಾಗಿದ್ದು, ಈ ಜಿಲ್ಲೆಗಳ ಕೆಲವೆಡೆ ಬಿರುಗಾಳಿಯೊಂದಿಗೆ ಭಾರಿ ಮಳೆಯಾಗುವ ಸಂಭವವಿದೆ. ಉಳಿದ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಂಭವವಿದೆ.

ಕೊಡಗು, ಹಾಸನ, ಚಿಕ್ಕಮಗಳೂರು, ಬಳ್ಳಾರಿ, ದಾವಣಗೆರೆ, ಚಾಮರಾಜನಗರ, ಮಂಡ್ಯ, ಮೈಸೂರು, ರಾಮನಗರ ಮತ್ತು ವಿಜಯನಗರ ಜಿಲ್ಲೆಯ ಹಲವೆಡೆ ಬಿರುಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಹಲವೆಡೆ ಮಳೆ

ಹುಬ್ಬಳ್ಳಿ: ಧಾರವಾಡ, ಗದಗ, ಬಳ್ಳಾರಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಬುಧವಾರ ಮಳೆಯಾಯಿತು.

ಧಾರವಾಡ ನಗರ ಸೇರಿ ಜಿಲ್ಲೆಯ ಹುಬ್ಬಳ್ಳಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಮಳೆ ಸುರಿಯಿತು. ಗದಗ ನಗರ ಸೇರಿ ಜಿಲ್ಲೆಯ ನರೇಗಲ್, ರೋಣ, ಲಕ್ಷ್ಮೇಶ್ವರ, ನರಗುಂದದಲ್ಲಿ ಮಳೆಯಾಯಿತು. ಬಳ್ಳಾರಿ ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ಗುಡುಗು ಸಹಿತ ಭಾರಿ ಮಳೆ ಸುರಿಯಿತು. ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ ಸೇರಿ ಕರಾವಳಿ ಭಾಗದಲ್ಲೂ ಮಳೆಯಾಯಿತು.

ಚಿಕ್ಕಮಗಳೂರು ವರದಿ: ಜಿಲ್ಲೆಯ ಹಲವೆಡೆ ಸಾಧಾರಣ ಮಳೆಯಾಗಿದ್ದು, ಮಲೆನಾಡಿನಲ್ಲಿ ಮುಂಗಾರಿನ ವಾತಾವರಣ ನಿರ್ಮಾಣವಾಗಿದೆ.

ಮೂಡಿಗೆರೆ, ಕೊಟ್ಟಿಗೆಹಾರ, ಕಳಸ, ಬಾಳೆಹೊನ್ನೂರು, ಆಲ್ದೂರು, ಶೃಂಗೇರಿ, ಕೊಪ್ಪ, ತರೀಕೆರೆ ಭಾಗದಲ್ಲಿ ಮಳೆಯಾಯಿತು.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಾದ್ಯಂತ ಮಂಗಳವಾರ ರಾತ್ರಿಯಿಂದ ಬುಧವಾರ ಬೆಳಗ್ಗಿನ ವರೆಗೆ ಸಾಧಾರಣ ಮಳೆಯಾಗಿದೆ.

ಸರ್ವೆಗೆ ಹೋದಾಗ ಘಟನೆ: ತೆಲಂಗಾಣದ ಒತ್ತುವರಿದಾರರಿಂದ ದುಷ್ಕೃತ್ಯ

ರಾಜ್ಯದ ಅಧಿಕಾರಿಗಳ ಮೇಲೆ ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಜಿಲ್ಲೆಯ ಗಡಿಭಾಗದ ವಿವಾದಿತ ಜಮೀನಿನ ಸಮೀಕ್ಷೆ ತೆರಳಿದ್ದ ಕರ್ನಾಟಕದ ಅಧಿಕಾರಿಗಳ ಮೇಲೆ ತೆಲಂಗಾಣದ ಜನರು ಕಲ್ಲು ತೂರಿದ ಘಟನೆ ತಾಲ್ಲೂಕಿನ ಶಾದಿಪುರದ ಸರ್ವೆ ನಂಬರ್ 126ರಲ್ಲಿ ಬುಧವಾರ ಮಧ್ಯಾಹ್ನ ನಡೆದಿದೆ.

ಸೇಡಂ ಉಪವಿಭಾಗಾಧಿಕಾರಿ ಪ್ರಭುರೆಡ್ಡಿ, ಭೂದಾಖಲೆಗಳ ಇಲಾಖೆಯ ಉಪನಿರ್ದೇಶಕ ಮಹೇಶ ನೇತೃತ್ವದಲ್ಲಿ ಸಹಾಯಕ ನಿರ್ದೇಶಕ ಸತೀಶ ಸಿಂಧೆ, ಶಿವಕುಮಾರ, ವೆಂಕಟರೆಡ್ಡಿ ಹಾಗೂ ಕುಂಚಾವರಂ ಪಿಎಸ್ಐ ವೆಂಕಟೇಶ ನಾಯಕ, ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ, ಕಂದಾಯ ನಿರೀಕ್ಷಕ ಮಹಮ್ಮದ್ ಆರೀಫ್, ಗ್ರಾಮ ಆಡಳಿತಾಧಿಕಾರಿ ರವಿಕುಮಾರ ಮಾನೆ ಸೇರಿದಂತೆ ಅಧಿಕಾರಿಗಳು ಮಧ್ಯಾಹ್ನ 1 ಗಂಟೆಗೆ ಶಾದಿಪುರದ ಜಮೀನಿಗೆ ಭೇಟಿ ನೀಡಿದ್ದರು.

ನಾಲ್ಕೈದು ವರ್ಷಗಳ ಹಿಂದೆ ಸರ್ವೆ ಮಾಡಿ ಗುರುತಿಸಿದ್ದ ಗಡಿ ವೀಕ್ಷಿಸಲು ಅಧಿಕಾರಿಗಳು ತೆರಳಿದ್ದರು. ಆಗ ತೆಲಂಗಾಣದ ಉಮ್ಲಾ ನಾಯಕ ತಾಂಡಾದ ಸುಮಾರು 40 ಮಹಿಳೆಯರು ಹಾಗೂ 15 ಪುರುಷರು ಅಧಿಕಾರಿಗಳ ಮೇಲೆ ಕಲ್ಲು ತೂರಿದ್ದಾರೆ. ಅದೃಷ್ಟವಶಾತ್ ಯಾರೂ ಗಾಯಗೊಂಡಿಲ್ಲ. ನಂತರ ಕೆಲವರು ಅಧಿಕಾರಿಗಳ ಬಳಿ ಬಂದು ವಾಗ್ವಾದ ನಡೆಸಿ ಹೆದರಿಸಿ ವಾಪಸ್ ಕಳುಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಇದು ನಮ್ಮ ಜಮೀನು, ಇಲ್ಲಿಗೆ ಬರಲು ನೀವ್ಯಾರು? ಇದು ವಿವಾದಿತ ಜಮೀನಾಗಿದ್ದರೆ ನಮ್ಮ ರಾಜ್ಯದ ಅಧಿಕಾರಿಗಳೂ ಬರಲಿ. ಎರಡೂ ರಾಜ್ಯದ ಅಧಿಕಾರಿಗಳು ಸೇರಿ ಸಮೀಕ್ಷೆ ಮಾಡಿದರೆ ಮಾತ್ರ ನಾವು ಸಹಿಸುತ್ತೇವೆ. ಕೇವಲ ಕರ್ನಾಟಕದ ಅಧಿಕಾರಿಗಳು ಬಂದರೆ ಅವಕಾಶ ನೀಡುವುದಿಲ್ಲ ಎಂದು ತೆಲಂಗಾಣದ ಉಮ್ಲಾ ನಾಯಕ ತಾಂಡಾದ ಜನರು ಕರ್ನಾಟಕ ಅಧಿಕಾರಿಗಳ ಮೇಲೆ ಹರಿಹಾಯ್ದರು' ಎಂದು ಪ್ರತ್ಯಕ್ಷದರ್ಶಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಕೆಲವು ವರ್ಷಗಳ ಹಿಂದೆ ಗಡಿಭಾಗದ ಈ ವಿವಾದಿತ ಜಮೀನನ್ನು 54 ಭೂ ಸಂತ್ರಸ್ತರಿಗೆ ಕರ್ನಾಟಕ ಸರ್ಕಾರ ಮಂಜೂರು ಮಾಡಿತ್ತು. ಅಧಿಕಾರಿಗಳು ಅಲ್ಲಿಗೆ ಭೇಟಿ ನೀಡಿದ ವೇಳೆ ಕಲ್ಲು ತೂರಾಟ ನಡೆದಿದೆ. ಬಳಿಕ ತೆಲಂಗಾಣದ ಜನರ ವಶದಲ್ಲಿರುವ ವಿವಾದಿತ ಜಮೀನನ್ನು ತೆಲಂಗಾಣ ಮತ್ತು ಕರ್ನಾಟಕದ ಅಧಿಕಾರಿಗಳ ಸಮ್ಮುಖದಲ್ಲಿ ಜಂಟಿ ಸರ್ವೆ ನಡೆಸಲು ವಿಕಾರಾಬಾದ್ ಜಿಲ್ಲಾಧಿಕಾರಿಗೆ ಪತ್ರ ಬರೆಯುವುದಾಗಿ ತಿಳಿಸಿ ನಮ್ಮ ಅಧಿಕಾರಿಗಳು ವಾಪಸ್ ಮರಳಿದರು' ಎಂದು ಭೂಮಿಯ ಹಕ್ಕಿಗಾಗಿ ಧರಣಿ ನಡೆಸುತ್ತಿರುವ ಶಂಕರ ಪವಾರ್ ಹೇಳಿದ್ದಾರೆ.



ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಶಾದಿಪುರದಲ್ಲಿ ಜಮೀನು ಪರಿಶೀಲಿಸಲು ಬಂದಾಗ ಧರಣಿ ನಡೆಸುತ್ತಿದ್ದವರಿಂದ ಉಪ ವಿಭಾಗಾಧಿಕಾರಿ ಪ್ರಭುರೆಡ್ಡಿ ಮಾಹಿತಿ ಪಡೆದರು

ಕರ್ನಾಟಕದ ಜಮೀನನ್ನು ತೆಲಂಗಾಣದ ಜನ ಒತ್ತುವರಿ ಮಾಡಿಕೊಂಡಿದ್ದಾರೆ. ಕಲಬುರಗಿ ಜಿಲ್ಲಾಧಿಕಾರಿ ತೆಲಂಗಾಣದ ವಿಕಾರಾಬಾದ್ ಡಿ.ಸಿ ಜತೆಗೆ ಚರ್ಚಿಸಿ ಸಮಸ್ಯೆ ಬಗೆಹರಿಸಬೇಕು

ವೆಂಕಟೇಶ ಬುಡ್ಡಜಂಗಮ, ಶಾದಿಪುರ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ

ಎರಡನೇ ಬಾರಿಗೆ ನಡೆದ ಘಟನೆ

ಕಳೆದ ತಿಂಗಳು ಚಿಂಚೋಳಿ ಉಪ ವಿಭಾಗಾಧಿಕಾರಿ ನೇತೃತ್ವದಲ್ಲಿ ಇದೇ ಸ್ಥಳ ಪರಿಶೀಲನೆಗೆ ತೆರಳಿದ್ದಾಗ ಉಮ್ಲಾ ನಾಯಕ ತಾಂಡಾದ ಜನ ವಿರೋಧಿಸಿ ವಾಪಸ್ ಕಳುಹಿಸಿದ್ದರು. ಆದರೆ, ಇದೀಗ ಮತ್ತೆ ಕಲ್ಲು ತೂರಾಟ ನಡೆಸಿ ಭೀತಿ ಸೃಷ್ಟಿಸಲು ಯತ್ನಿಸಿ ಜಗಳ ಮಾಡಿದ್ದಾರೆ.

ಸುದ್ದಿ 2 ನಿಮಿಷ

12 ಗೇಟ್‌ಗಳಿಗೆ ಚೈನ್ ಅಳವಡಿಕೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ ಹೊಸ 12 ಕ್ರೆಸ್ಟ್‌ಗೇಟ್‌ಗಳಿಗೆ ಚೈನ್ ಅಳವಡಿಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಇನ್ನೂ ನಾಲ್ಕು ಗೇಟ್‌ಗಳಿಗೆ ಚೈನ್ ಅಳವಡಿಸುವ ಪ್ರಕ್ರಿಯೆ ಮುಂದುವರೆದಿದೆ.

'ಚೆನ್ನೈಯಿಂದ ಈವರೆಗೆ 22 ಗೇಟ್‌ಗಳಿಗೆ ಚೈನ್ ಬಂದಿವೆ. ಉಳಿದ ಚೈನ್‌ಗಳು ಶೀಘ್ರವೇ ತಲುಪಲಿವೆ. ಜೂನ್ 15ರೊಳಗೆ ಎಲ್ಲಾ 33 ಗೇಟ್‌ಗಳಿಗೆ ಹೊಸ ಚೈನ್ ಅಳವಡಿಸುವ ಗುರಿಯಿದೆ' ಎಂದು ತುಂಗಭದ್ರಾ ಮಂಡಳಿಯ ಸೆಕ್ಷನ್ ಎಂಜಿನಿಯರ್ ಕಿರಣ್ ತಿಳಿಸಿದ್ದಾರೆ.

ಒಳಹರಿವು ಬಂದ್: ತುಂಗಭದ್ರಾ ಜಲಾನಯನ ಪ್ರದೇಶಗಳಲ್ಲಿ ಮಳೆ ಸುರಿದಿದ್ದರಿಂದ ಮೇ 19ರಿಂದ ಜಲಾಶಯಕ್ಕೆ ಒಳಹರಿವು ಆರಂಭವಾಗಿತ್ತು. ಆದರೆ, ಮತ್ತೆ ಮಳೆ ಕಡಿಮೆಯಾದ ಕಾರಣ ಜೂನ್ 1ರಿಂದ ಒಳಹರಿವು ಸಂಪೂರ್ಣ ಬಂದ್ ಆಗಿದೆ. ಸದ್ಯ ಜಲಾಶಯದಲ್ಲಿ 10 ಟಿಎಂಸಿ ಅಡಿ ನೀರಿನ ಸಂಗ್ರಹ ಇದೆ. ಕಳೆದ ವರ್ಷ ಇದೇ ವೇಳೆ 19.77 ಟಿಎಂಸಿ ಅಡಿ ನೀರಿನ ಸಂಗ್ರಹ ಇತ್ತು.

ಪಾದಯಾತ್ರೆ: ರಕ್ಷಣೆಗೆ ಆಗ್ರಹ



ಹುಬ್ಬಳ್ಳಿ: ಜೈನ ಮುನಿಗಳು ಮತ್ತು ಸಾಧ್ವಿಯರು ಪಾದಯಾತ್ರೆ ಮಾಡುವಾಗ, ಸೌಲಭ್ಯದ ಜೊತೆಗೆ ಸೂಕ್ತ ರಕ್ಷಣೆ ನೀಡುವಂತೆ ಆಗ್ರಹಿಸಿ ಜೈನ ಸಮುದಾಯದವರು ನಗರದಲ್ಲಿ ಸುರಕ್ಷಾ ಮೆರವಣಿಗೆ ನಡೆಸಿದರು.

ಕಂಚಗಾರ ಗಲ್ಲಿಯ ಶಾಂತಿನಾಥ ಜೈನ ಮಂದಿರದಿಂದ ಮಿನಿ ವಿಧಾನಸೌಧದವರೆಗೆ ಬುಧವಾರ ಮೆರವಣಿಗೆ ನಡೆಸಿದ ಅವರು, ಜಿಲ್ಲಾಧಿಕಾರಿ, ತಹಶೀಲ್ದಾರ್ ಮತ್ತು ಶಾಸಕ ಮಹೇಶ ಟೆಂಗಿನಕಾಯಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

'ರಾಜ್ಯ, ರಾಷ್ಟ್ರೀಯ ಹೆದ್ದಾರಿಯಲ್ಲಿ ಪಾದಯಾತ್ರೆ ವೇಳೆ ಅಪಘಾತದಿಂದ ಮುನಿಗಳು, ಸಾಧ್ವಿಯರು ಮೃತಪಟ್ಟಿದ್ದಾರೆ. ಕೆಲ ಅಪಘಾತಗಳು ಸಂಶಯಾಸ್ಪದವಾಗಿವೆ. ಅಂತಹ ಪ್ರಕರಣಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ತನಿಖೆಗೆ ಒಳಪಡಿಸಬೇಕು. ಪಾದಯಾತ್ರೆ ಸಂದರ್ಭ ಆಯಕಟ್ಟಿನ ರಸ್ತೆಗಳಲ್ಲಿ ಎಚ್ಚರಿಕೆ ಫಲಕ, ಸುರಕ್ಷತಾ ವಲಯ, ಹೆದ್ದಾರಿ ಗಸ್ತು ನಡೆಸಲು ಭದ್ರತಾ ಸಿಬ್ಬಂದಿ ನಿಯೋಜನೆ, ವಾಹನ ಚಾಲಕರಿಗೆ ಜಾಗೃತಿ, ಪ್ರತ್ಯೇಕ ಪಾದಚಾರಿ ಮಾರ್ಗ ನಿರ್ಮಿಸಬೇಕು' ಎಂದು ಅವರು ಆಗ್ರಹಿಸಿದರು.

ಆಚಾರ್ಯ ಭಗವಂತ ಶ್ರೀ ಚಂದ್ರಭೂಷಣ ಸೂರೀಶ್ವರ ಮಹಾರಾಜ ಮುನಿ ನೇತೃತ್ವದಲ್ಲಿ ಜಯಂತಿಲಾಲ ಪಿ., ಉಕಚಂದ್ ಬಾಫ್ನಾ, ರಾಜೇಂದ್ರ ಬೀಳ್ಗಿ, ಶರದ್ ಮೋಮಯ, ಶಾಂತಿಲಾಲ ಜೈನ, ಮಹೇಂದ್ರ ಸಿಂಘಿ ಮತ್ತಿತರರು ಪಾಲ್ಗೊಂಡಿದ್ದರು.

ಶಂಕರಪುರ ಮಲ್ಲಿಗೆ ಧಾರಣೆ ಕುಸಿತ

ಉಡುಪಿ: ಕರಾವಳಿಯ ಜನಪ್ರಿಯ ಶಂಕರಪುರ ಮಲ್ಲಿಗೆ ಧಾರಣೆ ಕುಸಿದಿದ್ದು, ಬುಧವಾರದಂದು ಅಟ್ಟೆ ಮಲ್ಲಿಗೆಯ ದರ ₹160 ಆಗಿತ್ತು. ಮಂಗಳವಾರ ಅಟ್ಟೆ ಮಲ್ಲಿಗೆ ದರ ₹120ಕ್ಕೆ ಇಳಿಕೆಯಾಗಿತ್ತು.

'ಅಧಿಕ ಮಾಸ ಆರಂಭವಾಗಿರುವುದರಿಂದ ಶುಭ ಸಮಾರಂಭಗಳು ನಡೆಯುವುದಿಲ್ಲ. ಜೊತೆಗೆ ಈ ಬಾರಿ ಬಿಸಿಲಿನ ವಾತಾವರಣ ಇದ್ದುದರಿಂದ ಇಳುವರಿ ಹೆಚ್ಚಾಗಿತ್ತು. ಹೀಗಾಗಿ ಧಾರಣೆ ಕುಸಿದಿದೆ' ಎಂದು ಮಲ್ಲಿಗೆ ಕೃಷಿಕ ರಾಮಕೃಷ್ಣ ಶರ್ಮ ಬಂಟಕಲ್ಲು ತಿಳಿಸಿದರು.

'ಶಂಕರಪುರ ಮಲ್ಲಿಗೆಯ ಧಾರಣೆ ಅಟ್ಟೆಗೆ ₹300 ರಿಂದ ₹1,700ರ ನಡುವೆ ಇತ್ತು. ಈಗ ದಿಢೀರನೆ ಕುಸಿದಿದೆ. ಇನ್ನು ಒಂದು ತಿಂಗಳು ಇದೇ ರೀತಿ ಮುಂದುವರಿಯುವ ಸಾಧ್ಯತೆ ಇದೆ' ಎಂದೂ ಅವರು ತಿಳಿಸಿದರು.

ಆರ್‌ಐಎಸ್‌ಎಂ ಮತ್ತು ಅಲ್ಬನಿ ವಿವಿ ನಡುವೆ ಮಹತ್ವದ ಒಪ್ಪಂದ

ಬೆಂಗಳೂರಿನ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್ ಮೆಂಟ್ (ಆರ್‌ಐಎಸ್‌ಎಂ) ಅಮೆರಿಕದ ಪ್ರಸಿದ್ಧ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್‌ನ ಅಂಗವಾಗಿರುವ 'ಅಲ್ಬನಿ ಯೂನಿವರ್ಸಿಟಿ' ಸಹಯೋಗದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆ

ಬೆಂಗಳೂರು: ಜಾಗತಿಕ ಮಟ್ಟದ ಶೈಕ್ಷಣಿಕ, ಔದ್ಯೋಗಿಕ ಅವಕಾಶಗಳಿಗೆ ತಕ್ಕಂತೆ ದೇಶದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಗುಣಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಬೆಂಗಳೂರಿನ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್ ಮೆಂಟ್ (ಆರ್‌ಐಎಸ್‌ಎಂ) ಪ್ರಮುಖ ಹೆಜ್ಜೆಯನ್ನಿಟ್ಟಿದೆ. ಅಮೆರಿಕದ ಪ್ರಸಿದ್ಧ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್‌ನ ಅಂಗವಾಗಿರುವ 'ಅಲ್ಬನಿ ಯೂನಿವರ್ಸಿಟಿ' ಸಹಯೋಗದಲ್ಲಿ ಆರ್‌ಐಎಸ್‌ಎಂ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಮರುರೂಪಿಸುವ ಹೊಸ ಅಧ್ಯಾಯಕ್ಕೆ ಚಾಲನೆ ನೀಡಿದೆ.

ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಲಾಗಿದ್ದ ಉನ್ನತ ಮಟ್ಟದ ಮುನ್ನುಡಿ ಸಮಾವೇಶದಲ್ಲಿ ಶೈಕ್ಷಣಿಕ, ಉದ್ಯಮ, ಸಂಶೋಧನೆ ಹಾಗೂ ತಂತ್ರಜ್ಞಾನ ಕ್ಷೇತ್ರದ ನಾಯಕರು ಪಾಲ್ಗೊಂಡು ಭವಿಷ್ಯದ ಶಿಕ್ಷಣದ ದೃಷ್ಟಿಕೋನದ ಚಿಂತನೆಗಳನ್ನು ಹಂಚಿಕೊಂಡರು. ತಂತ್ರಜ್ಞಾನದ ಕ್ಷೇತ್ರದ ಬೆಳವಣಿಗೆಗೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

ಸಮಾವೇಶದಲ್ಲಿ ಮುಖ್ಯವಾಗಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಪ್ರಭಾವದ ಕುರಿತು ಪ್ರಸ್ತಾಪವಾಯಿತು. ಗೋಕುಲ ಎಜುಕೇಷನ್ ಫೌಂಡೇಷನ್ (ಮೆಡಿಕಲ್) ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ಮುಖ್ಯ ತಾಂತ್ರಿಕ ಅಧಿಕಾರಿ ಪ್ರೊ.ಗುರುಚರಣ್ ಮಾತನಾಡಿ, 'ಎಐ ಆಧಾರಿತ ಜಗತ್ತಿನಲ್ಲಿ ಮಾನವನ ತೀರ್ಪು, ಸೃಜನಶೀಲತೆ ಹಾಗೂ ನೈತಿಕತೆಯೇ ಕೇಂದ್ರ ಬಿಂದುವಾಗಿರಲಿದ್ದು, ಸಂಸ್ಥೆಗಳು ಅದಕ್ಕೆ ಪೂರಕವಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸಬೇಕು. ಕಲಿಕೆಗೆ ಎಐ ಕೇವಲ ಒಂದು ಉತ್ತೇಜನ ನೀಡುವ ಸಾಧನವಾಗಬೇಕೇ ವಿನಾ, ಅದು ಮಾನವ ಕಲಿಕೆಗೆ ಪರ್ಯಾಯ ಆಗಬಾರದು ಎಂಬುದನ್ನು ಶಿಕ್ಷಣ ಸಂಸ್ಥೆಗಳು ಖಾತ್ರಿಪಡಿಸಿಕೊಳ್ಳಬೇಕು. ನಮ್ಮ ಶೈಕ್ಷಣಿಕ ಕಾರ್ಯಕ್ರಮಗಳು ಜಗತ್ತಿನ ಸಂಕೀರ್ಣ ಸವಾಲುಗಳನ್ನು ಎದುರಿಸುವ 'ಸಿಸ್ಟಮ್ಸ್ ಥಿಂಕಿಂಗ್' ಮಾದರಿಗೆ ಬದಲಾಗಬೇಕು' ಎಂದರು.

ಗಮನ ಸೆಳೆದ ಸಂವಾದ: ಗೋಕುಲ ಎಜುಕೇಷನ್ ಫೌಂಡೇಷನ್ (ಮೆಡಿಕಲ್) ಅಧ್ಯಕ್ಷರು ಹಾಗೂ ಆರ್‌ಐಎಸ್‌ಎಂ ಕುಲಪತಿ ಡಾ.ಎಂ.ಆರ್. ಜಯರಾಂ ಮತ್ತು ಅಲ್ಬನಿ ವಿಶ್ವವಿದ್ಯಾಲಯದ ಅಧ್ಯಕ್ಷರಾದ ಹವಿದನ್ ರೊಡ್ರಿಗಸ್ ನಡುವೆ ಸಂವಾದ ನಡೆಯಿತು.



ಕಾರ್ಯಕ್ರಮದಲ್ಲಿ (ಎಡದಿಂದ ಬಲಕ್ಕೆ) ಅಲ್ಬನಿ ವಿವಿ ಪ್ರತಿಷ್ಠಾನದ ಕಾರ್ಯನಿರ್ವಾಹಕ ನಿರ್ದೇಶಕ ಫರ್ದಿನ್ ಸನಾಯಿ, ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್ಮೆಂಟ್ (ಆರ್‌ಐಎಸ್‌ಎಂ) ಕಾರ್ಯನಿರ್ವಾಹಕ ನಿರ್ದೇಶಕ ಪ್ರೊ.ಗುರುಚರಣ್, ಶೈಕ್ಷಣಿಕ ವ್ಯವಹಾರಗಳ ಪ್ರೊವೋಸ್ಟ್ ಕ್ಯಾರೋಲ್.ಎಚ್.ಕಿಮ್, ಅಲ್ಬನಿ ವಿವಿ ಅಧ್ಯಕ್ಷ ಹವಿದಾನ್ ರೊಡ್ರಿಗಸ್, ಆರ್‌ಐಎಸ್‌ಎಂ ಕುಲಪತಿ ಡಾ.ಎಂ.ಆರ್.ಜಯರಾಂ, ಸಂಶೋಧನೆ ಮತ್ತು ಆರ್ಥಿಕ ಅಭಿವೃದ್ಧಿ ವಿಭಾಗದ ಉಪಾಧ್ಯಕ್ಷ ತೆಂಕುರುಸ್ಸಿ (ಕೇಶ್) ಕೇಶವದಾಸ್, ಎಐ ಪ್ಲಸ್ ಇನ್ಸ್ಟಿಟ್ಯೂಟ್ ನಿರ್ದೇಶಕ ಮತ್ತು ಎಂಪೈರ್ ಇನೋವೇಷನ್ ಪ್ರಾಧ್ಯಾಪಕ ಬಾಲಕೃಷ್ಣನ್ (ಪ್ರಭು) ಪ್ರಭಾಕರನ್ ಪಾಲ್ಗೊಂಡಿದ್ದರು.

ಸಮಾವೇಶದ 3 ಪ್ರಮುಖ ಗೋಷ್ಠಿಗಳು ಮತ್ತು ಶಿಫಾರಸುಗಳು

1. ಎಂಜಿನಿಯರಿಂಗ್ ಶಿಕ್ಷಣದ ಭವಿಷ್ಯ: ಪ್ರೊ. ಶಿವಕುಮಾರ್ ಶಾಸ್ತ್ರಿ ಉಸ್ತುವಾರಿಯಲ್ಲಿ ನಡೆದ ಈ ಗೋಷ್ಠಿಯಲ್ಲಿ ಸಾಂಪ್ರದಾಯಿಕ ಪಠ್ಯಕ್ರಮದ ಮಿತಿಗಳ ಬಗ್ಗೆ ಚರ್ಚಿಸಲಾಯಿತು. ಶೈಕ್ಷಣಿಕ ಮತ್ತು ಉದ್ಯಮ ತಜ್ಞರು ಒಟ್ಟಾಗಿ, ಕೇವಲ ಅಂಕ ಆಧಾರಿತ ಶಿಕ್ಷಣದಿಂದ ಹೊರಬಂದು 'ಫಲಿತಾಂಶ ಆಧಾರಿತ' ಮತ್ತು ವ್ಯವಸ್ಥಿತ ಕಲಿಕೆಗೆ ಒತ್ತು ನೀಡಲು ಶಿಫಾರಸು ಮಾಡಿದರು. ವಿದ್ಯಾರ್ಥಿಗಳಿಗೆ ಕಲಿಕೆಯ ಭಾಗವಾಗಿ ಯೋಜನೆಗಳ ಆಯ್ಕೆಯಲ್ಲಿ ಸ್ವಾತಂತ್ರ್ಯ ನೀಡುವುದು, ಉದ್ಯಮ ಸಂಬಂಧಿತ ಪ್ರಾಯೋಗಿಕ ಯೋಜನೆಗಳು, ದೀರ್ಘಾವಧಿಯ ಪ್ರಾಜೆಕ್ಟ್‌ಗಳು ಹಾಗೂ ಹೊಸ ಬೋಧನಾ ಪದ್ಧತಿಗೆ ಅಧ್ಯಾಪಕರಿಗೆ ಸೂಕ್ತ ತರಬೇತಿ ಮತ್ತು ಬೆಂಬಲ ನೀಡುವುದು ಅತ್ಯಗತ್ಯ ಎಂದು ಪ್ಯಾನೆಲಿಸ್ಟ್‌ಗಳು ಅಭಿಪ್ರಾಯಪಟ್ಟರು.
2. ಉನ್ನತ ಶಿಕ್ಷಣದಲ್ಲಿ ಎಐ—ಸೃಜನಶೀಲ ಪರಿವರ್ತಕ: ಪ್ರೊ.ಸಿ.ಪಾಂಡುರಂಗನ್ ನೇತೃತ್ವದಲ್ಲಿ ನಡೆದ ಚರ್ಚೆಯು ಇಂದಿನ ತಂತ್ರಜ್ಞಾನದ ಹಾಟ್ ಟಾಪಿಕ್ ಆದ ಜನರೇಟಿವ್ ಎಐ ಸುತ್ತ ನಡೆದಿತ್ತು. ಜನರೇಟಿವ್ ಎಐ ಕೇವಲ ದೈನಂದಿನ ಕೆಲಸದ ಅನುಷ್ಠಾನವನ್ನು ಸುಲಭಗೊಳಿಸುತ್ತದೆಯಾದರೂ, ಮಾನವನ ವಿಮರ್ಶಾತ್ಮಕ ಚಿಂತನೆ, ನೈತಿಕತೆ ಮತ್ತು ಪ್ರಕ್ರಿಯೆ ಆಧಾರಿತ ಮೌಲ್ಯಮಾಪನದ ಮೌಲ್ಯವನ್ನು ಅದು ಮತ್ತಷ್ಟು ಹೆಚ್ಚಿಸುತ್ತದೆ ಎಂದು ತಜ್ಞರು ಒಪ್ಪಿಕೊಂಡರು. ಸಂಸ್ಥೆಗಳು ತಮ್ಮ ಕಲಿಕೆ ಮತ್ತು ಮೌಲ್ಯಮಾಪನ ಪದ್ಧತಿಯನ್ನು ಮರುವಿನ್ಯಾಸಗೊಳಿಸಬೇಕು. ಇದರಿಂದ ಮಾನವ ಮತ್ತು ಎಐ ಜತೆಯಾಗಿ ಕೆಲಸ ಮಾಡುವ ಹಾಗೂ ಉನ್ನತ ಮಟ್ಟದ ಕೌಶಲಗಳನ್ನು ಬೆಳೆಸುವ ವಾತಾವರಣ ನಿರ್ಮಾಣವಾಗುತ್ತದೆ ಎಂದು ತಿಳಿಸಲಾಯಿತು.
3. ಪ್ರಾಯೋಗಿಕ ಸಂಶೋಧನೆ ಮತ್ತು ಉದ್ಯಮ ಪಾಲುದಾರಿಕೆಗಳು: ವೆಂಕಟೇಶ್ ವಲ್ಲೂರಿ ನೇತೃತ್ವದಲ್ಲಿ ನಡೆದ ಈ ಚರ್ಚೆಯು ಉದ್ಯಮ ಮತ್ತು ಶೈಕ್ಷಣಿಕ ಸಂಸ್ಥೆಗಳ ಜಂಟಿ ಸಂಶೋಧನೆಗಳ ಪ್ರಾಮುಖ್ಯತೆಯನ್ನು ಎತ್ತಿಹಿಡಿಯಿತು. ಕೇವಲ ಪೇಟೆಂಟ್‌ಗಳನ್ನು ಪಡೆದು ಕಾಯ್ದಿರಿಸುವುದಕ್ಕಿಂತ, ಅವುಗಳ ಪ್ರಾಯೋಗಿಕ ಅನ್ವಯಿಕತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಮಾರುಕಟ್ಟೆಯ ಮತ್ತು ಸಮಾಜದ ನೈಜ ಅಗತ್ಯಗಳಿಗೆ ತಕ್ಕಂತೆ ಆವಿಷ್ಕಾರಗಳನ್ನು ಮಾಡಲು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರನ್ನು ಸಜ್ಜುಗೊಳಿಸಬೇಕು ಎಂದು ಉದಾಹರಣೆಗಳ ಸಮೇತ ವಿವರಿಸಲಾಯಿತು.

'ವಿಷನ್ 2035' ಮತ್ತು ಭವಿಷ್ಯದ ಕನಸು: ಕಾರ್ಯಕ್ರಮದ ಸಮಾರೋಪದ ವೇಳೆಯಲ್ಲಿ ಡಾ.ಎಂ.ಆರ್. ಜಯರಾಂ ಆರ್‌ಐಎಸ್‌ಎಂ ಸಂಸ್ಥೆಯ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆ 'ವಿಷನ್ 2035' ಪರಿಕಲ್ಪನೆಯನ್ನು ಅನಾವರಣಗೊಳಿಸಿದರು. 'ಆರ್‌ಐಎಸ್‌ಎಂ ಕೇವಲ ಉದ್ಯೋಗ ಪಡೆಯುವ ಯುವಕರನ್ನು ಸೃಷ್ಟಿಸುವ ಸಂಸ್ಥೆಯಾಗಬಾರದು. ಬದಲಿಗೆ, ಭವಿಷ್ಯದ ಜಗತ್ತನ್ನು ಮತ್ತು ಸಮಾಜವನ್ನು ಸಕಾರಾತ್ಮಕವಾಗಿ ರೂಪಿಸುವ ಒಂದು ಇಡೀ ಪೀಳಿಗೆಯನ್ನು ಸಿದ್ಧಪಡಿಸುವ ಜಾಗತಿಕ ವಿಶ್ವವಿದ್ಯಾನಿಲಯವಾಗಿ ಗುರುತಿಸಿಕೊಳ್ಳುವುದು ನಮ್ಮ ಗುರಿಯಾಗಿದೆ' ಎಂದು ಹೆಮ್ಮೆಯಿಂದ ಘೋಷಿಸಿದರು.


ಗಾಯಗೊಂಡಿದ್ದ ಕೈದಿ ಸಾವು

ಮಡಿಕೇರಿ: ಕೊಡಗು ಜಿಲ್ಲಾ ಕಾರಾಗೃಹದಲ್ಲಿ ಸೋಮವಾರ ಇಬ್ಬರು ವಿಚಾರಣಾಧೀನ ಕೈದಿಗಳ ಮಧ್ಯೆ ನಡೆದಿದ್ದ ಹೊಡೆದಾಟದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಹೇಮಂತ್ (26) ಮೈಸೂರಿನ ಆಸ್ಪತ್ರೆಯಲ್ಲಿ ಬುಧವಾರ ಮೃತಪಟ್ಟಿದ್ದಾನೆ.

ಈತನ ಸಂಬಂಧಿ ಹಾಗೂ ಎರಡು ವರ್ಷಗಳಿಂದ ಜೈಲಿನಲ್ಲಿದ್ದ ರಾಜೇಶ್ (36) ಸೋಮವಾರ ಹರಿತವಾದ ಆಯುಧದಿಂದ ಇರಿದಿದ್ದ. ತೀವ್ರವಾಗಿ ಗಾಯಗೊಂಡಿದ್ದ ಹೇಮಂತ್‌ನನ್ನು ಮೈಸೂರಿನ ಆಸ್ಪತ್ರೆಗೆ, ರಾಜೇಶ್‌ನನ್ನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಟಿ.ಶೆಟ್ಟಿಗೇರಿ ಗ್ರಾಮದಲ್ಲಿನ ಮೂರೂವರೆ ಎಕರೆ ಜಾಗಕ್ಕೆ ಸಂಬಂಧಿಸಿ ಈ ಇಬ್ಬರ ಕುಟುಂಬಗಳ ನಡುವೆ ಈ ಹಿಂದಿನಿಂದಲೂ ವಿವಾದ ಇದೆ. ಕೊಲೆ ಯತ್ನ, ಹೊಡೆದಾಟ ಪ್ರಕರಣಗಳು ನಡೆದಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ ಆಂತರಿಕ ತನಿಖೆ ಕೈಗೊಂಡಿದೆ.

76ನೇ ವಯಸ್ಸಿನಲ್ಲಿ ರ‍್ಯಾಂಕ್



ವಿ.ತಿಪ್ಪೇಸ್ವಾಮಿ

ತುಮಕೂರು: ಕಲಿಕೆಗೆ ವಯಸ್ಸಿನ ಮಿತಿಯಿಲ್ಲ ಎಂಬ ಮಾತಿದೆ. ಇದಕ್ಕೆ ಸಾಕ್ಷಿ ಎಂಬಂತೆ ಇಲ್ಲೊಬ್ಬರು 76ನೇ ವಯಸ್ಸಿನಲ್ಲಿ ಸ್ನಾತಕೋತ್ತರ ಕಾನೂನು ಪದವಿಯಲ್ಲಿ (ಎಲ್‌ಎಲ್‌ಎಂ) ನಾಲ್ಕನೇ ರ‍್ಯಾಂಕ್ ಪಡೆದಿದ್ದಾರೆ.

ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ ನಡೆದ 19ನೇ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಕಾನೂನು ವಿಭಾಗದ ವಿ.ತಿಪ್ಪೇಸ್ವಾಮಿ ಪದವಿ ಪ್ರಮಾಣಪತ್ರ ಪಡೆದು, ಎಲ್ಲರ ಗಮನ ಸೆಳೆದರು.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಸಿದ್ದಾಪುರ ಗ್ರಾಮದ ತಿಪ್ಪೇಸ್ವಾಮಿ ನಿವೃತ್ತ ಸರ್ಕಾರಿ ಅಧಿಕಾರಿ. ಸದ್ಯ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಉಪ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿ, 2011ರಲ್ಲಿ ವಯೋನಿವೃತ್ತಿ ಹೊಂದಿದರು. ನಂತರ ತುಮಕೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ವಿಭಾಗದಲ್ಲಿ ಐದು ವರ್ಷ ಕೆಲಸ ಮಾಡಿದರು. ಇದರ ಮಧ್ಯೆ ನಗರದ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪೂರ್ಣಗೊಳಿಸಿದರು.

ಬೆಂಗಳೂರಿನ ವಿವಿಧ ಸಂಸ್ಥೆಗಳಲ್ಲಿ ಕಾನೂನು ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಸ್ನಾತಕೋತ್ತರ ಕಾನೂನು ವಿಭಾಗ ಶುರುವಾದ ಮಾಹಿತಿ ಸಿಕ್ಕ ಕೂಡಲೇ ಕೋರ್ಸ್‌ಗೆ ದಾಖಲಾತಿ ಪಡೆದರು. ಇದೀಗ 4ನೇ ರ‍್ಯಾಂಕ್ ಗಳಿಸಿದ್ದಾರೆ.

'ನಮ್ಮ ವಿಭಾಗದಲ್ಲಿ ಒಟ್ಟು 28 ವಿದ್ಯಾರ್ಥಿಗಳಿದ್ದರು. ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣ ನೋಡುತ್ತಿದ್ದೆ. ದಿನೇ ದಿನೇ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗುತ್ತಿದ್ದವು. ಹೆಚ್ಚಿನ ಜ್ಞಾನ, ಕಾನೂನು ತಿಳಿವಳಿಕೆಯ ಉದ್ದೇಶದಿಂದ ಮತ್ತೆ ಕಾಲೇಜು ಸೇರಿದೆ. ಕಷ್ಟಪಟ್ಟು ಓದಿದರೆ ಎಲ್ಲವೂ ಸಾಧ್ಯ. ಉತ್ತಮ ಭವಿಷ್ಯ ಕಟ್ಟಿಕೊಳ್ಳಲು ವಿದ್ಯಾರ್ಥಿ ಜೀವನ ತುಂಬಾ ಮುಖ್ಯ' ಎಂದು ತಿಪ್ಪೇಸ್ವಾಮಿ ಪ್ರತಿಕ್ರಿಯಿಸಿದರು.



ಶಕೀಲ್ ಅಹಮ್ಮದ್, ಬಸೀರ್ ಅಹಮ್ಮದ್

ಹೋಟೆಲ್‌ಗೆ ಬೆಂಕಿ: ಮೂವರು ಸಾವು



ರಾಜಕುಮಾರ ಗೊಟಗುಣಕಿ

ತಾಳಿಕೋಟೆ (ವಿಜಯಪುರ ಜಿಲ್ಲೆ): ಪಟ್ಟಣದ 'ಭೂಮಿಕಾ' ಹೋಟೆಲ್‌ನಲ್ಲಿ ಮೇ 29ರಂದು ಅಡುಗೆ ಅನಿಲ ಸೋರಿಕೆಯಾಗಿ ಹೊತ್ತಿಕೊಂಡ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ, ತೀವ್ರವಾಗಿ ಗಾಯಗೊಂಡಿದ್ದ ಮೂವರು ಗ್ರಾಹಕರು ಮೃತಪಟ್ಟಿದ್ದಾರೆ.

'ತಾಳಿಕೋಟೆಯ ಬಸೀರ್ ಅಹಮದ್ ಕಡದರಾಳ (42), ಶಕೀಲ್ ಅಹಮದ್ ಕುಂಬಾರವಾಡಿ (35) ಮತ್ತು ರಾಜಕುಮಾರ ಗೊಟಗುಣಕಿ (71) ಮೃತರು. ಮೂವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

ರ‍್ಯಾಂಕ್ ಪಡೆದವರ ಅಸಮಾಧಾನ; ವಿದ್ಯಾರ್ಥಿಗಳಿಂದ ಪ್ರಮಾಣಪತ್ರ ವಾಪಸ್

ಚಿನ್ನದ ಪದಕ ಬದಲು ಚೆಕ್ ನೀಡಿದ ವಿ.ವಿ

ಪ್ರಜಾವಾಣಿ ವಾರ್ತೆ

ತುಮಕೂರು: ಇಲ್ಲಿನ ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ ನಡೆದ 19ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕದ ಬದಲಾಗಿ, ಚೆಕ್ ನೀಡಿದ್ದು ರ‍್ಯಾಂಕ್ ಪಡೆದವರ ಆಕ್ರೋಶಕ್ಕೆ ಕಾರಣವಾಯಿತು.

ಪದವಿ ಪ್ರಮಾಣ ಪತ್ರದಲ್ಲಿಯೂ ಚಿನ್ನದ ಪದಕ ಎಂಬುದರ ಬದಲಾಗಿ, 'ನಗದು ಪುರಸ್ಕಾರ' ಎಂದೇ ನಮೂದಿಸಲಾಗಿತ್ತು. ಮೊದಲ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳು ಪ್ರಮಾಣ ಪತ್ರಗಳನ್ನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸಿ ವಾಪಸ್ ಮನೆಗಳಿಗೆ ತೆರಳಿದ್ದಾರೆ. ಗುರುವಾರ ಸಂಜೆಯ ಒಳಗೆ ಎಲ್ಲ ಪ್ರಮಾಣಪತ್ರ ವಾಪಸ್ ನೀಡುವಂತೆ ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ.

ಚಿನ್ನದ ಪದಕ ಸಿದ್ಧಪಡಿಸಲು ಮಧ್ಯಪ್ರದೇಶದ ಖಾಸಗಿ ಸಂಸ್ಥೆಗೆ ವಿಶ್ವವಿದ್ಯಾಲಯದಿಂದ ಟೆಂಡರ್ ನೀಡಲಾಗಿತ್ತು. ಬುಧವಾರ ಬೆಳಿಗ್ಗೆಯ ತನಕ ಕಾದು ನೋಡಿದರೂ ಪದಕಗಳು ವಿ.ವಿ ತಲುಪಲಿಲ್ಲ. ಟೆಂಡರ್ ಪಡೆದಿದ್ದ ಸಂಸ್ಥೆಯ ಸಿಬ್ಬಂದಿ ಸಂಪರ್ಕಕ್ಕೂ ಸಿಕ್ಕಿಲ್ಲ. ಹೀಗಾಗಿ ತರಾತುರಿಯಲ್ಲಿ ಚೆಕ್ ಸಿದ್ಧಪಡಿಸಿ ಮೊದಲ ರ‍್ಯಾಂಕ್ ಪಡೆದವರಿಗೆ ವಿತರಿಸಲಾಯಿತು.

ಪದವಿ, ಸ್ನಾತಕೋತ್ತರ ಪದವಿ ಸೇರಿ ಒಟ್ಟು 90 ವಿದ್ಯಾರ್ಥಿಗಳಿಗೆ 117 ಪದಕ ನೀಡಬೇಕಾಗಿತ್ತು. ಸಮಾರಂಭ ಶುರುವಾಗುವ ತನಕ ವಿದ್ಯಾರ್ಥಿಗಳಿಗೆ ಈ ಬಗ್ಗೆ ಮಾಹಿತಿ ಇರಲಿಲ್ಲ. 'ಚಿನ್ನದ ಪದಕ ನೀಡಲಾಗುತ್ತದೆ. ಎಲ್ಲರಿಗೂ ತೋರಿಸಿ ಸಂತಸ ಹಂಚಿಕೊಳ್ಳಬಹುದು' ಎಂಬ ಆಸೆಯಿಂದಲೇ ಘಟಿಕೋತ್ಸವಕ್ಕೆ ಬಂದಿದ್ದವರು ನಿರಾಸೆ ಅನುಭವಿಸಿದರು.

ಕೆಲವರು ಸಪ್ಪೆ ಮೊರೆ ಹಾಕಿ ಮನೆ ಕಡೆ ತೆರಳಿದರೆ, ಇನ್ನೂ ಕೆಲವರು 'ಯಾಕೆ ಚಿನ್ನದ ಪದಕ ನೀಡಿಲ್ಲ' ಎಂದು ವಿ.ವಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಮಧ್ಯಾಹ್ನದ ನಂತರ ಘಟಿಕೋತ್ಸವ ಸಮಾರಂಭಕ್ಕೆ ಅಡ್ಡಿಪಡಿಸಿದರು. ವೇದಿಕೆ ಬಳಿಗೆ ತೆರಳಿ ಪ್ರಮಾಣಪತ್ರ ವಿತರಣೆಗೆ ವಿರೋಧ ವ್ಯಕ್ತಪಡಿಸಿದರು.

ಹಿಂದಿನ ವರ್ಷದಂತೆ ಈ ಬಾರಿಯೂ ಚಿನ್ನದ ಪದಕ ನೀಡಬೇಕು ಎಂದು ಪಟ್ಟು ಹಿಡಿದರು. 'ಈಗಲೇ ಇದಕ್ಕೊಂದು ಪರಿಹಾರ ಒದಗಿಸಬೇಕು. ಹಣ ಕೊಟ್ಟರೆ ಎರಡು ದಿನಕ್ಕೆ ಖರ್ಚಾಗುತ್ತದೆ. ಪದಕ ನೀಡಿದರೆ ಜೀವನ ಪೂರ್ತಿ ಇಟ್ಟುಕೊಳ್ಳಬಹುದು. ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿದರು.

ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಸ್.ಮೋಹನ ರ‍್ಯಾಂಕ್ ವಿಜೇತರನ್ನು ಸಮಾಧಾನ ಪಡಿಸಿದರು. 'ನಾವು ಎಲ್ಲಿಗೂ ಹೋಗಲ್ಲ, ಎಲ್ಲರ ಸಮಸ್ಯೆ ಬಗೆಹರಿಸುತ್ತೇವೆ. ಉಳಿದವರಿಗೆ ಪ್ರಮಾಣಪತ್ರ ವಿತರಿಸಲು ಅನುವು ಮಾಡಿಕೊಡಿ. ನಿಮ್ಮ ಜತೆ ಎಲ್ಲ ಮಾಹಿತಿ ಹಂಚಿಕೊಳ್ಳುತ್ತೇವೆ. ನೀವು ನಮ್ಮ ವಿದ್ಯಾರ್ಥಿಗಳೇ, ಯಾರಿಗೂ ಅನ್ಯಾಯ ಮಾಡುವುದಿಲ್ಲ' ಎಂದು ತಿಳಿಸಿದರು.

ಕ್ರಿಮಿನಲ್ ಪ್ರಕರಣ ದಾಖಲು




ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಸ್.ಮೋಹನ ಅವರು ವಿದ್ಯಾರ್ಥಿಗಳನ್ನು ಸಮಾಧಾನ ಪಡಿಸಿದರು

'ಚಿನ್ನ, ಬೆಳ್ಳಿ ದರ ಏರಿಕೆಯಾಗಿದ್ದರಿಂದ ಪದಕ ತಯಾರಿಸಲು ಸ್ಥಳೀಯ ಕಂಪನಿಗಳು ಮುಂದೆ ಬರಲಿಲ್ಲ. ಇಂದೋರ್‌ನ ಸಂಸ್ಥೆಯೊಂದಕ್ಕೆ ಟೆಂಡರ್ ನೀಡಲಾಗಿತ್ತು. ಕೊನೆಯ ಕ್ಷಣದಲ್ಲಿ ಸಂಸ್ಥೆಯವರು ಸ್ಪಂದಿಸಲಿಲ್ಲ. ಆ ಸಂಸ್ಥೆ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಎಂದು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ಪ್ರತಿಕ್ರಿಯಿಸಿದರು.

'ವಿದ್ಯಾರ್ಥಿಗಳು ಹಣ ಬೇಡ, ಚಿನ್ನದ ಪದಕ ಕೊಡುವಂತೆ ಒತ್ತಾಯಿಸಿದ್ದಾರೆ. ಮುಂದಿನ ಮೂರು ದಿನಗಳಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ನಿಲುವುಗಲ್ಲು ಶಾಸನ ಪತ್ತೆ



ತೆಕ್ಕಲಕೋಟೆ ಸಮೀಪದ ನಿಟ್ಟೂರು ಗ್ರಾಮದ ಆಂಜನೇಯ ದೇವಸ್ಥಾನದ ಮುಂದಿನ ನಿಲುವುಗಲ್ಲು ಶಾಸನದ ಪಡಿಯಚ್ಚನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಅಧಿಕಾರಿಗಳು ಪಡೆದುಕೊಂಡರು

ಪ್ರಜಾವಾಣಿ ವಾರ್ತೆ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಇಲ್ಲಿನ ಹೋಬಳಿ ವ್ಯಾಪ್ತಿಯಲ್ಲಿ ಮೂರು ದಿನಗಳಿಂದ 'ಭಾರತಶ್ರೀ' ಯೋಜನೆಯಡಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ (ಎಎಸ್‌ಐ) ಶಾಸನಗಳ ಡಿಜಿಟಲೀಕರಣ ಪ್ರಗತಿಯಲ್ಲಿದೆ. ಇದೇ ವೇಳೆ ಬುಧವಾರ ನಿಟ್ಟೂರು ಗ್ರಾಮದಲ್ಲಿ ವಿಜಯನಗರ ಕಾಲದ ನಿಲುವುಗಲ್ಲು ಶಾಸನ ಪತ್ತೆಯಾಗಿದೆ.

'ನಿಟ್ಟೂರು ಗ್ರಾಮದ ಆಂಜನೇಯ ದೇವಸ್ಥಾನದ ಮುಂದೆ ಇರುವ ನಿಲುವುಗಲ್ಲು ಶಾಸನದ ಅರ್ಧ ಭಾಗ ಭೂಮಿಯಲ್ಲಿ ಹೂತು ಹೋಗಿದ್ದು ಉಳಿದರ್ಧ ಕಂಡುಬರುತ್ತಿದೆ. ನಿಟ್ಟೂರು ಮತ್ತು ಉಡೇಗೋಳ ಗ್ರಾಮಗಳಲ್ಲಿನ ಅಶೋಕನ ಕಾಲದ ಶಿಲಾಶಾಸನ, ತೆಕ್ಕಲಕೋಟೆಯ ಬಸವೇಶ್ವರ ದೇವಸ್ಥಾನದ ಮುಂದಿನ ಬಿಜ್ಜಳನ ಕಾಲದ ಶಾಸನ ಹಾಗೂ ಗೌಡ್ರ ಮೂಲೆಯಲ್ಲಿರುವ ಕೆರೆ ದಾನ ಶಾಸನಗಳ ಪಡಿಯಚ್ಚು ತೆಗೆದುಕೊಳ್ಳಲಾಗಿದೆ' ಎಂದು ಎಎಸ್‌ಐ ಸಹಾಯಕ ಅಧೀಕ್ಷಕ, ಶಾಸನತಜ್ಞ ಅನಿಲ್ ಕುಮಾರ್ ಆರ್. ವಿ. ತಿಳಿಸಿದರು.

'ಲಭ್ಯವಾದ ಶಾಸನದಲ್ಲಿ 17 ಸಾಲುಗಳಿವೆ. ಇದರ ಕಾಲಮಾನ ಶಾಲಿವಾಹನಶಕ ವರ್ಷ 1465 ಶುಭಕೃತ ಸಂವತ್ಸರ ಭಾದ್ರಪದ ಶುದ್ಧ ಗುರುವಾರ ಎಂದು ನಮೂದಾಗಿದೆ. ಇದು ವಿಜಯನಗರದ ಸದಾಶಿವರಾಯನ ಅಳ್ವಿಕೆಯ ಅವಧಿಯದ್ದು ಎಂದು ತೋರುತ್ತದೆ. ಶ್ರೀವಿಟ್ಟ ಅಡೆಯ ದೇವರ ಅಮೃತ ಪಡಿಗೆ ದಾನ ನೀಡಿದ ಅಂಶ ಒಳಗೊಂಡಿದೆ' ಎಂದರು.

ಮೈಸೂರು ಶಾಸನ ನಿರ್ದೇಶಕರ ಕಚೇರಿಯ ಸಿಬ್ಬಂದಿ ನಾಗೇಂದ್ರ, ನಿಶಾಂತ್ ಕುಮಾರ್ ಗೌರವ್, ಇತಿಹಾಸ ಸಂಶೋಧನಾರ್ಥಿಗಳಾದ ಮನೋಹರ ಸಿ.ಎಂ, ಎಂ ಹೊನ್ನೂರ, ನಿಟ್ಟೂರು ಮಂಜುನಾಥ ಭಾಗವಹಿಸಿದ್ದರು.

ಎಬೋಲಾ: ಶಂಕಿತ ಪ್ರಕರಣ ದಾಖಲಿಸಲು ಸೂಚನೆ

ಬೆಂಗಳೂರು: ಎಬೋಲಾ ಸೋಂಕು ಶಂಕಿತ ಪ್ರಕರಣಗಳ ವರದಿಯನ್ನು ಕಡ್ಡಾಯವಾಗಿ ಐಎಚ್‌ಐಪಿ (ಸಮಗ್ರ ಆರೋಗ್ಯ ಮಾಹಿತಿ ವೇದಿಕೆ) ಪೋರ್ಟಲ್‌ನಲ್ಲಿ ದಾಖಲಿಸಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಶಂಕಿತ ಪ್ರಕರಣಗಳ ವಿವರವನ್ನು ಐಎಚ್‌ಐಪಿ ಪೋರ್ಟಲ್‌ನಲ್ಲಿ ತಕ್ಷಣ ದಾಖಲಿಸಬೇಕು. ಶಂಕಿತರನ್ನು ಪ್ರತ್ಯೇಕ ವಾಸಕ್ಕೆ ಒಳಪಡಿಸಿ, ಮಾರ್ಗಸೂಚಿಯಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಲಾಗಿದೆ.

ಜೇವರ್ಗಿ: ವಿದ್ಯುತ್ ತಂತಿ ಹಿಡಿದು ರೈತ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಜೇವರ್ಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಸಿದ್ನಾಳ ಗ್ರಾಮದಲ್ಲಿ ಸಾಲದ ಹೊರೆಯಿಂದ ಮನನೊಂದ ರೈತರೊಬ್ಬರು ಬುಧವಾರ ಹೊಲದಲ್ಲಿದ್ದ ಬೋರವೆಲ್ ವಿದ್ಯುತ್ ತಂತಿ ಹಿಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಲಕ್ಷ್ಮಣ ಶಿವಪ್ಪ ಹಟ್ಟಿ (50) ಆತ್ಮಹತ್ಯೆ ಮಾಡಿಕೊಂಡ ರೈತ. ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕಿನಲ್ಲಿ ತಮ್ಮ ಹಾಗೂ ಪತ್ನಿ ಹೆಸರಲ್ಲಿ ತಲಾ ₹2 ಲಕ್ಷ ಹಾಗೂ ಖಾಸಗಿಯಾಗಿ ₹6 ಲಕ್ಷ ಸಾಲ ಮಾಡಿದ್ದರು.

'ಹೊಲದಲ್ಲಿನ ಬೆಳೆ ಕೈಕೊಟ್ಟ ಪರಿಣಾಮ ಸಾಲ ತೀರಿಸಲಾಗದೇ ಲಕ್ಷ್ಮಣ ಅವರು ನೊಂದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪತ್ನಿ ಗಂಗೂಬಾಯಿ ಅವರು ನೆಲೋಗಿ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಪಿಎಸ್‌ಐ ಚಿದಾನಂದ ಸವದಿ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಂಗೀತಗಾರ್ತಿ ಲಲಿತ್ ಜೆ. ರಾವ್ ನಿಧನ



ಲಲಿತ್ ಜೆ. ರಾವ್

ಬೆಂಗಳೂರು: ಭಾರತೀಯ ಶಾಸ್ತ್ರೀಯ ಸಂಗೀತ ಗಾಯಕಿ ಮತ್ತು ಆಗ್ರಾ ಘರಾನಾ ಶೈಲಿಗೆ ಪ್ರಸಿದ್ಧರಾಗಿದ್ದ ಲಲಿತ್ ಜೆ. ರಾವ್ (84) ಬುಧವಾರ ನಗರದ ಮಲ್ಲೇಶ್ವರದಲ್ಲಿ ನಿಧನರಾದರು.

ಬಾಲ್ಯದಲ್ಲಿ ಪಂಡಿತ್ ರಾಮರಾವ್ ನಾಯಕ್ ಅವರಲ್ಲಿ ಸಂಗೀತ ಕಲಿತರು. 12ನೇ ವಯಸ್ಸಿನಲ್ಲಿ ಮೊದಲ ಸಂಗೀತ ಕಛೇರಿ ನೀಡಿದ್ದರು. ಆನಂತರ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಂಡಿದ್ದರು. ಜಯವಂತ ರಾವ್ ಅವರನ್ನು ಮದುವೆಯಾದ ಬಳಿಕ ದೆಹಲಿಗೆ ಹೋಗಿದ್ದಾಗ ದಿನಕರ ಕಾಯ್ಕಿಣಿ ಅವರಲ್ಲಿ ಸಂಗೀತ ಅಭ್ಯಾಸ ಮಾಡಿದರು. ಪತಿಗೆ ಮುಂಬೈಗೆ ವರ್ಗ ಆಗಿದ್ದರಿಂದ ಮುಂಬೈಗೆ ಬಂದರು. ಅಲ್ಲಿ ಉಸ್ತಾದ್ ಖಾದಿಮ್ ಹುಸೇನ್ ಖಾನ್ ಅವರ ಶಿಷ್ಯೆಯಾಗಿ ಪ್ರಸಿದ್ಧ ಸಂಗೀತಗಾರ್ತಿಯಾಗಿ ಬೆಳೆದರು.

ಖಯಾಲ್, ಧ್ರುಪದ್, ಧಮಾರ್, ಠುಮ್ರಿ, ತರಣ, ಹರಿ ಮುಂತಾದ ಗಾಯನ ಪ್ರಕಾರಗಳಲ್ಲಿ ಪ್ರವೀಣರಾಗಿದ್ದರು. 'ಸಜನ್ ಮಿಲಾಪ್' ಎಂಬ ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಭಾರತ ಸರ್ಕಾರದಿಂದ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಗೌರವ ಸೇರಿದಂತೆ ಹಲವು ಗೌರವಗಳು ಅವರಿಗೆ ಬಂದಿದ್ದವು.

ಲಲಿತ್ ಜೆ. ರಾವ್ ಅವರಿಗೆ ಪತಿ ಜಯವಂತ ರಾವ್, ಪುತ್ರ ಸಂಜೀವ್ ರಾವ್ ಇದ್ದಾರೆ. ಪುತ್ರ ಫ್ರಾನ್ಸ್‌ನಲ್ಲಿದ್ದು, ಅವರು ಬಂದ ಬಳಿಕ ಶುಕ್ರವಾರ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ವಿಪತ್ತು ನಿರ್ವಹಣೆ: ಬ್ರಿಕ್ಸ್ ಗುಂಪಿನ ಸಭೆ ಆರಂಭ

ಪುರಿ(ಒಡಿಶಾ)(ಪಿಟಿಐ): ಬ್ರಿಕ್ಸ್ ವಿಪತ್ತು ಅಪಾಯ ತಗ್ಗಿಸುವ ಕುರಿತ ಕಾರ್ಯಕಾರಿ ಗುಂಪಿನ ಎರಡನೇ ತಾಂತ್ರಿಕ ಸಭೆ ಪುರಿಯಲ್ಲಿ ಬುಧವಾರ ಆರಂಭವಾಯಿತು.

'ಬ್ರಿಕ್ಸ್' ಗುಂಪಿನ 11 ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಪಾಲ್ಗೊಂಡಿರುವ ಈ ಸಭೆಯು ಜೂನ್ 5ರವರೆಗೆ ನಡೆಯಲಿದೆ. ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರು ಗುರುವಾರ ನಡೆಯುವ ಗೋಷ್ಠಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

'ಭಾರತವು ಬ್ರಿಕ್ಸ್‌ನ ಅಧ್ಯಕ್ಷ ಸ್ಥಾನ ವಹಿಸಿದ ಬಳಿಕ ಭೌತಿಕವಾಗಿ ನಡೆಯುತ್ತಿರುವ ಮೊದಲ ತಾಂತ್ರಿಕ ಸಭೆ ಇದಾಗಿದೆ. ಏಪ್ರಿಲ್ 29 ಹಾಗೂ 30ರಂದು ಈ ಸಭೆಯು ವರ್ಚುವಲ್ ಆಗಿ ನಡೆದಿತ್ತು' ಎಂದು ಒಡಿಶಾದ ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ಹೇಳಿದರು.

'ಒಡಿಶಾದಲ್ಲಿ ಇದೇ ಮೊದಲ ಬಾರಿಗೆ ಈ ಸಭೆಯು ನಡೆಯುತ್ತಿದ್ದು, ಬ್ರಿಕ್ಸ್ ರಾಷ್ಟ್ರಗಳ ನೀತಿ ನಿರೂಪಕರು ಹಾಗೂ ವಿಪತ್ತು ನಿರ್ವಹಣಾ ತಜ್ಞರು ಈ ಸಭೆಯಲ್ಲಿ ಪಾಲ್ಗೊಳ್ಳುವರು' ಎಂದೂ ತಿಳಿಸಿದ್ದಾರೆ.

ಐದು ಲಕ್ಷ ಮಂದಿಗೆ 'ಆಶಾಕಿರಣ'

ಕಣ್ಣಿನ ಪೊರೆಯ ಉಚಿತ ಶಸ್ತ್ರಚಿಕಿತ್ಸೆ ಮೂಲಕ ಹಲವರಿಗೆ ನೆರವು

• ವರುಣ ಹೆಗಡೆ

ಬೆಂಗಳೂರು: ಖಾಸಗಿ ವ್ಯವಸ್ಥೆಯಡಿ ಸಾವಿರಾರು ರೂಪಾಯಿ ವೆಚ್ಚದ ಕ್ಯಾಟರಾಕ್ಟ್ (ಕಣ್ಣಿನ ಪೊರೆ) ಶಸ್ತ್ರಚಿಕಿತ್ಸೆಯನ್ನು 'ಆಶಾಕಿರಣ' ಯೋಜನೆಯಡಿ ಉಚಿತವಾಗಿ ನಡೆಸಲಾಗುತ್ತಿದ್ದು, ದೃಷ್ಟಿ ಸಮಸ್ಯೆ ಎದುರಿಸುತ್ತಿದ್ದವರಲ್ಲಿ 5 ಲಕ್ಷಕ್ಕೂ ಅಧಿಕ ಮಂದಿಗೆ ಈ ಶಸ್ತ್ರಚಿಕಿತ್ಸೆ ಬೆಳಕಾಗಿದೆ.

ಮಧುಮೇಹಿಗಳು ಹಾಗೂ 40 ವರ್ಷ ಮೇಲ್ಪಟ್ಟವರಲ್ಲಿ ಹೆಚ್ಚಾಗಿ ಕಣ್ಣಿನ ಪೊರೆ ಕಾಣಿಸಿಕೊಳ್ಳುತ್ತಿದೆ. ಪ್ರಾರಂಭಿಕ ಹಂತದಲ್ಲಿಯೇ ಸಮಸ್ಯೆಯನ್ನು ಪತ್ತೆ ಮಾಡದಿದ್ದಲ್ಲಿ, ದೃಷ್ಟಿ ಮಸುಕಾಗಲಿದೆ. ಕಣ್ಣಿನ ಪೊರೆ ಸಮಸ್ಯೆಗೆ ಶಸ್ತ್ರಚಿಕಿತ್ಸೆಯೊಂದೆ ಪರಿಹಾರವಾಗಿದೆ. ಖಾಸಗಿ ವ್ಯವಸ್ಥೆಯಡಿ ಈ ಶಸ್ತ್ರಚಿಕಿತ್ಸೆ ದುಬಾರಿಯಾಗಿದ್ದು, ಕಣ್ಣೊಂದಕ್ಕೆ ಕೃತಕ ಮಸೂರ ಅಳವಡಿಸಲು ₹ 1.5 ಲಕ್ಷದವರೆಗೂ ಪಡೆಯಲಾಗುತ್ತಿದೆ. ಇದರಿಂದಾಗಿ ಹಲವರು ದೃಷ್ಟಿ ದೋಷದ ನಡುವೆಯೇ ಜೀವನ ಸಾಗಿಸುತ್ತಿದ್ದಾರೆ. ಅಂತಹವರ ಕಣ್ಣಿನ ಆರೋಗ್ಯ ಬಲವರ್ಧನೆಯ ಉದ್ದೇಶದಿಂದ ಆರೋಗ್ಯ ಇಲಾಖೆ ಆಶಾಕಿರಣ ಯೋಜನೆ ರೂಪಿಸಿದೆ. ಮೂರು ವರ್ಷಗಳಲ್ಲಿ 4.45 ಲಕ್ಷ ಫಲಾನುಭವಿಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 71 ಸಾವಿರ ಮಂದಿ ಸರ್ಕಾರಿ ವ್ಯವಸ್ಥೆಯಡಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

ಡಿಜಿಟಲ್ ಸಾಧನಗಳ ಅತಿಯಾದ ಬಳಕೆ, ವಾಯು ಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ಚಿಕ್ಕ ವಯಸ್ಸಿನಲ್ಲಿಯೇ ದೃಷ್ಟಿ ದೋಷ ಸಮಸ್ಯೆಗೆ ಒಳಪಡುವವರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಳವಾಗುತ್ತಿದೆ. ಮಕ್ಕಳು ಹಾಗೂ ವಯಸ್ಕರಲ್ಲಿಯೂ ಕಣ್ಣಿನ ಪೊರೆ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಚಿಕಿತ್ಸೆ ವಿಳಂಬವಾದಲ್ಲಿ ಸಮಸ್ಯೆ ಗಂಭೀರ ಸ್ವರೂಪ ಪಡೆದು, ದೃಷ್ಟಿ ನಷ್ಟವಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಆರಂಭಿಕ ಹಂತದಲ್ಲಿಯೇ ನೇತ್ರ ಸಮಸ್ಯೆ ಪತ್ತೆ ಮಾಡಿ, ಚಿಕಿತ್ಸೆ ಒದಗಿಸುವ ಉದ್ದೇಶದಿಂದ ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಮಾಂದ್ಯತೆ ನಿಯಂತ್ರಣ ಕಾರ್ಯಕ್ರಮದಡಿ 2022ರಲ್ಲಿ ಈ ಯೋಜನೆ ಪ್ರಾರಂಭಿಸಲಾಗಿದೆ.

ಕಣ್ಣಿನ ತಪಾಸಣೆ: ಯೋಜನೆಯಡಿ ಮೊದಲೆರಡು ಹಂತದಲ್ಲಿ ಆಯ್ದ ಜಿಲ್ಲೆಗಳಲ್ಲಿ ಆಶಾ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ, ನೇತ್ರ ತಪಾಸಣೆ ನಡೆಸಿ ಸಮಸ್ಯೆ ಪತ್ತೆ ಮಾಡಿದ್ದರು. 2025ರ ಜುಲೈನಲ್ಲಿ ಈ ಯೋಜನೆಯನ್ನು ಮರುವಿನ್ಯಾಸ ಮಾಡಿ, ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ 393 'ಆಶಾಕಿರಣ ದೃಷ್ಟಿ ಕೇಂದ್ರ'ಗಳನ್ನು ಸ್ಥಾಪಿಸಿ, ಅಲ್ಲಿ ತಪಾಸಣೆ ನಡೆಸಲಾಗುತ್ತಿದೆ.

'ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಶಸ್ತ್ರಚಿಕಿತ್ಸೆಯನ್ನೂ ನಡೆಸಲಾಗುತ್ತಿದೆ. ಕಣ್ಣಿನ ಪೊರೆ ಸಮಸ್ಯೆ ದೃಢಪಟ್ಟಲ್ಲಿ ಉನ್ನತ ಆರೋಗ್ಯ ಕೇಂದ್ರಗಳಿಗೆ ಶಿಫಾರಸು ಮಾಡಲಾಗುತ್ತಿದ್ದು, ಅಲ್ಲಿ ಹೆಚ್ಚಿನ ತಪಾಸಣೆಗೆ ಒಳಪಡಿಸಲಾಗುತ್ತಿದೆ. ಆಸ್ಪತ್ರೆಗಳಲ್ಲಿ ಶಾಶ್ವತ ದೃಷ್ಟಿ ಕೇಂದ್ರಗಳನ್ನು ಸ್ಥಾಪಿಸಿರುವುದರಿಂದ, ಸಾರ್ವಜನಿಕರು ಹತ್ತಿರದ ಕೇಂದ್ರಗಳಿಗೆ ತೆರಳಿ ತಪಾಸಣೆ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆಶಾಕಿರಣ ದೃಷ್ಟಿ ಕೇಂದ್ರ: 2.72 ಕೋಟಿ ಮಂದಿಗೆ ತಪಾಸಣೆ

ರಾಜ್ಯದಲ್ಲಿ 2022ರಲ್ಲಿ ಆರಂಭವಾದ ಆಶಾಕಿರಣ ಕಾರ್ಯಕ್ರಮವನ್ನು ಎರಡು ಹಂತಗಳಲ್ಲಿ, 8 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗಿತ್ತು. ಮೊದಲಿಗೆ ಮನೆ ಮನೆ ಪ್ರಚಾರ ನಡೆಸಿ, ಕಣ್ಣಿನ ತಪಾಸಣೆ ಮಾಡುವ ಜತೆಗೆ ಅಗತ್ಯ ಇರುವವರಿಗೆ ಉಚಿತ ಕನ್ನಡಕ ವಿತರಣೆ, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಕ್ರಮವಹಿಸಲಾಗಿತ್ತು. ಮೊದಲೆರಡು ಹಂತಗಳಲ್ಲಿ 1.40 ಕೋಟಿ ಜನರು ಪ್ರಾಥಮಿಕ ನೇತ್ರ ತಪಾಸಣೆಗೆ ಒಳಗಾಗಿದ್ದರು. ಅವರಲ್ಲಿ 24.50 ಲಕ್ಷ ಜನರಲ್ಲಿ ಕಣ್ಣಿನ ತೊಂದರೆ ಇರುವುದು ಪತ್ತೆಯಾಗಿತ್ತು. ಈಗ ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ತಪಾಸಣೆ ಮಾಡಲಾಗುತ್ತಿದ್ದು, ಯೋಜನೆ ಪ್ರಾರಂಭವಾದಾಗಿನಿಂದ ಈವರೆಗೆ 2.75 ಕೋಟಿ ಮಂದಿಗೆ ತಪಾಸಣೆ ನಡೆಸಲಾಗಿದೆ.



3.03 ಲಕ್ಷ ಜನರಿಗೆ ಕನ್ನಡಕ

ದೃಷ್ಟಿ ಸಮಸ್ಯೆ ಎದುರಿಸುತ್ತಿರುವವರಿಗೆ ಈ ಯೋಜನೆಯಡಿ ಉಚಿತವಾಗಿ ಕನ್ನಡಕಗಳನ್ನೂ ವಿತರಿಸಲಾಗುತ್ತಿದೆ. ತಪಾಸಣೆಗೆ ಒಳಪಟ್ಟವರಲ್ಲಿ 3.03 ಲಕ್ಷ ಜನರಿಗೆ ಕನ್ನಡಕ ನೀಡಲಾಗಿದೆ. ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ನೇತ್ರಾಧಿಕಾರಿಗಳು ಪರಿಶೀಲಿಸಿ, ಕನ್ನಡಕ ಒದಗಿಸುತ್ತಿದ್ದಾರೆ. ಮಕ್ಕಳಲ್ಲಿನ ದೃಷ್ಟಿ ಸಮಸ್ಯೆಗೆ ಸಂಬಂಧಿಸಿದಂತೆ ಇಲಾಖೆಯ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ (ಆರ್‌ಬಿಎಸ್‌ಕೆ) ತಪಾಸಣೆ ನಡೆಸಲಾಗುತ್ತಿದೆ. ಸಮಸ್ಯೆ ಪತ್ತೆಯಾದ ಮಕ್ಕಳಿಗೆ ಹೆಚ್ಚಿನ ನೇತ್ರ ತಪಾಸಣೆ ನಡೆಸಿ, ಕನ್ನಡಕಗಳನ್ನೂ ವಿತರಿಸಲಾಗುತ್ತಿದೆ.

ಸುದ್ದಿ 2 ನಿಮಿಷ


ಸಾರಿಗೆ ನೌಕರರ ಮುಷ್ಕರ ನಿರ್ಬಂಧ ಆದೇಶ ಮುಂದುವರಿಕೆ

ಬೆಂಗಳೂರು: ವೇತನ ಹೆಚ್ಚಳಕ್ಕೆ ಆಗ್ರಹಿಸಿ, ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ (ಕೆಎಸ್‌ಆರ್‌ಟಿಸಿ) 'ನೌಕರರ ಟ್ರೇಡ್ ಯೂನಿಯನ್ ಜಂಟಿ ಕ್ರಿಯಾ ಸಮಿತಿ' ಮೇ 20ರಿಂದ ಕರೆದಿದ್ದ ಮುಷ್ಕರವನ್ನು ನಿರ್ಬಂಧಿಸಿ ನೀಡಲಾಗಿದ್ದ ಮಧ್ಯಂತರ ಆದೇಶವನ್ನು ಹೈಕೋರ್ಟ್ ಇದೇ 23ರವರೆಗೆ ವಿಸ್ತರಿಸಿದೆ.

ಮುಷ್ಕರವನ್ನು ಪ್ರಶ್ನಿಸಿ ಮನೆ ಕೆಲಸ ಮಾಡುತ್ತಿರುವ ಸುದ್ದುಗುಂಟೆ ಪಾಳ್ಯದ ಸಿ.ವೇದಾವತಿ ಹಾಗೂ ಕಟ್ಟಡ ಕಾರ್ಮಿಕ ಎಚ್.ವಿ.ಶ್ರೀಧರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮುಷ್ಕರ ನಡೆಸಲು ಕಾನೂನಿನಲ್ಲಿ ನಿಮಗೆ ಹಕ್ಕು ಎಲ್ಲಿದೆ' ಎಂದು ಜಂಟಿ ಕ್ರಿಯಾ ಸಮಿತಿಯನ್ನು ಪ್ರಶ್ನಿಸಿದ ನ್ಯಾಯಪೀಠ, 'ಸಾರಿಗೆಯು ಸಾರ್ವಜನಿಕರ ಪಾಲಿನ ಒಂದು ಅತ್ಯಗತ್ಯ ಸೇವೆ. ಮುಷ್ಕರ ನಡೆಸಬಾರದು ಎಂದು ಈಗಾಗಲೇ ಹೈಕೋರ್ಟ್ ಸೂಚಿಸಿದೆ. ಸರ್ಕಾರದ ಜೊತೆಗೆ ಸಮಾಲೋಚನೆ ನಡೆಸುವಂತೆ ನಿರ್ದೇಶಿಸಲಾಗಿದೆ. ಅಲ್ಲಿ ನೀವು ನಿಮ್ಮ ಹಕ್ಕುಗಳ ಕುರಿತಂತೆ ಸರ್ಕಾರದ ಜೊತೆ ಸಮಾಲೋಚನೆ ನಡೆಸಬಹುದಲ್ಲಾ' ಎಂದು ಹೇಳಿತು.

ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಜಂಟಿ ಕ್ರಿಯಾ ಸಮಿತಿಗೆ ಎರಡು ವಾರ ಕಾಲಾವಕಾಶ ನೀಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿತು. ಅಂತೆಯೇ, ಈ ಮಧ್ಯೆ ಮುಷ್ಕರ ನಡೆಸಬಾರದು ಎಂದು ಮೌಖಿಕವಾಗಿ ಸೂಚಿಸಿತಲ್ಲದೆ, ಮುಷ್ಕರ ನಡೆಸುವುದಕ್ಕೆ ನಿರ್ಬಂಧ ಹೇರಿ ಮೇ 19ರಂದು ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಮುಂದಿನ ವಿಚಾರಣೆವರೆಗೆ ವಿಸ್ತರಿಸಿತು.



ವಾರಾಣಸಿ: 200 ವರ್ಷಗಳಷ್ಟು ಹಳೆಯ ಮಸೀದಿ ತೆರವು

ಲಖನೌ: ರೈಲ್ವೆ ಇಲಾಖೆಗೆ ಸೇರಿದ ಜಾಗದಲ್ಲಿ ನಿರ್ಮಿಸಿದ್ದ, ಸುಮಾರು 200 ವರ್ಷಗಳಷ್ಟು ಹಳೆಯ ಮಸೀದಿಯನ್ನು ಉತ್ತರಪ್ರದೇಶದ ವಾರಾಣಸಿಯಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಮೂಲಕ ತೆರವು ಮಾಡಲಾಗಿದೆ.

ಕಾಶಿ ರೈಲು ನಿಲ್ದಾಣದ ಜಾಗವನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಲಾಗಿತ್ತು ಎನ್ನಲಾದ ಅಜ್‌ಗೈಬ್ ಶಹೀದ್ ಮಸೀದಿ, ಖಬರ್‌ಸ್ತಾನ(ಸ್ಮಶಾನ) ಮತ್ತು ಗೋರಿ ಸೇರಿದಂತೆ ಕಟ್ಟಡಗಳನ್ನು ಜೆಸಿಬಿ ಬಳಸಿ ಮಂಗಳವಾರ ರಾತ್ರಿ ಬಿಗಿ ಭದ್ರತೆಯಲ್ಲಿ ತೆರವು ಮಾಡಲಾಯಿತು.

ಒತ್ತುವರಿ ಜಾಗದಲ್ಲಿದ್ದ ಹನುಮಾನ್ ಮಂದಿರವನ್ನೂ ತೆರವು ಮಾಡಲಾಗಿದೆ ಎಂದು ವರದಿಗಳು ತಿಳಿಸಿವೆ.

'ಕಾಶಿ ಮಾದರಿ ರೈಲು ನಿಲ್ದಾಣ ಯೋಜನೆ' ಕೈಗೆತ್ತಿಕೊಂಡಾಗ ಭೂ ಒತ್ತುವರಿ ಪತ್ತೆಯಾಗಿತ್ತು. ರೈಲ್ವೆ ಇಲಾಖೆ ಮಸೀದಿ ನಿರ್ವಹಿಸುತ್ತಿದ್ದವರಿಗೆ ಹಲವು ಬಾರಿ ನೋಟಿಸ್ ನೀಡಿತ್ತು. ಆದರೆ ಮಸೀದಿ ಆಡಳಿತ ಮಂಡಳಿ ನ್ಯಾಯಾಲಯದಲ್ಲಿ ನೋಟಿಸ್ ಪ್ರಶ್ನಿಸಿತ್ತು. ರೈಲ್ವೆ ಇಲಾಖೆ ಪರವಾಗಿ ನ್ಯಾಯಾಲಯ ಆದೇಶ ನೀಡಿತ್ತು.

ರಾಜ್ಯಸಭಾ ಸ್ಥಾನ: ಕಾಂಗ್ರೆಸ್‌ಗೆ ಬಿಟ್ಟುಕೊಟ್ಟ ಟಿವಿಕೆ

ಚೆನ್ನೈ: ಮೈತ್ರಿಯನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಇಟ್ಟಿರುವ ಆಡಳಿತಾರೂಢ ತಮಿಳಗ ವೆಟ್ರಿ ಕಳಗಂ (ಟಿವಿಕೆ), ಮಿತ್ರ ಪಕ್ಷ ಕಾಂಗ್ರೆಸ್‌ಗೆ ರಾಜ್ಯಸಭಾ ಸ್ಥಾನವನ್ನು ಬುಧವಾರ ಹಂಚಿಕೆ ಮಾಡಿದೆ.

ಉಪ ಚುನಾವಣೆ ನಡೆಯಲಿರುವ ತಮಿಳುನಾಡಿನ ಈ ಏಕೈಕ ರಾಜ್ಯಸಭಾ ಸ್ಥಾನಕ್ಕೆ ಮುಖಂಡ ಪ್ರವೀಣ್ ಚಕ್ರವರ್ತಿ ಅವರನ್ನು ಕಾಂಗ್ರೆಸ್ ನಾಮನಿರ್ದೇಶನ ಮಾಡುವ ಸಾಧ್ಯತೆ ಇದೆ.

ತಾತ್ಕಾಲಿಕ ಜಪ್ತಿ ಸಮರ್ಥನೀಯವಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಹೊರಡಿಸಲಾಗುವ ತಾತ್ಕಾಲಿಕ ಜಪ್ತಿ ಆದೇಶಗಳು ಕಾನೂನು ವ್ಯಾಖ್ಯಾನದಲ್ಲಿ ಸಮರ್ಥನೀಯವಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮೈಸೂರಿನ ಕೆ.ಜಿ.ಕೊಪ್ಪಲಿನ ಜಯಮ್ಮ (70) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ನಾವು ಕಾನೂನನ್ನು ಪಾಲಿಸುತ್ತಿದ್ದೇವೆ ಎಂಬುದನ್ನು ಮನದಟ್ಟು ಮಾಡಲು, ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಕಾನೂನಿನಲ್ಲಿರುವ ಪದಗಳನ್ನೇ ನಕಲು ಮಾಡಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅವಕಾಶವಿಲ್ಲ' ಎಂದು ಸ್ಪಷ್ಟಪಡಿಸಿರುವ ನ್ಯಾಯಪೀಠ, ಅರ್ಜಿದಾರರ ಆಸ್ತಿಯನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಲು ಇ.ಡಿ ಅಧಿಕಾರಿಗಳು 2025ರ ಜೂನ್ 9ರಂದು ಹೊರಡಿಸಿದ್ದ ಆದೇಶ ಮತ್ತು ಅದರ ಮುಂದುವರೆದ ಎಲ್ಲ ಪ್ರಕ್ರಿಯೆಗಳನ್ನು ರದ್ದುಪಡಿಸಿದೆ.



'ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ-2002ರ ಕಲಂ 5(1) ರ ಅಡಿಯಲ್ಲಿ ಸೂಕ್ತ ಕಾರಣಗಳು ಮತ್ತು ಅಗತ್ಯ ಸಂದರ್ಭಗಳು ಎದುರಾದರೆ, ಕಾನೂನು ಚೌಕಟ್ಟಿನಲ್ಲಿ ಅರ್ಜಿದಾರರ ವಿರುದ್ಧ ಹೊಸದಾಗಿ ವಿಚಾರಣಾ ಪ್ರಕ್ರಿಯೆ ಆರಂಭಿಸಬಹುದು' ಎಂದು ಹೇಳಿದೆ.

ಪ್ರಕರಣವೇನು?: ಜಯಮ್ಮ ಅವರ ಜಮೀನನ್ನು ಯಾವುದೇ ಭೂಸ್ವಾಧೀನ ಪ್ರಕ್ರಿಯೆ ನಡೆಸದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಜಯನಗರ ಲೇಔಟ್ ನಿರ್ಮಾಣಕ್ಕೆ ಬಳಸಿಕೊಂಡಿತ್ತು. ಇದಕ್ಕೆ ಪ್ರತಿಯಾಗಿ ಪರಿಹಾರ ರೂಪದಲ್ಲಿ ಜಯಮ್ಮ ಅವರಿಗೆ ಕೆಲವು ನಿವೇಶನಗಳನ್ನು ಕ್ರಯಪತ್ರದ ಮೂಲಕ ಮಂಜೂರು ಮಾಡಲಾಗಿತ್ತು. ಆದರೆ, ಈ ನಿವೇಶನಗಳ ಖಾತೆ ವರ್ಗಾವಣೆಗೆ ಕಂದಾಯ ಅಧಿಕಾರಿಗಳು ನಿರಾಕರಿಸಿದ್ದರು.

ಏತನ್ಮಧ್ಯೆ, ಸ್ನೇಹಮಯಿ ಕೃಷ್ಣ ಈ ಕುರಿತು ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರೊಂದನ್ನು ದಾಖಲಿಸಿದ್ದರು. ದೂರಿನನ್ವಯ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದರು. ಇದರ ಬೆನ್ನಲ್ಲೇ ಇ.ಡಿಯೂ ಪ್ರಕರಣ ದಾಖಲಿಸಿಕೊಂಡು, ಜಯಮ್ಮ ಅವರಿಗೆ ಮಂಜೂರಾಗಿದ್ದ ನಿವೇಶನಗಳು 'ಅಪರಾಧದ ಮೂಲಕ ಗಳಿಸಿದ ಆಸ್ತಿ' ಎಂದು ಆರೋಪಿಸಿ ತಾತ್ಕಾಲಿಕವಾದ ಮುಟ್ಟುಗೋಲು ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಜಯಮ್ಮ ಹೈಕೋರ್ಟ್ ಮೆಟ್ಟಿಲೇರಿದ್ದರು.

ಎಂಜಿನಿಯರಿಂಗ್ ಪ್ರವೇಶ : 1.59 ಲಕ್ಷ ಸೀಟುಗಳು ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಂಜಿನಿಯರಿಂಗ್ ಹಾಗೂ ವಾಸ್ತುಶಿಲ್ಪ ಶಾಸ್ತ್ರ (ಆರ್ಕಿಟೆಕ್ಚರ್) ಕೋರ್ಸ್‌ಗಳ 2026-27ನೇ ಸಾಲಿನ ಪ್ರವೇಶಕ್ಕೆ 1,59,151 ಸೀಟುಗಳು ಲಭ್ಯವಾಗಿವೆ.



ಪ್ರಸಕ್ತ ಶೈಕ್ಷಣಿಕ ಸಾಲಿನ ಹೊಸ 10 ಎಂಜಿನಿಯರಿಂಗ್ ಕಾಲೇಜುಗಳೂ ಸೇರಿದಂತೆ 227 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಲಭ್ಯವಿರುವ ಒಟ್ಟು ಸೀಟುಗಳ ಲಭ್ಯತಾ ಪಟ್ಟಿಯ ಕರಡನ್ನು ತಾಂತ್ರಿಕ ಶಿಕ್ಷಣ ಇಲಾಖೆ ಪ್ರಕಟಿಸಿದೆ. ಅವುಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಸರ್ಕಾರಿ ಕೋಟಾದಡಿ 75,041 ಸೀಟುಗಳು, ಕಾಮೆಡ್-ಕೆ ಕೋಟಾದಡಿ 32,769 ಸೀಟುಗಳು ಹಾಗೂ ಆಡಳಿತ ಮಂಡಳಿ ಕೋಟಾದಡಿ 51,294 ಸೀಟುಗಳು ಸೇರಿವೆ.

ಕಳೆದ ಶೈಕ್ಷಣಿಕ ವರ್ಷಕ್ಕೆ ಹೋಲಿಸಿದರೆ ಈ ಬಾರಿ 5,235 ಸೀಟುಗಳು ಹೆಚ್ಚಾಗಿವೆ. 2025-26ನೇ ಸಾಲಿನಲ್ಲಿ 217 ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ 72,506 ಸೀಟುಗಳು ಸೇರಿದಂತೆ ಒಟ್ಟು 1,53,916 ಸೀಟುಗಳು ಲಭ್ಯವಿದ್ದವು. ಕರಡು ಲಭ್ಯತಾ ಪಟ್ಟಿ ಪ್ರಕಾರ ಸರ್ಕಾರಿ ಕಾಲೇಜುಗಳಲ್ಲಿ 500 ಸೀಟುಗಳು, ಖಾಸಗಿ ವಿಶ್ವವಿದ್ಯಾಲಯಗಳಲ್ಲಿ 2,580 ಸೀಟುಗಳು, ಖಾಸಗಿ ಕಾಲೇಜುಗಳಲ್ಲಿ 1,695 ಸೀಟುಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ 60 ಸೀಟುಗಳು ಹೆಚ್ಚಾಗಿವೆ.

ಸಡಗೋಪನ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಉನ್ನತ ಶಿಕ್ಷಣ ಇಲಾಖೆ ಹೊರಡಿಸಿರುವ ಮಾರ್ಗಸೂಚಿಗಳ ಅನ್ವಯ ಕೆಲ ಕಾಲೇಜುಗಳು, ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ಕೆಲವು ಕೋರ್ಸ್‌ಗಳ ಸೀಟುಗಳನ್ನು ಪ್ರಕಟಿತ ಪಟ್ಟಿಯಲ್ಲಿ ಸೇರಿಸಿಲ್ಲ ಎಂದು ಕೆಇಎ ಹೇಳಿದೆ. ಕಂಪ್ಯೂಟರ್ ಸೈನ್ಸ್ ಹಾಗೂ ಸಂಬಂಧಿತ ಕೋರ್ಸ್‌ಗಳ ಸೀಟುಗಳ ಅತಿಯಾದ ವಿಸ್ತರಣೆ ಬಗ್ಗೆ ಸಮಿತಿ ಆತಂಕ ವ್ಯಕ್ತಪಡಿಸಿತ್ತು.

'ಹೊಸ ಕಾಲೇಜುಗಳಿಗೆ ಗರಿಷ್ಠ 60 ಸೀಟುಗಳ ಪ್ರವೇಶ ಸಾಮರ್ಥ್ಯಕ್ಕೆ ಮಾತ್ರ ಸರ್ಕಾರ ಅನುಮತಿ ನೀಡಿದೆ. ಆದರೆ, ಕೆಲವು ಕಾಲೇಜುಗಳಿಗೆ 60ಕ್ಕಿಂತ ಹೆಚ್ಚು ಸೀಟುಗಳ ಅನುಮೋದನೆ ದೊರೆತಿದೆ. ಹಾಗಾಗಿ, ಹೆಚ್ಚುವರಿ ಸೀಟುಗಳನ್ನು ಪರಿಗಣಿಸಿಲ್ಲ. ಅಂತಹ ಸಂಸ್ಥೆಗಳು ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಬಿಎ) ಪ್ರಮಾಣಪತ್ರ ಸಲ್ಲಿಸಿದ ಬಳಿಕ ಹೆಚ್ಚುವರಿ ಸೀಟುಗಳನ್ನು ಸೇರಿಸಲಾಗುವುದು. ಯಾವುದೇ ಕೋರ್ಸ್‌ನಲ್ಲಿ ಪ್ರವೇಶ ಸಾಮರ್ಥ್ಯ 180ಕ್ಕಿಂತ ಹೆಚ್ಚಿದ್ದು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಸೀಟು ಹೆಚ್ಚಳಕ್ಕೆ ಅನುಮೋದನೆ ನೀಡಿದ್ದರೂ, ಎನ್‌ಬಿಎ ಪ್ರಮಾಣಪತ್ರ ಸಲ್ಲಿಸುವವರೆಗೆ ಅಂತಹ ಸೀಟುಗಳನ್ನು ಪರಿಗಣಿಸುವುದಿಲ್ಲ' ಎಂದು ಕೆಇಎ ಹೇಳಿದೆ.

ಕಂಪ್ಯೂಟರ್ ಸೈನ್ಸ್ ಹಾಗೂ ಸಂಬಂಧಿತ ಕೋರ್ಸ್‌ಗಳಿಗೆ ಗರಿಷ್ಠ 900 ಸೀಟುಗಳ ಮಿತಿಯನ್ನು ಕೆಇಎ ಪರಿಗಣಿಸಿದೆ. ಈ ವರ್ಷ 900 ಸೀಟುಗಳ ಮಿತಿಯನ್ನು ಮೀರಿ ಹೆಚ್ಚುವರಿ ಅನುಮೋದನೆ ಪಡೆದಿರುವ ಕಾಲೇಜುಗಳ ಸೀಟುಗಳನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ.

ದೆಹಲಿಯಲ್ಲಿ ಅಗ್ನಿ ದುರಂತ: 21 ಮಂದಿ ಸಾವು

ಎರಡನೇ ಮುಖಪುಟದಿಂದ...

ಗಾಜು ಒಡೆದು ಕೆಳಗೆ ಹಾರಿದರು: 'ಬೆಳಿಗ್ಗೆ 9.30ರ ಸುಮಾರಿಗೆ ಕಟ್ಟಡದಿಂದ ಬೆಂಕಿ ಮತ್ತು ಹೊಗೆ ಬರುತ್ತಿದ್ದುದನ್ನು ಗಮನಿಸಿದೆ. ನಾಲ್ಕರಿಂದ ಆರು ಮಂದಿ ಗಾಜು ಒಡೆದು, ಬೆಂಕಿಯಿಂದ ತಪ್ಪಿಸಿಕೊಳ್ಳಲು ಕಟ್ಟಡದಿಂದ ಜಿಗಿದರು. ಅದರಲ್ಲಿ ಒಬ್ಬರ ಕಾಲು ಮುರಿದಂತೆ ಕಾಣುತ್ತದೆ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ಜನರು ಕಟ್ಟಡದಿಂದ ಹಾರುವುದನ್ನು ಗಮನಿಸಿದ ಹಾಸಿಗೆ ಮಾರಾಟಗಾರರೊಬ್ಬರು ಕೂಡಲೇ ನೆಲದ ಮೇಲೆ ಹಾಸಿಗೆಗಳನ್ನು ಹರಡಿದರು. ಸ್ಥಳೀಯರು ಹಾಸಿಗೆಗಳನ್ನು ತಂದು ಹಾಸಿದರು. ಅಲ್ಲಿದ್ದ ಇತರ ಸ್ಥಳೀಯರು ಗಾಯಗೊಂಡವರಿಗೆ ಸಿಪಿಆರ್ ನೀಡಿದರು. ತುರ್ತು ರಕ್ಷಣೆ ಸೇವಾ ಪಡೆಗಳು ಬರುವುದಕ್ಕೂ ಮೊದಲೇ ಸ್ಥಳೀಯರು ರಕ್ಷಣಾ ಕಾರ್ಯ ಕೈಗೊಂಡಿದ್ದರು' ಎಂದು ಅವರು ವಿವರಿಸಿದರು.

ವಿಷಯ ತಿಳಿದ ಬಳಿಕ ಅಗ್ನಿಶಾಮಕ ದಳದವರು, ಪೊಲೀಸರು ಮತ್ತು ವಿಪತ್ತು ನಿರ್ವಹಣಾ ಘಟಕಗಳ ಸದಸ್ಯರು ಸ್ಥಳಕ್ಕೆ ಬಂದು ರಕ್ಷಣಾ ಕಾರ್ಯ ಕೈಗೊಂಡರು. ಗಾಯಗೊಂಡವರನ್ನು ಕಟ್ಟಡದಿಂದ ಹೊರತಂದು ಆಂಬುಲೆನ್ಸ್‌ಗಳ ಮೂಲಕ ಆಸ್ಪತ್ರೆಗಳಿಗೆ ಸಾಗಿಸಿದರು. ಅಲ್ಲದೆ ಹೊಗೆ ಆವರಿಸಿದ್ದ ಕಟ್ಟಡದಲ್ಲಿ ಬದುಕುಳಿದವರಿಗಾಗಿ ಹುಡುಕಾಟ ನಡೆಸಿದರು.

ಈ ಕಟ್ಟಡ ಹೋಟೆಲ್ ಆಗಿ ಪರಿವರ್ತನೆ ಆಗುವುದಕ್ಕೂ ಮುನ್ನ ಇಲ್ಲಿ, ಖಾದಿ ಭಂಡಾರ ಮಳಿಗೆಯಿತ್ತು ಎಂದು ಸ್ಥಳೀಯೊಬ್ಬರು ತಿಳಿಸಿದರು. ಸಮೀಪದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಸಂಬಂಧಿಕರು ವಸತಿಗಾಗಿ ಈ ಹೋಟೆಲ್ ಅನ್ನು ಬಳಸುತ್ತಿದ್ದರು ಎಂದೂ ಅವರು ಹೇಳಿದರು.



ದೆಹಲಿ ಹೋಟೆಲ್‌ನಲ್ಲಿ ಕಾಣಿಸಿಕೊಂಡ ಬೆಂಕಿ ನಂದಿಸಲು ರಕ್ಷಣಾ ಸಿಬ್ಬಂದಿ ಹರಸಾಹಸಪಟ್ಟರು —ಎಪಿ/ಪಿಟಿಐ ಚಿತ್ರ



ಗಾಯಗೊಂಡಿದ್ದ ಬಾಲಕಿಯೊಬ್ಬರು ಚೀರಾಡುತ್ತಿದ್ದ ದೃಶ್ಯ—ಎಪಿ/ಪಿಟಿಐ ಚಿತ್ರ

ಎಫ್‌ಐಆರ್- ಮಾಲೀಕ ಬಂಧನ: ದುರಂತ ಸಂಬಂಧ ದೆಹಲಿ ಪೊಲೀಸರು ಹೋಟೆಲ್ ಮಾಲೀಕರ ವಿರುದ್ಧ ಉದ್ದೇಶಪೂರ್ವಕವಲ್ಲದ ನರಹತ್ಯೆ ಆರೋಪದಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ತಪ್ಪಿಸಿಕೊಂಡಿದ್ದ ಮಾಲೀಕ ಲವಕೇಶ್ ಬಜಾಜ್ ಅವರನ್ನು ಬಂಧಿಸಿರುವುದಾಗಿ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ವಿದೇಶಿಯರ ಕುಟುಂಬದವರಿಗೆ ನೆರವು: ಅಗ್ನಿ ದುರಂತದಲ್ಲಿ ಕೆಲ ವಿದೇಶಿಯರು ಮೃತಪಟ್ಟಿದ್ದು, ಕೆಲವರು ಗಾಯಗೊಂಡಿದ್ದಾರೆ. ಬದುಕುಳಿದಿರುವ ವಿದೇಶಿಯರಿಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಅಗತ್ಯ ನೆರವು ನೀಡಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಈ ಸಂಬಂಧ ಕೆಲ ರಾಯಭಾರ ಕಚೇರಿಗಳ ಜತೆ ಇಲಾಖೆ ಸಂಪರ್ಕದಲ್ಲಿದ್ದು, ಅಗತ್ಯವಿರುವ ಸಹಾಯ ನೀಡಲಿದೆ ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ಬಾಂಗ್ಲಾದೇಶದ ಐವರು ಪ್ರಜೆಗಳು ಈ ದುರಂತದಲ್ಲಿ ಗಾಯಗೊಂಡಿದ್ದಾರೆ ಎಂದು ಬಾಂಗ್ಲಾದೇಶ ಹೈಕಮಿಷನ್ ತಿಳಿಸಿದೆ.

ಮಗುವಿನೊಂದಿಗೆ ಜಿಗಿದ ಮಹಿಳೆ

ಎರಡನೇ ಮುಖಪುಟದಿಂದ...

'ಕಟ್ಟಡದಿಂದ ಬೆಂಕಿ, ಹೊಗೆ ಬರುವುದನ್ನು ಗಮನಿಸಿದ ಕೂಡಲೇ ಸ್ಥಳೀಯರು ಒಟ್ಟಾಗಿ ರಕ್ಷಣೆಗೆ ಮುಂದಾದೆವು. ಹೊರಬರಲು ಪ್ರಯತ್ನಿಸುತ್ತಿದ್ದವರಿಗೆ ಕಂಬಳಿ ಮತ್ತು ಹೊದಿಕೆಗಳನ್ನು ನೀಡಿ ನೆರವಾದೆವು. ಅಲ್ಲದೆ, ಕಟ್ಟಡದಲ್ಲಿ ಸಿಲುಕಿದ್ದವರು ತಪ್ಪಿಸಿಕೊಳ್ಳಲು ಸಹಾಯವಾಗುವಂತೆ ಗಾಜಿನ ಕಿಟಕಿಗಳನ್ನು ಕಲ್ಲುಗಳಿಂದ ಒಡೆದೆವು. ಅಲ್ಲಿಂದ ಕೆಲವರನ್ನು ರಕ್ಷಿಸಿದೆವು. ತುರ್ತು ರಕ್ಷಣೆ ಸೇವಾ ತಂಡಗಳು ಬರುವ ತನಕ ನಮ್ಮಿಂದ ಸಾಧ್ಯವಾಗುವ ಎಲ್ಲ ಯತ್ನ ಮಾಡಿದೆವು' ಎಂದು ಮತ್ತೊಬ್ಬ ಪ್ರತ್ಯಕ್ಷದರ್ಶಿ ಸಂಜಯ್ ಗೋಯಲ್ ವಿವರಿಸಿದರು.

ಸುರಕ್ಷತಾ ಮಾನದಂಡ ಉಲ್ಲಂಘನೆ

ಎರಡನೇ ಮುಖಪುಟದಿಂದ...

ಇವೆಲ್ಲ ಸರಿಯಿದ್ದಿದ್ದರೆ ಡಜನ್‌ಗೂ ಹೆಚ್ಚು ಜನರ ಸಾವನ್ನು ತಪ್ಪಿಸಲು ಸಾಧ್ಯವಾಗುತ್ತಿತ್ತು ಎಂದು ಅವರು ತಿಳಿಸಿದ್ದಾರೆ.

ಆರು ಕೊಠಡಿಗಳನ್ನು ತೆರೆಯುವುದಾಗಿ ಪರವಾನಗಿ ಪಡೆದಿರುವ ಈ ಹೋಟೆಲ್, ವಾಸ್ತವವಾಗಿ 25 ಕೊಠಡಿಗಳನ್ನು ಹೊಂದಿದೆ. ಅಲ್ಲದೆ ಕಟ್ಟಡಕ್ಕೆ ಅಗ್ನಿಶಾಮಕ ದಳದಿಂದ ನಿರಾಕ್ಷೇಪಣಾ ಪತ್ರವನ್ನೂ (ಎನ್‌ಒಸಿ) ಪಡೆದಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಕಟ್ಟಡದ ನೆಲಮಾಳಿಗೆ ಸೇರಿದಂತೆ ಎಲ್ಲ ಮಹಡಿಗಳು ಕೊಠಡಿಗಳನ್ನು ಹೊಂದಿವೆ. ಇವುಗಳ ರಚನೆಯ ವಿನ್ಯಾಸವು ದುರಂತದ ವೇಳೆ ಒಳಗೆ ಸಿಲುಕಿದವರ ಪರಿಸ್ಥಿತಿಯನ್ನು ಹದಗೆಡಿಸುವಂತೆ ಮಾಡಿತು. ಅಲ್ಲದೆ ರಕ್ಷಣಾ ಕಾರ್ಯವನ್ನು ಕಷ್ಟವಾಗಿಸಿತ್ತು' ಎಂದು ಅಗ್ನಿಶಾಮಕ ದಳದ ಹಿರಿಯ ಅಧಿಕಾರಿ ಅಭಿಲಾಷ್ ಕುಮಾರ್ ಮಲಿಕ್ ತಿಳಿಸಿದರು.

ಸಂಬಂಧಿಕರ ಆಕ್ರಂದನ

ಅಗ್ನಿ ದುರಂತದಲ್ಲಿ ಮೃತಪಟ್ಟವರ ಮತ್ತು ಗಾಯಗೊಂಡವರ ಮಾಹಿತಿ ಪಡೆಯಲು ಇಲ್ಲಿನ ಸಾಕೇತ್ ಮ್ಯಾಕ್ಸ್ ಆಸ್ಪತ್ರೆ ಬಳಿ ಜನ ಪರದಾಡುತ್ತಿದ್ದರು.

ಆಸ್ಪತ್ರೆ ಬಳಿ ಸೇರಿದ್ದ ದುಃಖಿತ ಸಂಬಂಧಿಕರು, ಸ್ನೇಹಿತರು ಮತ್ತು ಪರಿಚಯಸ್ಥರು ಆತಂಕಗೊಂಡಿದ್ದರು. ಅವರ ಆಕ್ರಂದನ ಮುಗಿಲು ಮುಟ್ಟುವಂತಿತ್ತು. ಅವರು ಕಣ್ಣೀರು ಹಾಕುತ್ತಾ ತಮ್ಮ ಪ್ರೀತಿಪಾತ್ರರ ಹುಡುಕಾಟದಲ್ಲಿ ತೊಡಗಿದ್ದರು. ಫೋಟೊಗಳನ್ನು ಹಿಡಿದು ಅಧಿಕಾರಿಗಳಿಂದ ಮಾಹಿತಿ ಕೇಳುತ್ತಿದ್ದರು.

'ಸುಟ್ಟು ಕರಕಲಾಗಿರುವ ಶವಗಳನ್ನು ನೋಡಿ, ಎಲ್ಲರೂ ಸುಟ್ಟುಹೋಗಿದ್ದಾರೆ. ಇವರಲ್ಲಿ ನಮ್ಮ ಸಂಬಂಧಿಕರನ್ನು ಹೇಗೆ ಗುರುತಿಸುವುದು, ಗೊತ್ತೇ ಆಗುತ್ತಿಲ್ಲ, ನೆರವಾಗಿ' ಎಂದು ಅಂಗಲಾಚುತ್ತಿದ್ದರು.

'ಬೆಂಕಿ ದುರಂತದಲ್ಲಿ ಸಿಲುಕಿದವರಲ್ಲಿ ನನ್ನ ಆರು ಸಂಬಂಧಿಕರು ಸೇರಿದ್ದಾರೆ. ಇವರಲ್ಲಿ ನಾಲ್ವರ ಶವಗಳನ್ನು ಗುರುತಿಸಲಾಗಿದೆ. ಇಬ್ಬರನ್ನು ಗುರುತಿಸಲಾಗಿಲ್ಲ. ಕೆಲ ಶವಗಳು ಮತ್ತೊಂದು ಆಸ್ಪತ್ರೆಯಲ್ಲಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಅಲ್ಲೂ ಹೋಗಿ ನೋಡುತ್ತೇವೆ' ಎಂದು ನಮಿತ್ ಗೋಯಲ್ ಎಂಬವರು ದುಃಖಿಸುತ್ತಾ ಹೇಳಿದರು.

'ವೈದ್ಯಕೀಯ ಚಿಕಿತ್ಸೆಗಾಗಿ ಗುರುಗ್ರಾಮದಿಂದ ಈ ಆರು ಸದಸ್ಯರು ಬಂದು, ಈ ಹೋಟೆಲ್‌ನಲ್ಲಿ ತಂಗಿದ್ದರು' ಎಂದು ಅವರು ತಿಳಿಸಿದರು.

ಆಸ್ಪತ್ರೆಯ ಇನ್ನೊಂದೆಡೆ ವಿವೇಕ್ ಎಂಬವರು ತಮ್ಮ 25 ವರ್ಷದ ಗೆಳತಿ ಸುಜಿತಾಳನ್ನು ಹುಡುಕುತ್ತಿದ್ದರು. ಬೆಂಕಿ ಅವಘಡದಲ್ಲಿ ಸಿಲುಕಿದವರಲ್ಲಿ ಅವರೂ ಇದ್ದಾರೆ ಎಂದು ನಂಬಲಾಗಿದೆ. ಆದರೆ ಇಲ್ಲಿಯವರೆಗೆ ಗುರುತಿಸಲು ಆಗಿಲ್ಲ. ಗೆಳತಿಯ ಮೊಬೈಲ್ ಕೂಡ ಪತ್ತೆಯಾಗಿಲ್ಲ ಎಂದು ಅವರು ಕಣ್ಣೀರು ಹಾಕಿದರು.

ಅಭಿಷೇಕ್ ಬ್ಯಾನರ್ಜಿಗೆ ಇ.ಡಿ ಸಮನ್ಸ್

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದ ಅಭಿಷೇಕ್ ಬ್ಯಾನರ್ಜಿ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಬುಧವಾರ ಸಮನ್ಸ್ ಜಾರಿ ಮಾಡಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿನ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಾಲ್ಟ್ ಲೇಕ್ ಬಳಿಯಿರುವ ಸಂಸ್ಥೆಯ ಸಿಜಿಒ ಕಾಂಪ್ಲೆಕ್ಸ್‌ಗೆ ಜೂನ್ 15ರಂದು ವಿಚಾರಣೆಗೆ ಬರುವಂತೆ ನಿರ್ದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇ.ಡಿ ಅಧಿಕಾರಿಗಳ ತಂಡವು ಅಭಿಷೇಕ್ ಬ್ಯಾನರ್ಜಿ ಅವರ ನಿವಾಸಕ್ಕೆ ಬುಧವಾರ ಸಂಜೆ ತೆರಳಿತ್ತು. ಈ ವೇಳೆ ಅಭಿಷೇಕ್ ಮನೆಯಲ್ಲಿ ಇಲ್ಲದ ಕಾರಣ ಸಮನ್ಸ್ ಅನ್ನು ಅವರ ಸಿಬ್ಬಂದಿಗೆ ತಲುಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಇ.ಡಿ 2022ರಿಂದ ತನಿಖೆ ನಡೆಸುತ್ತಿದೆ.

ಟಿಎಂಸಿ ಬಂಡಾಯ ಬಣವೇ ವಿಪಕ್ಷ

ಎರಡನೇ ಮುಖಪುಟದಿಂದ...

ಬಂಡಾಯ ಶಾಸಕರ ನಡೆಯನ್ನು ಪಕ್ಷದ ಹಿರಿಯರು ವಿರೋಧಿಸಿದ್ದಾರೆ. ಈ ಎಲ್ಲದರ ಮಧ್ಯೆಯೇ ಟಿಎಂಸಿ ತನ್ನ ಎಲ್ಲಾ ಸಂಘಟನಾ ಸಮಿತಿಗಳನ್ನು ವಿಸರ್ಜನೆ ಮಾಡಿದೆ.

ವಿರೋಧ ಪಕ್ಷದ ನಾಯಕನನ್ನು ನೇಮಿಸುವ ಸಂಬಂಧ ಅಭಿಷೇಕ್ ಬ್ಯಾನರ್ಜಿ ಅವರು ಮಂಗಳವಾರ ಸ್ಪೀಕರ್ ಅವರಿಗೆ ಪತ್ರ ಕಳುಹಿಸಿದ್ದರು. ಆದರೆ, ಸ್ಪೀಕರ್ ಅವರು ಕಚೇರಿಯಲ್ಲಿ ಇರಲಿಲ್ಲ. ಕಚೇರಿಯ ಕಾರ್ಯದರ್ಶಿಯು ಈ ಪತ್ರವನ್ನು ಸ್ವೀಕರಿಸಲಿಲ್ಲ. ಪತ್ರ ಸ್ವೀಕರಿಸಬಾರದು ಎಂಬ ಮೌಖಿಕ ಆದೇಶ ಇದೆ ಎಂದು ಕಾರ್ಯದರ್ಶಿ ಹೇಳಿದ್ದರು. ಅಂಚೆ ಮೂಲಕ ಮತ್ತು ಇ-ಮೇಲ್ ಮೂಲಕವೂ ಟಿಎಂಸಿ ಪತ್ರ ಕಳುಹಿಸಿತ್ತು. ಆದರೆ, ಬಂಡಾಯ ಶಾಸಕರು ಬುಧವಾರ ನೀಡಿದ ಪತ್ರವನ್ನು ಸ್ಪೀಕರ್ ಬೋಸ್ ಅವರು ಖುದ್ದು ಸ್ವೀಕರಿಸಿ, ಈ ಗುಂಪಿನ ಬೇಡಿಕೆಯನ್ನು ಮಾನ್ಯ ಮಾಡಿದ್ದಾರೆ.

ಅಭಿಷೇಕ್ ನಾಯಕತ್ವಕ್ಕೆ ವಿರೋಧ

ಎರಡನೇ ಮುಖಪುಟದಿಂದ...

ಈ ಶಾಸಕರ ದೂರಿನ ಅನ್ವಯ ಎಫ್‌ಐಆರ್ ದಾಖಲಾಗಿದ್ದು, ಪ್ರಕರಣದ ತನಿಖೆಯನ್ನು ಸಿಐಡಿಗೆ ನೀಡಲಾಗಿದೆ.

ಈ ಎಲ್ಲದರ ಮಧ್ಯೆಯೇ ಪಕ್ಷದ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು ಶೋಭನದೇಬ್ ಭಟ್ಟಾಚಾರ್ಯ ಅವರನ್ನು ವಿರೋಧ ಪಕ್ಷದ ನಾಯಕನನ್ನಾಗಿ ಮಾಡಬೇಕು ಎಂದು ಕೋರಿ ಸ್ಪೀಕರ್ ಅವರಿಗೆ ಮಂಗಳವಾರ ಪತ್ರ ಬರೆದಿದ್ದರು. ಇದಾದ 24 ಗಂಟೆಗಳಲ್ಲಿಯೇ 58 ಬಂಡಾಯ ಶಾಸಕರು ತಮ್ಮ ಸಹಿ ಇರುವ ಪತ್ರವನ್ನು ಸ್ಪೀಕರ್ ಅವರಿಗೆ ನೀಡಿದ್ದಾರೆ.

' ಅಭಿಷೇಕ್ ಬ್ಯಾನರ್ಜಿ ಅವರ ನಾಯಕತ್ವವನ್ನು ನಾವು ಒಪ್ಪುವುದಿಲ್ಲ' ಎಂದು ಬಂಡಾಯ ಶಾಸಕರು ಹೇಳುತ್ತಲೇ ಬಂದಿದ್ದಾರೆ. 'ಒಬ್ಬ ವ್ಯಕ್ತಿಯ ನಾಯಕತ್ವದಲ್ಲಿ ನಮಗೆ ನಂಬಿಕೆ ಇಲ್ಲ. ಚರ್ಚೆಯ ಮೂಲಕವೇ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು' ಎಂದು ರುತಬ್ರತಾ ಅವರು ಹೇಳಿದರು.

ರಾಜ್ಯದಲ್ಲಿ 6,158 ಭೂಮಿತಾಯಿ ರಕ್ಷಣೆ ಕಣ್ಗಾವಲು ಸಮಿತಿಗಳು ಕ್ರಿಯಾಶೀಲ

ಮಣ್ಣಿನ ಫಲವತ್ತತೆ ರಕ್ಷಣೆಗೆ ಆಂದೋಲನ

• ಸಂತೋಷ ಈ. ಚಿನಗುಡಿ

ಬೆಳಗಾವಿ: ದೇಶದ ಕೃಷಿಭೂಮಿ ಫಲವತ್ತತೆ ಕಾಯ್ದುಕೊಳ್ಳಲು ಮತ್ತು ರಸಗೊಬ್ಬರ ಅವಲಂಬನೆ ಕಡಿಮೆ ಮಾಡಲು ಕೇಂದ್ರ ಸರ್ಕಾರ 'ಧರತಿ ಮಾತಾ ಬಚಾವೊ' ಆಂದೋಲನ ಆರಂಭಿಸಿದೆ. ರಾಜ್ಯದ ರೈತರು ಸ್ಪಂದಿಸಿದ್ದು, 6,158 ಸಮಿತಿಗಳು ಈ ಕೆಲಸ ಮಾಡುತ್ತಿವೆ.

ಇದರ ಪರಿಣಾಮಕಾರಿ ಅನುಷ್ಠಾನಕ್ಕೆ ಕೃಷಿ ಇಲಾಖೆ 'ಭೂಮಿತಾಯಿ ರಕ್ಷಣೆ ಕಣ್ಗಾವಲು ಸಮತಿ' ರಚಿಸಿದೆ. ರಾಜ್ಯದಲ್ಲಿ ಗ್ರಾಮ ಮಟ್ಟದಲ್ಲಿ 5,891 ಸಮಿತಿಗಳು 236 ತಾಲ್ಲೂಕು ಮತ್ತು 31 ಜಿಲ್ಲಾ ಮಟ್ಟದಲ್ಲಿ ಏಪ್ರಿಲ್‌ನಿಂದ ಕ್ರಿಯಾಶೀಲವಾಗಿವೆ.

ನಗರ, ಪಟ್ಟಣ ಮತ್ತು ಗ್ರಾಮದಲ್ಲೂ ಸಮಿತಿಗಳು ಮಣ್ಣಿನ ಆರೋಗ್ಯ ಕಾಪಾಡಲು ಮುಂದಾಗಿವೆ. ಬೆಳಗಾವಿ ಜಿಲ್ಲೆಯು ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. 502 ಗ್ರಾಮ ಪಂಚಾಯಿತಿಗಳ ಪೈಕಿ ಮೇ 31ರವರೆಗೆ 396 ಪಂಚಾಯಿತಿಗಳಲ್ಲಿ ಆಂದೋಲನ ಪೂರ್ಣವಾಗಿದೆ. ಎರಡನೇ ಸ್ಥಾನದಲ್ಲಿ ಚಿತ್ರದುರ್ಗ ಜಿಲ್ಲೆಯಿದ್ದು, 189ರ ಪೈಕಿ 109ರಲ್ಲಿ ಚಟುವಟಿಕೆಗಳು ನಡೆದಿವೆ.

ಏನಿದರ ಕೆಲಸ: ವಿಪರೀತ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ಮಣ್ಣು ಅನಾರೋಗ್ಯಕ್ಕೆ ಒಳಗಾಗಿದೆ. ಮಾನವ ಹಾಗೂ ಪ್ರಾಣಿ- ಪಕ್ಷಿಗಳ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಹೆಚ್ಚಾಗಿವೆ. ರಸಗೊಬ್ಬರದ ವೈಜ್ಞಾನಿಕ ಬಳಕೆ, ಸಾವಯವ ಗೊಬ್ಬರಕ್ಕೆ ಉತ್ತೇಜನ, ಪರ್ಯಾಯ ಗೊಬ್ಬರ ಆಯ್ಕೆ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ಅರಿವು ಮೂಡಿಸುವುದು, ದುಷ್ಪರಿಣಾಮಗಳ ಎಚ್ಚರಿಕೆ ನೀಡುವುದು ಈ ಆಂದೋಲನದ ಉದ್ದೇಶ.



ರಸಗೊಬ್ಬರ ಬಳಕೆ ತಗ್ಗಿಸಿ, ಮಣ್ಣು ಆರೋಗ್ಯ ಕಾಪಾಡಲು ಕೈಗೊಂಡ ಆಂದೋಲನಕ್ಕೆ ಬೆಳಗಾವಿ ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ಸಿಕ್ಕಿದೆ. ಹಲವು ರೈತರು ಸಾವಯವಕ್ಕೆ ಮರಳಿದ್ದಾರೆ

ಎಚ್.ಡಿ.ಕೋಳೇಕರ, ಜಂಟಿ ನಿರ್ದೇಶಕ, ಕೃಷಿ ಇಲಾಖೆ, ಬೆಳಗಾವಿ

ಗ್ರಾಮ ಪಂಚಾಯಿತಿ ಅಧ್ಯಕ್ಷರೇ ಗ್ರಾಮ ಮಟ್ಟದ ಸಮಿತಿಯ ಅಧ್ಯಕ್ಷ. ಪಂಚಾಯಿತಿ ಕಾರ್ಯದರ್ಶಿ, ಕೃಷಿ ಸಖಿ ತಂಡ, ಡ್ರೋನ್ ಬಳಕೆ ತಂಡ, ಪ್ರಗತಿಪರ ರೈತರು, ಕೃಷಿ ಉತ್ಪಾದಕರ ಸಹಕಾರ ಸಂಘದ ಪ್ರತಿನಿಧಿಗಳೂ ಇದರ ಸದಸ್ಯರಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕ, ತಾಲ್ಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಗಳಿವೆ.

ಯೂರಿಯಾ ಆ್ಯಪ್: ಕಾಳಸಂತೆಗೆ ಮೂಗುದಾರ

'ರಾಜ್ಯದಲ್ಲಿ ಈ ಮುಂಗಾರಿಗೆ 30.05 ಲಕ್ಷ ಟನ್ ರಸಗೊಬ್ಬರ ಬೇಡಿಕೆ ಇದೆ. ಈವರೆಗೆ 11.41 ಲಕ್ಷ ಟನ್ ಮಾತ್ರ ಸಂಗ್ರಹವಾಗಿದೆ. 18.64 ಲಕ್ಷ ಟನ್ ಕೊರತೆ ಕಾಡುತ್ತಿದೆ. ಇಷ್ಟರಲ್ಲೇ ಮುಂಗಾರು ಬೇಡಿಕೆ ಸರಿದೂಗಿಸಲು ಕೃಷಿ ಹಾಗೂ ರಸಗೊಬ್ಬರ ಅಧಿಕಾರಿಗಳಿಗೆ 'ಟಾಸ್ಕ್' ಕೊಡಲಾಗಿದೆ. ಹೀಗಾಗಿ, 'ಭೂಮಿತಾಯಿ ರಕ್ಷಣೆ ಕಣ್ಗಾವಲು ಸಮಿತಿ' ಆಂದೋಲನ ಮಾದರಿಯಲ್ಲಿ ಕೆಲಸ ಮಾಡುತ್ತಿದೆ' ಎಂದು ರಸಗೊಬ್ಬರ ಸರಬರಾಜು ಅಧಿಕಾರಿಗಳು ತಿಳಿಸಿದ್ದಾರೆ.

'ಕಾಳಸಂತೆ ಹಾವಳಿ ತಡೆಯಲು ಸರ್ಕಾರ 'ಯೂರಿಯಾ' ಆ್ಯಪ್ ಸಿದ್ಧಗೊಳಿಸಿದೆ. ಫ್ರೂಟ್ಸ್‌ನಲ್ಲಿ (FRUITS) ದಾಖಲಿಸಿದ ಪ್ರತಿ ಮಾಹಿತಿಯೂ ಈ ಆ್ಯಪ್‌ನಲ್ಲಿ ಸಿಗಲಿದೆ. ರೈತರ ಆಧಾರ್ ಸಂಖ್ಯೆ ಹಾಕಿದರೆ ಸಾಕು; ಅವರ ಹೊಲ, ಬೆಳೆ, ಮಣ್ಣಿನ ಗುಣ ಹಾಗೂ ಎಷ್ಟು ಗೊಬ್ಬರ ಅಗತ್ಯ ಎಂಬುದರ ಮಾಹಿತಿ ಸಿಗಲಿದೆ. ಅದನ್ನು ಆಧರಿಸಿ ರಸಗೊಬ್ಬರ ವಿತರಿಸಲಾಗುತ್ತಿದೆ' ಎಂದರು.



ಬೆಳಗಾವಿ ತಾಲ್ಲೂಕಿನ ಕೋಳಿಕೊಪ್ಪ ಗ್ರಾಮದ ರೈತ ಪೀರಾಜಿ ಬಡ್ಲಿ ಅವರು ಈಚೆಗೆ ಮುಂಗಾರು ಬಿತ್ತನೆಗಾಗಿ ಹೊಲ ಹದ ಮಾಡಿದರು —ಪ್ರಜಾವಾಣಿ ಚಿತ್ರ


DB®
Siggnature
Finest Cardamom Seeds
New Pack
DB®
Siggnature
GOLD & SILVER
Finest Cardamom Seeds
A Premium Product from Dilbagh®
www.dbsiggnature.com
A Premium Product from Dilbagh®

ಉತ್ತಮ ಉದ್ಯಮಿ ತಾನು ಮಾಡುವ
ಎಲ್ಲದಕ್ಕೂ ಆರ್ಥಿಕ ಶಿಸ್ತನ್ನು ಅನ್ವಯಿಸುತ್ತಾನೆ
ಪೌಲಾ ವ್ಯಾಗ್ನರ್, ಲೇಖಕಿ

ದುಡ್ಡಿನಂಥಾ ಮಾತು



ಪ್ಯಾಸಿವ್ ಹೂಡಿಕೆ ಮತ್ತು ಸ್ಮಾರ್ಟ್ ಬೀಟಾ

• ಶರವಣ್ ಗೋಯಲ್

ಇಂದಿನ ಹೂಡಿಕೆ ವ್ಯವಸ್ಥೆಯಲ್ಲಿ ಹೂಡಿಕೆದಾರರಿಗೆ ಸಂಕೀರ್ಣವೂ ಬಹಳ ಸಮಯ ತೆಗೆದುಕೊಳ್ಳುವಂಥದ್ದೂ ಆದ ಸವಾಲೊಂದು ಮತ್ತೆ ಮತ್ತೆ ಎದುರಾಗುತ್ತಿದೆ.

ಬೇರೆ ಬೇರೆ ಆಸ್ತಿ ವರ್ಗಗಳಲ್ಲಿ ಹೂಡಿಕೆ ಮಾಡುವ ಹತ್ತು ಹಲವು ಹೂಡಿಕೆ ಉತ್ಪನ್ನಗಳ ಪೈಕಿ ಸರಿಯಾದ ಫಂಡ್ ಆಯ್ಕೆ ಮಾಡುವುದು ಹೇಗೆ ಎಂಬುದು ಅವರ ಮುಂದಿರುವ ಸಮಸ್ಯೆ. ಹೂಡಿಕೆ ಶೈಲಿ, ಕಾರ್ಯತಂತ್ರಗಳಲ್ಲಿ ಭಿನ್ನವಾಗಿರುವ ನೂರಾರು ಯೋಜನೆಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯವಿವೆ. ಇದರಿಂದಾಗಿ ವಿಶೇಷವಾಗಿ ಸಣ್ಣ ಹೂಡಿಕೆದಾರರಿಗೆ ಸರಿಯಾದ ಫಂಡ್ ಆಯ್ಕೆಯು ಬಹಳ ಸವಾಲಿನ ಕೆಲಸ ಆಗುತ್ತಿದೆ.

ಈ ಹಿನ್ನೆಲೆಯಲ್ಲಿ ಪ್ಯಾಸಿವ್ ಹೂಡಿಕೆ ಶೈಲಿಯು ಬಹಳ ಆಕರ್ಷಕವಾದ ಪರ್ಯಾಯವಾಗಿ ಬೆಳೆದಿದೆ. ಈ ಶೈಲಿಯು ತನ್ನ ಸರಳ ತಂತ್ರ, ಕಡಿಮೆ ವೆಚ್ಚ, ಮಾರುಕಟ್ಟೆ ಆಧಾರಿತ ಗಳಿಕೆಯ ಕಾರಣಕ್ಕಾಗಿ ಬಹಳ ವೇಗವಾಗಿ ಬೆಳವಣಿಗೆ ಕಾಣುತ್ತಿದೆ. ಕಳೆದ ಕೆಲವು ವರ್ಷಗಳಿಂದ ಈ ಬಗೆಯ ಫಂಡ್‌ಗಳಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂಬುದನ್ನು ಫೋಲಿಯೊಗಳಲ್ಲಿ ಆಗಿರುವ ಏರಿಕೆಯು ತೋರಿಸುತ್ತಿದೆ.

ಡಿಜಿಟಲ್ ವೇದಿಕೆಗಳ ಮೂಲಕ ಹೂಡಿಕೆಗೆ ಅವಕಾಶ ದೊರೆತಿರುವುದು, ಹೂಡಿಕೆ ಉತ್ಪನ್ನದ ಬಗ್ಗೆ ಬಹಳ ಸರಳವಾಗಿ ಮಾಹಿತಿ ಒದಗಿಸುತ್ತಿರುವುದು, ಶುಲ್ಕದ ಬಗ್ಗೆ ಅರಿವು ಹೆಚ್ಚಾಗುತ್ತಿರುವುದು ಕೂಡ ಇದಕ್ಕೆ ಒಂದು ಕಾರಣ. ಇವೆಲ್ಲಕ್ಕಿಂತ ಹೆಚ್ಚಾಗಿ ಪ್ಯಾಸಿವ್ ಹೂಡಿಕೆ ಶೈಲಿಯು ಹೂಡಿಕೆದಾರರ ಮೇಲೆ ಎರಡು ವಿಚಾರಗಳಲ್ಲಿ ಪ್ರಭಾವ ಬೀರುತ್ತಿವೆ. ಅವು ಸಂಪತ್ತು ಸೃಷ್ಟಿಯ ಎರಡು ಮುಖ್ಯ ಅಂಶಗಳು ಕೂಡ ಹೌದು.

ಮೊದಲನೆಯದು ಶುಲ್ಕಗಳನ್ನು ಕಡಿಮೆ ಮಟ್ಟದಲ್ಲಿ ಇರಿಸುವುದು ಹಾಗೂ ಎರಡನೆಯದು ಆಸ್ತಿ ವರ್ಗಗಳಲ್ಲಿ ಹಂಚಿಕೆಯನ್ನು ಸರಿಯಾಗಿ ಮಾಡುವುದು.

ಹೋಲಿಕೆ ಮಾಡುವ ಸೂಚ್ಯಂಕ ನೀಡುವ ಗಳಿಕೆಗೆ ಮೀರಿದ ಗಳಿಕೆಯನ್ನು ತಾವು ಪಡೆಯುವ ಬದಲಿಗೆ, ಆ ಸೂಚ್ಯಂಕಕ್ಕೆ ಸರಿಸಮನಾದ ಗಳಿಕೆಯನ್ನು ತಾವೂ ಪಡೆಯಬೇಕು ಎಂಬುದರತ್ತ ಹೂಡಿಕೆದಾರರು ಈಚಿನ ದಿನಗಳಲ್ಲಿ ಹೆಚ್ಚು ಗಮನ ನೀಡುತ್ತಿದ್ದಾರೆ. ಇದರ ಹಿಂದಿರುವ ತರ್ಕವು ಬಹಳ ಸರಳವಾಗಿದೆ.

ಸೂಚ್ಯಂಕ ಆಧಾರಿತ ಹೂಡಿಕೆಯು ಬೇರೆ ಬೇರೆ ವಲಯ ಹಾಗೂ ವರ್ಗಗಳಿಗೆ ಸೇರಿದ ಷೇರುಗಳಲ್ಲಿ ಹಣ ತೊಡಗಿಸುತ್ತದೆ, ಈ ಬಗೆಯ ಹೂಡಿಕೆಯ ಹಿಂದೆ ನಿರ್ದಿಷ್ಟವಾದ ನಿಯಮ ಇರುತ್ತದೆ, ಇಲ್ಲಿ ಮತ್ತೆ ಮತ್ತೆ ತೀರ್ಮಾನಗಳನ್ನು ಬದಲಾಯಿಸುತ್ತ ಇರಬೇಕಾದ ಅಥವಾ ಹೊಸ ತೀರ್ಮಾನಗಳನ್ನು ತೆಗೆದುಕೊಳ್ಳುತ್ತ ಇರಬೇಕಾದ ಅಗತ್ಯ ಇಲ್ಲ. ಆದರೂ, ಷೇರು ಸೂಚ್ಯಂಕಗಳು ಗಳಿಕೆಯನ್ನು ಅಳೆಯಲು ಒಂದು ಮಾನದಂಡವಾಗಿ ಒದಗಿಬರುತ್ತವೆಯೇ ಹೊರತು ಆ ಸೂಚ್ಯಂಕಗಳೇ ಹೂಡಿಕೆ ಉತ್ಪನ್ನಗಳೋ, ಖರೀದಿ-ಮಾರಾಟ ಸಾಧ್ಯವಾಗುವ ಉತ್ಪನ್ನಗಳೋ ಅಲ್ಲ.

ಸೂಚ್ಯಂಕ ಆಧಾರಿತ ಫಂಡ್‌ಗಳು ಮತ್ತು ಇಟಿಎಫ್‌ಗಳು ಬಹಳ ಸುಲಭವಾದ ಹಾಗೂ ಪರಿಣಾಮಕಾರಿಯಾದ ಹೂಡಿಕೆ ಆಯ್ಕೆಗಳಾಗಿ ಕಾಣಿಸುವುದು ಈ ಹಂತದಲ್ಲಿ.

ಹೋಲಿಕೆಗೆ ಬಳಸುವ ಸೂಚ್ಯಂಕಕ್ಕೆ ಸರಿಸಮನಾದ ಗಳಿಕೆಯನ್ನು ತಂದುಕೊಡಲು ಆ ಸೂಚ್ಯಂಕದಲ್ಲಿ ಯಾವೆಲ್ಲ ಕಂಪನಿಯ ಷೇರುಗಳು ಯಾವ ಪ್ರಮಾಣದಲ್ಲಿ ಪ್ರಾತಿನಿಧ್ಯ ಹೊಂದಿವೆಯೋ ಅದೇ ಪ್ರಮಾಣದಲ್ಲಿ ಆ ಷೇರುಗಳಲ್ಲಿ ಹಣ ತೊಡಗಿಸುವ ಬಗೆಯಲ್ಲಿ ಈ ಹೂಡಿಕೆ ಉತ್ಪನ್ನಗಳ ವಿನ್ಯಾಸ ಮಾಡಲಾಗಿರುತ್ತದೆ. ಹೀಗೆ ಮಾಡುವುದರಿಂದ ಈ ಉತ್ಪನ್ನಗಳು ಹೂಡಿಕೆದಾರರಿಗೆ ಮಾರುಕಟ್ಟೆಯ ಗಳಿಕೆಗೆ ಸರಿಸಮನಾದ ಗಳಿಕೆಯನ್ನು ಪಡೆಯಲು ಸರಳವಾದ ಮಾರ್ಗವೊಂದನ್ನು ಒದಗಿಸುತ್ತವೆ. ಈ ಬಗೆಯ ಹೂಡಿಕೆಯಲ್ಲಿ ಹೂಡಿಕೆದಾರರಿಗೆ ತಮ್ಮ ಪೋರ್ಟ್‌ಫೋಲಿಯೊ ನಿರ್ವಹಣೆಯ ತಲೆಬಿಸಿ ಇರುವುದಿಲ್ಲ.

ಏಕೆ ಗಮನ ಸೆಳೆಯುತ್ತಿವೆ?

- **ಕಡಿಮೆ ವೆಚ್ಚ, ಹೆಚ್ಚಿನ ಗಳಿಕೆ:** ಇಲ್ಲಿ ಹೂಡಿಕೆ ಪೋರ್ಟ್‌ಫೋಲಿಯೊ ಒಂದು ಸೂಚ್ಯಂಕವನ್ನು ಅನುಕರಿಸುವ ಕಾರಣದಿಂದಾಗಿ ವೆಚ್ಚಗಳು ಸಕ್ರಿಯವಾಗಿ ನಿರ್ವಹಣೆ ಆಗುವ ಫಂಡ್‌ಗಳಿಗಿಂತ ಕಡಿಮೆ ಇರುತ್ತವೆ. ದೀರ್ಘಾವಧಿಗೆ ಇಲ್ಲಿ ಹೂಡಿಕೆ ಮಾಡಿದಾಗ, ವಾರ್ಷಿಕ ವೆಚ್ಚದಲ್ಲಿನ ಸಣ್ಣ ಮೊತ್ತದ ಉಳಿತಾಯಗಳು ಕೂಡ ಹಣಕಾಸಿನ ಗುರಿಯನ್ನು ತಲುಪುವ ಸಾಧ್ಯತೆಯನ್ನು ಬಹಳ ಅರ್ಥಪೂರ್ಣ ಮಟ್ಟದಲ್ಲಿ ಹೆಚ್ಚಿಸುತ್ತವೆ.
- **ಪಾರದರ್ಶಕತೆ:** ಇಲ್ಲಿ ಹೂಡಿಕೆದಾರರಿಗೆ ತಾವು ಯಾವುದರ ಮಾಲೀಕತ್ವ ಹೊಂದಿದ್ದೇವೆ ಎಂಬುದು ತಿಳಿದಿರುತ್ತದೆ. ಸೂಚ್ಯಂಕದಲ್ಲಿ ಯಾವೆಲ್ಲ ಷೇರುಗಳು ಇವೆ ಎಂಬುದು ಸಾರ್ವಜನಿಕವಾಗಿ ಪ್ರಕಟವಾಗಿರುತ್ತದೆ.
  ಇಲ್ಲಿ ನಿಧಿ ನಿರ್ವಾಹಕನ ತೀರ್ಮಾನಗಳನ್ನು ಹೆಚ್ಚು ನೆಚ್ಚಿಕೊಳ್ಳಬೇಕಾಗಿಲ್ಲ.
- **ವರ್ತನೆಗಳ ಮೇಲೆ ಪ್ರಭಾವ:** ಈಚಿನ ಗಳಿಕೆಯನ್ನು ಆಧರಿಸಿ ಹೆಚ್ಚು ಗಳಿಕೆ ನೀಡಿದ ಫಂಡ್‌ಗಳಲ್ಲಿ ಹಣ ತೊಡಗಿಸಬೇಕು ಎಂದು ಮನಸ್ಸಿನಲ್ಲಿ ಮೂಡುವ ಒತ್ತಡವನ್ನು ಪ್ಯಾಸಿವ್ ಹೂಡಿಕೆ ವಿಧಾನವು ಕಡಿಮೆ ಮಾಡುತ್ತದೆ.
- **ಹೆಚ್ಚಿನ ಆಯ್ಕೆಗಳು:** ಲಾರ್ಜ್‌ಕ್ಯಾಪ್ ವಲಯದ ಷೇರುಗಳು ಇರುವ ನಿಫ್ಟಿ-50 ಅಥವಾ ಸೆನ್ಸೆಕ್ಸ್ ಮಾತ್ರವೇ ಅಲ್ಲದೆ, ಪ್ಯಾಸಿವ್ ಹೂಡಿಕೆಗೆ ಮುಂದಾಗುವವರಿಗೆ ಬಹಳಷ್ಟು ಆಯ್ಕೆಗಳು ಇವೆ. ಮಿಡ್‌ಕ್ಯಾಪ್, ಸ್ಮಾಲ್‌ಕ್ಯಾಪ್, ವಿವಿಧ ವಲಯ, ಸಾಲಪತ್ರ ಆಧಾರಿತ ಸೂಚ್ಯಂಕ ಸೇರಿದಂತೆ ವಿವಿಧ ಬಗೆಗಳ ಹೂಡಿಕೆ ಆಯ್ಕೆಗಳು ಅವರಿಗೆ ಲಭ್ಯವಿವೆ. ಇದರಿಂದಾಗಿ ಹೂಡಿಕೆದಾರರಿಗೆ ಸರಿಯಾಗಿ ಅರಿತು ಹೂಡಿಕೆ ಮಾಡಲು ಅವಕಾಶ ಸಿಗುತ್ತದೆ.
- **ಸೂಚ್ಯಂಕಗಳ ಬಗ್ಗೆ ಹೆಚ್ಚಿದ ಅರಿವು:** ಸಕ್ರಿಯವಾಗಿ ನಿರ್ವಹಣೆ ಆಗುವ ಫಂಡ್‌ಗಳು, ಅವುಗಳ ಗಳಿಕೆಯ ಹೋಲಿಕೆಗೆ ಬಳಕೆಯಾಗುವ ಸೂಚ್ಯಂಕಗಳಿಗಿಂತ ಎಷ್ಟರಮಟ್ಟಿಗೆ ಹೆಚ್ಚು ಲಾಭ ತಂದುಕೊಟ್ಟಿವೆ ಎಂಬುದನ್ನು ಹೂಡಿಕೆದಾರರು ಹೋಲಿಸಿ ನೋಡುತ್ತಿದ್ದಾರೆ. ಹೀಗೆ ಮಾಡಿ ಅವರು ತಮ್ಮ ಹೂಡಿಕೆಯ ಒಂದು ಭಾಗವನ್ನು ಸೂಚ್ಯಂಕ ಆಧಾರಿತ ಹೂಡಿಕೆಗಳಲ್ಲಿ ತೊಡಗಿಸಲು, ಇನ್ನೊಂದು ಭಾಗವನ್ನು ಸಕ್ರಿಯವಾಗಿ ನಿರ್ವಹಣೆ ಆಗುವ ಫಂಡ್‌ಗಳಲ್ಲಿ ತೊಡಗಿಸಲು ಮುಂದಾಗುತ್ತಿದ್ದಾರೆ.
- **ಹೆಚ್ಚುತ್ತಿರುವ ಭಾಗೀದಾರಿಕೆ:** ಕಳೆದ ಮೂರು ವರ್ಷಗಳಲ್ಲಿಪ್ಯಾಸಿವ್ ಹೂಡಿಕೆಯ ಫೋಲಿಯೊ ಸಂಖ್ಯೆ ಹೆಚ್ಚಾಗುತ್ತಿದೆ. ಅಂದರೆ ಪ್ಯಾಸಿವ್ ಹೂಡಿಕೆ ಎಂಬುದು ಕೆಲವರಿಗಷ್ಟೇ ಸೀಮಿತವಾದ ಆಲೋಚನೆ ಆಗಿ ಉಳಿದಿಲ್ಲ. ಅದು ಹೊಸ ಹೂಡಿಕೆದಾರರಿಗೆ ಹಾಗೂ ಹೆಚ್ಚಿನ ಪರಿಣತಿ ಇರುವ ಹೂಡಿಕೆದಾರರಿಗೆ ಸಹಜ ಆಯ್ಕೆಯಾಗಿ ಬದಲಾಗುತ್ತಿದೆ.

ಲೇಖಕ ಯುಟಿಐ ಎಎಂಸಿಯ
ಈಕ್ವಿಟಿ ವಿಭಾಗದ ಹಿರಿಯ ಉಪಾಧ್ಯಕ್ಷ

ಸ್ಮಾರ್ಟ್ ಬೀಟಾ: ಪ್ಯಾಸಿವ್ ಹೂಡಿಕೆಯಲ್ಲಿ ಮುಂದಿನ ಹಂತ

ಕಳೆದ ಕೆಲವು ವರ್ಷಗಳಿಂದ ಕುಟುಂಬಗಳ ಉಳಿತಾಯದ ಹಣವು, ಬಂಡವಾಳ ಮಾರುಕಟ್ಟೆಯ ಉತ್ಪನ್ನಗಳಲ್ಲಿ ದೊಡ್ಡಮಟ್ಟದಲ್ಲಿ ವಿನಿಯೋಗ ಆಗುತ್ತಿದೆ. ಅರಿವು ಹೆಚ್ಚಾಗಿರುವುದು, ಡಿಜಿಟಲ್ ವೇದಿಕೆಗಳು ಲಭ್ಯವಾಗಿರುವುದು, ಯುವ ಹೂಡಿಕೆದಾರರ ಪಾಲ್ಗೊಳ್ಳುವಿಕೆ ಜಾಸ್ತಿ ಆಗಿರುವುದು ಪ್ಯಾಸಿವ್ ಫಂಡ್‌ಗಳ ಬೆಳವಣಿಗೆಗೆ ಇಂಧನವಾಗಿ ಕೆಲಸ ಮಾಡಿವೆ. ಪ್ಯಾಸಿವ್ ಹೂಡಿಕೆಗಳಲ್ಲಿಸ್ಮಾರ್ಟ್–ಬೀಟಾ ಹೂಡಿಕೆ ತಂತ್ರವು ಈಚಿನ ದಿನಗಳಲ್ಲಿ ಬಹಳ ಜನಪ್ರಿಯತೆ ಗಳಿಸುತ್ತಿದೆ. ಈ ಹೂಡಿಕೆ ತಂತ್ರವು ಸಾಂಪ್ರದಾಯಿಕವಾದ ಹಾಗೂ ಮಾರುಕಟ್ಟೆ ಬಂಡವಾಳ ಗಾತ್ರವನ್ನು ಆಧರಿಸಿದ ಸೂಚ್ಯಂಕದ ಆಚೆಗೆ ಗಮನ ನೀಡುತ್ತದೆ.

ಷೇರುಗಳ ಮೌಲ್ಯ, ಅವುಗಳ ಗುಣಮಟ್ಟ, ಅವು ಮೌಲ್ಯವರ್ಧಿಸಿಕೊಳ್ಳುತ್ತಿರುವ ಪ್ರಮಾಣ, ಅವುಗಳಲ್ಲಿ ಅಸ್ಥಿರತೆ ಕಡಿಮೆ ಇರುವುದನ್ನು ಗಮನಿಸಿ ಸೂಚ್ಯಂಕವನ್ನು ರೂಪಿಸಲಾಗುತ್ತದೆ. ಸ್ಮಾರ್ಟ್-ಬೀಟಾ ಹೂಡಿಕೆ ವಿಧಾನವನ್ನು ಅನುಸರಿಸುವ ಫಂಡ್‌ಗಳನ್ನು ಬಹಳ ದೃಢವಾದ ಹಾಗೂ ನಿರ್ದಿಷ್ಟ ನಿಯಮ ಆಧರಿಸಿದ, ಪಾರದರ್ಶಕ ವಿಧಾನ ಆಧರಿಸಿ ರೂಪಿಸಲಾಗುತ್ತದೆ.

ಸಾಂಪ್ರದಾಯಿಕ ಸೂಚ್ಯಂಕಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಗಳಿಕೆಯನ್ನು ತಂದುಕೊಡುವ ಬಗೆಯಲ್ಲಿ ಇವುಗಳನ್ನು ರೂಪಿಸಲಾಗುತ್ತದೆ.

ಹೂಡಿಕೆದಾರರ ಇಷ್ಟ–ಕಷ್ಟಗಳನ್ನು ಆಧರಿಸಿ ಸಹಜವಾಗಿ ಬೆಳೆಯುವ ಪೂರ್ವಗ್ರಹಗಳನ್ನು ಮೀರಿ ಪೋರ್ಟ್‌ಫೋಲಿಯೊ ರೂಪಿಸಲಾಗುತ್ತದೆ. ಅಲ್ಲದೆ ಕಾಲಕಾಲಕ್ಕೆ ಸೂಚ್ಯಂಕವನ್ನು ಮರುಹೊಂದಾಣಿಕೆ ಮಾಡಲಾಗುತ್ತದೆ. ಈ ಹೂಡಿಕೆ ಕಾರ್ಯತಂತ್ರವು ಹೂಡಿಕೆದಾರರಿಗೆ ಸಾಂಪ್ರದಾಯಿಕ ಪ್ಯಾಸಿವ್ ಹೂಡಿಕೆಯ ಅನುಕೂಲ ಹಾಗೂ ಹೆಚ್ಚಿನ ಗಳಿಕೆಯ ಸಾಧ್ಯತೆಯನ್ನು ತೆರೆದುಕೊಡುತ್ತದೆ.

ದೀರ್ಘಾವಧಿ ಹೂಡಿಕೆದಾರರಿಗೆ ಮಾರುಕಟ್ಟೆಯ ಗಳಿಕೆಗಿಂತ ಹೆಚ್ಚಿನ ಗಳಿಕೆ ಬೇಕು ಎಂಬುದರ ಬಗ್ಗೆ ಜಾಸ್ತಿ ತಲೆಕೆಡಿಸಿಕೊಳ್ಳದ, ನಿರಂತರವಾಗಿ ಮಾರುಕಟ್ಟೆಯಲ್ಲಿ ಹಣತೊಡಗಿಸುವ ಹೂಡಿಕೆದಾರರಿಗೆ ಪ್ಯಾಸಿವ್ ಫಂಡ್‌ಗಳು ಹೇಳಿ ಮಾಡಿಸಿದಂತೆ ಇವೆ.

ಮುನ್ನಂದಾಜು ಮಾಡಬಹುದಾದ ಪ್ರಮಾಣದ ಗಳಿಕೆಯನ್ನು ಬಯಸುವವರಿಗೆ, ಕಡಿಮೆ ವೆಚ್ಚದಲ್ಲಿ ಹೂಡಿಕೆ ಸಾಧ್ಯವಾಗಬೇಕು ಎನ್ನುವವರಿಗೆ ಮತ್ತು ಸೂಚ್ಯಂಕಕ್ಕೆ ಅನುಗುಣವಾದ ಗಳಿಕೆಯನ್ನು ಬಯಸುವವರಿಗೆ ಇದು ಸೂಕ್ತ.

ಬಹುತೇಕರ ಪಾಲಿಗೆ ಲಾರ್ಜ್‌ಕ್ಯಾಪ್ ಕಂಪನಿಗಳ ಮೇಲೆ ಗಮನಹರಿಸುವ ಇಟಿಎಫ್‌ಗಳು ಹಾಗೂ ಇಂಡೆಕ್ಸ್ ಫಂಡ್‌ಗಳು ದೀರ್ಘಾವಧಿ ಹೂಡಿಕೆಗೆ ಸೂಕ್ತವಾಗಬಹುದು.

ಮಾರುಕಟ್ಟೆಗಳಿಗೆ ಸುಲಲಿತ ಲಭ್ಯತೆ

ಇಂದು ಪ್ಯಾಸಿವ್ ಹೂಡಿಕೆಗೆ ಹಲವು ಆಯ್ಕೆಗಳು ಲಭ್ಯವಿವೆ. ಇಟಿಎಫ್‌ಗಳು ಷೇರುಪೇಟೆಗಳಲ್ಲಿ ಕಂಪನಿಗಳ ಷೇರುಗಳ ಬಗೆಯಲ್ಲಿಯೇ ಖರೀದಿ ಮತ್ತು ಮಾರಾಟ ಆಗುತ್ತಿರುತ್ತವೆ. ಅವುಗಳನ್ನು ವಹಿವಾಟಿನ ಹೊತ್ತಿನಲ್ಲಿ ಷೇರುಗಳ ಮಾದರಿಯಲ್ಲಿಯೇ ಖರೀದಿಸಬಹುದು, ಮಾರಾಟ ಮಾಡಬಹುದು. ಇಂಡೆಕ್ಸ್ ಫಂಡ್‌ಗಳು ಸಾಂಪ್ರದಾಯಿಕ ಮ್ಯೂಚುವಲ್ ಫಂಡ್ ಬಗೆಯಲ್ಲೇ ಕಾರ್ಯನಿರ್ವಹಿಸುತ್ತವೆ. ಆಸ್ತಿ ನಿರ್ವಹಣಾ ಕಂಪನಿಗಳ ಮೂಲಕ, ಮ್ಯೂಚುವಲ್ ಫಂಡ್ ವಿತರಕರ ಮೂಲಕ ಅವುಗಳಲ್ಲಿ ಹೂಡಿಕೆ ಮಾಡಬಹುದು.

ಮಾರುಕಟ್ಟೆಗಳು ವಿಕಾಸ ಆದಂತೆಲ್ಲ, ಹೂಡಿಕೆ ಆಯ್ಕೆಗಳು ಹೆಚ್ಚು ಪ್ರಬುದ್ಧವಾದಂತೆಲ್ಲ ಪ್ಯಾಸಿವ್ ಹೂಡಿಕೆ ತಂತ್ರವು ತೀರಾ ವಿಶಿಷ್ಟವಾದ ಗುಂಪಿಗೆ ಸೀಮಿತವಾಗಿ ಉಳಿದಿಲ್ಲ. ಅದು ಈಗ ಆಧುನಿಕ ಪೋರ್ಟ್‌ಫೋಲಿಯೊ ನಿರ್ಮಾಣದ ಮೂಲಭೂತ ಅಂಶಗಳಲ್ಲಿ ಒಂದಾಗಿದೆ. ಸರಳತೆ, ಪಾರದರ್ಶಕತೆ ಮತ್ತು ದಕ್ಷತೆಯ ಕಾರಣದಿಂದಾಗಿ ಪ್ಯಾಸಿವ್ ಫಂಡ್‌ಗಳು ಮುಂದಿನ ವರ್ಷಗಳಲ್ಲಿಯೂ ಹೂಡಿಕೆದಾರರ ಪೋರ್ಟ್‌ಫೋಲಿಯೊದ ಆಧಾರಸ್ತಂಭಗಳಲ್ಲಿ ಒಂದಾಗಿರುತ್ತವೆ.

ಷೇರುಪೇಟೆಯ ವಿವಿಧ ಉತ್ಪನ್ನಗಳಲ್ಲಿ ಕುಟುಂಬಗಳ ₹6.91 ಲಕ್ಷ ಕೋಟಿ ಹೂಡಿಕೆ

ದೇಶದಲ್ಲಿನ ಕುಟುಂಬಗಳು ಹೂಡಿಕೆಯ ಮೊತ್ತವನ್ನು ಷೇರುಪೇಟೆಯ ಉತ್ಪನ್ನಗಳ ಕಡೆ ತಿರುಗಿಸಿದ್ದು, ಈ ಹೂಡಿಕೆಯ ಒಟ್ಟು ಮೊತ್ತವು 2024–25ರ ಆರ್ಥಿಕ ವರ್ಷದಲ್ಲಿ ₹6.91 ಲಕ್ಷ ಕೋಟಿಗೆ ಜಿಗಿದಿದೆ. 2023–24ರಲ್ಲಿ ಇದು ₹3.58 ಲಕ್ಷ ಕೋಟಿಯಷ್ಟಿತ್ತು.

ಕುಟುಂಬಗಳು ಹಣವನ್ನು ಉಳಿಸಲು ಷೇರುಪೇಟೆಯು ನಿರ್ಣಾಯಕವಾಗಿದೆ. ಚಿನ್ನ ಮತ್ತು ರಿಯಲ್ ಎಸ್ಟೇಟ್‌ನಂತಹ ಸಾಂಪ್ರದಾಯಿಕ ಆಸ್ತಿಗಳಿಗೆ, ಆಕರ್ಷಕ ಪರ್ಯಾಯ ಹೂಡಿಕೆಗಳಾಗಿ ಹೊರಹೊಮ್ಮುತ್ತಿದೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧಿಕಾರಿಗಳು ಸಿದ್ಧಪಡಿಸಿರುವ ಲೇಖನವೊಂದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಚಿನ್ನ ಮತ್ತು ರಿಯಲ್ ಎಸ್ಟೇಟ್‌ನಂತಹ ಭೌತಿಕ ಆಸ್ತಿಗಳು ಸಾಂಪ್ರದಾಯಿಕವಾಗಿ ಆದ್ಯತೆ ಪಡೆದಿದ್ದರೂ, ಹೆಚ್ಚಿನ ಗಳಿಕೆಯಿಂದ ಈ ಸ್ವತ್ತುಗಳು ಹೆಚ್ಚಿನ ಜನಪ್ರಿಯತೆ ಪಡೆದಿವೆ.

ಹೂಡಿಕೆಯ ಮೇಲಿನ ತೆರಿಗೆ ಪ್ರೋತ್ಸಾಹ, ಹಣಕಾಸು ಒಳಗೊಳ್ಳುವಿಕೆ ಕಾರ್ಯಕ್ರಮಗಳು, ಡಿಜಿಟಲ್ ಬ್ಯಾಂಕಿಂಗ್‌ನಂತಹ ಸರ್ಕಾರದ ಕ್ರಮಗಳು ದೇಶದಲ್ಲಿನ ಕುಟುಂಬಗಳು ಷೇರುಪೇಟೆಯಲ್ಲಿ ಹೂಡಿಕೆ ಮಾಡಲು ಉತ್ತೇಜನ ನೀಡಿವೆ.

ಷೇರುಪೇಟೆಯ ಮೂಲಕ ಕುಟುಂಬಗಳ ಉಳಿತಾಯ (₹ಕೋಟಿಗಳಲ್ಲಿ)

ಉತ್ಪನ್ನಗಳು	2022-23	2023-24	2024-25
ಪ್ರಾಥಮಿಕ ಮಾರುಕಟ್ಟೆಯ ಮೂಲಕ ಉಳಿತಾಯ			
ಮ್ಯೂಚುವಲ್ ಫಂಡ್	1,66,515	2,85,052	5,12,765
ಈಕ್ವಿಟಿ	32,486	46,879	95,139
ಡೆಟ್	22,900	24,882	22,400
ಆರ್‌ಇಐಟಿ	-	248	425
ಇನ್ವಿಟ್ಸ್	152	479	783
ಒಟ್ಟು ಉಳಿತಾಯ	2,21,243	3,57,539	6,31,510
ದ್ವಿತೀಯ ಮಾರುಕಟ್ಟೆಯ ಮೂಲಕ ಉಳಿತಾಯ			
ಮ್ಯೂಚುವಲ್ ಫಂಡ್‌ಗಳು (ಇಟಿಎಫ್ ಸೇರಿದಂತೆ)	9,448	9,783	30,885
ಈಕ್ವಿಟಿ	-27,684	-69,329	-54,786
ಡೆಟ್	56,452	56,744	81,887
ಆರ್‌ಇಐಟಿ	-448	56	437
ಇನ್ವಿಟ್ಸ್	778	3,564	1,029
ಒಟ್ಟು	38,546	818	59,452
ಕುಟುಂಬಗಳ ಒಟ್ಟು ಉಳಿತಾಯ ಪ್ರಾಥಮಿಕ ಮತ್ತು ದ್ವಿತೀಯ ಮಾರುಕಟ್ಟೆಯ ಮೂಲಕ	2,59,789	3,58,357	6,90,963

(-) ಆಯಾ ಆರ್ಥಿಕ ವರ್ಷದಲ್ಲಿ ವಾಪಸ್ ಪಡೆದಿರುವ ಮೊತ್ತ

ಆಧಾರ: ಸೆಬಿ ವರದಿ

ಶ್ರೀರಾಮ್ ಫೈನಾನ್ಸ್ ಲಿಮಿಟೆಡ್

ಬ್ರೋಕರೇಜ್ ಮಾತು

ಬ್ಯಾಂಕೇತರ ಹಣಕಾಸು ಕಂಪನಿ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್‌ನ ಷೇರಿನ ಬೆಲೆ ₹1,175ಕ್ಕೆ ತಲುಪಬಹುದು ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳಲ್ಲಿ ಇದರ ಕಾರ್ಯಾಚರಣೆ ಹೆಚ್ಚು ಸದೃಢವಾಗಿದೆ. ಜಪಾನ್‌ನ ಎಂಯುಎಫ್‌ಜಿ ಬ್ಯಾಂಕ್ ಇತ್ತೀಚೆಗೆ ಶ್ರೀರಾಮ್ ಫೈನಾನ್ಸ್‌ನ ಶೇ 20ರಷ್ಟು ಷೇರುಗಳನ್ನು ಖರೀದಿಸಿದೆ. ಇದು ಶ್ರೀರಾಮ್ ಫೈನಾನ್ಸ್‌ನ ಸಾಲ ನೀಡಿಕೆ ಸಾಮರ್ಥ್ಯ ಹೆಚ್ಚಿಸುವ ನಿರೀಕ್ಷೆ ಇದೆ.

ವಾಹನಗಳು, ಎಂಎಸ್‌ಎಂಇ ಮತ್ತು ಚಿನ್ನದ ಮೇಲೆ ಸಾಲ ನೀಡುವುದಕ್ಕೆ ಶ್ರೀರಾಮ್ ಫೈನಾನ್ಸ್ ಹೆಚ್ಚಿನ ಗಮನ ಹರಿಸಿದೆ. 2025–26ರ ಆರ್ಥಿಕ ವರ್ಷದಿಂದ 2027–28ರವರೆಗೆ ಇದರ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ಶೇ 17ರಷ್ಟು ಮತ್ತು ತೆರಿಗೆ ನಂತರದ ಲಾಭವು ಶೇ 26ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆಯು ₹913.70ರಷ್ಟಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

Second Language ENGLISH
Unit-1 Poem
Grandma Climbs a Tree

3. Both the narrator (speaker in the poem) and his father were very considerate towards Grandma. Substantiate the statement with textual support.

Ans: The poet and his father were very considerate towards grandma. They respected her nature of adventure to climb trees even at old age when society expected her to age with grace (....Contd) by stopping it. One day granny climbed a tree but was unable to come down and she had to be rescued, but was advised bed rest for a week. Immediately after recovery she wanted a tree house to live. They immediately fulfilled her by building one with a door and window.

4. If you were to divide the entire poem into two parts which line would you pick up to be the beginning of the second part?

Ans: I would start second part with "After the rescue…..". After incident granny's will for adventure became even stronger and she now decided to live in a tree house.

B. 1. Have a close look at the rhyme-scheme. Write at least 5 pairs of the rhyming words. E.g. said–bed.

Ans: Tree-Free, Branch-Blanch,
Trice-Price, Spread-Bread,
Grace-Chase

2. "It was like a brief season". Name the figure of speech in the sentence. What are the two things compared? Explain.

Ans: The figure of speech is simile. The two things compared are grandma's feeling of 'misery' about compulsory bed rest and torture in the 'hell'.

3. 'For being happier in a tree than in a lift'. What is suggested through this line? Exchange your views with your partner.

Ans: Grandma was very skilled in tree climbing since the age of six and maintained her skill even at an old age sixty two. She could climb tree in a trice and enjoyed it than being stand still in a lift.

4. "There was not a tree, she hadn't been up' is an expression.

Rewrite the above sentences without using 'not' (note: the meaning should be the same)

Give some more examples from outside the text to illustrate the effective use of double negatives.

Ans: There were no trees left, that grandama hadn't climed

Some more examples of double negatives:

a) All the witnesses claimed that didn't see nothing.
b) The pilot can't find no place to land.
c) There is no way you can do nothing about this.

C. Read the line 'she would be up in the branches in a trice'.

What picture do you get in your mind when you read this? May be it is the picture of the grandma climbing a tree deftly even like a monkey.

Now read the following lines and say what pictures or images you that come to your mind. Try to draw these pictures if you can.

1. An aged woman confined to bed.

Ans: It gives picture of a frail, difficult to walk forced to stay on bed.

2. Every breeze / whispered of summer and dancing leaves.

Ans: A low Wind speed of summer is whispering in ears that summer is here and it is being complimented by dry leaves fallen to ground start dancing as if to music.

3. Being happier in a tree than in a lift.

Ans: We get a picture of being happier while breathing fresh air on a tree than stale air in a claustrophobic lift.

****

Unit-2 PROSE
There's a Girl by the Tracks!

Author – Deven Kanal

Deven Kanal is a writer in English. He writes short stories in English to journals and magazines.

Check your understanding

Share your responses

1. ``It's a regular scene." What was regular about the scene? (Para-1)

Ans: It is regular scene that as the 6:32pm Mumbai suburban electric train makes its 20 second halt at a station, commuters swarm in and out of its 12 packed coaches.

2. "Roma Talreja tried to settle into a corner near the door in the train." Was she right in doing this? What would you have done, if you were there?

Ans: No, Roma Talreja was not doing right thing by trying to settle near door of a fast moving suburban train which is jam packed. If I were the traveller I would have tried to settle myself away from the door and with a grip on handlebar and would have persuaded to the same for Roma Talreja.

3. "There's a girl by the tracks," the voices cried out. Whose voices do you think those were?

Ans: The voices were of the co-passengers of Mr. Baleshwar Mishra who was travelling in a train running on parallel tracks in the opposite direction of the train of Ms.Roma Talreja (Contd...)

ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

REPRODUCTION
Reproduction in flowering plants

17. Mention the characteristics of Entomophilous Flowers.

Ans:- (……….Contd)

involucres in *Euphorbia* and *Poinsettia*, coloured leaves in *Euporbia Pulcherrima*, Spathes in arioids, one sepal enlarged in *Mussaenda*, stamens in *Callistemon* (Bottle Brush), *Acacia and Mimosa.*

iv) Flowers are generally large in size so that they become conspicuous from a distance. Where flowers are small in size, they are aggregated to from conspicuous groups.

v) Flowers commonly produce odour. It can be pleasant (Jasmine, Rose, Mustard, Chameli, Champa) or foul (*Aristolochia*, Arum, *Rafflesia*). Foul odour attracts flies and beetles. Foul smell of *Rafflesia* (largest flower) attracts carrion flies for pollination.

vi) Majority of flowers have landing platform for insects.

vii) Special markings are present on petals to guide the insects to nectar. They are called **nectar guides** or **honey guides**, *e.g., Viola.*

viii) Visiting insects are fed by either nectar as in case of *Adhatoda*, Buttercup, Jasmine, Bottle Brush and Larkspur or edible pollen as in *Magnolia, Papaver, Rosa and Clematis*. Bees visit flowers for obtaining both nectar and edible pollen. They have special sacs for gathering pollen. The same are called **pollen baskets.**

Some flowers provide **shelter** to pollinators. Others provide them safe place to deposit eggs *e.g.*, ***Amorphophallus.***

ix) Pollen grains are covered by a yellow sticky substance called **pollenkitt.**

x) Pollen grains are **Spiny** and heavy.

xi) Normally stamens are inserted except when they take part in insect attraction, *e.g., Mimosa.*

xii) Stigma is inserted and sticky.

Honey bees rarely visit a red flower because it appears black in ultra-violet radiations.

18. What is Ornithophily?

Ans:- Ornithophily is the mode of pollination where the birds are the agents of pollination.

19. Name some of the birds that bring about pollination?

Ans:- Sun birds, Humming birds, Myna, Parrot, Bulbul and Crow.

20. Mention the characteristics of Ornithophilous Flowers.

Ans:- The characteristics of Ornithophilous Flowers are – (i) Flowers are large sized.

(ii) They are brightly coloured with yellowish, orange, reddish or bluish colour.

(iii) Odour is generally absent.

(iv) Corolla is often funnel shaped.

(v) Floral parts are strong and leathery.

(vi) Flowers secrete a lot of nectar.

21. Name some of the common Ornithophilous Flowers.

Ans:- Some of the common Ornithophilous Flowers are – Bignonia, Tecomaria (Honey Suckle), Butea monosperma, Erythrina and Graillea, Callistemon, Bombax, Agave, etc.

22. What is Chiropterophily?

Ans:- Chiropterophily is the mode of pollination where the bats are the agents.

23. Name some of the common Chiropterophilous Flowers.

Ans:- Some of the common Chiropterophilous Flowers are – Anthocephalus, Bauhinia megalandra, Adansonia, Kigelia pinnata.

24. Mention the characteristics of Chiropterophilous Flowers.

Ans:- The characteristics of Chiropterophilous Flowers are –

(i) Flowers are stout and large sized.

(ii) They are dull coloured with strong fruity odour.

(iii) Stamens are numerous.


(iv) Corolla is often funnel shaped.

(v) Pollen grains are abundant.


(vi) Flowers secrete abundant dilute nectar.

25. Identify the type of pistil with the help of diagram given here.

(a)



(b)



Ans:- (a) Multicarpellary syncarpous
(b) Multicarpellary apocarpous



ಅಧಿಕಾರದ ತೇರು ಅಭಿಮಾನ ಜೋರು

ಡಿಕೆಶಿ ಸಂಪುಟ: ಸಿದ್ದರಾಮಯ್ಯ ಮೇಲುಗೈ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ತಮ್ಮ ಉತ್ತರಾಧಿಕಾರಿ ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಪ್ರಕ್ರಿಯೆಯನ್ನು ಅತ್ಯಂತ ಗೌರವಯುತವಾಗಿ ನಡೆಸಿಕೊಟ್ಟ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನೂತನ ಸಚಿವರ ಆಯ್ಕೆಯಲ್ಲಿ ಮಾತ್ರ ಪಟ್ಟುಹಾಕಿ ಸಾಧಿಸುವ ತಮ್ಮ ಜಟ್ಟಿತನವನ್ನು ಬಿಟ್ಟುಕೊಟ್ಟಿಲ್ಲ.

ಮೇಲ್ನೋಟಕ್ಕೆ ಕಾಂಗ್ರೆಸ್ ಹೈಕಮಾಂಡ್‌ನ ಪಟ್ಟಿ ಎನಿಸಿದರೂ ಬುಧವಾರ ಪ್ರಮಾಣವಚನ ಸ್ವೀಕರಿಸಿದ ಸಚಿವರ ಯಾದಿ ನೋಡಿದರೆ, ಮಗ ಯತೀಂದ್ರ ಸೇರಿ ತಮ್ಮ ಆಪ್ತರಿಗೆ ಮೊದಲ ಕಂತಿನಲ್ಲೇ ಸ್ಥಾನ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂದೆ ಮುಂದೆ ಓಡಾಡುತ್ತಿದ್ದವರನ್ನು ತಮ್ಮ ಸಂಪುಟಕ್ಕೆ ಸೇರಿಸಿಕೊಳ್ಳಲು ಶಿವಕುಮಾರ್‌ಗೆ ಸಾಧ್ಯವಾಗಿಲ್ಲ. ಸಚಿವರಾದವರ ಪೈಕಿ ಕೆಲವರು ಕೆಲವೊಮ್ಮೆ 'ಬಣ' ಬದಲಿಸಿದರೂ ಲಾಗಾಯ್ತಿನಿಂದಲೂ ಸಿದ್ದರಾಮಯ್ಯನವರ ಜತೆಗೆ ಗುರುತಿಸಿಕೊಂಡವರೇ ಎಂಬುದು ಗಮನಾರ್ಹ.

13 ಸಚಿವರ ಪೈಕಿ ಏಳು ಮಂದಿ ಸಿದ್ದರಾಮಯ್ಯ ಆಪ್ತ ಬಣದಲ್ಲಿ ಗುರುತಿಸಿಕೊಂಡವರು. ರಾಮಲಿಂಗಾರೆಡ್ಡಿ ಮತ್ತು ಕೃಷ್ಣ ಬೈರೇಗೌಡ ಅವರು ಕೊನೆಗಳಿಗೆಯವರೆಗೂ ದೆಹಲಿಗೆ ಹೋಗದೇ, ಕ್ಷೇತ್ರದಲ್ಲೇ ತಮ್ಮ ಕೆಲಸ ಮಾಡುತ್ತಿದ್ದರು. ಕೃಷ್ಣ ಅವರು ಸಿದ್ದರಾಮಯ್ಯ ಅವರ ನಿಕಟವರ್ತಿಯಾಗಿದ್ದರೂ ಹೈಕಮಾಂಡ್ ಮಟ್ಟದಲ್ಲಿ ತಮ್ಮದೇ ಆದ ಪ್ರಭಾವ ಹೊಂದಿದ್ದಾರೆ.


ಸಂಪುಟದ ಅತ್ಯಂತ ಹಿರೀಕ ಕೆ.ಎಚ್. ಮುನಿಯಪ್ಪ ವರಿಷ್ಠರ ಜತೆಗೆ ಉತ್ತಮ ಬಾಂಧವ್ಯ ಹೊಂದಿದವರು. ತಮ್ಮ ಬದಲಿಗೆ ಮಗಳು ರೂಪಕಲಾ ಅವರನ್ನು ಸಚಿವರಾಗಿಸುವ ಇರಾದೆಯಲ್ಲಿದ್ದರು. ಆದರೆ, ಅವರು ಮೊದಲ ಬಾರಿ ಶಾಸಕರಾಗಿ ಆಯ್ಕೆಯಾದವರು. ಮೂರು ಬಾರಿ ಆಯ್ಕೆಯಾಗಿರುವ ಬಂಗಾರಪೇಟೆಯ ನಾರಾಯಣಸ್ವಾಮಿ ಹೆಸರು ಕೋಲಾರ ಕೋಟಾದಲ್ಲಿ ಮುಂಚೂಣಿಗೆ ಬಂದಿದ್ದೇ ತಡ, ಮಗಳ ಬದಲು ತಮಗೇ ಕೊಡಿ ಎಂದು ಮುನಿಯಪ್ಪ ಪಟ್ಟು ಹಿಡಿದು ಸಂಪುಟ ಸೇರ್ಪಡೆಯಾದರು.

ರಾಮಲಿಂಗಾರೆಡ್ಡಿ, ಯು.ಟಿ ಖಾದರ್, ಈಶ್ವರ ಖಂಡ್ರೆ ವರಿಷ್ಠರ ಆಯ್ಕೆ ಎಂಬುದು ಸ್ಪಷ್ಟ. ಕೊನೆಗಳಿಗೆಯವರೆಗೂ ಖಂಡ್ರೆ ಅವರ ಹೆಸರು ಮುನ್ನೆಲೆಯಲ್ಲಿ ಇರಲಿಲ್ಲ. ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಅವರ ಹೆಸರನ್ನು ಕಲ್ಯಾಣ ಕರ್ನಾಟಕದ ಕೋಟಾದಲ್ಲಿ ವರಿಷ್ಠರು ಶಿಫಾರಸು ಮಾಡಿದರು ಎಂದು ಗೊತ್ತಾಗಿದೆ.

ಇನ್ನು ಪ್ರಿಯಾಂಕ್ ಖರ್ಗೆ ಹಾಗೂ ಶರಣ ಪ್ರಕಾಶ ಪಾಟೀಲ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಯ್ಕೆಯಾಗಿದೆ.

ಸಿದ್ದರಾಮಯ್ಯ ಮೇಲುಗೈ: ಸಿದ್ದರಾಮಯ್ಯ ಅವರ ಬಣದಲ್ಲಿ ಬಲವಾಗಿ ನಿಂತಿದ್ದ ಜಿ. ಪರಮೇಶ್ವರ, ಕೆ.ಜೆ. ಜಾರ್ಜ್, ಸತೀಶ ಜಾರಕಿಹೊಳಿ, ಎಂ.ಬಿ. ಪಾಟೀಲ, ಕೃಷ್ಣ ಬೈರೇಗೌಡ, ಬೈರತಿ ಸುರೇಶ್ ಹಾಗೂ ಯತೀಂದ್ರ ಅವರನ್ನು ಸಂಪುಟಕ್ಕೆ ಸೇರಿಸುವಲ್ಲಿ ಅವರು ಮೇಲುಗೈ ಸಾಧಿಸಿದ್ದಾರೆ.

'ಅಧಿಕಾರ ಹಸ್ತಾಂತರ ಸೂತ್ರ'ದಂತೆ ತಮಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕರೆ ಪ್ರಿಯಾಂಕ್ ಖರ್ಗೆ ಉಪ ಮುಖ್ಯಮಂತ್ರಿಯಾಗಿರಲಿದ್ದಾರೆ ಎಂದು ಶಿವಕುಮಾರ್ ಪ್ರತಿಪಾದಿಸುತ್ತಿದ್ದರು ಎಂಬ ಮಾತು ಕಾಂಗ್ರೆಸ್ ಪಡಸಾಲೆಯಲ್ಲಿ ಹರಿದಾಡುತ್ತಿತ್ತು. ಸಿದ್ದರಾಮಯ್ಯ ರಾಜೀನಾಮೆ ಕೊಟ್ಟ ಬಳಿಕ, ಅಸ್ತಿತ್ವಕ್ಕೆ ಬರಲಿದ್ದ ಹೊಸ ಸರ್ಕಾರದಲ್ಲಿ ಮೂರು ಅಥವಾ 4 ಡಿಸಿಎಂ ಇರಬಹುದು ಎಂಬ ಚರ್ಚೆಯೂ ನಡೆದಿತ್ತು. ಹಾಗಾದಲ್ಲಿ, ಸತೀಶ ಜಾರಕಿಹೊಳಿ, ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ ಅವರಿಗೆ ಈ ಸ್ಥಾನ ದಕ್ಕಲಿದೆ. ಪರಮೇಶ್ವರ ಅವರನ್ನು ಬಿಟ್ಟು ಪ್ರಿಯಾಂಕ್‌ಗೆ ಮಹತ್ವದ ಸ್ಥಾನ ಸಿಗಲಿದೆ ಎಂಬ ಮಾತುಗಳು ಇದ್ದವು.



ಆದರೆ, ಈಚೆಗಿನ ವರ್ಷಗಳಲ್ಲಿ ತಮ್ಮ ಬಣದಲ್ಲಿ ಗುರುತಿಸಿಕೊಂಡಿದ್ದ ಪರಮೇಶ್ವರ ಅವರನ್ನು ಉಪ ಮುಖ್ಯಮಂತ್ರಿ ಮಾಡಲೇಬೇಕೆಂದು ಸಿದ್ದರಾಮಯ್ಯ, ಹೈಕಮಾಂಡ್ ಮೇಲೆ ತೀವ್ರ ಒತ್ತಡ ಹೇರಿದರು. ಅದನ್ನು ಕೊಡಿಸುವಲ್ಲಿ ಮೇಲುಗೈ ಅನ್ನೂ ಸಾಧಿಸಿದರು. ಹೀಗಾಗಿ, ಪ್ರಿಯಾಂಕ್‌ಗೆ ಮಹತ್ವದ ಸ್ಥಾನ ಕೈ ತಪ್ಪಿತು.

ಮತ್ತೆ ಅಸಮತೋಲನ: ಮೊದಲ ಕಂತಿನ ಸಚಿವ ಸಂಪುಟದಲ್ಲಿ ಪ್ರಾದೇಶಿಕ ಹಾಗೂ ಸಮುದಾಯವಾರು ನ್ಯಾಯವನ್ನು ಕಲ್ಪಿಸಲು ಕಾಂಗ್ರೆಸ್ ನಾಯಕರಿಗೆ ಸಾಧ್ಯವಾಗಲಿಲ್ಲ. ವಾಡಿಕೆಯಾಗಿ ಹೋಗಿರುವ ಬೆಂಗಳೂರಿಗೆ ಹೆಚ್ಚಿನ ಪ್ರಾಧಾನ್ಯ ಎಂಬುದು ಈ ಬಾರಿಯೂ ಮುಂದುವರಿದಿದೆ. ರಾಮಲಿಂಗಾರೆಡ್ಡಿ, ಜಾರ್ಜ್, ಕೃಷ್ಣ ಹಾಗೂ ಬೈರತಿ ಸುರೇಶ್ ಹೀಗೆ ನಾಲ್ಕು ಸ್ಥಾನಗಳು ಬೆಂಗಳೂರು ಪಾಲಾಗಿವೆ.

ಮುಖ್ಯಮಂತ್ರಿ ಬೆಂಗಳೂರು ದಕ್ಷಿಣದವರಾದರೆ, ಬೆಂಗಳೂರು ಗ್ರಾಮಾಂತರಕ್ಕೆ ಒಂದು ಸ್ಥಾನ ಸಿಕ್ಕಿದೆ. ಖರ್ಗೆಯವರ ಕರ್ಮಭೂಮಿ ಕಲಬುರಗಿ ಎರಡು ಸ್ಥಾನ ಪಡೆದಿದ್ದರೆ, ಅತಿ ದೊಡ್ಡ ಜಿಲ್ಲೆ ಬೆಳಗಾವಿ ಒಂದು ಸಚಿವ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ. ಧಾರವಾಡ, ದಾವಣಗೆರೆ, ಗದಗ, ಹಾವೇರಿ ಸೇರಿದಂತೆ ಮಧ್ಯ ಕರ್ನಾಟಕ, ಮಂಡ್ಯ, ಹಾಸನ ಸೇರಿದಂತೆ ಹಳೆ ಮೈಸೂರು ಹಾಗೂ ಮಲೆನಾಡು ಭಾಗಕ್ಕೆ ಯಾವುದೇ ಪ್ರಾತಿನಿಧ್ಯ ಸಿಕ್ಕಿಲ್ಲ. ❖

ಪರಮಾಧಿಕಾರ ಕಿತ್ತುಕೊಂಡ 'ಹೈಕಮಾಂಡ್'

ಸಂವಿಧಾನವನ್ನೇ ಹಿಡಿದು ಓಡಾಡುವ ಲೋಕಸಭೆ ನಾಯಕ ರಾಹುಲ್ ಗಾಂಧಿ ಅವರು, ಸಚಿವ ಸಂಪುಟ ರಚನೆಯು ಮುಖ್ಯಮಂತ್ರಿಯ ಪರಮಾಧಿಕಾರ ಎಂಬ ಆಶಯವನ್ನೇ ಕಿತ್ತುಕೊಂಡಿದ್ದಾರೆ.

ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ದೆಹಲಿಗೆ ಕರೆಯಿಸಿಕೊಂಡು ಹೈಕಮಾಂಡ್ ನಾಯಕರು, ಇಬ್ಬರಿಂದಲೂ ಅಭಿಪ್ರಾಯ ಸಂಗ್ರಹಿಸಿ ಪಟ್ಟಿಯನ್ನು ಪಡೆದರು. ನೀವಿಬ್ಬರೂ ಬೆಂಗಳೂರಿಗೆ ಹೋಗಿ, ಪಟ್ಟಿ ಕಳುಹಿಸುತ್ತೇವೆ ಎಂದು ನಿರ್ದೇಶನವನ್ನು ನೀಡಿದರು. ಬುಧವಾರ ಬೆಳಿಗ್ಗೆಯವರೆಗೂ ಪಟ್ಟಿ ಪರಿಷ್ಕರಣೆಯಾಗುತ್ತಲೇ ಇತ್ತು. ಕೊನೆಗಳಿಗೆಯಲ್ಲಿ ಹಲವರ ಹೆಸರು ತೆಗೆಯುವುದು, ಸೇರಿಸುವುದು ನಡೆಯಿತು. ಇದರ ಯಾವ ಮಾಹಿತಿಯೂ ಶಿವಕುಮಾರ್ ಅವರಿಗೆ ಸಿಕ್ಕಿರಲಿಲ್ಲ ಎನ್ನಲಾಗುತ್ತಿದೆ. ಸಚಿವರ ಆಯ್ಕೆಯು ಮುಖ್ಯಮಂತ್ರಿಯ ವಿವೇಚನೆಗೆ ಬಿಡದೇ ಹೈಕಮಾಂಡ್ ನೇರ ಹಸ್ತಕ್ಷೇಪ ಮಾಡಿದಂತಾಗಿದೆ.

'56,000 ಹುದ್ದೆ: ಶೀಘ್ರ ವೇಳಾಪಟ್ಟಿ'

ಖಾಸಗಿ ಉದ್ಯೋಗ ವಿನಿಮಯ ಕೇಂದ್ರ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 56 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಶೀಘ್ರವೇ ವೇಳಾಪಟ್ಟಿ ಪ್ರಕಟಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಈ ಹುದ್ದೆಗಳ ಭರ್ತಿಗೆ ಇದ್ದ ಎಲ್ಲ ತೊಡಕುಗಳು ನಿವಾರಣೆ ಆಗಿವೆ. ಎಲ್ಲ ಇಲಾಖೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭಿಸಲು ವೇಳಾಪಟ್ಟಿ ಪ್ರಕಟಿಸಲು ಸೂಚನೆ ನೀಡಲಾಗಿದೆ ಎಂದರು.

ಪ್ರಮಾಣವಚನ ಸ್ವೀಕರಿಸಿದ ಬಳಿಕ ವಿಧಾನಸೌಧಕ್ಕೆ ಬಂದ ಅವರು, ಮೂರನೇ ಮಹಡಿಯ ಕೊಠಡಿಯನ್ನು ಧಾರ್ಮಿಕ ವಿಧಿಗಳ ಮೂಲಕ ಪ್ರವೇಶಿಸಿದರು. ಬಳಿಕ, ಸಂಪುಟ ಸಭೆ ನಡೆಯುವ ಸಭಾಂಗಣದಲ್ಲಿ ಸುಮಾರು ಎರಡುಗಂಟೆ ತಮ್ಮ ಚೊಚ್ಚಲ ಸಂಪುಟ ಸಭೆ ನಡೆಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು, ಕೈಗೊಂಡ ನಿರ್ಣಯಗಳ ಈ ಮಾಹಿತಿ ನೀಡಿದರು.

ಇತರ ತೀರ್ಮಾನಗಳು: ರಾಜ್ಯದಲ್ಲಿ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಲಭ್ಯತೆ ಬಗ್ಗೆ ಮಾಹಿತಿ ನೀಡಿ, ಭರ್ತಿ ಮಾಡುವ ಸಂಬಂಧ 'ಖಾಸಗಿ ಉದ್ಯೋಗ ವಿನಿಮಯ ಕೇಂದ್ರ'ವನ್ನು ಸ್ಥಾಪಿಸಲಾಗುವುದು. ಐಟಿ–ಬಿಟಿ ಹೊರತುಪಡಿಸಿ ಇತರೆ ಸಾಕಷ್ಟು ಕ್ಷೇತ್ರಗಳು ಇದ್ದು, ಇಲ್ಲಿ ಉದ್ಯೋಗಾವಕಾಶಗಳು ಇವೆ. ಈ ಸಂಬಂಧ ಎಲ್ಲ ಕ್ಷೇತ್ರಗಳ ಉದ್ಯಮಿಗಳ ಜತೆ ಚರ್ಚೆ ನಡೆಸಲಾಗುವುದು. ಅವರ ಮನವೊಲಿಸಲಾಗುವುದು. ಕರ್ನಾಟಕದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ವಿವಿಧ ಉದ್ಯೋಗಗಳ ಅಗತ್ಯಕ್ಕೆ ತಕ್ಕಂತೆ ಅಭ್ಯರ್ಥಿಗಳಿಗೆ ಕೌಶಲ ತರಬೇತಿ ನೀಡಲಾಗುವುದು. ಇದಕ್ಕೆ ಪೂರಕವಾಗಿ ಮೂವರು ಸಚಿವರ ಒಂದು ಸಮಿತಿ ರಚಿಸಿ ರೂಪುರೇಷೆ ತಯಾರಿಸಿಕೊಡಲು ಸೂಚನೆ ನೀಡಲಾಗಿದೆ.

2,500 ಅಡಿಗಳವರೆಗಿನ ನಿವೇಶಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಒಸಿ ಮತ್ತು ಸಿಸಿ ಪಡೆಯುವುದರಿಂದ ಒಂದು ಬಾರಿಗೆ ವಿನಾಯ್ತಿ ನೀಡಲಾಗುವುದು. ಮೇ 31 ರೊಳಗೆ ಕಟ್ಟಡ ಕಟ್ಟಿದವರು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ.

'ಬಿ' ಖಾತಾ ಹೊಂದಿರುವವರು 'ಎ' ಖಾತಾ ಪಡೆಯಲು ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಿಂದ ಮಹಾನಗರ ಪಾಲಿಕೆವರೆಗಿನ ಎಲ್ಲ ಹಂತಗಳಲ್ಲೂ ಅವಕಾಶ ನೀಡಲಾಗುವುದು. ಸದ್ಯಕ್ಕೆ ಜಿಬಿಎ ವ್ಯಾಪ್ತಿಯ ಪಾಲಿಕೆಗಳಲ್ಲಿ ಅವಕಾಶ ನೀಡಲಾಗಿತ್ತು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ರಸ್ತೆಗಳ ಡಾಂಬರೀಕರಣಕ್ಕೆ ಹೊಸದಾಗಿ ₹2,000 ಕೋಟಿ ನೀಡಲಾಗುವುದು. ಮುಂದಿನ ಮೂರು– ನಾಲ್ಕು ತಿಂಗಳಲ್ಲಿ ಎಲ್ಲ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುವುದು.

'ಹಣ ಹೊಂದಿಸೋದು ಗೊತ್ತು'

'ಇದು ಡಿ.ಕೆ.ಸರ್ಕಾರ ಹಣ ಹೊಂದಿಸೋದು ಗೊತ್ತು' ಎಂದು ಶಿವಕುಮಾರ್ ಕಡ್ಡಿ ಮುರಿದಂತೆ ಹೇಳಿದರು.

'ಭಾರತ್ ಜೋಡೊ ಸಂಘಗಳಿಗೆ ನೆರವು ಮತ್ತು ವಿದ್ಯಾರ್ಥಿಗಳ ಉಚಿತ ಬಸ್ ಪಾಸ್‌ಗೆ ಅಪಾರ ಹಣ ಬೇಕಾಗಿದ್ದು, ಅದಕ್ಕೆ ಹೇಗೆ ಹೊಂದಿಸುತ್ತೀರಿ' ಎಂಬ ಪ್ರಶ್ನೆಗೆ, ತಮ್ಮ ಎಂದಿನ ಶೈಲಿಯಲ್ಲಿ ಅವರು ಪ್ರತಿಕ್ರಿಯೆ ನೀಡಿದರು.

'ಈ ಸರ್ಕಾರದ ಪ್ರತಿ ತೀರ್ಮಾನ ಕೇವಲ ಶಿವಕುಮಾರ್ ತೀರ್ಮಾನ ಮಾತ್ರವಲ್ಲ. ಸಾಮೂಹಿಕ ತೀರ್ಮಾನವಾಗಿರುತ್ತದೆ' ಎಂದು ಅವರು ಪ್ರತಿಪಾದಿಸಿದರು.



ಸಿ.ಎಂ ಆಗಿ ಶಿವಕುಮಾರ್ ಪ್ರಮಾಣ ವಚನ

'ಸಿ.ಎಂ ಕುರ್ಚಿ ಜನರ ಕುರ್ಚಿ'

'ಮುಖ್ಯಮಂತ್ರಿ ಕುರ್ಚಿ ಶಿವಕುಮಾರನದ್ದಲ್ಲ, ಇದು ಜನರ ಕುರ್ಚಿ. ಜನರು ಕೊಟ್ಟಿರುವ ಅಧಿಕಾರವನ್ನು ಜನರ ಸೇವೆಗೆ ಮುಡಿಪಾಗಿಡುತ್ತೇನೆ' ಎಂದು ಶಿವಕುಮಾರ್ ಹೇಳಿದರು.

'ನನ್ನ ವೈಯಕ್ತಿಕ ವಿಚಾರ ಬದಿಗೊತ್ತಿ, ರಾಜ್ಯದ ಜನರ ಸೇವೆಗೆ ಸಂಕಲ್ಪ ಮಾಡಿ ಅಧಿಕಾರ ಸ್ವೀಕರಿಸಿದ್ದೇನೆ. 'ಹಿಂದಿನ ಹೆಜ್ಜೆಗಳನ್ನು ಮರೆತವನು ಮುಂದಿನ ಹೆಜ್ಜೆ ಇಡಲಾರ ಎಂಬ ಮಾತನ್ನು ನಂಬಿರುವವನು ನಾನು. ನನಗೆ ಜಾತಿ ಮೇಲೆ, ಧರ್ಮದ ಮೇಲೆ ನಂಬಿಕೆ ಇಲ್ಲ. ನನಗೆ ನಮ್ಮದೇ ಆದ ನಂಬಿಕೆ ಇರಬಹುದು. ಆದರೆ ಮಾನವ ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿರುವವನು' ಎಂದರು.

'ರೈತರು ಮತ್ತು ಕೂಲಿ ಕಾರ್ಮಿಕರ ಬಗ್ಗೆ ನನಗೆ ಕಾಳಜಿ ಇದೆ. ರೈತರ ಬಗ್ಗೆ ಮುಂದಿನ ದಿನಗಳಲ್ಲಿ ಮಹತ್ವದ ತೀರ್ಮಾನ ತೆಗೆದುಕೊಳ್ಳುತ್ತೇನೆ' ಎಂದರು.

'ರಾಜ್ಯದ ಜನತೆಗೆ ನನ್ನ ಮೇಲೆ ಅಪಾರ ವಿಶ್ವಾಸ ಇದೆ. ರಾಜ್ಯದ ಆಡಳಿತದಲ್ಲಿ ಹೊಸ ಬೆಳಕು ಮೂಡಿಸಲು ನನ್ನ 40 ವರ್ಷಗಳ ರಾಜಕೀಯ ಅನುಭವದಲ್ಲಿ ಪ್ರಯತ್ನ ಮಾಡುತ್ತೇನೆ' ಎಂದರು.

'ಉತ್ತರ ದಿಕ್ಕಿಗೇ ಅರೇಂಜ್ ಮಾಡಿ'

ಸಚಿವ ಸಂಪುಟ ಸಭೆಯ ಬಳಿಕ ಸಮಿತಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಲು ಬಂದ ಶಿವಕುಮಾರ್ ಅವರಿಗೆ ತಾವು ಕೂತು ಮಾತನಾಡಬೇಕಾದ ದಕ್ಷಿಣ ದಿಕ್ಕು ಸರಿ ಇಲ್ಲ ಎಂದು ಅನ್ನಿಸಿ, ಸಾಮಾನ್ಯವಾಗಿ ಎಲ್ಲ ಮುಖ್ಯಮಂತ್ರಿಗಳು ಅಧ್ಯಕ್ಷತೆ ವಹಿಸಿ ಕೂರುವ ಕಡೆಗೆ ಹೋದರು. ಅಲ್ಲಿ ಕುಳಿತಿದ್ದ ಮಾಧ್ಯಮ ಪ್ರತಿನಿಧಿಗಳನ್ನು ಎಬ್ಬಿಸಿದರು.

ಆದರೆ, ದಕ್ಷಿಣ ದಿಕ್ಕಿನಲ್ಲಿ ಟಿ.ವಿ ಕ್ಯಾಮರಾಗಳ ವ್ಯವಸ್ಥೆ ಮತ್ತು ಲೈವ್ ಇರುವುದನ್ನು ಅವರ ಗಮನಕ್ಕೆ ತಂದಾಗ ಮನಸ್ಸು ಬದಲಿಸಿ ದಕ್ಷಿಣ ದಿಕ್ಕಿನಲ್ಲೇ ಕೂತರು. ಆ ಬಳಿಕ ಅವರು, 'ಇನ್ನು ಮುಂದೆ ಉತ್ತರ ದಿಕ್ಕಿನಲ್ಲೇ ನಾನು ಕೂತು ಮಾತನಾಡುವುದಕ್ಕೆ ವ್ಯವಸ್ಥೆ ಮಾಡಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು. ತಮ್ಮ ಹಿಂದೆ ಅಧಿಕಾರಿಗಳನ್ನು ಬಿಟ್ಟು ಬೇರೆ ಯಾರೂ ನಿಂತಕೊಳ್ಳಬಾರದು ಎಂದು ತಾಕೀತು ಮಾಡಿದರು.

ಅತೀಕ್ ಸಿ.ಎಂ ಆರ್ಥಿಕ ಸಲಹೆಗಾರ

ಶಿವಕುಮಾರ್ ಅವರ ಆರ್ಥಿಕ ಸಲಹೆಗಾರರಾಗಿ ನಿವೃತ್ತ ಐಎಎಸ್ ಅಧಿಕಾರಿ, ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಅಧ್ಯಕ್ಷ ಎಲ್.ಕೆ. ಅತೀಕ್ ಅವರನ್ನು ನೇಮಿಸಲಾಗಿದೆ.

ಅತೀಕ್ ಅವರಿಗೆ ರಾಜ್ಯ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಸರಿಸಮಾನ ವೇತನ ಮತ್ತು ಇತರೆ ಭತ್ಯೆಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ. ಅತೀಕ್ ಅವರು ಬಿಬಿಸಿ ಅಧ್ಯಕ್ಷ ಹುದ್ದೆಯಲ್ಲಿಯೂ ಮುಂದುವರಿಯಲಿದ್ದಾರೆ.

ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾಗಿದ್ದ ಅತೀಕ್, ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ನಿವೃತ್ತಿಯ ನಂತರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು.

ತುಷಾರ್ ಎಸಿಎಸ್: ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ತುಷಾರ್ ಗಿರಿನಾಥ್, ಕಾರ್ಯದರ್ಶಿಯಾಗಿ ಪಿ. ರಾಜೇಂದ್ರ ಚೋಳನ್ ಅವರನ್ನು ನೇಮಿಸಲಾಗಿದೆ. ತುಷಾರ್ ಅವರಿಗೆ ಹೆಚ್ಚುವರಿಯಾಗಿ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆ ಹಾಗೂ ಚೋಳನ್ ಅವರಿಗೆ ಕರ್ನಾಟಕ ವಿದ್ಯುತ್ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆ ಹೆಚ್ಚುವರಿಯಾಗಿ ನೀಡಲಾಗಿದೆ.

ಕುಟುಂಬದ ನಾಲ್ವರು ರಾಜಕಾರಣದಲ್ಲಿ

ಶಿವಕುಮಾರ್ ಅವರ ಕುಟುಂಬದ ಹಲವರು ಸಕ್ರಿಯ ರಾಜಕಾರಣದಲ್ಲಿ ಇದ್ದಾರೆ.

ಅವರ ಸೋದರ ಡಿ.ಕೆ.ಸುರೇಶ್ ಅವರು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದರು. ಈಗ ಬಮೂಲ್ ಅಧ್ಯಕ್ಷರಾಗಿದ್ದಾರೆ.

ಶಿವಕುಮಾರ್ ಅವರ ಷಡ್ಡಕ ಎಚ್.ಡಿ.ರಂಗನಾಥ್ ಕುಣಿಗಲ್ ಕ್ಷೇತ್ರದ ಶಾಸಕ. ಶಿವಕುಮಾರ್ ಅವರ ಸೋದರ ಸಂಬಂಧಿ ಎಸ್.ರವಿ, ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಕಾಂಗ್ರೆಸ್ ಮುತ್ಸದ್ದಿ ಮತ್ತು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಮೊಮ್ಮಗ ಅಮರ್ತ್ಯ ಹೆಗ್ಡೆ ಅವರು ಶಿವಕುಮಾರ್ ಅವರ ಅಳಿಯ.



ಮೆಟ್ಟಿಲುಗಳಿಗೆ ನಮಸ್ಕಾರ

ವಿಧಾನಸೌಧದ ಉತ್ತರ ದ್ವಾರದ ಮೆಟ್ಟಿಲುಗಳಿಗೆ ನಮಿಸಿ ವಿಧಾನಸೌಧ ಪ್ರವೇಶಿಸಿದರು. ವಿಧಾನಸೌಧದ ಮೂರನೇ ಮಹಡಿಯಲ್ಲಿ ಮುಖ್ಯಮಂತ್ರಿ ಕಚೇರಿ ಪ್ರವೇಶಿಸಿದ ಶಿವಕುಮಾರ್, ಪುರೋಹಿತರ ವೇದಘೋಷಗಳ ಮಧ್ಯೆ ಮುಖ್ಯಮಂತ್ರಿ ಕುರ್ಚಿಗೆ ನಮಿಸಿದರು. ನಂತರ ಕುರ್ಚಿಯಲ್ಲಿ ಕೂತರು

'ನಮ್ಮ ಹಸ್ಬೆಂಡ್‌ಗೆ ಆಲ್ ದಿ ಬೆಸ್ಟ್'

'ನಮ್ಮ ಹಸ್ಬೆಂಡ್‌ಗೆ ಆಲ್ ದಿ ಬೆಸ್ಟ್ ಹೇಳ್ತಿದಿನಿ. ಕರ್ನಾಟಕ ಜನತೆಗೆ ಒಳ್ಳೆಯ ಕೆಲಸ ಮಾಡಲಿ. ರಾಜ್ಯವನ್ನು ಇನ್ನೂ ಹೆಚ್ಚಿನ ಅಭಿವೃದ್ಧಿಯತ್ತ ಕೊಂಡೊಯ್ಯಲಿ. ಅವರಿಗೆ ಶುಭವಾಗಲಿ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪತ್ನಿ ಉಷಾ ಹೇಳಿದರು.

'ನಮ್ಮ ತಂದೆ ಮುಖ್ಯಮಂತ್ರಿ ಆಗಿರುವುದು ಖುಷಿಯಾಗಿದೆ. ಇದು ಕನಸು ಎನ್ನುವುದಕ್ಕಿಂತ ದೊಡ್ಡ ಜವಾಬ್ದಾರಿ. ಎಲ್ಲರಂತೆ ನಾನು ಸಹ ಅವರ ಆಡಳಿತ ಕಣ್ತುಂಬಿಕೊಳ್ಳಲು ಕಾತುರದಿಂದ ಕಾಯುತ್ತಿದ್ದೇನೆ' ಎಂದು ಶಿವಕುಮಾರ್ ಪುತ್ರಿ ಐಶ್ವರ್ಯಾ ಹೇಳಿದರು.

ತಿರುಪತಿ ಲಡ್ಡು ವಿತರಣೆ: ಶಿವಕುಮಾರ್ ಮುಖ್ಯಮಂತ್ರಿ ಆಗಿ ಪ್ರಮಾಣವಚನ ಸ್ವೀಕರಿಸಿದ ಕಾರಣ ಲೋಕಭವನದಲ್ಲಿ ಅಭಿಮಾನಿಗಳು ತಿರುಪತಿ ಲಡ್ಡುಗಳನ್ನು ವಿತರಿಸಿದರು.

13 ಸಚಿವರ 'ಡಿಕೆ ಸರ್ಕಾರ' ಅಸ್ತಿತ್ವಕ್ಕೆ


ಒಂದನೇ ಮುಖಪುಟದಿಂದ...

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಕೇರಳಂ ಮುಖ್ಯಮಂತ್ರಿ ವಿ.ಡಿ. ಸತೀಶನ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತಿತರರು ಉಪಸ್ಥಿತರಿದ್ದರು.

ಮಾರ್ದನಿಸಿದ ಘೋಷಣೆ: ಗಾಜಿನ ಮನೆಯಲ್ಲಿ ಶಿವಕುಮಾರ್ ಅಭಿಮಾನಿಗಳಿಂದ 'ಡಿ.ಕೆ, ಡಿ.ಕೆ' ಉದ್ಗಾರವು ಮಾರ್ದನಿಸಿತು. ಸಭಾಂಗಣದ ಇಕ್ಕೆಲಗಳಲ್ಲಿ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ನೂತನ ಮುಖ್ಯಮಂತ್ರಿಗೆ ಹಸ್ತಲಾಘವ ಮಾಡಲು ಮುಗಿಬಿದ್ದರು. ಧರ್ಮಗುರುಗಳು, ವಿವಿಧ ಮಠಗಳ ಶ್ರೀಗಳಿದ್ದ ಕಡೆ ತೆರಳಿ ಶಿವಕುಮಾರ್ ಆಶೀರ್ವಾದ ಪಡೆದರು.

ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ರುದ್ರಾಕ್ಷಿ ಮಾಲೆಯನ್ನು ಶಿವಕುಮಾರ್‌ಗೆ ಹಾಕಿ ಅಭಿನಂದಿಸಿದರು. ಕನಕಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ ಕರಿ ಕಂಬಳಿ ಹೊದೆಸಿದರೆ, ಇನ್ನೂ ಕೆಲವು ಸ್ವಾಮೀಜಿಗಳು ರುದ್ರಾಕ್ಷಿ ಮಾಲೆ ನೀಡಿದರು. ಕ್ರೈಸ್ತ ಧರ್ಮಗುರುಗಳು ಶಿಲುಬೆಯಿರುವ ದಾರವನ್ನು ಕೊರಳಿಗೆ ಹಾಕಿ ಹಾರೈಸಿದರು. ಸಂತ ಸೇವಾಲಾಲ್ ಸ್ವಾಮೀಜಿ, ಲಂಬಾಣಿ ಕುಸುರಿ ಕಲೆಯ ಶಲ್ಯ ನೀಡಿದರು. ಸುಬ್ರಹ್ಮಣ್ಯ ಕ್ಷೇತ್ರದ ವಿದ್ಯಾಪ್ರಸನ್ನ ತೀರ್ಥರು ಸೇರಿದಂತೆ ಅನೇಕರು ಹರಸಿದರು. ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಮುಗಿದ ಬಳಿಕ ಲೋಕಭವನದಿಂದ ನೇರವಾಗಿ ವಿಧಾನ ಸೌಧಕ್ಕೆ ತೆರಳಿದ ಶಿವಕುಮಾರ್, ತಮ್ಮ ಸಂಪುಟದ ಮೊದಲ ಸಭೆ ನಡೆಸಿದರು.

ಕಾರ್ಯಕರ್ತೆಯರ ಕೆನ್ನೆ ಮೇಲೆ 'ಡಿಕೆ', ನೋಟಿನ ಹಾರದ ಕಾಣಿಕೆ!



ಕೆನ್ನೆಯ ಮೇಲೆ ಕೇಸರಿ ಬಿಳಿ ಹಸಿರು ಬಣ್ಣದೊಂದಿಗೆ 'ಡಿಕೆ' ಹೆಸರು ಬರೆಸಿಕೊಂಡು ಸಂಭ್ರಮಿಸಿದ ಕಾರ್ಯಕರ್ತೆಯರು, ಇಪ್ಪತ್ತು ರೂಪಾಯಿ ನೋಟುಗಳನ್ನು ಜೋಡಿಸಿ ಹಾರ ಮಾಡಿಕೊಂಡು ಅರ್ಪಿಸಲು ತಂದ ಅಭಿಮಾನಿ, ಎದೆಯ ಮೇಲೆ 'ಡಿಕೆ' ಎಂದು ಬರೆಸಿಕೊಂಡು ಪ್ರದರ್ಶಿಸಿದ ಕಾರ್ಯಕರ್ತ.

ವಿಧಾನಸೌಧ–ಲೋಕಭವನದ ಮುಂಭಾಗ ಕಂಡುಬಂದ ಅಭಿಮಾನದ ವೈವಿಧ್ಯವಿದು. ತಾವು 'ಕಾಂಗ್ರೆಸ್ ಕಾರ್ಯಕರ್ತ'ರೆನ್ನುವುದಕ್ಕಿಂತಲೂ 'ಡಿ.ಕೆ.ಶಿವಕುಮಾರ್ ಅಭಿಮಾನಿ'ಗಳೆಂದು ಹೇಳಿಕೊಳ್ಳಲು ಅವರಿಗೆ ಹೆಮ್ಮೆ. ಆರ್.ಆರ್.ನಗರ ಮಹಿಳಾ ಕಾಂಗ್ರೆಸ್ ಮುಖಂಡರಾದ ಚಂದ್ರಿಕಾ ಮತ್ತು ಕಲ್ಯಾಣಿ ಅವರು ತಮ್ಮ ಎಡಗೆನ್ನೆಯ ಮೇಲೆ ರಾಷ್ಟ್ರ ಧ್ವಜದ ಬಣ್ಣಗಳ ಪಟ್ಟಿ ಮತ್ತು ಅದರ ಕೆಳಗೆ ಎರಡು ಬಣ್ಣಗಳಲ್ಲಿ 'ಡಿಕೆ' ಎಂದು ಬರೆಸಿಕೊಂಡು ಓಡಾಡುತ್ತಿದ್ದರು. ಅವರಿಗೆ ಡಿಕೆ ಮುಂದಿನ ಚುನಾವಣೆಯಲ್ಲೂ ಮುಖ್ಯಮಂತ್ರಿಯಾಗಿ ನಂತರ ಪ್ರಧಾನಿಯೂ ಆಗಲೆಂಬ ಆಸೆ ಇದೆ.

ಶಿವಕುಮಾರ್ ಅವರ ಮನೆಗೆ ಬೆಳಿಗ್ಗೆ ರಟ್ಟಿನ ಪೆಟ್ಟಿಗೆಯೊಂದಿಗೆ ಬಂದಿದ್ದ ವ್ಯಕ್ತಿಯೊಬ್ಬರು ಅದನ್ನು ತೆರೆದಾಗ ಕಂಡಿದ್ದು 20 ರೂಪಾಯಿಗಳನ್ನು ಪೋಣಿಸಿ ಮಾಡಿದ್ದ ಹಾರ. 'ಯಾಕೆ 20 ರೂಪಾಯಿ ನೋಟಿನ ಹಾರ ಮಾಡಿದ್ದೀರಿ' ಎಂದು ಪ್ರಶ್ನಿಸಿದರೆ, ಅವರ ಬಳಿ ಉತ್ತರವಿರಲಿಲ್ಲ. ಹೆಸರು ಕೇಳಿದರೂ ಹೇಳಲು ಸಂಕೋಚ. ಆದರೆ ಸಂಭ್ರಮ ಮಾತ್ರ ಮೈದುಂಬಿತ್ತು.

ನಾಡಗೀತೆ, ವಂದೇಮಾತರಂ ಗೊಂದಲ

ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮವು ನಾಡಗೀತೆ, ವಂದೇಮಾತರಂ ನುಡಿಸುವಿಕೆಯಲ್ಲಿ ಯಾವುದು ಮೊದಲು ಎಂಬ ಗೊಂದಲ ಉಂಟಾಯಿತು.

'ವಂದೇ ಮಾತರಂ' ನುಡಿಸಲಾಗುತ್ತಿದ್ದು ಎಲ್ಲರೂ ಎದ್ದು ನಿಲ್ಲುವಂತೆ, ಕಾರ್ಯಕ್ರಮ ನಿರ್ವಹಣೆ ಮಾಡುತ್ತಿದ್ದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿನಂತಿಸಿದರು. ಆಗ, 'ಜಯ ಭಾರತ ಜನನಿಯ ತನುಜಾತೆ' ಎಂದು ನಾಡಗೀತೆಯ ಒಂದೆರಡು ಚರಣ ತೂರಿಬಂತು. ತಕ್ಷಣ ಅದನ್ನು ಸ್ಥಗಿತಗೊಳಿಸಿ, 'ವಂದೇ ಮಾತರಂ' ಹಾಡಲಾಯಿತು.

ಕಾರ್ಯಕ್ರಮದ ಆರಂಭ ಮತ್ತು ಕೊನೆಯಲ್ಲಿ 'ವಂದೇ ಮಾತರಂ' ಪೂರ್ಣ ಗೀತೆ ಹಾಡಲಾಯಿತು.

ತಾರೆಯರ ಮೆರುಗು: ನಟ ಶಿವರಾಜ್ ಕುಮಾರ್, ಕಿಚ್ಚ ಸುದೀಪ್, ಮಾಜಿ ಸಂಸದೆ, ನಟಿ ರಮ್ಯಾ, ನಟ ಡಾಲಿ ಧನಂಜಯ್, ನಟಿಯರಾದ ರಾಗಿಣಿ ದ್ವಿವೇದಿ, ನಾಗತಿಹಳ್ಳಿ ಚಂದ್ರಶೇಖರ್ ಸೇರಿದಂತೆ ನಟರು, ನಿರ್ದೇಶಕರು, ಸಂಗೀತ ನಿರ್ದೇಶಕರು, ಕ್ರಿಕೆಟಿಗ ಅನಿಲ್ ಕುಂಬ್ಳೆ ಸೇರಿ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪದಗ್ರಹಣಕ್ಕೂ ಮುನ್ನ ಹಿರಿಯರ ಆಶೀರ್ವಾದ







ಶಿವಕುಮಾರ್ ಅವರ ಬುಧವಾರದ ದಿನಚರಿ ಬಿರುಸಿನ ಚಟುವಟಿಕೆಗಳಿಂದ ಕೂಡಿತ್ತು. ಬೆಳಿಗ್ಗೆಯೇ ಸಿದ್ದರಾಮಯ್ಯ ಅವರ ಮನೆಗೆ ತೆರಳಿ ಧನ್ಯವಾದ ಅರ್ಪಿಸಿದರು. ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಮನೆಗೆ ಹೋಗಿ ಮಾತುಕತೆ ನಡೆಸಿದರು.

ನಂತರ ತಮ್ಮ ರಾಜಕೀಯ ಎದುರಾಳಿಯಾದ ಎಚ್.ಡಿ.ದೇವೇಗೌಡ ಅವರ ಮನೆಗೂ ತೆರಳಿದ ಶಿವಕುಮಾರ್, ಅವರ ಕಾಲಿಗೆ ನಮಸ್ಕರಿಸಿದರು. 'ಒಳ್ಳೆಯದಾಗಲಿ' ಎಂದು ದೇವೇಗೌಡ ಹರಸಿದರು. ಈ ಎಲ್ಲಾ ಓಡಾಟದ ಮಧ್ಯೆ ಶಿವಕುಮಾರ್ ತಮ್ಮ ತಾಯಿ ಗೌರಮ್ಮ ಅವರನ್ನೂ ಭೇಟಿ ಮಾಡಿ, ಕಾಲಿಗೆ ನಮಸ್ಕರಿಸಿದರು. ನಂತರವೇ ಅವರು ಲೋಕಭವನದತ್ತ ಹೊರಟಿದ್ದು...



ಶಿವಕುಮಾರ್ ಬೆಂಬಲಿಗರ ಮಧ್ಯೆ ಕಾಂಗ್ರೆಸ್‌ನ ಹಿರಿಯ ಕಾರ್ಯಕರ್ತರೊಬ್ಬರು ಪಕ್ಷದ ಬಾವುಟ ಹಿಡಿದು, 'ಭಾರತ್ ಜೋಡೊ', 'ಕಾಂಗ್ರೆಸ್‌ಗೆ ಜೈ' ಎಂದು ಅಭಿಮಾನ ತೋರಿದರು

ಪ್ರಮಾಣವಚನ ಸ್ವೀಕಾರವು ಊರಹಬ್ಬವಾದ ಬಗೆ

ಅಧಿಕಾರದ ಕಾರಿಡಾರ್‌ನಲ್ಲಿ ಸಂಭ್ರಮದ ಹೊಳೆ

ಪ್ರಜಾವಾಣಿ ವಾರ್ತೆ

'**ಬೋರಯ್ಯ**, ಇದೇ ಮೆಟ್ರೊ (ರೈಲು) ನೋಡ್ಕೊ. ಇದನ್ನೆಲ್ಲಾ ನೋಡೋ ಭಾಗ್ಯ ನಿಂಗೆಲ್ಲಿತ್ತು. ಡಿ.ಕೆ. ಶಿವಕುಮಾರ್ ಸಿ.ಎಂ ಆಗಿರೋದ್ರಿಂದ ಇಲ್ಲಿಗೆ ಬಂದಿದೀಯ. ಬಾ ವಿಧಾನಸೌಧಾನೂ ತೋರುಸ್ತೀನಿ'...

ಬುಧವಾರ ಮಧ್ಯಾಹ್ನದ ಹೊತ್ತಿಗೆ ಮೆಜೆಸ್ಟಿಕ್‌ನ ಮೆಟ್ರೊ ನಿಲ್ದಾಣದಲ್ಲಿ ಕಿವಿಗೆ ಬಿದ್ದ ಮಾತುಗಳಿವು.


ಶಿವಕುಮಾರ್ ಮುಖ್ಯಮಂತ್ರಿ ಆಗಿ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದವರು ಕನಕಪುರ ರಸ್ತೆಯ ಬನಶಂಕರಿ, ಮೈಸೂರು ರಸ್ತೆಯ ನಾಯಂಡಹಳ್ಳಿ, ತುಮಕೂರು ರಸ್ತೆಯ ಮಾದಾವರ ನಿಲ್ದಾಣಗಳಲ್ಲಿ ಮೆಟ್ರೊ ಏರಿದ್ದರು. ಕನಕಪುರ ರಸ್ತೆ ಮತ್ತು ತುಮಕೂರು ರಸ್ತೆ ಮಾರ್ಗವಾಗಿ ಬಂದವರು ಮೆಜೆಸ್ಟಿಕ್‌ನಲ್ಲಿ ಮೆಟ್ರೊ ರೈಲು ಬದಲಿಸಲು ಇಳಿದಿದ್ದರು.

ಚೌಕದ ಅಂಗಿ ಮತ್ತು ಲುಂಗಿ, ಬಣ್ಣದ ಟವೆಲ್ ಹಾಕಿಕೊಂಡಿದ್ದವರೇ ಹೆಚ್ಚು. ಸೀರೆ ತೊಟ್ಟ ಹೆಂಗಳೆಯರು, ಹೊಸ ತಲೆಮಾರಿನ ಯುವಕರೂ ಜತೆಯಾಗಿದ್ದರು. ಹಳೇ ಮೈಸೂರು ಭಾಗದ ಹಳ್ಳಿಗಾಡಿನ ಘಮಲು ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಿಂದ ವಿಧಾನಸೌಧದವರೆಗೂ ಹರಡಿತ್ತು.

'ನಮಗೆಲ್ಲಾ ಮೆಟ್ರೊ ಪಾಸ್ ಕೊಟ್ಟವ್ರೆ. ಬರೋದಕ್ಕೆ ಒಂದು, ಹೋಗೋಕೆ ಒಂದು. ಮೆಟ್ರೊ ಇಳಿದ್ಮೇಲೆ ಊರಿಗೆ ಹೋಗೋಕೆ ಕಾರು ಮಾಡವ್ರೆ. ಬಸ್ ಕೊಡಂಗಿಲ್ವಂತಲ್ಲ. ಅದ್ಕೆ ಎಲ್ಲಾ ಊರಿಂದಾನು ನಮ್ಮ ಎಂಎಲ್‌ಎ ಕಾರುಗಳ್ನ ಕಳಿಸವ್ರೆ. ನೀವ್ ಎಂಗ್ ಬಂದ್ರಿ' ಎಂದು ಮಾಗಡಿಯ ಚನ್ನೇಗೌಡ ತಮ್ಮ ಪರಿಚಯದವರೊಬ್ಬರನ್ನು ಪ್ರಶ್ನಿಸಿದರು.

'ನಮಗೂ ಪಾಸ್ ಕೊಟ್ಟವ್ರೆ' ಎಂದು ಅವರು ಚೀಟಿ ತೋರಿಸಿದರು. ಹೀಗೆ ಪಾಸ್ ಹಿಡಿದು ವಿಧಾನಸೌಧ ಮೆಟ್ರೊ ನಿಲ್ದಾಣದಲ್ಲಿ ಇಳಿದ ಸಾವಿರಾರು ಮಂದಿ ಸಾಲು ಸಾಲಾಗಿ ಹೊರಬಂದಾಗ ಎದುರಿಗೆ ಜಾತ್ರೆಯೇ ತೆರೆದುಕೊಂಡಿತ್ತು.

ಚುರುಮುರಿ, ಖಾರಾಪುರಿ, ಕೆಂಡದಲ್ಲಿ ಹುರಿದ ಕಡಲೆಕಾಯಿ, ಮೆಣಸಿನಕಾಯಿ ಖಾರಾ ಸವರಿದ ಸೌತೆಕಾಯಿ... ಸರ್ಕಾರಿ ಕಾರ್ಯಕ್ರಮವು ಜನರ ಊರಹಬ್ಬದಂತೆ ಕಾಣಲು ಇನ್ನೇನು ಬೇಕು. ವಿಶ್ವೇಶ್ವರಯ್ಯ ಅವಳಿ ಗೋಪುರದ ಗೋಡೆಗಳಿಗೆ ಬಡಿದು ವಿಧಾನಸೌಧದವರೆಗೂ ಮಾರ್ದನಿಸುತ್ತಿದ್ದ ಡೊಳ್ಳಿನ ಏಟು, ಕಿವಿ ಹೊಕ್ಕು ರೋಮಾಂಚನಗೊಳಿಸುತ್ತಿದ್ದ ತಮಟೆ ಸದ್ದು ಹಬ್ಬದ ವಾತಾವರಣ ಸೃಷ್ಟಿಸಿದ್ದವು. ಇದರ ಮಧ್ಯೆ, ಶಿವಕುಮಾರ್ ಅವರ ಅಭಿಮಾನಿಗಳ ಮಾತುಗಳೂ ವಾತಾವರಣದ ಮೆರುಗು ಹೆಚ್ಚಿಸಿತ್ತು.



ಅಭಿಮಾನಿಗಳ ಸಂಭ್ರಮ

ರಾಮನಗರದ ಹೊಂಬೇಗೌಡನದೊಡ್ಡಿಯಿಂದ ಈ ಕಾರ್ಯಕ್ರಮ ಕಣ್ತುಂಬಿಕೊಳ್ಳಲು ಬಂದಿದ್ದ ಸಿದ್ದಲಿಂಗಯ್ಯ, 'ಶಿವಕುಮಾರ್ ಸಿ.ಎಂ ಆದ್ಮೇಲೆ ಚೆನ್ನಾಗಿ ಕೆಲ್ಸ ಮಾಡ್ತಾರೆ. ಸಿದ್ದರಾಮಯ್ಯರೂ ಚೆನ್ನಾಗಿ ಮಾಡಿದ್ರು' ಎಂದು ತನ್ನ ಜತೆಗಾರರನ್ನು ಮಾತಿಗೆಳೆದರು. ಹುಲ್ಲೂರಯ್ಯ, 'ಹೌದು, ಕುರ್ಚಿ ಬಿಡಲ್ಲಾ ಅಂತ ಸಿದ್ದರಾಮಯ್ಯ ಉಲ್ಟಾ ಹೊಡೆಯಬಹುದಿತ್ತು. ಆದ್ರೆ, ಆ ಮನ್ಸಾ ಹಾಗೆ ಮಾಡ್ಲಿಲ್ಲ' ಎಂದು ಮಾತು ಬೆಳೆಸಿದರು.

'ನಿಜಕ್ಕೂ ಆ ಮನ್ಸಾ ದೊಡ್ಡೋರ್ ಆಗ್ಬಿಟ್ರು. ನಂಗಂತೂ ಅವ್ರ ಮೇಲೆ ಪ್ರೀತಿ ಹೆಚ್ಚಾಯ್ತು. ಇಲ್ಲಿರೋ 224 ಶಾಸಕರಿಗಿಂತ ದೊಡ್ಡೋರು ಆಗ್ಬಿಟ್ರು' ಎಂದು ಮೆಚ್ಚುಗೆಯ ಮಾತನಾಡಿದರು.

ಅಲ್ಲಲ್ಲಿ ಇದ್ದ ಬ್ಯಾನರ್‌ಗಳ ಎದುರು ನಿಂತು ಜನರು ಫೋಟೊ ತೆಗೆಸಿಕೊಳ್ಳುತ್ತಿದ್ದರು. ಹಲವರು ರೀಲ್ಸ್ ಸಹ ಮಾಡುತ್ತಿದ್ದರು. ಆ ಹೊತ್ತಿಗೆ, ವಿಧಾನ ಸೌಧದ ಬಳಿಯಿಂದ ಜಿಪಿಒ ವೃತ್ತದವರೆಗೂ ಅಲ್ಲಲ್ಲಿ ಅಳವಡಿಸಿದ್ದ ಎಲ್‌ಇಡಿ ಪರದೆಗಳಲ್ಲಿ ಶಿವಕುಮಾರ್ ಅವರ ವಿಡಿಯೊ ಕಂಡಿತು. ಅಲ್ಲಿದ್ದ ಅಭಿಮಾನಿಗಳು, 'ಹೋ' ಎಂದು ಉದ್ಘಾರ ತೆಗೆದರು. ಮಧ್ಯೆ ಮಧ್ಯೆ, 'ಲೋಕಭವನಕ್ಕೇ ಬಿಟ್ಟರಾಗಿತ್ತಪ್ಪ, ನಾವೇನು ಹೊತ್ತಿಕೊಂಡು ಹೋಗುತ್ತಿದ್ವಾ' ಎಂಬ ಅಸಮಾಧಾನಕ್ಕೆ, 'ಅಲ್ಲಿ ನೋಡೋಕ್ಕಾಗಲ್ಲ. ಅದ್ಕೆ ಇಲ್ಲಿ, ಟಿ.ವಿ ಹಾಕವ್ರೆ' ಎಂಬ ಸಮಾಧಾನದ ಮಾತು. ಆ ಹೊತ್ತಿಗೆ, ಎಲ್‌ಇಡಿ ಪರದೆಗಳಲ್ಲಿ ನೇರ ಪ್ರಸಾರ. ಕಾಗದದ ಪೊಟ್ಟಣದಲ್ಲಿ ಪುರಿ (ಮಂಡಕ್ಕಿ) ಹಿಡಿದು, ಹುರಿದ ಕಡಲೆಕಾಯಿಯನ್ನು ಅಂಬೇಡ್ಕರ್ ವೀದಿಯ ಡಾಂಬರಿಗೆ ಬಡಿದು ಬಿಡಿಸಿ ತಿನ್ನುತ್ತಾ, ತಮ್ಮ ನೆಚ್ಚಿನ ನಾಯಕ ಪ್ರಮಾಣ ವಚನ ಸ್ವೀಕರಿಸುವುದನ್ನು ಅಭಿಮಾನಿಗಳು ಕಣ್ತುಂಬಿಕೊಂಡರು.


ಶಿವಕುಮಾರ್ ಅವರು ಸಹಿ ಮಾಡಿ ಕುರ್ಚಿಯಿಂದ ಏಳುವ ಹೊತ್ತಿಗೆ, ಅಭಿಮಾನಿಗಳೂ ಎದ್ದು ತಮ್ಮೂರಿಗೆ ಹೊರಡಲು ಮೆಟ್ರೊ ನಿಲ್ದಾಣಗಳತ್ತ ಹೆಜ್ಜೆ ಹಾಕಿದರು.



ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳಲು ರಾಮನಗರದ ಹೊಂಬೇಗೌಡನದೊಡ್ಡಿ ಮತ್ತು ಹುಕ್ಕೂರಿನಿಂದ ಬಂದಿದ್ದ ಬುಗುಡಯ್ಯ, ಸಿದ್ದಲಿಂಗಯ್ಯ, ಹುಲ್ಲೂರಯ್ಯ ಮತ್ತು ಶಿವಲಿಂಗಯ್ಯ ಗೆಳೆಯರ ಗುಂಪು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅಧಿಕಾರದ ಕಿರೀಟ ಹಾಕಿಕೊಂಡವನಿಗೆ ಶಾಂತಿ ಎಂಬುದಿಲ್ಲ.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಅಧಿಕಾರದ ಗದ್ದುಗೆಗೆ ಶಿವಕುಮಾರ್ ನಿರೀಕ್ಷೆ–ಸವಾಲುಗಳ ಬೆಟ್ಟಸಾಲು

ದಣಿವರಿಯದ ಹೋರಾಟ, ಪಟ್ಟು ಬಿಡದ ಛಲಕ್ಕೆ ಹೆಸರಾಗಿರುವ ಡಿ.ಕೆ. ಶಿವಕುಮಾರ್ ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಬುಧವಾರ ಅಧಿಕಾರ ಸ್ವೀಕರಿಸಿದ್ದಾರೆ. ಪ್ರಸಕ್ತ ವಿಧಾನಸಭೆಯ ಅವಧಿ ಮುಗಿಯಲು ಇನ್ನು ಎರಡು ವರ್ಷಗಳಷ್ಟೆ ಉಳಿದಿರುವ ಸಂಕೀರ್ಣ ಸಂದರ್ಭದಲ್ಲಿ ಅವರು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. 2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತ ಪಡೆದ ದಿನವೇ ಅವರು ಅಧಿಕಾರಕ್ಕಾಗಿ ಪಟ್ಟು ಹಿಡಿದಿದ್ದರು. ಆಗ ಪಕ್ಷದ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಮಣೆ ಹಾಕಿತ್ತು. ಎರಡೂವರೆ ವರ್ಷಗಳ ನಂತರ ಸಿದ್ದರಾಮಯ್ಯ ಅವರು ಅಧಿಕಾರ ಹಸ್ತಾಂತರಿಸಬೇಕು ಎನ್ನುವ ಒಪ್ಪಂದವಾಗಿತ್ತು ಎಂದು ಹೇಳಲಾಗಿತ್ತು. ಆ ವದಂತಿಗೆ ಪುಷ್ಟಿ ನೀಡುವಂತೆ ಕಳೆದ ಒಂದು ವರ್ಷದಿಂದಲೂ ಅಧಿಕಾರ ಹಸ್ತಾಂತರ ಕುರಿತಾದ ಪ್ರಹಸನ ನಡೆಯುತ್ತಲೇ ಇತ್ತು. ಕೊನೆಗೂ ಹೈಕಮಾಂಡ್ ಸೂಚನೆಯಂತೆ ಸಿದ್ದರಾಮಯ್ಯ ಅವರು ಅಧಿಕಾರವನ್ನು ಸುಸೂತ್ರವಾಗಿ ಹಸ್ತಾಂತರಿಸುವ ಮೂಲಕ ಗೊಂದಲಗಳಿಗೆ ತೆರೆ ಎಳೆದಿದ್ದಾರೆ. ಛಲ ಬಿಡದೆ ಅಧಿಕಾರ ಪಡೆಯುವುದರಲ್ಲಿ ಶಿವಕುಮಾರ್ ಅವರೂ ಯಶ ಕಂಡಿದ್ದಾರೆ. ಆದರೆ, ಮುಖ್ಯಮಂತ್ರಿಯಾಗಿ ಅವರ ಮುಂದಿರುವ ಹಾದಿ ಸುಲಭವಾಗಿಯೇನೂ ಇಲ್ಲ. ಸವಾಲುಗಳ ಸಾಲೇ ಅವರ ಮುಂದಿದೆ. ನಿರೀಕ್ಷೆಗಳ ಭಾರವೂ ಅವರ ಮೇಲಿದೆ. ರಾಜ್ಯದ ಮಟ್ಟಿಗೆ ಕಾಂಗ್ರೆಸ್‌ನ ಪ್ರಶ್ನಾತೀತ ನಾಯಕನಾಗಿರುವ ಸಿದ್ದರಾಮಯ್ಯ, ತಮ್ಮನ್ನು ರಾಜ್ಯಸಭೆಗೆ ಬರಮಾಡಿಕೊಳ್ಳುವ ಪಕ್ಷದ ವರಿಷ್ಠರ 'ಕಾಣಿಕೆ'ಯನ್ನು ಬೇಡವೆಂದಿದ್ದಾರೆ. ತಾವು ರಾಜ್ಯದಲ್ಲೇ ಉಳಿಯುವುದಾಗಿಯೂ ಸಕ್ರಿಯ ರಾಜಕಾರಣದಲ್ಲಿ ಇರುವುದಾಗಿಯೂ ಅವರು ಸ್ಪಷ್ಟಪಡಿಸಿದ್ದಾರೆ. ನಿರ್ಗಮಿತ ಮುಖ್ಯಮಂತ್ರಿ ಹೊಂದಿರುವ ಪ್ರಭಾವ, ಬೆಂಬಲ ಹಾಗೂ ಪಕ್ಷದ ಮೇಲೆ ಅವರಿಗಿರುವ ಹಿಡಿತದ ಎದುರು ಹೊಸ ಮುಖ್ಯಮಂತ್ರಿಯು ಬಿಡುಬೀಸಾಗಿ ಅಧಿಕಾರ ಚಲಾಯಿಸುವುದು ಸುಲಭವಲ್ಲ. ಇನ್ನೊಬ್ಬರ ಮರ್ಜಿಯಲ್ಲಿ ಅಧಿಕಾರ ಚಲಾಯಿಸಲು ಸಿದ್ಧರಿರಲ್ಲದ ಶಿವಕುಮಾರ್ ಈ ಸವಾಲನ್ನು ಹೇಗೆ ಮೆಟ್ಟಿ ನಿಲ್ಲುವರು ಎಂಬುದು ಕುತೂಹಲದ ಪ್ರಶ್ನೆ.



> ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮುಂದೆ ಸವಾಲುಗಳು ಸಾಲುಗಟ್ಟಿವೆ. ಜನಪರ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಎಲ್ಲರನ್ನೂ ಸಂಭಾಳಿಸಿಕೊಂಡು ಹೋಗುವ ಅನಿವಾರ್ಯತೆ ಅವರದಾಗಿದೆ.

ಪಕ್ಷದೊಳಗಿನ ಬೇಗುದಿಯಷ್ಟೇ ಅಲ್ಲ, ಸರ್ಕಾರದ ಮಟ್ಟದಲ್ಲಿ ಆಡಳಿತಾತ್ಮಕ ಹಾಗೂ ಆರ್ಥಿಕ ಸವಾಲುಗಳೂ ಹೊಸ ಮುಖ್ಯಮಂತ್ರಿ ಮುಂದೆ ಬೆಟ್ಟವಾಗಿ ನಿಂತಿವೆ. ಮಂತ್ರಿಮಂಡಲಕ್ಕೆ ಹೊಸತನದ ಚಹರೆ ಇರಲಿದೆ ಎಂದು ಪ್ರಚಾರ ಮಾಡಲಾಗಿತ್ತು. ಆದರೆ, ಶಿವಕುಮಾರ್ ಅವರ ಜೊತೆ ಪ್ರಮಾಣವಚನ ಸ್ವೀಕರಿಸಿದವರೆಲ್ಲರೂ ಹಳಬರು. ಒಬ್ಬರೇ ಒಬ್ಬರು ಹೊಸಬರೆಂದರೆ ಅದು ಯತೀಂದ್ರ ಸಿದ್ದರಾಮಯ್ಯ. ಸಂಪುಟಕ್ಕೆ ಸೇರಿದವರಲ್ಲಿ ಬಹುತೇಕರು ಸಿದ್ದರಾಮಯ್ಯ ಅವರ ಬೆಂಬಲಿಗರಾಗಿ ಗುರ್ತಿಸಿಕೊಂಡವರು. ಹೀಗಾಗಿ ಆರಂಭದಲ್ಲೇ ಅವರ ಕೈ ಮೇಲಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಪ್ರತಿವರ್ಷ ₹50 ಸಾವಿರ ಕೋಟಿಗೂ ಅಧಿಕ ಮೊತ್ತವನ್ನು ವಿನಿಯೋಗಿಸಿದ ಬಳಿಕ ಅಭಿವೃದ್ಧಿ ಯೋಜನೆಗಳಿಗೆ ಬೊಕ್ಕಸದಲ್ಲಿ ಉಳಿಯುವುದು ಸಣ್ಣ ಮೊತ್ತ ಮಾತ್ರ. ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವ ಜೊತೆಗೆ ಅಭಿವೃದ್ಧಿ ಚಟುವಟಿಕೆಗಳಿಗೆ ಒತ್ತು ನೀಡುವುದು, ಶಾಸಕರ ಕ್ಷೇತ್ರಗಳಿಗೆ ಅನುದಾನ ಬಿಡುಗಡೆ ಮಾಡುವುದು ಸವಾಲಿನ ಕೆಲಸ. ಸಿದ್ದರಾಮಯ್ಯ 'ಅಹಿಂದ' ರಾಜಕಾರಣಕ್ಕೆ ಒತ್ತು ನೀಡಿದ ನಾಯಕ. ಆ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಮತಬ್ಯಾಂಕ್ ಅನ್ನೂ ಸೃಷ್ಟಿಸಿದವರು ಅವರು. ದಲಿತರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರನ್ನು ಶಿವಕುಮಾರ್ ಅವರು ಹೇಗೆ ಒಗ್ಗಟ್ಟಾಗಿ ಮುನ್ನಡೆಸಿಕೊಂಡು ಹೋಗುತ್ತಾರೆ ಎಂಬುದು ಕೂಡ ಕಾಂಗ್ರೆಸ್ ಅನ್ನು ಕಾಡುತ್ತಿರುವ ಪ್ರಶ್ನೆ. ಸಿದ್ದರಾಮಯ್ಯ ತಾವು ಅಧಿಕಾರದಿಂದ ನಿರ್ಗಮಿಸುವ ಒಂದು ದಿನ ಮುಂಚಿತವಾಗಿ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ (ಜಾತಿ ಗಣತಿ) ವರದಿ'ಯನ್ನು ಸ್ವೀಕರಿಸಿದ್ದು, ಶಿವಕುಮಾರ್ ಅವರ ಮುಂದೆ ದೊಡ್ಡ ಸವಾಲನ್ನೇ ಬಿಟ್ಟು ಹೋಗಿದ್ದಾರೆ. ವರದಿಯನ್ನು ಜಾರಿಮಾಡುವುದು ಅವರ ಪಾಲಿಗೆ ತಂತಿಯ ಮೇಲಿನ ನಡಿಗೆ ಆಗಲಿದೆ. ಜಾರಿ ಮಾಡಿದರೆ ಸ್ವಂತ ಸಮುದಾಯ ಸೇರಿದಂತೆ ಪ್ರಬಲ ವರ್ಗಗಳ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಜಾರಿ ಮಾಡದಿದ್ದರೆ 'ಹಿಂದುಳಿದ ವರ್ಗಗಳ ವಿರೋಧಿ' ಹಣೆಪಟ್ಟಿ ಅಂಟಿಸಿಕೊಳ್ಳಬೇಕಾಗುತ್ತದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಪಾಲಿಕೆಗಳ ಚುನಾವಣೆಯಿಂದ ಮೊದಲುಗೊಂಡು ಮುಂಬರುವ ವಿಧಾನಸಭೆ ಚುನಾವಣೆವರೆಗೆ ಪಕ್ಷವನ್ನು ಗೆಲುವಿನತ್ತ ಮುನ್ನಡೆಸುವ ಹೊಣೆಯೂ ಅವರ ಮೇಲಿದೆ. ರಾಜ್ಯದ ಅಭಿವೃದ್ಧಿ ಎಂದರೆ ಬೆಂಗಳೂರಿನ ಅಭಿವೃದ್ಧಿ ಮಾತ್ರವಲ್ಲ ಎಂಬ ಸತ್ಯವನ್ನು ಅರಿತುಕೊಂಡು ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಸೇರಿದಂತೆ ರಾಜ್ಯದ ಎಲ್ಲ ಭಾಗಗಳ ಸಮಾನ ಅಭಿವೃದ್ಧಿಗೆ ಒತ್ತು ನೀಡುವ ಕೆಲಸ ಆಗಬೇಕಿದೆ. ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆ ಶಿವಕುಮಾರ್ ಅವರ ಇಷ್ಟದ ಯೋಜನೆಗಳಲ್ಲಿ ಒಂದು. ಅದರ ಅನುಷ್ಠಾನಕ್ಕಾಗಿ ತಾವೇ ನಡೆಸಿದ್ದ ಪಾದಯಾತ್ರೆಯನ್ನು ನೆನಪಿಸಿಕೊಳ್ಳಲೂ ಅವರಿಗಿದು ಸಕಾಲ. ಕೇಂದ್ರ ಸರ್ಕಾರದೊಂದಿಗಿನ ಸಂಬಂಧ ನಾಜೂಕಾಗಿರುವ ಈ ಹೊತ್ತಿನಲ್ಲಿ ಕೇಂದ್ರದಿಂದ ಅನುದಾನವನ್ನು ತರುವಲ್ಲಿ ಅವರು ಯಶಸ್ಸು ಗಳಿಸುವರೇ ಎಂಬ ಸಂಶಯವೂ ಕಾಡುತ್ತಿದೆ. ಮೌಢ್ಯಾಚರಣೆಗಳನ್ನು ಪ್ರತಿಬಂಧಿಸುವಲ್ಲಿ ರಾಜ್ಯ ಪ್ರಗತಿಪರವಾಗಿ ಹೆಜ್ಜೆ ಹಾಕಿದೆ. ವಾಸ್ತು ಬದಲಾವಣೆ ಸೇರಿದಂತೆ ಹಲವು ವಿಧದ ಆಚರಣೆಗಳಲ್ಲಿ ಆಸಕ್ತರಾದ ಶಿವಕುಮಾರ್ ಅವರ ಮೇಲೆ ರಾಜ್ಯ ಹಿಮ್ಮುಖವಾಗಿ ಚಲಿಸದಂತೆ ನೋಡಿಕೊಳ್ಳುವ ಹೊಣೆಯೂ ಇದೆ. ಇಚ್ಛೆಪಟ್ಟು ಪಡೆದ ಹುದ್ದೆಯು ಅಧಿಕಾರದ ಜೊತೆಗೆ ಹೊಣೆಗಾರಿಕೆಯನ್ನೂ ತಂದಿದೆ ಎಂಬುದನ್ನು ಅವರು ಮರೆಯಬಾರದು.

ಮಹಿಳೆಯರ ಕಡೆಗಣನೆ



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಾರಥ್ಯದ ಸಚಿವರಲ್ಲಿ ಯಾರೊಬ್ಬರೂ ಮಹಿಳೆಯರಿಲ್ಲ. ಆದ್ಯತೆಯ ಪಟ್ಟಿಯಲ್ಲಿ ಅವರು ಯಾವಾಗಲೂ ಎರಡನೇ ಸಾಲಿನವರೇ ಎಂಬುದು ಮತ್ತೊಮ್ಮೆ ಸಾಬೀತಾಯಿತು.

ಶ್ರೀಧರ್ ನಾಯಕ್, 'ಫೇಸ್‌ಬುಕ್'ನಿಂದ

ಕಿಡಿನುಡಿ



ಬಿಜೆಪಿ ನಾಯಕರಿಗೆ ಈಗ ಏಕಾಏಕಿ ದಲಿತ, ಹಿಂದುಳಿದ ಸಮುದಾಯಗಳ ರಾಜಕೀಯ ಪ್ರಾತಿನಿಧ್ಯ ಕುರಿತು ಕಾಳಜಿ ಬಂದುಬಿಟ್ಟಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ತಮ್ಮ ಹುದ್ದೆಯನ್ನು ದಲಿತರೊಬ್ಬರಿಗೆ ಬಿಟ್ಟುಕೊಡಲು ಸಿದ್ಧರಿದ್ದಾರೆಯೇ?

ಪ್ರಿಯಾಂಕ್ ಖರ್ಗೆ, ಸಚಿವ

25 ವರ್ಷಗಳ ಹಿಂದೆ

ಸೋಮವಾರ, 4-6-2001

• 'ನೀರಾ' ಇಳಿಸುವ ಬೇಡಿಕೆ ಪರಿಶೀಲನೆ: ಎಸ್‌.ಎಂ. ಕೃಷ್ಣ

ಮಂಡ್ಯ, ಜೂನ್ 3– ರಾಜ್ಯದಲ್ಲಿ ತೆಂಗಿನ ಮರಗಳಿಗೆ ತಗುಲಿರುವ ನುಸಿ ಪೀಡೆಯನ್ನು 'ನೀರಾ' ಇಳಿಸುವುದರಿಂದ ನಿಯಂತ್ರಿಸಬಹುದೆಂದು ವೈಜ್ಞಾನಿಕವಾಗಿ ಸಾಬೀತಾದಲ್ಲಿ ನೀರಾ ಇಳಿಸಲು ಅನುಮತಿ ಕೊಡಬೇಕೆಂಬ ಬೇಡಿಕೆಯನ್ನು ಪರಿಶೀಲಿಸುವುದಾಗಿ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ ಇಂದು ಇಲ್ಲಿ ಪ್ರಕಟಿಸಿದರು. ಇಲ್ಲಿಗೆ ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಆಗಮಿಸಿದ್ದ ಅವರು ಔಪಚಾರಿಕವಾಗಿ ಪತ್ರಕರ್ತರೊಡನೆ ಮಾತನಾಡಿ, ಸರ್ಕಾರ ಅಬಕಾರಿ ದೊರೆಗಳೊಂದಿಗೆ ಷಾಮೀಲಾಗಿ ನುಸಿಬಾಧೆಯ ನಿಯಂತ್ರಣಕ್ಕೆ ತೆಂಗಿನ ಮರಗಳಿಂದ ನೀರಾ ಇಳಿಸುವ ರೈತರ ಚಳವಳಿಯನ್ನು ಹತ್ತಿಕ್ಕುತ್ತಿದೆ ಎಂಬ ಆರೋಪವನ್ನು ನಿರಾಕರಿಸಿದರು.

75 ವರ್ಷಗಳ ಹಿಂದೆ

ಸೋಮವಾರ, 4-6-1951

• ಕಾಶ್ಮೀರ ರಾಜ್ಯಾಂಗಸಭಾ ಚುನಾವಣೆಗೆ ಸರ್ವ ಸಿದ್ಧತೆ

ಶ್ರೀನಗರ, ಜೂ. 3– ಕಾಶ್ಮೀರದಲ್ಲಿ ಯೋಜಿತ ರಾಜ್ಯಾಂಗ ಸಭೆಗೆ ವಯಸ್ಕರ ಮತದಾನದ ಆಧಾರದ ಮೇಲೆ ಚುನಾವಣೆ ನಡೆಸಲು ತಮ್ಮ ಸರ್ಕಾರವು ಏರ್ಪಾಟುಗಳನ್ನು ಪೂರ್ಣಗೊಳಿಸಿದೆ ಎಂದು ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾರವರು ಇಂದು ಹೇಳಿದರು.

ಅಖಿಲ ಜಮ್ಮು ಮತ್ತು ಕಾಶ್ಮೀರ ರಾಷ್ಟ್ರೀಯ ಸಮ್ಮೇಳನದ ವಾರ್ಷಿಕಾಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ಷೇಕ್ ಅಬ್ದುಲ್ಲಾರವರು, 'ಇದು ನಮ್ಮ ರಾಷ್ಟ್ರದ ಇತಿಹಾಸದಲ್ಲಿ ನಮ್ಮ ಜನತಾ ವಿಮೋಚನಾ ಚಳವಳಿ ಸಫಲವಾಗುವಾಗಿನ ಅಭೂತಪೂರ್ವ ಘಟನೆ ಎಂದರು.

ಭಾಷಾಕ್ರೌರ್ಯದಿಂದ ಶಿಕ್ಷಣ ಶಿಕ್ಷೆ!



ವಿಶ್ಲೇಷಣೆ

ಜಿ.ಎಸ್. ಜಯದೇವ

> ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವುದು ಮಕ್ಕಳ ಸಂವಿಧಾನಾತ್ಮಕ ಹಕ್ಕು ಎಂದು ಸುಪ್ರೀಂ ಕೋರ್ಟ್ ಹೇಳಿರುವುದು, ಇಂಗ್ಲಿಷ್ ಮಾಧ್ಯಮದ ಹೆಸರಿನಲ್ಲಿನ ಭಾಷಾಕ್ರೌರ್ಯ ವಿರುದ್ಧದ ಹೋರಾಟಕ್ಕೆ ಬಲನೀಡುವಂತಿದೆ. ಮಾತೃಭಾಷೆಯಲ್ಲಿನ ಕಲಿಕೆ ಮಕ್ಕಳ ಮನೋವಿಕಾಸಕ್ಕೆ, ಸಂವೇದನಾಶೀಲತೆಗೆ ಪೂರಕ.

ನಲವತ್ತು ವರ್ಷಗಳಿಂದಲೂ ಆದಿವಾಸಿ ಮಕ್ಕಳಿಗೆ, ಹಿಂದುಳಿದ ಸಮುದಾಯಗಳ ಮಕ್ಕಳಿಗೆ ಶಿಕ್ಷಣ ಕೊಡುತ್ತ ಅವರೊಡನೆ ಬದುಕಿ ಬಾಳಿದ್ದೇನೆ. ಈ ಅನುಭವದಲ್ಲಿ, ಶಿಕ್ಷಣಕ್ಕೂ ಭಾಷೆಗೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಭಾಷಾಶಾಸ್ತ್ರಜ್ಞನೇ ಆಗಬೇಕೆಂದೇನೂ ಇಲ್ಲ ಎನ್ನುವ ನಂಬಿಕೆ ಬಲಗೊಂಡಿದೆ. ಆದರೆ, ಈ ಸಾಮಾನ್ಯ ವಿಚಾರವನ್ನು ಸರ್ಕಾರ ನಿರ್ಲಕ್ಷಿಸಿದೆ.

ಪರಿಚಿತ ಭಾಷೆಯಲ್ಲಿ ಮಕ್ಕಳು ಕಲಿಯಲು ಬಯಸುತ್ತಾರೆ. ಅಂಥ ಕಲಿಕೆ ಸಂತೋಷದಾಯಕವೂ ಹೌದು. ಪರಿಚಯವೇ ಇಲ್ಲದ ಇಂಗ್ಲಿಷ್ ಭಾಷೆಯಲ್ಲಿ ನಮ್ಮ ಗ್ರಾಮೀಣ ಮಕ್ಕಳು ಕಲಿಯಲು ಇಷ್ಟಪಡುವುದಿಲ್ಲ. ಒತ್ತಾಯದಿಂದ ಹೇರಿದರೆ ಭಾಷೆಯನ್ನೇ ದ್ವೇಷಿಸುತ್ತ ಕೀಳರಿಮೆಯಲ್ಲಿ ಬಳಲಬಹುದು. ಇಂದಿನ ಜಾಗತೀಕರಣ ಸೃಷ್ಟಿಸಿರುವ 'ಯಶಸ್ಸು' ಎಂಬ ವ್ಯಸನಮಯ ಪ್ರಪಂಚದಲ್ಲಿ ಮಕ್ಕಳು ತಮ್ಮ ಇಷ್ಟ–ಅನಿಷ್ಟಗಳನ್ನು ಸಹಜವಾಗಿ ಹೇಳಿಕೊಳ್ಳಲಾರರು. 'ಹೆಚ್ಚು–ಹೆಚ್ಚು'ಗಳ ಗೀಳಿನ ಭಾರದಲ್ಲಿ ಬಾಲ್ಯದ ಮುಗ್ಧ ಸಂತೋಷ, ಸ್ವಂತಿಕೆಗಳು ಕಳೆದುಹೋಗುತ್ತಿವೆ. ಅವರ ಪಾಲಿಗೆ ಅನುಕರಣೆಯೊಂದೇ ಜೀವಹಿಡಿದು ಬದುಕಿ ಬಾಳುವ ಸಾಧನವಾಗಿದೆ. ತೀಕ್ಷ್ಣ ಅಭಿಪ್ರಾಯಗಳು ಸಾಮಾನ್ಯ ಎನ್ನುವಂತಿರುವ ಸಮಕಾಲೀನ ಸಂದರ್ಭ, ಬದುಕು ನಮ್ಮದಲ್ಲವೇನೋ ಎಂಬಂತೆ ಮಾಡಿದೆ.

ಬದುಕು ಮತ್ತು ಭಾಷೆಯದು ಬಿಡಿಸಲಾರದ ಸಂಬಂಧ. ಅಂತರಂಗದ ನೋವು ನಲಿವುಗಳ ಅಭಿವ್ಯಕ್ತಿಗೆ ಭಾಷೆಯೇ ಆಧಾರ. ಹೊಟ್ಟೆ ತುಂಬಿಸಿಕೊಳ್ಳುವುದು ಎಷ್ಟು ಮುಖ್ಯವೋ ಮತ್ತೊಬ್ಬರ ಹಸಿವಿಗೆ ಸ್ಪಂದಿಸುವುದೂ ಮುಖ್ಯ. ಸಂವಹನ ಸಾಧ್ಯವಾದ ಭಾಷೆ ಮಾತ್ರ ಸಂವೇದನಾಶೀಲತೆಯನ್ನೂ ಸಾಧ್ಯಮಾಡೀತು. ಅಪರಿಚಿತ ಭಾಷೆಯಲ್ಲಿ ಮನುಷ್ಯ ಸಂಬಂಧವನ್ನು ಕಟ್ಟಲಾಗುವುದೆ? ಮನುಷ್ಯನೊಳಗೇ ಮನೆ ಮಾಡಿರುವ ಹಿಂಸೆ, ಸ್ವಾರ್ಥ, ಅಸೂಯೆಗಳನ್ನು ಅರ್ಥಮಾಡಿಕೊಂಡು ಪ್ರೀತಿ–ಅನುಕಂಪಗಳ ಕಡೆ ವಿಕಾಸವಾಗಲು ಸಾಧ್ಯವಾಗುವುದು ನಗು–ಅಳು ಎರಡಕ್ಕೂ ಒದಗುವ ಮಾತೃಭಾಷೆಯಲ್ಲಿ ಸಾಧ್ಯ.

ಸಂವೇದನಾಶೀಲತೆಯನ್ನು ಬೆಳೆಸಿಕೊಳ್ಳಲಾರದ ನಮ್ಮ ಮಕ್ಕಳು ಎಂತಹ ಸಮಾಜವನ್ನು ಕಟ್ಟಿಯಾರು? ತಾಂತ್ರಿಕವಾಗಿ ಪ್ರಗತಿಯನ್ನು ಸಾಧಿಸಿ ಎಲ್ಲರಿಗೂ ಸಾಲುವಷ್ಟು ಹಿಟ್ಟನ್ನು ಉತ್ಪಾದನೆ ಮಾಡಿದರೂ ಹಸಿದ ಹೊಟ್ಟೆಗಳ ಆಕ್ರಂದನಕ್ಕೆ ಕೊನೆಯಿಲ್ಲವೇಕೆ? ಇದು ಹಣದ ಕೊರತೆಯಲ್ಲ, ಅಂತಃಕರಣದ ಕೊರತೆ; ನ್ಯಾಯ, ನೀತಿಯ ಕೊರತೆ. ಇದನ್ನು ಸರಿದೂಗಿಸಲು ಬೇಕಾದದ್ದು ಮನಸ್ಸಿನ ಆಳವನ್ನು ಮುಟ್ಟಬಹುದಾದ ಸಂವಹನ. ಮನದಾಳದ ಎಳೆಗಳನ್ನು ಹಿಡಿದು ಮೀಟಲು ಸಾಧ್ಯವಾಗುವ ನಮ್ಮದೇ ಭಾಷೆಯ ಸಂವಹನ. ವಾಸ್ತವ ಹೀಗಿದ್ದರೂ, ಮಾತೃಭಾಷೆಯ ಪರವಾಗಿ ಸಾಕಷ್ಟು ವೈಜ್ಞಾನಿಕ ಪುರಾವೆಗಳಿದ್ದರೂ, ಸರ್ಕಾರ ಇಂಗ್ಲಿಷ್ ಮಾಧ್ಯಮ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ.

ಇಂಗ್ಲಿಷ್ ಅನ್ನದ ಭಾಷೆ, ಇಂಗ್ಲಿಷ್ ಮಾಧ್ಯಮ ಶಿಕ್ಷಣದಿಂದ ಮಾತ್ರ ಶೈಕ್ಷಣಿಕ ಯಶಸ್ಸು ಸಾಧ್ಯ ಎಂಬುದು ವ್ಯಾಪಕವಾದ ಅವೈಜ್ಞಾನಿಕ ನಂಬಿಕೆ. ಅಂಕಿಅಂಶಗಳೂ ಈ ನಂಬಿಕೆಗೆ ಪೂರಕವಾಗಿಲ್ಲ. 'ನಮ್ಮ ಭಾಷೆಯನ್ನು ಕೊಲ್ಲುತ್ತಿರುವವರು ಯಾರು?' ಎಂದು ಬರಹವೊಂದರಲ್ಲಿ ಚರ್ಚಿಸುತ್ತಾ, ಮಾತೃಭಾಷೆಯಲ್ಲಿ ಶಿಕ್ಷಣ ನೀಡುತ್ತಿರುವ ಚೀನಾ, ಸಿಂಗಪುರ, ಮಲೇಷ್ಯಾ, ತೈವಾನ್, ಹಾಂಕಾಂಗ್ ಮುಂತಾದ ದೇಶಗಳನ್ನು ದೇವನೂರ ಮಹಾದೇವ ಅವರು ಉದಾಹರಿಸುತ್ತಾರೆ. ಮ್ಯಾಂಡರಿನ್ ಚೀನಾ ಮೂಲದ ಭಾಷೆ, ಇದು ಈ ಎಲ್ಲ ದೇಶಗಳ ಶಿಕ್ಷಣದ ಮಾಧ್ಯಮವೂ ಹೌದು. ಪ್ರಾಥಮಿಕ ಶಾಲೆಗಳಷ್ಟೇ ಅಲ್ಲದೆ ಉನ್ನತ ಶಿಕ್ಷಣವನ್ನೂ ಈ ಕೆಲವು ದೇಶಗಳು ಮ್ಯಾಂಡರಿನ್ ಭಾಷೆಯಲ್ಲೇ ನೀಡುತ್ತಿವೆ. ಜರ್ಮನಿ, ಫ್ರಾನ್ಸ್, ನೆದರ್ಲೆಂಡ್ ಮುಂತಾದ ದೇಶಗಳು ತಮ್ಮ ತಮ್ಮ ಭಾಷೆಯಲ್ಲಿ ಶಿಕ್ಷಣ ನೀಡುತ್ತಿವೆ. ಈ ಎಲ್ಲ ದೇಶಗಳೂ ಇಂಗ್ಲಿಷ್ ವಿರೋಧಿ ಧೋರಣೆಯಿಂದ ಅಥವಾ ತಮ್ಮ ಭಾಷೆಯ ಅಂಧಾಭಿಮಾನದಿಂದ ಮಾತೃಭಾಷಾ ಶಿಕ್ಷಣವನ್ನು ಅಳವಡಿಸಿಕೊಂಡಿದ್ದಾರೆ ಎಂದೇನೂ ಅಲ್ಲ. ಈ ದೇಶಗಳಲ್ಲೂ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಚೆನ್ನಾಗಿ ಕಲಿಸುತ್ತಾರೆ. ಆದರೆ, ವಿಷಯ ಗ್ರಹಿಕೆ ಸಾಧ್ಯವಾಗುವುದು ಪರಿಚಿತ ಭಾಷೆಯಲ್ಲಿ ಎಂಬ ಸಾಮಾನ್ಯ ತಿಳಿವಳಿಕೆಯನ್ನು ಇವರು ಗೌರವಿಸುತ್ತಾರೆ. 'ಜಗತ್ತಿನ ಯಾವುದೇ ಸ್ವತಂತ್ರ ರಾಷ್ಟ್ರವೂ ಹೀಗೆ ತನ್ನ ಮಾತೃಭಾಷೆಯನ್ನು ಕೊಂದಿಲ್ಲ' ಎನ್ನುತ್ತಾರೆ ದೇವನೂರ ಮಹಾದೇವ. ಆದರೆ ನಾವೇಕೆ ನಮ್ಮ ಭಾಷೆಯನ್ನೇ ಕೊಲ್ಲುತ್ತಿದ್ದೇವೆ? ನಮ್ಮ ದೇಶದಲ್ಲಿ ಹಿಂದೆ ಬಳಕೆಯಲ್ಲಿದ್ದ ಅನೇಕ ಭಾಷೆಗಳು ಈಗ ಕಾಣೆಯಾಗಿವೆ. ಭಾರತ 'ಮಾತುಗಳ ಮಸಣವಾಗುತ್ತಿದೆ' ಎಂದು ವಿಷಾದಿಸುತ್ತಾರೆ ಭಾಷಾಶಾಸ್ತ್ರಜ್ಞ ಜಿ.ಎನ್. ದೇವಿ ಅವರು.

ಕರ್ನಾಟಕದಲ್ಲಷ್ಟೇ ಏಕೆ, ನಮ್ಮ ಇಡೀ ದೇಶಕ್ಕೇ ವಿಚಿತ್ರವಾದ ಇಂಗ್ಲಿಷ್ ಮಾಧ್ಯಮದ ಸನ್ನಿ ಹಿಡಿದಿರುವುದು ದುರದೃಷ್ಟಕರ. ಗ್ರಾಮೀಣ ಶಾಲೆಗಳಿಗೆ ಮಕ್ಕಳನ್ನು ಆಕರ್ಷಿಸಲು ನಮ್ಮ ಸರ್ಕಾರ ಪ್ರತಿವರ್ಷವೂ ಸಾವಿರಾರು ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ತೆರೆಯುತ್ತಿದೆ. ಪೋಷಕರ ಬೇಡಿಕೆಗೆ ಅನುಗುಣವಾಗಿ ತಾನು ಈ ಕ್ರಮ ಕೈಗೊಂಡಿರುವುದಾಗಿಯೂ, ತಾನು ಈ ವಿಷಯದಲ್ಲಿ ನಿಸ್ಸಹಾಯಕ ಎನ್ನುವುದು ಸರ್ಕಾರದ ವಾದ.

ಕಲಿಕೆಯ ಮೊದಲ ಹಂತಗಳಲ್ಲಿ ಮಕ್ಕಳ ಮೇಲೆ ಅಪರಿಚಿತ ಭಾಷಾ ಮಾಧ್ಯಮ ಹೇರುವುದರಿಂದ ಮಕ್ಕಳ ಶೈಕ್ಷಣಿಕ ಪ್ರಗತಿ ಕುಂದುತ್ತದೆ, ಸೃಜನಶೀಲತೆ ಕಳೆದುಹೋಗುತ್ತದೆ, ಅತಿಯಾದ ಒತ್ತಡದಿಂದ ಮಕ್ಕಳು ಬಳಲುತ್ತಾರೆ. ಈ ಬಗ್ಗೆ ಪೋಷಕರಿಗೆ ತಿಳಿವಳಿಕೆಯ ಕೊರತೆ ಇರುವಂತಿದೆ. ಸಾಂಕ್ರಾಮಿಕ ರೋಗಗಳ ಕುರಿತು, ಹಾನಿಕಾರಕ ಮೂಢನಂಬಿಕೆಗಳ ಕುರಿತು ಅರಿವು ಮೂಡಿಸುವ ಸರ್ಕಾರ, ಇಂಗ್ಲಿಷ್ ಮಾಧ್ಯಮದ ಅನಾರೋಗ್ಯಕರ ಶಿಕ್ಷಣಪದ್ಧತಿಯ ಕುರಿತಾಗಿಯೂ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿತ್ತು. ಜಾಹೀರಾತುಗಳ ಮೂಲಕ ಮಾತೃಭಾಷಾ ಶಿಕ್ಷಣದ ಅನುಕೂಲಗಳನ್ನು ಪೋಷಕರಿಗೆ ಮನವರಿಕೆ ಮಾಡಿಕೊಡಬಹುದಾಗಿತ್ತು. ಶಿಕ್ಷಣ ಇಲಾಖೆ ಹೊರಡಿಸುವ ಸುತ್ತೋಲೆಗಳಲ್ಲಿ 'ಮಾತೃಭಾಷಾ ಶಿಕ್ಷಣವೇ ಸರ್ವಶ್ರೇಷ್ಠ' ಎಂಬ ಹೇಳಿಕೆಗಳನ್ನು ಘೋಷವಾಕ್ಯದಂತೆ ಬಳಸಿ ತನ್ನ ಇಲಾಖೆಯ ಸಿಬ್ಬಂದಿಯಲ್ಲಿ ಈ ಕುರಿತು ನಂಬಿಕೆ ಮೂಡುವಂತೆ ಮಾಡಬಹುದಾಗಿತ್ತು. ಪೋಷಕರ ಸಭೆಗಳಲ್ಲಿ ಮಾತೃಭಾಷಾ ಶಿಕ್ಷಣದ ಅನುಕೂಲಗಳನ್ನು ತಿಳಿಸಬೇಕಾಗಿತ್ತು.

ಮಾತೃಭಾಷೆ ಅಥವಾ ರಾಜ್ಯಭಾಷೆಯಲ್ಲಿ ಶಿಕ್ಷಣ ನೀಡದಿರಲು ಕಾನೂನು ಮತ್ತು ಕೋರ್ಟುಗಳು ಸರ್ಕಾರಕ್ಕೆ ತೊಡಕಾಗಿರುವುದು ನಿಜ. ಕನ್ನಡ ಮಾಧ್ಯಮದ ಪರವಾಗಿ ಕರ್ನಾಟಕ ಸರ್ಕಾರವೇ ಹಿಂದೆ ಕೋರ್ಟಿನಲ್ಲಿ ವಾದ ಮಂಡಿಸಿತ್ತು. ಆಗ ಸುಪ್ರೀಂ ಕೋರ್ಟ್, ಪೋಷಕರ ಆಯ್ಕೆಯ ಹಕ್ಕನ್ನು ಎತ್ತಿಹಿಡಿದು ಮಾತೃಭಾಷಾ ಶಿಕ್ಷಣವನ್ನು ಕಡೆಗಣಿಸಿತು. ಒಬ್ಬ ನ್ಯಾಯಾಧೀಶರಂತೂ 'ಭಾರತವನ್ನು ಒಂದುಗೂಡಿಸುವ ಭಾಷೆ ಇಂಗ್ಲಿಷ್' ಎಂದರು. ಆದರೆ, ಜನಗಣತಿಯ ಅಂಕಿಅಂಶಗಳು ದೇಶದ ಶೇ 2ರಷ್ಟು ಜನರಿಗೆ ಮಾತ್ರ ಅಲ್ಪಸ್ವಲ್ಪ ಇಂಗ್ಲಿಷ್ ಸಂಭಾಷಣೆ ಸಾಧ್ಯ ಎಂಬುದನ್ನು ತಿಳಿಸುತ್ತದೆ.

ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಆಶಾದಾಯಕವಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವುದು ಮಕ್ಕಳ ಸಂವಿಧಾನಾತ್ಮಕ ಹಕ್ಕು ಎಂದು ಪ್ರತಿಪಾದಿಸಿರುವ ಕೋರ್ಟ್‌ನ ದ್ವಿಸದಸ್ಯ ಪೀಠ, ಮಾತೃಭಾಷೆಯಲ್ಲಿ ಶಿಕ್ಷಣ ನೀಡಲು ವ್ಯವಸ್ಥೆ ಮಾಡುವಂತೆ ರಾಜಸ್ಥಾನ ಸರ್ಕಾರಕ್ಕೆ ನಿರ್ದೇಶಿಸಿದೆ. ಸರ್ಕಾರಿ ಶಾಲೆಗಳಷ್ಟೇ ಅಲ್ಲದೆ, ಖಾಸಗಿ ಶಾಲೆಗಳೂ ಮಾತೃಭಾಷಾ ಶಿಕ್ಷಣವನ್ನು ಅಳವಡಿಸಿಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿದೆ. ಅಷ್ಟೇ ಅಲ್ಲ, ಗುಣಮಟ್ಟದ ಶಿಕ್ಷಣ ಎಂದು ಪರಿಗಣಿಸಬಹುದಾದ ಶಿಕ್ಷಣ ಸಾಧ್ಯವಾಗುವುದು ಅರ್ಥವಾಗುವ ಭಾಷೆಯಲ್ಲಿ, ಹಾಗಾಗಿ ಸರ್ಕಾರ ಮಾತೃಭಾಷಾ ಶಿಕ್ಷಣ ನೀಡಬೇಕು ಎನ್ನುತ್ತದೆ ಕೋರ್ಟ್. ಮುಂದುವರಿದು, 'ಒಬ್ಬರನ್ನೊಬ್ಬರು ಪರಸ್ಪರ ಅರ್ಥಮಾಡಿಕೊಳ್ಳುವುದು ನಮ್ಮ ಭಾಷೆಯಲ್ಲಿ. ಇದು ಅಸ್ತಿತ್ವದ ಹಕ್ಕಿಗೆ ಪೂರಕವಾದದ್ದು. ಹಾಗಾಗಿ ಸಂವಿಧಾನಾತ್ಮಕವಾಗಿ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕು ಇದೆ, ಇದನ್ನು ಗೌರವಿಸಿ' ಎಂದು ಕೋರ್ಟ್ ಹೇಳಿದೆ; 'ಮೊದಲ ಹಂತದ ಕಲಿಕೆಯಲ್ಲಿ ಭಾಷೆಯ ತೊಡಕು ಮಕ್ಕಳ ಮೇಲೆ ಕ್ರೂರವಾದ ಒತ್ತಡವನ್ನು ಹೇರುತ್ತದೆ, ಮಕ್ಕಳು ಯಾಂತ್ರಿಕ ಕಲಿಕೆಗೆ ಶರಣಾಗುತ್ತಾರೆ' ಎಂದೂ ಅಭಿಪ್ರಾಯಪಟ್ಟಿದೆ.

ಮಾತೃಭಾಷೆಯಲ್ಲಿ ಶಿಕ್ಷಣ ಪಡೆದು ಪ್ರಖ್ಯಾತರಾದ ಅನೇಕ ಸಾಧಕರು ನಮ್ಮ ನಡುವೆ ಇದ್ದಾರೆ. ನಾವು ಕಳೆದ ಇಪ್ಪತ್ತೆಂಟು ವರ್ಷಗಳಿಂದಲೂ ನಡೆಸುತ್ತಿರುವ 'ದೀನಬಂಧು ಕನ್ನಡ ಮಾಧ್ಯಮ ಶಾಲೆ'ಯಲ್ಲಿ 430 ಮಕ್ಕಳಿದ್ದಾರೆ. ಇವರೆಲ್ಲ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿ, ನಂತರ ಕಾಲೇಜು ಶಿಕ್ಷಣ ಪಡೆದಿದ್ದಾರೆ. ಕೆಲವರು ಅದ್ಭುತ ಕಲಾವಿದರಾಗಿದ್ದಾರೆ, ಎಂಜಿನಿಯರ್‌ಗಳಾಗಿದ್ದಾರೆ. ಕನ್ನಡ ಮಾಧ್ಯಮದಿಂದಾಗಿ ನಮ್ಮ ಯಾವ ಮಕ್ಕಳಿಗೂ ಹಿನ್ನಡೆಯಾಗಿಲ್ಲ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮನವಿಯ ಮೇರೆಗೆ ಚಾಮರಾಜನಗರದ ಸ್ವಯಂಸೇವಾ ಒಕ್ಕೂಟದಿಂದ ಏಳು ವರ್ಷಗಳ ಹಿಂದೆ ಇಂಗ್ಲಿಷ್ ಮಾಧ್ಯಮಕ್ಕೆ ಬದಲಾದ ಆಯ್ದ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಕಲಿಕೆಯ ಗುಣಮಟ್ಟವನ್ನು ಅಧ್ಯಯನ ಮಾಡಲಾಯಿತು. ಗ್ರಾಮೀಣ ಮಕ್ಕಳಿಗೆ ಇಂಗ್ಲಿಷ್ ಮಾತುಗಳನ್ನು ಆಲಿಸುವ ಅವಕಾಶಗಳೇ ಇಲ್ಲದ ಕಾರಣ ಕನಿಷ್ಠ ಮಟ್ಟದ ಇಂಗ್ಲಿಷ್ ಪರಿಣತಿಯಾಗಲಿ, ಸಂವಹನ ಶಕ್ತಿಯಾಗಲಿ ಬೆಳೆದಿಲ್ಲ. ಈ ಹಿನ್ನಡೆಗೆ ಅಧ್ಯಾಪಕರನ್ನು ಹೊಣೆ ಮಾಡುವುದು ಸರಿಯಲ್ಲ. ಒಂದು ಭಾಷೆಯಾಗಿ ನಾವು ಇಂಗ್ಲಿಷ್ ಅನ್ನು ಮಕ್ಕಳಿಗೆ ಕಲಿಸಲೇಬೇಕು. ಇದಕ್ಕೆ ಇಂಗ್ಲಿಷ್ ಮಾಧ್ಯಮ ತರಗತಿಗಳೇ ಬೇಕು ಎಂದೇನಿಲ್ಲ. ಇಂದಿನ ಘೋರ ಶೈಕ್ಷಣಿಕ ವೈಫಲ್ಯಕ್ಕೆ ದೋಷಪೂರ್ಣ ನೀತಿಯೇ ಕಾರಣ. ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪಿನ ಜಾಡುಹಿಡಿದು ಮುಂದುವರಿದರೆ, ನಮ್ಮ ಮಕ್ಕಳು ಅಪರಿಚಿತ ಭಾಷೆಯಲ್ಲಿ ಕಲಿಯಬೇಕಾದ ಕ್ರೌರ್ಯದಿಂದ ಪಾರಾಗಬಹುದೇನೋ ಎಂಬ ಆಶಾಭಾವ ಮೂಡುತ್ತದೆ.



ವಾಚಕರ ವಾಣಿ

ಅಧಿಕಾರಸ್ಥರ ಕಿವಿ ಹಿಂಡಿದ ಅನ್ನದಾತರು

ರೈತರು ತುಂಗಭದ್ರಾ ಜಲಾಶಯದಲ್ಲಿನ ಹೂಳು ತೆಗೆದಿರುವುದು ವರದಿಯಾಗಿದೆ. ಕಂಪ್ಲಿ, ಕುರುಗೋಡು, ಸಿರುಗುಪ್ಪ ಭಾಗದ ರೈತರ ಈ ನಡೆಯು ಹೆಮ್ಮೆ ಎನಿಸಿತು. ಸರ್ಕಾರದ ಮರ್ಜಿಗೆ ಕಾಯದೆ ಸ್ವಂತ ವಾಹನಗಳಲ್ಲಿ ಜಲಾಶಯದ ಹಿನ್ನೀರಿನಲ್ಲಿ ಹೂಳು ತೆಗೆದಿರುವುದು, ರೈತರ ಹಾಗೂ ಸಮಾಜದ ಹಿತಕ್ಕೆ ಪ್ರತಿಭಟನೆಯೊಂದು ಹೇಗೆ ಪೂರಕವಾಗಬಹುದು ಎಂಬುದಕ್ಕೆ ನಿದರ್ಶನದಂತಿದೆ. ಸರ್ಕಾರದ ವಿರುದ್ಧ ನಡೆಯುವ ಪ್ರತಿಭಟನೆಯಲ್ಲಿ ಗಲಾಟೆ, ಘೋಷಣೆ, ರಸ್ತೆತಡೆ, ಬಸ್‌ಗೆ ಕಲ್ಲುತೂರಾಟ, ಟೈರ್‌ಗೆ ಬೆಂಕಿ, ಮಾಧ್ಯಮಗಳ ಗಮನವನ್ನು ಸೆಳೆಯಲು ಅರಚಾಟ ಕೂಗಾಟಗಳಿರುವುದು ಸಾಮಾನ್ಯ. ಆದರೆ, ಜಲಾಶಯದ ಅಚ್ಚುಕಟ್ಟು ಪ್ರದೇಶದ ರೈತರು ಯಾವುದೇ ರೀತಿಯ ಹಿಂಸಾತ್ಮಕ ಪ್ರತಿಭಟನೆಗೆ ಇಳಿದಿಲ್ಲ. ಸರ್ಕಾರ ಮಾಡಬೇಕಿರುವುದನ್ನು ತಾವೇ ಮಾಡಿ ತೋರಿಸಿ ಆಳುವ ವರ್ಗದ ಅಸಮರ್ಥತೆಗೆ ಕನ್ನಡಿ ಹಿಡಿದಿದ್ದಾರೆ. ಸರ್ಕಾರ ಇನ್ನಾದರೂ ಎಚ್ಚತ್ತುಕೊಂಡು ವೈಜ್ಞಾನಿಕ ವಿಧಾನದಲ್ಲಿ ಹೂಳು ತೆಗೆಸಲು ಮುಂದಾಗಬೇಕು.

ಸುಘೋಷ ಸ. ನಿಗಳೆ, ಬೆಂಗಳೂರು

ಕೊಲ್ಲಿ ಯುದ್ಧದ ಅನಿಶ್ಚಿತತೆ ಕೊನೆಗೊಳ್ಳಲಿ

ಕೊಲ್ಲಿ ಯುದ್ಧದ ಬಿಕ್ಕಟ್ಟಿನ ಅಂತ್ಯ ಇನ್ನೂ ಅನಿಶ್ಚಿತ ಮಬ್ಬಿನಲ್ಲಿ ಮುಚ್ಚಿಕೊಂಡಿದೆ. ಶಾಂತಿಯ ಆಶಾಕಿರಣಗಳು ಕಾಣಿಸುತ್ತಿದ್ದರೂ ಸಂಪೂರ್ಣವಾಗಿ ಸ್ಥಿರಗೊಂಡಿಲ್ಲ. ಈ ಸಂಘರ್ಷವು ಲಕ್ಷಾಂತರ ಜನರ ಬದುಕು ಹಾಗೂ ಆರ್ಥಿಕ ಸ್ಥಿತಿಗತಿಯ ಮೇಲೆ ಆಳವಾದ ಪರಿಣಾಮ ಬೀರಿದೆ. ಯುದ್ಧದ ಹೊಗೆ ನಿಧಾನವಾಗಿ ಕರಗುತ್ತಿದ್ದರೂ ಅದರ ಗುರುತುಗಳು ಇನ್ನೂ ಉಳಿದಿವೆ. ಯುದ್ಧ ಸಾಧ್ಯತೆ ಈಗಲೂ ಬೂದಿ ಮುಚ್ಚಿದ ಕೆಂಡದಂತಿದೆ. ಇದು ಬರೀ ಒಂದು ಸಂಘರ್ಷದ ಅಂತ್ಯವಲ್ಲ; ಹೊಸ ರಾಜತಾಂತ್ರಿಕ ಅಧ್ಯಾಯದ ಆರಂಭವೂ ಆಗಬಹುದು. ಮುಂದಿನ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಶಾಂತಿ ಉಳಿಯುತ್ತದೆಯೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ.

ಧನುಷ್ ಜಿ., ಚಿತ್ರದುರ್ಗ

ಶಕ್ತಿಕೇಂದ್ರವೋ ಧಾರ್ಮಿಕ ಸ್ಥಳವೋ?

ಶಕ್ತಿಕೇಂದ್ರವಾದ ವಿಧಾನಸೌಧದ ಮುಖ್ಯಮಂತ್ರಿ ಕಚೇರಿಗೆ ಜ್ಯೋತಿಷಿಗಳು ಭೇಟಿ ನೀಡಿ, ಕುರ್ಚಿಯ ದಿಕ್ಕು ಬದಲಿಸಿ, ಅಜ್ಜಯ್ಯನ ಫೋಟೊ ಅಳವಡಿಸಿರುವುದಾಗಿ ವರದಿಯಾಗಿದೆ. ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದವರು ನಾಗರಿಕ, ವಿದ್ಯಾರ್ಥಿ ಸಮೂಹಕ್ಕೆ ವಿಜ್ಞಾನ, ತಂತ್ರಜ್ಞಾನ ಮತ್ತು ವೈಚಾರಿಕ ಪ್ರಜ್ಞೆ ಬೆಳೆಸಲು ಒತ್ತು ನೀಡಬೇಕು. ಸಾಂವಿಧಾನಿಕ ಮಹತ್ವ ಇರುವ ಮುಖ್ಯಮಂತ್ರಿ ಕಚೇರಿಯಲ್ಲಿ ದೇವರ ಪಟಗಳನ್ನು ಇಡುವುದು ಎಷ್ಟರಮಟ್ಟಿಗೆ ಸರಿ? 2017ರಲ್ಲಿ ಕಾಂಗ್ರೆಸ್ ಸರ್ಕಾರ ಮೌಢ್ಯ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿತು. ಈಗ ಹಿಂತೆಗೆದುಕೊಳ್ಳಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮೇಲೆ ಒತ್ತಡ ಹೆಚ್ಚಾದರೆ ಅಚ್ಚರಿಪಡುವಂತಿಲ್ಲ.

ರಾಮಚಂದ್ರ ಮಂಚಲದೊರೆ, ಗುಬ್ಬಿ

ನೀಟ್ ವೈಫಲ್ಯ: ಕೇಂದ್ರ ಆಡಳಿತಕ್ಕೆ ಕನ್ನಡಿ

ಪಾರದರ್ಶಕ ಹಾಗೂ ಸುವ್ಯವಸ್ಥಿತವಾಗಿ 'ನೀಟ್' ನಡೆಸುವಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಮತ್ತೆ ಎಡವಿದೆ. ಇದು ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಆತಂಕದ ಮಡುವಿಗೆ ದೂಡಿದೆ. ಹನ್ನೆರಡನೇ ತರಗತಿ ಪೂರ್ಣಗೊಳಿಸಿ 'ನೀಟ್'ಗಾಗಿ ವರ್ಷಪೂರ್ತಿ ತರಬೇತಿ ಪಡೆದು ಪರೀಕ್ಷೆ ಬರೆದವರು ಮತ್ತೆ ಪರೀಕ್ಷೆ ಬರೆಯಬೇಕಾಗಿದೆ. ಇದರಿಂದ ವೈದ್ಯರಾಗಬೇಕಾದ ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಗುವಂತಾಗಿದೆ. ನೈತಿಕ ಹೊಣೆ ಹೊರಲು ಕೇಂದ್ರ ಶಿಕ್ಷಣ ಸಚಿವರು ಸಿದ್ಧರಿಲ್ಲ. ಪ್ರಶ್ನೆಪತ್ರಿಕೆ ಸೋರಿಕೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಕೂಡ ಮೌನವಾಗಿದ್ದಾರೆ. ತಪ್ಪಿತಸ್ಥರ ವಿರುದ್ಧ ಸರ್ಕಾರವು ಕಠಿಣ ಕ್ರಮ ಜರುಗಿಸಬೇಕು. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಇಂಥ ಅವಾಂತರ ತಲೆದೋರದಂತೆ ಎಚ್ಚರವಹಿಸಬೇಕಿದೆ.

ಬಸವರಾಜು, ಮೈಸೂರು

ರೈಲ್ವೆ ಪ್ರಗತಿ: ಹಳಿ ತಪ್ಪಿಸುವವರು ಯಾರು?

ಕೊಂಕಣ ರೈಲು ನಿಗಮವು ಟಿಕೆಟ್‌ರಹಿತ ಪ್ರಯಾಣಿಕರ ಪತ್ತೆಗೆ ವಿಶೇಷ ಅಭಿಯಾನ ಕೈಗೊಂಡಿದೆ. ಏಪ್ರಿಲ್ ತಿಂಗಳೊಂದರಲ್ಲಿಯೇ ಸುಮಾರು 37 ಸಾವಿರ ಟಿಕೆಟ್‌ರಹಿತ ಪ್ರಯಾಣಿಕರಿಂದ ₹2.90 ಕೋಟಿ ದಂಡ ವಸೂಲಿ ಮಾಡಿದೆ. ಇದು ಟಿಕೆಟ್ ಪಡೆಯದೆ ಸಿಕ್ಕಿಬಿದ್ದವರ ಸಂಖ್ಯೆ. ಸಿಕ್ಕಿಹಾಕಿಕೊಳ್ಳದೆ ಪ್ರಯಾಣಿಸಿದವರು ಮತ್ತು ಹೊಂದಾಣಿಕೆಯಿಂದ ದಂಡ ಕೊಡದವರ ಸಂಖ್ಯೆ ಎಷ್ಟು? ಒಂದು ರೈಲು ಮಾರ್ಗದ ಕಥೆ ಹೀಗಾದರೆ ಇಡೀ ದೇಶದಲ್ಲಿ ಟಿಕೆಟ್‌ರಹಿತ ಪ್ರಯಾಣಿಕರ ಸಂಖ್ಯೆ ಎಷ್ಟಿರಬಹುದು? ಕೊಂಕಣ ರೈಲು ಮಾರ್ಗದಲ್ಲಿ ಸುಮಾರು 50 ಜೊತೆ ರೈಲುಗಳು ಪ್ರಯಾಣಿಕರಿಂದ ಕಿಕ್ಕಿರಿದು ಸಂಚರಿಸುತ್ತಿವೆ. ಈ ಮಾರ್ಗ, ನಿರೀಕ್ಷಿತ ಲಾಭ ತರದಿರುವ ಹಿಂದಿನ ಕಾರಣ ಇದೇ ಎನ್ನಬಹುದೇ? ಈ ಮಾರ್ಗವು ದ್ವಿಪಥ ಆಗದಿರುವುದಕ್ಕೆ ಮತ್ತು ಅಭಿವೃದ್ಧಿಯ ಬೇಡಿಕೆಗಳು ಸಾಕಾರಗೊಳ್ಳದಿರುವುದಕ್ಕೆ ಜನರು ಟಿಕೆಟ್ ರಹಿತವಾಗಿ ಸಂಚರಿಸುವುದು ಕಾರಣವಾಗಿದ್ದರೆ ಅಚ್ಚರಿಪಡಬೇಕಿಲ್ಲ.

ರಮಾನಂದ ಎಸ್., ಬೆಂಗಳೂರು

ಭೂಮಾಪಕರ ಮುಷ್ಕರ: ರೈತರಿಗೆ ಸಂಕಷ್ಟ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯದಲ್ಲಿ ಭೂಮಾಪಕರು ಕಳೆದ ಹಲವು ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ಇದರಿಂದ ಲಕ್ಷಾಂತರ ರೈತರು ಭೂಮಾಪನ ಇಲಾಖೆಗೆ ಸಲ್ಲಿಸಿದ 5.78 ಲಕ್ಷಕ್ಕೂ ಹೆಚ್ಚು ಸರ್ವೆ ಅರ್ಜಿಗಳು ಬಾಕಿ ಉಳಿದಿವೆ. ಇದು ರೈತರ ಪಾಲಿಗೆ ನುಂಗಲಾರದ ಬಿಸಿತುಪ್ಪವಾಗಿದೆ.

ಜಮೀನು ಮಾರಾಟ, ಪೋಡಿ, ಹದ್ದುಬಸ್ತು ದುರಸ್ತಿ ಸೇರಿದಂತೆ ಹಲವು ಕಾರ್ಯಗಳಿಗೆ ತೀವ್ರ ಹಿನ್ನಡೆಯಾಗಿದೆ. ರೈತರು ನಿತ್ಯವೂ ತಾಲ್ಲೂಕು ಕಚೇರಿಗೆ ಅಲೆಯುವಂತಾಗಿದೆ. ಭೂಮಾಪಕರ ಹೋರಾಟದ ಬಗ್ಗೆ ಸರ್ಕಾರ ಕಿವುಡಾಗಿರುವುದು ಸರಿಯಲ್ಲ. ನ್ಯಾಯಯುತವಾಗಿ ಅವರ ಬೇಡಿಕೆ ಈಡೇರಿಸುವ ಮೂಲಕ ರೈತರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕಿದೆ.

ಮಲ್ಲನಗೌಡ ಪಾಟೀಲ, ರಾಮದುರ್ಗ

ಚುರುಮುರಿ



ವಿರೋಧ ಪಕ್ಷದ 'ವಿಧಿ'

• ಗುರು ಪಿ.ಎಸ್.

ಬಿಜೆಪಿಯ ಕಟ್ಟಾ ಬೆಂಬಲಿಗ ಮುದ್ದಣ್ಣ, ಕಾಂಗ್ರೆಸ್‌ನ ಕಟ್ಟಾ ಕಾರ್ಯಕರ್ತ ವಿಜಿ ಗಹನ ಚರ್ಚೆಯಲ್ಲಿ ತೊಡಗಿದ್ದರು.

'ಏನ್ ಸಾರ್, ನಿಮ್ಮ ಸಾಹೇಬ್ರು ಮುಖ್ಯಮಂತ್ರಿ ಆದ್ರು ಅನ್ನೋ ಖುಷಿ ಮುಖದಲ್ಲಿ ಎದ್ದು ಕಾಣ್ತಿದೆ' ಎಂದು ವಿಜಿಯ ಕಾಲೆಳೆದ ಮುದ್ದಣ್ಣ.

'ಖುಷಿ ಇರಲೇಬೇಕಲ್ಲ. ಪಾಪ, ನೀವು ಎಷ್ಟೆಲ್ಲ ಆಸೆ ಇಟ್ಟುಕೊಂಡಿದ್ರಿ... ಅಧಿಕಾರ ಹಸ್ತಾಂತರ ಸುಲಭವಾಗಿ ಆಗಲ್ಲ, ಕಾಂಗ್ರೆಸ್ ಇಬ್ಭಾಗ ಆಗಿಬಿಡುತ್ತೆ ಅಂತ. ಆದ್ರೆ ಎಲ್ಲ ಹೂವು ಎತ್ತಿದಷ್ಟು ಸುಲಭವಾಗಿ ಆಗಿಹೋಯ್ತು. ರಾಜ್ಯದ ಇತಿಹಾಸದಲ್ಲೇ ಇಂಥ ಬೆಳವಣಿಗೆ ಹಿಂದೆ ಕಂಡಿದ್ರಾ?' ತನ್ನ ಪಕ್ಷದ ಬಗ್ಗೆ ಹೊಗಳಿಕೊಳ್ಳತೊಡಗಿದ ವಿಜಿ.

'ಹ್ಹಹ್ಹಹ್ಹ, ಇದೆಲ್ಲ ಸುಲಭವಾಗಿ ಆಗಿರಬಹುದು, ಆದ್ರೆ ಪ್ರಮುಖ ವಿರೋಧ ಪಕ್ಷವಾದ ನಮ್ಮನ್ನ ಎದುರಿಸೋದಿದೆ ಮುಂದೆ'.

'ನೀವು ಏನೇನಕ್ಕೆ ವಿರೋಧ ಮಾಡ್ತೀರಿ ಹೇಳಿ'.

'ಹಿಂದೂ ಧರ್ಮಕ್ಕೆ ಕಾಂಗ್ರೆಸ್‌ನಿಂದ ಅಪಾಯವಿದೆ ಅಂತ ಹೋರಾಟ ಮಾಡ್ತೀವಿ'.

ಗೂಗಲ್ ಮಾಡುತ್ತಾ, ಆಯ್ದ ಸುದ್ದಿಗಳನ್ನ ಓದತೊಡಗಿದ ವಿಜಿ, 'ಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಿದ ಕರ್ನಾಟಕದ ಡಿಸಿಎಂ' ಎಂದ ಜೋರಾಗಿ.

'ಕಾಂಗ್ರೆಸ್ಸಿಗರು ಹಿಂದೂ ಧರ್ಮದ ಆಚಾರ–ವಿಚಾರ, ನಂಬಿಕೆಗಳ ವಿರುದ್ಧವಾಗಿದ್ದಾರೆ ಅಂತ ಟೀಕಿಸ್ತೀವಿ...'

'ಪೂರ್ವಾಭಿಮುಖವಾಗಿ ನಿಂತು ಪ್ರತಿಜ್ಞಾವಿಧಿ ಸ್ವೀಕರಿಸಿದ ಕಾಂಗ್ರೆಸ್‌ನ ನೂತನ ಮುಖ್ಯಮಂತ್ರಿ' ಎಂದು ಮತ್ತಷ್ಟು ಜೋರಾಗಿ ಓದಿದ ವಿಜಿ.

'ನಮ್ಮ ಬಳಿ ಮತ್ತೊಂದು ಅಸ್ತ್ರವಿದೆ. ಅದನ್ನ ಪ್ರಯೋಗಿಸಿದರೆ ನಿಮ್ಮ ಸಾಹೇಬ್ರು ಮತ್ತು ನಿಮ್ಮ ಪಕ್ಷ ಮಟಾಷ್ ಆಗಿಬಿಡುತ್ತೆ ಗೊತ್ತಾ?' ಬಾಣ ಬಿಟ್ಟ ಮುದ್ದಣ್ಣ.

'ಯಾವುದಪ್ಪ ಆ ಅಸ್ತ್ರ?'

'ಜೈಲಿಗೆ ಹೋಗಿ ಬಂದವರು ರಾಜ್ಯದ ಮುಖ್ಯಮಂತ್ರಿ ಆಗಿದ್ದಾರೆ. ಇಂಥವರು ನಮ್ಮನ್ನು ಆಳಬೇಕಾ?' ವ್ಯಂಗ್ಯವಾಗಿ ನಗುತ್ತಾ ಜೋರಾಗಿ ಹೇಳಿದ ಮುದ್ದಣ್ಣ.

ಇನ್ನೂ ಜೋರಾಗಿ ನಗುತ್ತಾ, 'ಚೆಕ್ ಮೂಲಕ ಲಂಚ ಸ್ವೀಕರಿಸಿ ಜೈಲಿಗೆ...' ಎಂದು ವಿಜಿ ಹಳೆಯ ಸುದ್ದಿಯನ್ನ ಓದುತ್ತಿದ್ದಂತೆ ಮುದ್ದಣ್ಣ ಅಲ್ಲಿಂದ ಕಾಲ್ಕಿತ್ತ.

ಸಂಗತ

ಯುವಜನರಿಗೆ ಹಿರಿಯರು ಭಾರ ಆಗುತ್ತಿರುವರೆ?

ಕುಟುಂಬ ವ್ಯವಸ್ಥೆ ಶಿಥಿಲಗೊಳ್ಳುತ್ತಿದ್ದು, ಪೋಷಕರು ಜೊತೆಗಿರುವುದು ತಮ್ಮ ಸುಖ–ಸ್ವಾತಂತ್ರ್ಯಕ್ಕೆ ಅಡ್ಡಿ ಎಂದು ಭಾವಿಸುವ ಯುವಜೋಡಿಗಳ ಸಂಖ್ಯೆ ಹೆಚ್ಚುತ್ತಿದೆ.

• ಈ. ಬಸವರಾಜು

ಸಮುದಾಯವೊಂದರ ವಧು–ವರರ ಸಮಾವೇಶದಲ್ಲಿ ಯುವಕ, ಯುವತಿಯರು ವೇದಿಕೆಯ ಮೇಲೆ ತಮ್ಮನ್ನು ಪರಿಚಯಿಸಿಕೊಳ್ಳುತ್ತಿದ್ದರು. ಅವರ ವಿವರಗಳನ್ನು ಪರದೆಯ ಮೇಲೂ ನೋಡಬಹುದಿತ್ತು. ಯುವಕನೊಬ್ಬ ತನ್ನ ಪರಿಚಯ ಮಾಡಿಕೊಳ್ಳುತ್ತಾ, 'ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ. ನನ್ನ ಪೋಷಕರು ಊರಿನಲ್ಲಿದ್ದಾರೆ. ಇದು ವಧುವಿಗೆ ಒಂದು ಅನುಕೂಲಕರ ಮಾಹಿತಿ' ಎಂದ!

ತಂದೆ–ತಾಯಿ ನನ್ನೊಂದಿಗಿಲ್ಲ ಎಂಬ ಮಾಹಿತಿ ನೀಡಿದರೆ ವಧುವಿನ ಕಡೆಯವರು ಆಸಕ್ತಿ ತೋರಬಹುದು ಎಂಬಂತಿತ್ತು ಆತನ ಹೇಳಿಕೆ. ಈ ಹೇಳಿಕೆಯ ಹಿಂದೆ ವಧುವನ್ನು ಹುಡುಕಿ ಸೋತಿರುವ ದನಿಯಿತ್ತು ಎಂದು ಹೇಳಬಹುದೆ? ಅಥವಾ ಮದುವೆಯಾದರೆ ಸಾಕಪ್ಪಾ ಎನ್ನುವ ಆತನ ಅಂತರಂಗದ ಭಾವನೆಯಿತ್ತೆ? ನಿಮ್ಮ ತಾಳಕ್ಕೆ ತಕ್ಕಂತೆ ಕುಣಿಯಲು ತಯಾರಿದ್ದೇನೆ ಎಂದು ಆ ಯುವಕ ಸೂಚಿಸಿರಬಹುದೆ? ವಯಸ್ಸಾಗಿರುವವರು ಯಾರಿಗೂ ಬೇಡ ಎಂಬ ಸಾರಾಂಶವಂತೂ ಆ ಮಾತಿನಲ್ಲಿ ಕಾಣಿಸಿತು.

ಈ ಘಟನೆ ಹಳೆಯ ನೆನಪಿನತ್ತ ಜಾರುವಂತೆ ಮಾಡಿತು. '2000 ಇಸವಿಯ ವೇಳೆಗೆ ಎಲ್ಲರಿಗೂ ಆರೋಗ್ಯ' ಎಂಬ ಜಾಗತಿಕ 'ಅಲ್ಮಾ ಆಟಾ' ಘೋಷಣೆ ಯಾವ ಯಾವ ದೇಶದಲ್ಲಿ ಎಷ್ಟು ಪ್ರಗತಿಯಾಗಿದೆ ಎಂಬುದನ್ನು ಪರಾಮರ್ಶಿಸಲು 'ಜನಾರೋಗ್ಯ ಸಮಾವೇಶ' ಎಂಬ ಅಭಿಯಾನವನ್ನು ಆರೋಗ್ಯ ಕ್ಷೇತ್ರದಲ್ಲಿ ಹಾಗೂ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವ ಸಂಘಟನೆಗಳು ಏರ್ಪಡಿಸಿದ್ದವು. ಆರೋಗ್ಯವೆಂದರೆ ಕೇವಲ ರೋಗವನ್ನು ವಾಸಿ ಮಾಡುವುದಲ್ಲ; ರೋಗ ಬಾರದಂತೆ ತಡೆಯುವುದು. ಉತ್ತಮವಾದ ವಸತಿ, ಶುದ್ಧ ಕುಡಿಯುವ ನೀರು, ಉತ್ತಮ ಪರಿಸರ, ಉದ್ಯೋಗ, ಶಿಕ್ಷಣ, ಮಹಿಳಾ ಸಮಾನತೆ, ಉತ್ತಮವಾದ ರಸ್ತೆ ಇವೆಲ್ಲವೂ ಆರೋಗ್ಯದ ವ್ಯಾಪ್ತಿಗೆ ಬರುತ್ತವೆ ಎಂಬುದು ಅಲ್ಮಾ ಆಟಾ ಘೋಷಣೆಯ ಭಾಗವಾಗಿದ್ದವು.

ಜನಾರೋಗ್ಯ ಸಮಾವೇಶದ ಭಾಗವಾಗಿ ಪ್ರಕಟಗೊಂಡ ಐದು ಪುಸ್ತಕಗಳಲ್ಲೊಂದಾದ 'ನಮ್ಮ ಅಸ್ತಿತ್ವವೂ ಪ್ರಮುಖವಾಗುವ ಜಗತ್ತು' ಕೃತಿಯಲ್ಲಿ 'ನಿರ್ಲಕ್ಷಿತ ವೃದ್ಧರು' ಎಂಬ ಅಧ್ಯಾಯವಿದೆ. ಆ ಅಧ್ಯಾಯದ ಮೊದಲ ಪ್ಯಾರಾದಲ್ಲಿ 'ಹಲವು ಚಿಕ್ಕ ವಯಸ್ಸಿನ ದಂಪತಿ ತಮ್ಮ ವೃದ್ಧ ತಂದೆ-ತಾಯಿಯನ್ನು ಮರೆತು ತಮ್ಮ ಮಕ್ಕಳ ಮೇಲೆ ಪ್ರೀತಿಯ ಧಾರೆಯನ್ನೇ ಹರಿಸುತ್ತಾರೆ. ಆದರೆ, ಎಲ್ಲರೂ ಒಂದು ದಿನ ವೃದ್ಧರಾಗುತ್ತಾರೆ ಎಂಬುದನ್ನು ಮರೆಯಬಾರದು' ಎಂದಿದೆ. ಆ ವಿಷಯವನ್ನಾಧರಿಸಿ ಒಂದು ನಾಟಕ ತಯಾರಿಸಿ ಕಲಾಜಾಥಾದಲ್ಲಿ ಪ್ರದರ್ಶಿಸಲಾಗಿತ್ತು. ನಾಟಕದಲ್ಲಿ 'ವಯೋವೃದ್ಧರೇ ಬಾಳಿನ ಸಂಪತ್ತು, ಇದ ಮರೆತರೆ ನಮಗೇ ಆಪತ್ತು' ಎಂಬ ಹಾಡನ್ನು ಸೇರಿಸಲಾಗಿತ್ತು. ಇದು ವಾಸ್ತವ ಕೂಡ.



ಜನಾರೋಗ್ಯ ಆಂದೋಲನ ಕಳೆದು 25 ವರ್ಷಗಳ ನಂತರ ಇದೆಲ್ಲವೂ ನೆನಪಾಗಲು ಕಾರಣ, ವಧು–ವರರ ಸಮಾವೇಶದಲ್ಲಿ ವ್ಯಕ್ತವಾದ ಅಭಿಪ್ರಾಯಗಳು. ಯುವಕನ ಹೇಳಿಕೆ ನನಗೆ ಅಚ್ಚರಿ ಜೊತೆಗೆ ಮುಜುಗರವನ್ನೂ ಉಂಟು ಮಾಡಿತು. ಯುವತಿಯೊಬ್ಬಳು ತನ್ನ ನಿರೀಕ್ಷೆಯ ಬಗ್ಗೆ ಹೇಳಿಕೊಳ್ಳುತ್ತಾ, 'ಹುಡುಗನ ಪೋಷಕರು ಚೆನ್ನಾಗಿರಬೇಕು' ಎಂದಳು. ಚೆನ್ನಾಗಿರಬೇಕು ಅಂದರೆ ಏನರ್ಥ? 'ಹುಡುಗನ ಪೋಷಕರು ಆರೋಗ್ಯವಂತರಾಗಿ, ಗಟ್ಟಿಮುಟ್ಟಾಗಿರಬೇಕು' ಎಂದರ್ಥ ಎಂದರು ಪಕ್ಕದಲ್ಲಿ ಇದ್ದವರು!

ಇತ್ತೀಚೆಗೆ ತಮ್ಮ ಮಗನಿಗೆ ವಧುವನ್ನು ಹುಡುಕುತ್ತಿರುವ ಪೋಷಕರು ಸಿಕ್ಕಿದ್ದರು. ವಧುವಿನ ಕಡೆಯವರು 'ನಿಮ್ಮ ಮನೆಯಲ್ಲಿ ಓಲ್ಡ್ ಫರ್ನಿಚರ್ಸ್ ಇವೆಯಾ?' ಎಂದು ಕೇಳಿದರಂತೆ. ನಿಮ್ಮ ಮನೆಯಲ್ಲಿ ವಯಸ್ಸಾದವರಿದ್ದಾರಾ ಎಂಬುದು ಆ ಮಾತಿನ ಅರ್ಥವಂತೆ. ವಯಸ್ಸಾದ ಪೋಷಕರು ಜೊತೆಗೆ ಇರಬಾರದು ಎಂಬುದು ಅನೇಕ ಯುವತಿಯರ ಅಭಿಲಾಷೆ. ಹಾಗಾದರೆ ವಯಸ್ಸಾದವರು ಎಲ್ಲಿಗೆ ಹೋಗಬೇಕು? ಈ ಯುವಕ–ಯುವತಿಯರಿಗೆ ವಯಸ್ಸಾಗುವುದಿಲ್ಲವೆ? ಮದುವೆ ಆದ ಕೂಡಲೇ ಒಟ್ಟು ಕುಟುಂಬದಿಂದ ಬೇರ್ಪಡೆಯಾಗಿ ಪ್ರತ್ಯೇಕವಾದ ಮನೆ ಮಾಡಬೇಕು ಎನ್ನುವುದು ಹಲವು ಯುವತಿಯರ ಒತ್ತಾಯ ಎಂಬ ಮಾತುಗಳೂ ಗಟ್ಟಿಯಾಗಿ ಕೇಳಿಬರುತ್ತಿವೆ. ಇದೇ ರೀತಿ ವಧುವಿನ ಪೋಷಕರು, 'ತಮ್ಮ ಮಗಳಿಗೆ ಹುಡುಗನ ಮನೆಯಲ್ಲಿ ಸ್ವಾತಂತ್ರ್ಯವಿಲ್ಲ, ಪೋಷಕರ ಕಿರುಕುಳ, ಒಂದು ಸಿನಿಮಾಗೆ ಹೋದರೂ ಸಹಿಸುವುದಿಲ್ಲ' ಎಂದೆಲ್ಲ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ.

ಕೆಲವರು ತಮ್ಮ ಜನ್ಮದಿನವನ್ನು ವೃದ್ಧಾಶ್ರಮಗಳಲ್ಲಿ ಆಚರಿಸಿಕೊಳ್ಳುತ್ತಾರೆ. ಅಂತಹವರು ಪೋಷಕರನ್ನು ಜೊತೆಯಲ್ಲಿಟ್ಟುಕೊಂಡು ನೋಡಿಕೊಳ್ಳುತ್ತಾ, ಅವರ ಅನುಭವ–ಪ್ರೀತಿಯನ್ನು ಏಕೆ ಪಡೆಯಬಾರದು? ಪೋಷಕರೂ ಸಹ ಬೆಳೆದ ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಆಸೆ ಆಕಾಂಕ್ಷೆಗಳಿಗೆ ಪೂರಕವಾಗಿ ಏಕೆ ನಡೆದುಕೊಳ್ಳಬಾರದು?

ಸಾಧ್ಯತೆಗಳೇನೇ ಇರಲಿ, ವಯಸ್ಸಾದವರನ್ನು ಸಹಾನುಭೂತಿಯಿಂದ ಸಹಿಸಿಕೊಳ್ಳುವ ಹಾಗೂ ಪ್ರೀತಿ ತೋರಿಸುವವರ ಸಂಖ್ಯೆ ವರ್ತಮಾನದಲ್ಲಿ ಕಡಿಮೆಯಾಗುತ್ತಿದೆ. ಅದೇ ಕಾರಣಕ್ಕಾಗಿ ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಅಲ್ಲಿ ಮೃಷ್ಟಾನ್ನ ನೀಡಿದರೂ, ಪ್ರೀತಿಯನ್ನು ನೀಡಲು ಸಾಧ್ಯವಿಲ್ಲ. ವೃದ್ಧಾಶ್ರಮ ಸೇರಿದ ಕೆಲವೇ ದಿನಗಳಲ್ಲಿ ತೀರಿಕೊಂಡಿರುವವರ ಉದಾಹರಣೆಗಳಿವೆ. ಕೆಲವರು ತಂದೆ–ತಾಯಿ ನಿಧನಾನಂತರ ಪರಿತಪಿಸುವುದನ್ನು ಕಾಣುತ್ತೇವೆ. ಅದಕ್ಕೆ ಅರ್ಥವಿಲ್ಲ.

ಪೋಷಕರು ಹಳ್ಳಿಯಲ್ಲಿದ್ದಾರೆಂದು ಹೇಳುವ ಮೂಲಕ ಮದುವೆಯಾದರೆ ಸಾಕೆಂದು ಬಯಸುವ ಯುವಕರು, ಕಾರಣಾಂತರದಿಂದ ಹೆತ್ತವರು ಮಗನ ಬಳಿಗೆ ಬಂದರೆ ತಿರಸ್ಕರಿಸಲು ಸಾಧ್ಯವೆ? ಕೆಲವು ವಿವಾಹಿತ ಯುವಕರು ಪೋಷಕರಿಗಾಗಿ ಸಂಗಾತಿಯನ್ನೇ ತೊರೆದಿರುವ ಉದಾಹರಣೆಗಳೂ ಇವೆ. ಇದೂ ಸಹ ವ್ಯತಿರಿಕ್ತವಾದ ನಡೆ. ಕುಟುಂಬದ ಎಲ್ಲರನ್ನೂ ಒಟ್ಟಾಗಿ ತೂಗಿಸಿಕೊಂಡು ಹೋದಾಗ ಸಂಬಂಧಗಳಿಗೆ ಅರ್ಥ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಶಿವಕುಮಾರ್ ಸಂಪುಟ ಅನುಭವಿಗಳ ಕೂಟ

ಡಿ.ಕೆ.ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಹೊರತುಪಡಿಸಿ ಉಳಿದವರೆಲ್ಲರೂ ಸಚಿವರಾಗಿ ವಿವಿಧ ಇಲಾಖೆಗಳನ್ನು ನಿರ್ವಹಿಸಿದ ಅನುಭವಿಗಳು. ಪ್ರಮಾಣ ವಚನ ಸ್ವೀಕರಿಸಿದವರ ಪೈಕಿ ಯು.ಟಿ.ಖಾದರ್, ಯತೀಂದ್ರ ಅವರನ್ನು ಬಿಟ್ಟು ಉಳಿದ 11 ಮಂದಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದ ಸದಸ್ಯರಾಗಿದ್ದವರು.





10 ಜಿಲ್ಲೆಗಳಿಗೆ ಪ್ರಾತಿನಿಧ್ಯ

ಸಂಪುಟದಲ್ಲಿ 10 ಜಿಲ್ಲೆಗಳಿಗೆ ಪ್ರಾತಿನಿಧ್ಯ ಸಿಕ್ಕಿದೆ. ಬೆಂಗಳೂರು ನಗರ ಜಿಲ್ಲೆಯ ನಾಲ್ವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರೆ, ಕಲಬುರಗಿ ಜಿಲ್ಲೆಯಿಂದ ಇಬ್ಬರು ಸಚಿವರಾಗಿದ್ದಾರೆ. ಶಿವಕುಮಾರ್ ಅವರು ಬೆಂಗಳೂರು ದಕ್ಷಿಣ ಜಿಲ್ಲೆಗೆ ಸೇರಿದವರು. ಉಳಿದಂತೆ ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ವಿಜಯಪುರ, ದಕ್ಷಿಣ ಕನ್ನಡ, ಮೈಸೂರು ಮತ್ತು ಬೀದರ್ ಜಿಲ್ಲೆಗಳನ್ನು ಪ್ರತಿನಿಧಿಸುವ ತಲಾ ಒಬ್ಬರು ಶಾಸಕರು ಸಚಿವ ಸ್ಥಾನ ಪಡೆದಿದ್ದಾರೆ.

ಡಿ.ಕೆ.ಶಿವಕುಮಾರ್ (ಮುಖ್ಯಮಂತ್ರಿ)



ಕ್ಷೇತ್ರ: ಕನಕಪುರ (ಬೆಂಗಳೂರು ದಕ್ಷಿಣ ಜಿಲ್ಲೆ)
ಜಾತಿ: ಒಕ್ಕಲಿಗ
ವಿದ್ಯಾರ್ಹತೆ: ಎಂಎ
ವಯಸ್ಸು: 64 ವರ್ಷ
ಎಷ್ಟು ಬಾರಿ ಆಯ್ಕೆ: ಎಂಟು ಬಾರಿ ಶಾಸಕ
ನಿರ್ವಹಿಸಿದ ಖಾತೆ: ಉಪಮುಖ್ಯಮಂತ್ರಿ, ಬಂದೀಖಾನೆ, ನಗರಾಭಿವೃದ್ಧಿ, ಸಹಕಾರ, ಇಂಧನ, ಬೃಹತ್ ನೀರಾವರಿ, ವೈದ್ಯಕೀಯ ಶಿಕ್ಷಣ, ಜಲ ಸಂಪನ್ಮೂಲ

ಘೋಷಿತ ಆಸ್ತಿ ₹1,413 ಕೋಟಿ

ಜಿ.ಪರಮೇಶ್ವರ (ಉಪ ಮುಖ್ಯಮಂತ್ರಿ)



ಕ್ಷೇತ್ರ: ಕೊರಟಗೆರೆ (ತುಮಕೂರು ಜಿಲ್ಲೆ) (ಎಸ್‌ಸಿ ಮೀಸಲು)
ಜಾತಿ: ಪರಿಶಿಷ್ಟ ಜಾತಿ (ಬಲಗೈ)
ವಿದ್ಯಾರ್ಹತೆ: ಎಂಎಸ್‌ಸಿ, ಪಿಎಚ್‌.ಡಿ
ವಯಸ್ಸು: 75 ವರ್ಷ
ಎಷ್ಟು ಬಾರಿ ಆಯ್ಕೆ: ಆರು ಬಾರಿ ಶಾಸಕ
ನಿರ್ವಹಿಸಿದ ಖಾತೆ: ಗೃಹ, ಉನ್ನತ ಶಿಕ್ಷಣ, ವೈದ್ಯಕೀಯ, ರೇಷ್ಮೆ, ಬೆಂಗಳೂರು ಅಭಿವೃದ್ಧಿ, ಐ.ಟಿ, ಬಿ.ಟಿ, ಕ್ರೀಡೆ, ವಾರ್ತಾ ಮತ್ತು ಪ್ರಸಾರ (ಉಪಮುಖ್ಯಮಂತ್ರಿಯಾಗಿಯೂ ಕಾರ್ಯನಿರ್ವಹಣೆ)

ಘೋಷಿತ ಆಸ್ತಿ ₹20.02 ಕೋಟಿ

ಕೆ.ಎಚ್.ಮುನಿಯಪ್ಪ



ಕ್ಷೇತ್ರ: ದೇವನಹಳ್ಳಿ (ಬೆಂ. ಗ್ರಾಮಾಂತರ ಜಿಲ್ಲೆ) (ಎಸ್‌ಸಿ ಮೀಸಲು)
ಜಾತಿ: ಪರಿಶಿಷ್ಟ ಜಾತಿ (ಎಡಗೈ)
ವಿದ್ಯಾರ್ಹತೆ: ಕಾನೂನು ಪದವಿ
ವಯಸ್ಸು: 78 ವರ್ಷ
ಎಷ್ಟು ಬಾರಿ ಆಯ್ಕೆ: ಏಳು ಬಾರಿ ಸಂಸದ, ಒಂದು ಬಾರಿ ಶಾಸಕ
ನಿರ್ವಹಿಸಿದ ಖಾತೆ: ಆಹಾರ, ನಾಗರಿಕ ಸರಬರಾಜು

ಘೋಷಿತ ಆಸ್ತಿ ₹59.6 ಕೋಟಿ

ಕೆ.ಜೆ.ಜಾರ್ಜ್



ಕ್ಷೇತ್ರ: ಸರ್ವಜ್ಞ ನಗರ (ಬೆಂಗಳೂರು ನಗರ ಜಿಲ್ಲೆ)
ಧರ್ಮ: ಕ್ರೈಸ್ತ
ವಯಸ್ಸು: 79 ವರ್ಷ
ವಿದ್ಯಾರ್ಹತೆ: ಪಿಯುಸಿ (ಬಿಎ ಕೋರ್ಸ್ ಅಪೂರ್ಣ)
ಎಷ್ಟು ಬಾರಿ ಆಯ್ಕೆ: ಆರು ಬಾರಿ ಶಾಸಕ
ನಿರ್ವಹಿಸಿದ ಖಾತೆ: ಸಾರಿಗೆ, ಆಹಾರ, ವಸತಿ, ನಗರಾಭಿವೃದ್ಧಿ, ಬೆಂಗಳೂರು ನಗರಾಭಿವೃದ್ಧಿ, ಬೃಹತ್ ಕೈಗಾರಿಕೆ, ಇಂಧನ

ಘೋಷಿತ ಆಸ್ತಿ ₹214.85 ಕೋಟಿ

ಎಂ.ಬಿ.ಪಾಟೀಲ



ಕ್ಷೇತ್ರ: ಬಬಲೇಶ್ವರ (ವಿಜಯಪುರ ಜಿಲ್ಲೆ)
ಜಾತಿ: ಲಿಂಗಾಯತ
ವಿದ್ಯಾರ್ಹತೆ: ಎಂಜಿನಿಯರಿಂಗ್ (ಸಿವಿಲ್)
ವಯಸ್ಸು: 62 ವರ್ಷ
ಎಷ್ಟು ಬಾರಿ ಆಯ್ಕೆ: 6 ಬಾರಿ ಶಾಸಕ (ತಿಕೋಟಾ ಕ್ಷೇತ್ರದಿಂದ ಎರಡು, ಬಬಲೇಶ್ವರದಿಂದ 4 ಬಾರಿ)
ನಿರ್ವಹಿಸಿದ ಖಾತೆ: ಜಲಸಂಪನ್ಮೂಲ, ಗೃಹ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ

ಘೋಷಿತ ಆಸ್ತಿ ₹141 ಕೋಟಿ

ಡಾ.ಯತೀಂದ್ರ ಸಿದ್ದರಾಮಯ್ಯ



ಕ್ಷೇತ್ರ: ವಿಧಾನ ಪರಿಷತ್ ಸದಸ್ಯ (ಮೈಸೂರು ಜಿಲ್ಲೆ)
ಜಾತಿ: ಕುರುಬ
ವಿದ್ಯಾರ್ಹತೆ: ಎಂಬಿಬಿಎಸ್, ಎಂಡಿ
ವಯಸ್ಸು: 46 ವರ್ಷ
ಎಷ್ಟು ಬಾರಿ ಆಯ್ಕೆ: 2 (ಒಂದು ಬಾರಿ ಶಾಸಕ, ಹಾಲಿ ವಿಧಾನಪರಿಷತ್ ಸದಸ್ಯ)
ನಿರ್ವಹಿಸಿದ ಖಾತೆ: ಮೊದಲ ಬಾರಿಗೆ ಸಚಿವ

ಘೋಷಿತ ಆಸ್ತಿ ₹31.88 ಕೋಟಿ

ಬೈರತಿ ಸುರೇಶ್



ಕ್ಷೇತ್ರ: ಹೆಬ್ಬಾಳ (ಬೆಂಗಳೂರು ನಗರ ಜಿಲ್ಲೆ)
ಜಾತಿ: ಕುರುಬ
ವಯಸ್ಸು: 54 ವರ್ಷ
ವಿದ್ಯಾರ್ಹತೆ: ಪಿಯುಸಿ
ಎಷ್ಟು ಬಾರಿ ಆಯ್ಕೆ?: ಎರಡು ಬಾರಿ ಶಾಸಕ
ನಿರ್ವಹಿಸಿದ ಖಾತೆ: ನಗರಾಭಿವೃದ್ಧಿ

ಘೋಷಿತ ಆಸ್ತಿ ₹648 ಕೋಟಿ

ಈಶ್ವರ ಬಿ. ಖಂಡ್ರೆ



ಕ್ಷೇತ್ರ: ಭಾಲ್ಕಿ (ಬೀದರ್ ಜಿಲ್ಲೆ)
ಜಾತಿ: ವೀರಶೈವ ಲಿಂಗಾಯತ
ವಿದ್ಯಾರ್ಹತೆ: ಬಿಇ ಮೆಕ್ಯಾನಿಕಲ್
ವಯಸ್ಸು: 64 ವರ್ಷ
ಎಷ್ಟು ಬಾರಿ ಆಯ್ಕೆ?: 4 ಬಾರಿ ಶಾಸಕ
ನಿರ್ವಹಿಸಿದ ಖಾತೆ : ಪೌರಾಡಳಿತ, ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ

ಘೋಷಿತ ಆಸ್ತಿ ₹8.74 ಕೋಟಿ


ಡಾ.ಶರಣಪ್ರಕಾಶ ಪಾಟೀಲ



ಕ್ಷೇತ್ರ: ಸೇಡಂ (ಕಲಬುರಗಿ ಜಿಲ್ಲೆ)
ಜಾತಿ: ಲಿಂಗಾಯತ (ಆದಿ ಬಣಜಿಗ)
ವಿದ್ಯಾರ್ಹತೆ: ಎಂಬಿಬಿಎಸ್, ಎಂಡಿ
ವಯಸ್ಸು: 59 ವರ್ಷ
ಎಷ್ಟು ಬಾರಿ ಆಯ್ಕೆ?: 4 ಬಾರಿ ಶಾಸಕ
ನಿರ್ವಹಿಸಿದ ಖಾತೆ: ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ

ಘೋಷಿತ ಆಸ್ತಿ ₹28.70 ಕೋಟಿ

ರಾಮಲಿಂಗಾರೆಡ್ಡಿ



ಕ್ಷೇತ್ರ: ಬಿಟಿಎಂ ಲೇಔಟ್ (ಬೆಂಗಳೂರು ನಗರ ಜಿಲ್ಲೆ)
ಜಾತಿ: ರೆಡ್ಡಿ
ವಿದ್ಯಾರ್ಹತೆ: ಬಿಎಸ್‌ಸಿ
ವಯಸ್ಸು: 73 ವರ್ಷ
ಎಷ್ಟು ಬಾರಿ ಆಯ್ಕೆ: ಎಂಟು ಬಾರಿ ಶಾಸಕ
ನಿರ್ವಹಿಸಿದ ಖಾತೆ: ಗೃಹ, ಸಾರಿಗೆ, ಮುಜರಾಯಿ, ಪ್ರಾಥಮಿಕ ಶಿಕ್ಷಣ

ಘೋಷಿತ ಆಸ್ತಿ ₹ 110 ಕೋಟಿ


ಸತೀಶ ಜಾರಕಿಹೊಳಿ



ಕ್ಷೇತ್ರ: ಯಮಕನಮರಡಿ
ಜಾತಿ: ಪರಿಶಿಷ್ಟ ಪಂಗಡ (ವಾಲ್ಮೀಕಿ)
ವಿದ್ಯಾರ್ಹತೆ: ಪಿಯುಸಿ
ವಯಸ್ಸು: 64 ವರ್ಷ
ಎಷ್ಟು ಬಾರಿ ಆಯ್ಕೆ: ವಿಧಾನ ಪರಿಷತ್ ಸದಸ್ಯರಾಗಿ ಎರಡು ಬಾರಿ, ಶಾಸಕರಾಗಿ ನಾಲ್ಕು ಬಾರಿ
ನಿರ್ವಹಿಸಿದ ಖಾತೆ: ಅರಣ್ಯ, ಅಬಕಾರಿ, ಜವಳಿ, ಸಣ್ಣ ಕೈಗಾರಿಕೆ ಮತ್ತು ಲೋಕೋಪಯೋಗಿ

ಘೋಷಿತ ಆಸ್ತಿ ₹ 158.56 ಕೋಟಿ

ಕೃಷ್ಣ ಬೈರೇಗೌಡ



ಕ್ಷೇತ್ರ: ಬ್ಯಾಟರಾಯನಪುರ (ಬೆಂಗಳೂರು ನಗರ ಜಿಲ್ಲೆ)
ಜಾತಿ: ಒಕ್ಕಲಿಗ
ವಯಸ್ಸು: 53 ವರ್ಷ
ವಿದ್ಯಾರ್ಹತೆ: ಸ್ನಾತಕೋತ್ತರ ಪದವಿ
ಎಷ್ಟು ಬಾರಿ ಆಯ್ಕೆ?: ಆರು ಬಾರಿ ಶಾಸಕ
ನಿರ್ವಹಿಸಿದ ಖಾತೆ: ಕಾನೂನು ಮತ್ತು ಸಂಸದೀಯ ವ್ಯವಹಾರ, ಕೃಷಿ, ಕಂದಾಯ

ಘೋಷಿತ ಆಸ್ತಿ ₹ 16.17 ಕೋಟಿ


ಪ್ರಿಯಾಂಕ್ ಖರ್ಗೆ



ಕ್ಷೇತ್ರ: ಚಿತ್ತಾಪುರ (ಮೀಸಲು) (ಕಲಬುರಗಿ ಜಿಲ್ಲೆ)
ಜಾತಿ: ಪರಿಶಿಷ್ಟ ಜಾತಿ (ಬಲಗೈ)
ವಿದ್ಯಾರ್ಹತೆ: ಡಿಪ್ಲೊಮಾ ಇನ್ ಗ್ರಾಫಿಕ್ಸ್ ಮತ್ತು ಆ್ಯನಿಮೇಷನ್
ವಯಸ್ಸು: 47 ವರ್ಷ
ಎಷ್ಟು ಬಾರಿ ಆಯ್ಕೆ: ಮೂರು ಬಾರಿ ಶಾಸಕ
ನಿರ್ವಹಿಸಿದ ಖಾತೆ: ಐಟಿ, ಬಿಟಿ ಹಾಗೂ ಪ್ರವಾಸೋದ್ಯಮ, ಸಮಾಜ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್

ಘೋಷಿತ ಆಸ್ತಿ ₹ 16.83 ಕೋಟಿ

ಯು.ಟಿ.ಖಾದರ್ ಫರೀದ್



ಕ್ಷೇತ್ರ: ಮಂಗಳೂರು (ದಕ್ಷಿಣ ಕನ್ನಡ ಜಿಲ್ಲೆ)
ಧರ್ಮ: ಮುಸ್ಲಿಂ (ಬ್ಯಾರಿ)
ವಿದ್ಯಾರ್ಹತೆ: ಬಿಎ, ಎಲ್‌ಎಲ್‌ಬಿ
ವಯಸ್ಸು: 57 ವರ್ಷ
ಎಷ್ಟು ಬಾರಿ ಆಯ್ಕೆ: 5 ಬಾರಿ ಶಾಸಕ
ನಿರ್ವಹಿಸಿದ ಖಾತೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಆಹಾರ ಮತ್ತು ನಾಗರಿಕ ಪೂರೈಕೆ, ನಗರಾಭಿವೃದ್ಧಿ ಮತ್ತು ವಸತಿ (ವಿಧಾನಸಭಾಧ್ಯಕ್ಷರಾಗಿಯೂ ಕಾರ್ಯನಿರ್ವಹಣೆ)

ಘೋಷಿತ ಆಸ್ತಿ ₹6.97 ಕೋಟಿ

ಡಿಕೆಶಿ ದೇಶದಲ್ಲೇ ಸಿರಿವಂತ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಶ್ರೀಮಂತ ಶಾಸಕರ ಪಟ್ಟಿಯಲ್ಲಿ ಎರಡನೇ ಸಾಲಿನಲ್ಲಿದ್ದ ಡಿ.ಕೆ. ಶಿವಕುಮಾರ್, ಈಗ ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ ಎನಿಸಿದ್ದಾರೆ.

2023ರ ವಿಧಾನಸಭಾ ಚುನಾವಣೆಯ ವೇಳೆಗೆ ₹1,413 ಕೋಟಿ ಮೌಲ್ಯದಷ್ಟು ಆಸ್ತಿಯನ್ನು ಶಿವಕುಮಾರ್ ಘೋಷಿಸಿಕೊಂಡಿದ್ದರು. ಇದು ದೇಶದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಪೈಕಿ ಅತಿ ಹೆಚ್ಚು ಆಸ್ತಿ.

ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಈವರೆಗೆ ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ (₹931 ಕೋಟಿ ಒಟ್ಟು ಆಸ್ತಿ) ಎನಿಸಿದ್ದರು. ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಎರಡನೇ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ (₹648 ಕೋಟಿ ಒಟ್ಟು ಆಸ್ತಿ) ಸ್ಥಾನದಲ್ಲಿದ್ದರು. ಈಗ ಚಂದ್ರಬಾಬು ನಾಯ್ಡು ಅವರನ್ನು ಎರಡನೇ ಮತ್ತು ವಿಜಯ್ ಅವರನ್ನು ಮೂರನೇ ಸ್ಥಾನಕ್ಕೆ ಸರಿಸಿ, ಮೊದಲ ಸ್ಥಾನಕ್ಕೆ ಶಿವಕುಮಾರ್ ಬಂದಿದ್ದಾರೆ.

ಅಸ್ಸಾಂ ಮುಖ್ಯಮಂತ್ರಿ ಪೆಮಾ ಖಂಡು ₹332 ಕೋಟಿಯಷ್ಟು ಆಸ್ತಿ ಘೋಷಿಸಿಕೊಂಡಿದ್ದು, ಶ್ರೀಮಂತ ಮುಖ್ಯಮಂತ್ರಿಗಳ ಸಾಲಿನಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ದೇಶದ ಮೊದಲ ಮೂವರು ಶ್ರೀಮಂತ ಮುಖ್ಯಮಂತ್ರಿಗಳು ದಕ್ಷಿಣ ಭಾರತದವರೇ ಆಗಿದ್ದಾರೆ.



2024ರಲ್ಲಿ ಮಹಾರಾಷ್ಟ್ರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯಿಂದ ಆಯ್ಕೆಯಾದ ಶಾಸಕ ಪರಾಗ್ ಶಾ ತಮ್ಮಲ್ಲಿ ₹3,383 ಕೋಟಿ ಆಸ್ತಿ ಎಂದು ಘೋಷಿಸಿಕೊಂಡಿದ್ದು, ಈಗ ದೇಶದ ಅತ್ಯಂತ ಶ್ರೀಮಂತ ಶಾಸಕ ಎನಿಸಿದ್ದಾರೆ. ಪರಾಗ್ ಶಾ ಆಯ್ಕೆಗೂ ಮುನ್ನ ಶಿವಕುಮಾರ್ ಅವರು ಆ ಸ್ಥಾನದಲ್ಲಿದ್ದರು.

ಕೈಚೆಲ್ಲದ ಕ್ಷಣಗಳು





ಪಿ.ಚಂದ್ರಿಕಾ

ಥಾಮಸ್ ಆಲ್ವಾ ಎಡಿಸನ್‌ರನ್ನು ಸಂದರ್ಶಕ ಪ್ರಶ್ನಿಸಿದ, ‘ಸಾವಿರಾರು ಪ್ರಯತ್ನಗಳು, ಸೋಲಿನ ಸರಮಾಲೆ, ನಿಮ್ಮನ್ನೆಂದೂ ಕಂಗೆಡಿಸಲಿಲ್ಲವೇ?’ ನಕ್ಕ ಎಡಿಸನ್, ‘ಅದನ್ನು ಸೋಲೆಂದು ಯಾಕೆ ಕರೆಯುತ್ತಿರುವಿರಿ? ನಾನು ಗೆಲ್ಲುವ ಹತ್ತು ಸಾವಿರ ದಾರಿಗಳಲ್ಲಿ ಪಯಣಿಸಿದ್ದೇನೆ ಎಂದು ನಿಮಗೆ ಅನ್ನಿಸಲಿಲ್ಲವೆ’ ಎಂದು ಮರುಪ್ರಶ್ನಿಸುತ್ತಾರೆ. ಸಂದರ್ಶಕ ಕಕ್ಕಾಬಿಕ್ಕಿಯಾಗುತ್ತಾನೆ. ನಕ್ಕ ಎಡಿಸನ್, ‘ಸೋಲುಗಳು ನಮ್ಮನ್ನು ಕಂಗೆಡಿಸಬಾರದು, ಅವು ನಮ್ಮ ಮುಂದಿನ ಗುರಿಯ ಕಡೆಗೆ ಹೊರಡುವ ದಾರಿಯನ್ನು ಸುಗಮಗೊಳಿಸುತ್ತಿರುತ್ತವೆ. ಇವತ್ತು ಕತ್ತಲಾಯಿತು ಎಂದರೆ ಇನ್ನು ಬೆಳಕು ಆಗುವುದಿಲ್ಲ ಎಂದು ನಿರ್ಧಾರಕ್ಕೆ ಬರುತ್ತೇವೆಯೇ? ಇಲ್ಲ. ನಾಳೆ ಬೆಳಕಾಗುತ್ತದೆ, ಆಗ ನಾನು ಈ ಕೆಲಸವನ್ನು ಮಾಡುತ್ತೇನೆ ಎಂದು ನಿರ್ಧರಿಸಿಕೊಳ್ಳುತ್ತೇವೆ ಅಲ್ಲವೇ? ಹಾಗೆ ಸೋಲುಗಳು ಕೂಡಾ. ಗೆಲುವಿನ ಕ್ಷಣಗಳಿಗಾಗಿ ಕಾಯುವಂತೆ ಮಾಡುತ್ತವೆ’ ಎಂದರು.

ಸಂದರ್ಶಕನಿಗೆ ನಿಜಕ್ಕೂ ಕುತೂಹಲ ಅನ್ನಿಸಿ, ‘ಹೇಳಿ ಎಡಿಸನ್, ನೀವು ಕ್ಷಣ ಕಾಲವಾದರೂ ಕೈ ಚೆಲ್ಲಿ ಕೂಡಲಿಲ್ಲವೇ? ನಿಮ್ಮ ಬದುಕು ನಿಮ್ಮ ಸಂಶೋಧನೆ ಎಲ್ಲವೂ ಅನಿಶ್ಚಿತ ಅನ್ನಿಸಲಿಲ್ಲವೇ’ ಎಂದು ಕೇಳಿದ. ‘ನೀವು ನಿಮ್ಮ ಕೆಲಸದಲ್ಲಿ ಪ್ರಾಮಾಣಿಕರಾಗಿದ್ದರೆ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಗೆಲ್ಲುವ ಎಲ್ಲ ದಾರಿಗಳೂ ತಮ್ಮದೊಂದೊಂದು ಮಾರ್ಗಗಳಿವೆ ಎಂದು ತೋರಿಸುತ್ತವೆ. ಮುಖ್ಯವಾಗಿ ನಿಮ್ಮ ಮನಸ್ಸಿನಲ್ಲಿ ಅದನ್ನು ಪಡೆದೇ ತೀರುತ್ತೇನೆ ಎನ್ನುವ ತೀರ್ಮಾನ ಇರಬೇಕು. ಗೆದ್ದೇ ಗೆಲ್ಲುತ್ತೇನೆ ಎನ್ನುವ ವಿಶ್ವಾಸವಿರಬೇಕು, ಇವೆರಡೂ ನಿಮ್ಮನ್ನು ನೀವು ಬಯಸಿದ ಗೆಲುವಿನ ಬಳಿಗೆ ಕರೆದೊಯ್ದು ನಿಲ್ಲಿಸುತ್ತವೆ’ ಎಂದರು.

ಸಂದರ್ಶಕ ಮತ್ತೆ ಕೇಳಿದ, ‘ನಿಮ್ಮ ಬದುಕು, ವರ್ತನೆ ಜಗತ್ತಿಗೆ ತುಂಬಾ ವಿಚಿತ್ರವಾಗಿ ಕಂಡಿವೆ. ನೀವು ಬಲ್ಬನ್ನು ತಯಾರು ಮಾಡಿದ ನಂತರ ಹುಡುಗನೊಬ್ಬನಿಗೆ ಕೊಟ್ಟು ಅದನ್ನು ಹೋಲ್ಡರ್‌ಗೆ ಹಾಕಲಿಕ್ಕೆ ಹೇಳಿದಿರಿ, ಆದರೆ ಆ ಹುಡುಗ ಅದನ್ನು ಬೀಳಿಸಿ ಒಡೆದ. ರಾತ್ರಿಯೆಲ್ಲಾ ಕಷ್ಟ ಪಟ್ಟು ಮತ್ತೆ ಬಲ್ಬ್ ತಯಾರಿಸಿ ಮತ್ತೆ ಅದೇ ಹುಡುಗನ ಕೈಗೆ ಕೊಟ್ಟು ಹಾಕಲಿಕ್ಕೆ ಹೇಳಿದಿರಂತೆ. ಅವನು ಆ ಬಲ್ಬನ್ನು ಮುಟ್ಟಲಿಕ್ಕೂ ಹೆದರಿನಂತೆ. ಆದರೂ ನೀನೇ ಹಾಕು ಎಂದಿರಂತೆ? ಯಾಕೆ ಹಾಗೆ ಮಾಡಿದಿರಿ? ನಿಮ್ಮ ಶ್ರಮ ವ್ಯರ್ಥ ಅನ್ನಿಸಲಿಲ್ಲವೇ’ ಎಂದ. ‘ನನ್ನ ಸೋಲುಗಳು ಗೆಲುವಾಗಿ ಮಾರ್ಪಟ್ಟ ದಿನ ನನ್ನೊಳಗೆ ಆತ್ಮವಿಶ್ವಾಸ ಹುಟ್ಟಿಬಿಟ್ಟಿತ್ತು. ಬಲ್ಬ್ ತಯಾರಿಸುವುದು ಸ್ವಲ್ಪ ಶ್ರಮದಾಯಕ ವಿಚಾರವಾಗಿತ್ತೇ ವಿನಾ ಅದು ನನ್ನ ಆತ್ಮವಿಶ್ವಾಸವನ್ನು ಕುಗ್ಗಿಸುವ ಸಂಗತಿಯಾಗಿರಲಿಲ್ಲ. ಆದರೆ, ಆ ಹುಡುಗನಿಗೆ ಹಾಗಿರಲಿಲ್ಲ. ಅವನು ಅದನ್ನು ಹೋಲ್ಡರ್‌ಗೆ ಹಾಕಿ ಬೆಳಗಿಸಲಿಲ್ಲ ಎಂದರೆ ಜೀವಮಾನವಿಡೀ ಅದೇ ತಪ್ಪಿತಸ್ಥ ಭಾವನೆಯಿಂದ ನರಳಿ ಬಿಡುತ್ತಿದ್ದ. ಇಷ್ಟು ದಿನಗಳು ಅನುಮಾನಿಸದೆ ನನ್ನೊಂದಿಗೆ ಕುಳಿತಿದ್ದಾನೆ. ಅಂಥವನನ್ನು ಜೊತೆಯಲ್ಲಿ ಕರೆದೊಯ್ಯುವುದು ನನ್ನ ಕರ್ತವ್ಯ ಅಲ್ಲವೇ’ ಎಂದರು ಎಡಿಸನ್.

ಮತ್ತೆ ಸಂದರ್ಶಕ ಕೇಳಿದ, ‘ಹಾಗಾದರೆ ಆ ಹುಡುಗ ಇಲ್ಲದಿದ್ದರೆ ನೀವು ಬಲ್ಬನ್ನು ಕಂಡು ಹಿಡಿಯುತ್ತಿರಲಿಲ್ಲವೇ?’ ಎಡಿಸನ್ ನಕ್ಕು, ‘ನಮ್ಮ ಎದೆಯಲ್ಲಿನ ಪ್ರಬಲವಾದ ಬಯಕೆಗಳು ಸುಮ್ಮನೆ ಹುಟ್ಟಿರುವುದಿಲ್ಲ. ಯಾರು ನಮ್ಮನ್ನು ಗಮನಿಸದಿದ್ದರೂ, ನಮ್ಮನ್ನು ಪ್ರೋತ್ಸಾಹಿಸದಿದ್ದರೂ ಅವು ಇದ್ದೇ ಇರುತ್ತವೆ. ಅದನ್ನು ನಾವು ನಂಬಬೇಕು. ಅವು ನಮ್ಮ ಕೈ ಹಿಡಿಯುತ್ತವೆಯೋ ಅಥವಾ ನಾವು ಅವುಗಳ ಕೈ ಹಿಡಿಯುತ್ತೀವೋ ತಿಳಿಯದು. ಸಾರ್ಥಕತೆಯ ಕಡೆಗೆ ಮಾತ್ರ ಸಾಗುತ್ತೇವೆ’ ಎಂದರು.

ನಿಜ. ಆತ್ಮವಿಶ್ವಾಸವೊಂದಿದ್ದರೆ ಕೈಚೆಲ್ಲುವ ದಿನಗಳು ಬರುವುದೇ ಇಲ್ಲ. ❖

ಗುಂಡಣ್ಣ



ಪದಬಂಧ 6423

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗುಂಡು ಹಾರಿಸುವ ಸಾಧನ (2)
3.ಸೂಕ್ಷ್ಮವಾಗಿಯೇ ಪರಿಶೀಲಿಸುವವ (4)
5.ವಿಭಕ್ತಿಗಳಲ್ಲಿ ಮೊದಲನೆಯದು (3)
6.ಪ್ರಾಣಿಗಳನ್ನು ಕಡಿಯುವವ (3)
8.ಒಳ್ಳೆಯ ಅದೃಷ್ಟವನ್ನು ಹೊಂದಿರುವುದು (3)
10.ಸಂತೋಷದಿAದ ಉಕ್ಕಿದ ಕಣ್ಣೀರು (4)
11.ಇದೊಂದು ಜಾತಿಯ ಕಬ್ಬು (4)
12.ಹೊಂಗೆಯ ಮರವನ್ನು ಹೀಗೂ ಹೇಳುವರು (3)
14.ಬನವಾಸಿಯನ್ನಾಳಿದ ರಾಜವಂಶ (3)
16.ಅತ್ಯಾಸಕ್ತಿಯಿಂದ ಕೂಡಿದವನು (3)
18.ವೇದಾದಿಗಳನ್ನು ಅಧ್ಯಯನ ಮಾಡಿದವನು (4)
19.ಕತ್ತಿ ಇಲ್ಲಿದೆ (2)

ಮೇಲಿಂದ ಕೆಳಕ್ಕೆ
2.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)
3.ಆರಂಭವಾಗಿದೆ, ಈ ಉತ್ಸವ! (4)
4.ಸ್ವಲ್ಪ ಕಾಲದಲ್ಲಿಯೇ ನಾಶವಾಗತಕ್ಕದ್ದು (3)
7.ಈ ಬಾಳೆಗಿಡದಲ್ಲಿ ಕಳಿತ ಫಲವಿದೆ (3)
8.ಅಶ್ರು ಏಕೆ? ಪ್ರಾಚೀನ ವೈದ್ಯ ಇಲ್ಲಿಹನಲ್ಲಾ? (3)
9.ದುಷ್ಟಶಕ್ತಿಗಳ ಹತ್ತಿರವೇ ನಂಜು ಇದೆ! (3)
10.ದೈವ ಧರ್ಮಗಳಲ್ಲಿ ಈತನಿಗೆ ಬಲು ನಂಬಿಕೆ (3)
13.ಈಕೆ ಸೋದರಮಾವನ ಹೆಂಡತಿ (4)
15.ದುಡ್ಡು ಕಾಸು ಏನೂ ಇಲ್ಲದವನು (3)
17.ಸಖ್ಯತೆ ಬೆಳಸಿಕೊಂಡಿರುವ ಗೆಳೆಯ (2)

■	1	2	■	3		4		■
■	■	5			■		■	■
■	■	■	■		■	6		7
■	■	■	8		9	■	■	
10				■	11			
	■	■	12	13		■	■	■
14		15	■		■	■	■	■
■	■		■	16		17	■	■
■	18				■	19		■

6422ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆವಿಷ್ಕಾರ 3.ಗರ್ಭಕೋಶ
5.ತಕ್ಕಡಿ 6.ನೆಪ
8.ದಾಹ 9.ಪರ
10.ರಹ 12.ಪಲ್ಲವಿ
14.ಯಥಾಸ್ಥಿತಿ 15.ಹತ್ಯಾಕಾಂಡ

ಮೇಲಿಂದ ಕೆಳಕ್ಕೆ:
1.ಆಶ್ವಾಸನೆ 2.ರಜತ
3.ಗರಡಿ 4.ಶಯ್ಯಾಗೃಹ
7.ಪದರ 8.ದಾತಾರ
9.ಪರಿಚಯ 11.ಹಳವಂಡ
12.ಪದಾತಿ 13.ವಿವಾಹ

ಸುಡೊಕು 6806

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		7	1		2		6	
	1			3		8		9
2		4				1		7
	6	8		5			4	1
			6			7	9	
9	4			2				
3	7			8		9		5
		6					8	
	8		3		5	6		

6805 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

04 ಜೂನ್ 2026 ಗುರುವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ಚತುರ್ಥಿ ಗಂ. 23-31 ನಕ್ಷತ್ರ : ಉತ್ತರಾಷಾಢ ಗಂ. 27-42 ಯೋಗ : ಶುಕ್ರ ಗಂ. 09-03 ಕರಣ : ಬವ ಗಂ. 10-28, ವೃಷಭ ಮಾಸದ 21 ನೇ ದಿನ. ಮಳೆ ನಕ್ಷತ್ರ : ರೋಹಿಣಿ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-06 ಸೂರ್ಯಾಸ್ತ : 06-51 ಮುಸ್ಲಿಂ ದಿನಾಂಕ : 18 ದುಲ್ ಹಿಜ್ಜಾ ಅದೃಷ್ಟ ಸಂಖ್ಯೆ : 4, 6

ಮೇಷ: ವೃತ್ತಿರಂಗದಲ್ಲಿ ನಿಮಗಾಗಿ ಅದೃಷ್ಟದ ಬಾಗಿಲು ತೆರೆಯುವುದು. ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಹೊಸ ಯೋಜನೆಗಳನ್ನು ರೂಢಿಸಿಕೊಳ್ಳಬಹುದು. ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವ ಸಾಧ್ಯತೆ ಇದೆ.

ವೃಷಭ: ನಿಮ್ಮ ಉದಾರ ಮನೋಭಾವದಿಂದ ಇತರರಿಗೆ ಸಹಾಯ ಮಾಡಿದ ಫಲ ನಿಮಗೆ ಅನುಭವಕ್ಕೆ ಬರಲಿದೆ. ನಿಮ್ಮ ಮನೋಭಿಲಾಷೆ ವ್ಯಕ್ತ ಪಡಿಸಲು ಹಿಂಜರಿಯಬೇಡಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಾಧನೆಗೆ ಸುಸಮಯ.

ಮಿಥುನ: ಚಿಲ್ಲರೆ ಮಾರಾಟಗಾರರಿಗೆ ಮತ್ತು ಹೂವು, ಹಣ್ಣು ಬೆಳೆಗಾರರಿಗೆ ಶುಭ ದಿನ. ನಿಮ್ಮ ಜೀವನವನ್ನು ಹಿಂದಿರುಗಿ ನೋಡಿದರೆ ನಿಮ್ಮ ಸಾಧನೆಗಳ ಬಗ್ಗೆ ಹೆಮ್ಮೆ ಎನಿಸುವುದು. ದಾಂಪತ್ಯದಲ್ಲಿ ಹೊಂದಾಣಿಕೆ ಅಗತ್ಯ ಅನಿಸಲಿದೆ.

ಕರ್ಕಾಟಕ: ಹಿರಿಯರ ಮಧ್ಯಸ್ಥಿಕೆಯಿಂದ ವಿವಾದಗಳು ಬಗೆ ಹರಿಯುವವು, ಮೊದಲಿನಂತೆ ಸಂಬಂಧ ಗಟ್ಟಿಯಾಗಲಿದೆ. ನಿಮ್ಮ ಲಾಭಕ್ಕಾಗಿ ಇನ್ನೊಬ್ಬರಿಗೆ ಮೋಸ ಮಾಡಬೇಡಿ. ಭಯ-ಭೀತಿಯಿಂದ ಹೊರಬರುವಂತಾಗುವುದು.

ಸಿಂಹ: ಇಂದು ನಿಮ್ಮ ಅದೃಷ್ಟದ ಕಾಲವಾದ ಕಾರಣ ಬಂದ ಅವಕಾಶಗಳನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡಲ್ಲಿ ವ್ಯಾಪಾರ ವ್ಯವಹಾರದಲ್ಲಿ ಅಧಿಕ ಲಾಭ ಕಾಣಬಹುದು. ಹೆಂಡತಿ ಆರೋಗ್ಯದಲ್ಲಿ ವ್ಯತ್ಯಾಸಗಳಾಗಬಹುದು.

ಕನ್ಯಾ: ಕೆಲಸವು ನಿಧಾನಗತಿಯಲ್ಲಿ ಸಾಗುವ ಕಾರಣ ಯೋಜಿತ ಕಾರ್ಯವು ಬಾಕಿ ಉಳಿಯಲಿದೆ. ಮಾರಾಟ ಪ್ರತಿನಿಧಿಗಳಿಗೆ ಉತ್ತಮ ಸ್ಪಂದನೆ ಸಿಗುವುದು. ರಾಜಕೀಯ ವ್ಯಕ್ತಿಗಳಿಗೆ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟವಿರುವುದು.

ತುಲಾ: ನಾನಾ ಕಡೆಗಳಿಂದ ಸಂಪಾದನೆ ಇರುವುದು, ಬರಬೇಕಿದ್ದ ಹಣ ಅಡಚಣೆಗಳಿಲ್ಲದೆ ಶೀಘ್ರ ಬರುವುದು. ಬುದ್ಧಿವಂತಿಕೆಯಿಂದ ಕೆಲಸವನ್ನು ನಿಮ್ಮದಾಗಿಸಿಕೊಳ್ಳಿರಿ. ಧಾರ್ಮಿಕ ವಿಷಯದ ಅಧ್ಯಯನದಲ್ಲಿ ಆಸಕ್ತಿ ಮೂಡುವುದು.

ವೃಶ್ಚಿಕ: ಗಣಿತದಲ್ಲಿ ಅಥವಾ ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ. ಧ್ಯಾನ, ಯೋಗದಿಂದ ಮಾನಸಿಕ ಒತ್ತಡ ಸ್ವಲ್ಪ ಕಡಿಮೆಯಾಗುವುದು. ಮದುವೆ ನಿಶ್ಚಯಗೊಳ್ಳುವ ಸಾಧ್ಯತೆಗಳಿವೆ.


ಧನು: ನಿಮ್ಮ ದೇಹದಲ್ಲಿ ವಾತ ಪಿತ್ಥದ ಅಂಶ ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕವಾಗುತ್ತದೆ. ವಾಹನ ವಹಿವಾಟುಗಳಲ್ಲಿ ನಿಮ್ಮ ನಿರೀಕ್ಷೆಯನ್ನು ಮೀರಿದ ಲಾಭವನ್ನು ಪಡೆಯಬಹುದು.

ಮಕರ: ಇಂದು ವೃತ್ತಿ ಪರವಾಗಿ ನಡೆಯುವ ಎಲ್ಲ ವಿಷಯಗಳನ್ನೂ ಸಹ ಗಂಭೀರವಾಗಿಯೇ ಪರಿಗಣಿಸಬೇಕಾಗುತ್ತದೆ. ಗೊಂದಲದಲ್ಲಿರುವ ನಿಮಗೆ, ಅಭಿಪ್ರಾಯ ವಿನಿಮಯಗಳಿಂದ ಮನಸ್ಸಿಗೆ ನೆಮ್ಮದಿ ಮೂಡುವುದು.

ಕುಂಭ: ಎಷ್ಟೆ ಅನುಭವ ಇದ್ದರೂ ಇನ್ನೂ ಜೀವನದ ಪಾಠವನ್ನು ಕಲಿಯುವುದು ಅಗತ್ಯವೆನಿಸುವುದು. ಗುಡಿ ಕೈಗಾರಿಕೆಯವರಿಗೆ ಅಥವಾ ಸಣ್ಣ ಕೈಗಾರಿಕೆಯವರಿಗೆ ಈ ದಿನ ಸಾಕಷ್ಟು ಲಾಭ ಸಿಗಲಿದೆ. ಕಫದ ವ್ಯಾಧಿ ಹೆಚ್ಚಾಗಲಿದೆ.

ಮೀನ: ನಿಮ್ಮ ಮಾತು ಮತ್ತು ಕೃತಿಯನ್ನು ಆದಷ್ಟು ಒಂದನ್ನು ಮಾಡಿಕೊಳ್ಳಿ. ಕೆಲವೊಂದು ಸಂದರ್ಭದಲ್ಲಿ ನಿಮ್ಮ ಮಾತು ಸತ್ಯವಾಗಿದ್ದರೂ ಅದನ್ನು ಸಾಬೀತು ಪಡಿಸಲಾಗುವುದಿಲ್ಲ. ಕೃಷಿಕರು ಧಾನ್ಯ ರಕ್ಷಣೆ ಬಗ್ಗೆ ಗಮನವಹಿಸಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,483
ಇಂದಿನ ಅಂತ್ಯ:	23,405
ದಿನದ ಕನಿಷ್ಠ:	23,151
	77

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹620
12 ಕ್ಕೆ	₹86
ಮೈಸೂರು: 100 ಕ್ಕೆ	₹630

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹257.50
ಆರ್‌ಎಸ್‌ಎಸ್-5	₹249
ಗುಡ್ ಲಾಟ್	₹214

ರಾಮನಗರ ರೇಷ್ಮೆಗೂಡು (10 ಕೆ.ಜಿಗೆ)

ಮಿಶ್ರತಳಿ(ಸಿ.ಬಿ)	₹333-645
ದ್ವಿತಳಿ (ಬಿ.ವಿ)	₹375-802

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1610 (1620)
ಸೋಯಾ (ರಿಫೈನ್ಡ್)	₹1500 (1510)
ಸೂರ್ಯಕಾಂತಿ (ರಿಫೈನ್ಡ್)	₹1660 (1660)
ಪಾಮೋಲಿನ್	₹1490 (1490)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹22750
ಎಸಿ	₹14000
ಆರ್‌ಪಿ	₹18250
ಆರ್‌ಸಿ	₹9700

ಮುಂಬೈ ಧಾರಣೆ (ಶೇಂಗಾ)

03-06-2026

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1630)
ಒಂದು ವಾರದ ಡೆಲಿವರಿ	1615 (1625)
ಪಾಮ್ ವಾರದ ಡೆಲಿವರಿ	1488 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1560)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,54,400 (1,55,000)
ಬೆಳ್ಳಿ ಕೆ.ಜಿಗೆ	2,61,500 (2,65,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಭಾರತದ ಮೇಲೆ ಹೊಸ ತೆರಿಗೆ ಪ್ರಸ್ತಾವ

ಒಟ್ಟು 54 ದೇಶಗಳನ್ನು ಗುರಿಯಾಗಿಸಿ ಶೇ 12.5ರಷ್ಟು ಸುಂಕ ಸಾಧ್ಯತೆ

ವಾಷಿಂಗ್ಟನ್/ನವದೆಹಲಿ (ಪಿಟಿಐ): ಬಲವಂತದಿಂದ ಕಾರ್ಮಿಕರನ್ನು ದುಡಿಸಿಕೊಳ್ಳುವ ಕಡೆಗಳಿಂದ ಸರಕುಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ನಿಷೇಧ ಹೇರಲು ವಿಫಲವಾಗಿರುವ ಆರೋಪದ ಅಡಿಯಲ್ಲಿ ಭಾರತದ ಸರಕುಗಳ ಮೇಲೆ ಶೇ 12.5ರಷ್ಟು ಸುಂಕ ವಿಧಿಸಲು ಅಮೆರಿಕ ಪ್ರಸ್ತಾವ ಸಿದ್ಧಪಡಿಸಿದೆ.

ಭಾರತ ಅಲ್ಲದೆ ಇತರ 53 ದೇಶಗಳ ಮೇಲೆಯೂ ಇದೇ ಬಗೆಯಲ್ಲಿ ಸುಂಕ ವಿಧಿಸುವ ಪ್ರಸ್ತಾವ ಅಮೆರಿಕದ ಮುಂದಿದೆ. ಭಾರತ ಮತ್ತು ಅಮೆರಿಕದ ಪ್ರತಿನಿಧಿಗಳ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆ ನಡೆಯುತ್ತಿರುವ ಹೊತ್ತಿನಲ್ಲಿ ಈ ಬೆಳವಣಿಗೆ ನಡೆದಿದೆ.

ಮುಖ್ಯಾಂಶಗಳು

- ಭಾರತ ಸೇರಿ 54 ದೇಶಗಳ ವಿರುದ್ಧ ಹೊಸ ಸುಂಕ?
- ಆರೋಪವನ್ನು ಅಲ್ಲಗಳೆದಿರುವ ಭಾರತ
- ಜುಲೈ 24ಕ್ಕೆ ಮೊದಲು ಹೊಸ ಸುಂಕ ಕುರಿತ ತೀರ್ಮಾನ?

ಹೊಸ ಸುಂಕದ ಬಗ್ಗೆ ಪ್ರತಿಕ್ರಿಯೆ



ನೀಡಿರುವ ಕೇಂದ್ರ ವಾಣಿಜ್ಯ ಸಚಿವಾಲಯವು, ಇದರ ವಿಚಾರವಾಗಿ ಅಮೆರಿಕದ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದು ಹೇಳಿದೆ.

ಬಲವಂತದಿಂದ ಕಾರ್ಮಿಕರನ್ನು ದುಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಒಟ್ಟು 60 ದೇಶಗಳ ವಿರುದ್ಧ ಅಮೆರಿಕದಲ್ಲಿ ಮಾರ್ಚ್‌ನಲ್ಲಿ ತನಿಖೆ ಆರಂಭವಾಗಿತ್ತು. ಈಗ ಅಮೆರಿಕದ ವ್ಯಾಪಾರ ಪ್ರತಿನಿಧಿ (ಯುಎಸ್‌ಟಿಆರ್) ಸಂಸ್ಥೆ, 1974ರ ವ್ಯಾಪಾರ ಕಾಯ್ದೆಯ ಅಡಿ ಈ ಹೆಚ್ಚುವರಿ ಸುಂಕ ವಿಧಿಸುವ ಪ್ರಸ್ತಾವ ಸಿದ್ಧಪಡಿಸಿದೆ.

ಇದು ಈಗ ಪ್ರಸ್ತಾವ ಮಾತ್ರ, ಇದು ಅಂತಿಮಗೊಂಡಿಲ್ಲ ಎಂದು ಯುಎಸ್‌ಟಿಆರ್ ಹೇಳಿದೆ. ಸಂಬಂಧಪಟ್ಟ ದೇಶಗಳು ಇದರ ಕುರಿತಾದ ವಿಚಾರಣೆಯ ವೇಳೆ ಹಾಜರಾಗುವುದಾಗಿ ಮನವಿ ಮೂಲಕ ತಿಳಿಸಲು ಜೂನ್ 22 ರವರೆಗೆ ಅವಕಾಶ ಇದೆ ಎಂದು ತಿಳಿಸಿದೆ.

ಕೆಲವು ಸರಕುಗಳನ್ನು ಹೊರತುಪಡಿಸಿ ಇತರ ಎಲ್ಲ ಸರಕುಗಳ ಮೇಲೆ ಈ ಸುಂಕ ವಿಧಿಸುವ ಪ್ರಸ್ತಾವ ಇದೆ. ಭಾರತ, ಅರ್ಜೆಂಟೀನಾ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಬ್ರೆಜಿಲ್, ಕಾಂಬೋಡಿಯಾ, ಚೀನಾ, ಇಸ್ರೇಲ್, ಜಪಾನ್, ನಾರ್ವೆ, ಒಮಾನ್, ರಷ್ಯಾ, ಸೌದಿ ಅರೇಬಿಯಾ, ಬ್ರಿಟನ್, ಯುಎಇ ಸೇರಿದಂತೆ ಒಟ್ಟು 54 ದೇಶಗಳ ಮೇಲೆ ಈ ತೆರಿಗೆ ವಿಧಿಸಲು ಪ್ರಸ್ತಾವದಲ್ಲಿ ಹೇಳಲಾಗಿದೆ.

‘ನಮ್ಮ ಬಹುಮುಖ್ಯ ವ್ಯಾಪಾರ ಪಾಲುದಾರರು ಬಲವಂತದಿಂದ ಕಾರ್ಮಿಕರನ್ನು ದುಡಿಸಿಕೊಳ್ಳುವ ಕಡೆಗಳಿಂದ ಸರಕು ಆಮದು ಮಾಡಿಕೊಳ್ಳುವುದರ ಬಗ್ಗೆ ಗಮನಹರಿಸಲು ವಿಫಲರಾಗಿರುವುದು ಒಪ್ಪುವಂಥದ್ದಲ್ಲ. ಹೀಗೆ ಮಾಡುವುದರಿಂದಾಗಿ ಅಸಮಾನ ನೆಲೆಯಲ್ಲಿ ಸ್ಪರ್ಧಿಸುವ ಅನಿವಾರ್ಯವು ಅಮೆರಿಕದ ಕಾರ್ಮಿಕರಿಗೆ ಎದುರಾಗುತ್ತದೆ’ ಎಂದು ಯುಎಸ್‌ಟಿಆರ್ ರಾಯಭಾರಿ ಜೆಮಿಸನ್ ಗ್ರೀರ್ ಹೇಳಿದ್ದಾರೆ.

ಹೊಸ ತೆರಿಗೆ ಪ್ರಸ್ತಾವದ ಕುರಿತು ಅಂತಿಮ ನಿರ್ಣಯವು ಜುಲೈ 24ಕ್ಕೆ ಮೊದಲು ಹೊರಬೀಳುವ ನಿರೀಕ್ಷೆ ಇದೆ. ಭಾರತವು ತನ್ನ ಮೇಲಿನ ಆರೋಪವನ್ನು ನಿರಾಕರಿಸಿದೆ.

ಸುದ್ದಿ 2 ನಿಮಿಷ


ಚಿನ್ನ ಮಾರಾಟ ಮಾಡಿಲ್ಲ: ಆರ್‌ಬಿಐ

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮಗಳಿಂದ ವಿದೇಶಿ ಕರೆನ್ಸಿ ಮೀಸಲನ್ನು ಕಾಪಾಡಿಕೊಳ್ಳಲು ಆರ್‌ಬಿಐ ತನ್ನ ಸಂಗ್ರಹದಲ್ಲಿನ ಭೌತಿಕ ಚಿನ್ನವನ್ನು ಮಾರಾಟ ಮಾಡಿರಬಹುದು ಎಂಬುದಾಗಿ ಹೇಳುವ ವರದಿಗಳು ಆಧಾರವಿಲ್ಲದವು ಎಂದು ಆರ್‌ಬಿಐ ಸ್ಪಷ್ಟನೆ ನೀಡಿದೆ.

ತನ್ನ ಸಂಗ್ರಹದಲ್ಲಿ ಇರುವ ಭೌತಿಕ ಚಿನ್ನದ ಪ್ರಮಾಣ ಬದಲಾಗಿಲ್ಲ, 880.52 ಟನ್ ಚಿನ್ನ ಈಗಲೂ ಇದೆ ಎಂದು ಆರ್‌ಬಿಐ ತಿಳಿಸಿದೆ.

ಇಂತಹ ವಿಚಾರಗಳಲ್ಲಿ ಸಾರ್ವಜನಿಕರು ತಾನು ಕಾಲಕಾಲಕ್ಕೆ ಪ್ರಕಟಿಸುವ ಅಧಿಕೃತ ಮಾಹಿತಿಯನ್ನು ಮಾತ್ರ ಪರಿಗಣಿಸಬೇಕು ಎಂದು ಅದು ಹೇಳಿದೆ.

ಭಾರತದ ವಿದೇಶಿ ವಿನಿಮಯ ಮೀಸಲಿನಲ್ಲಿ ಚಿನ್ನದ ಪಾಲು 2025ರ ಸೆಪ್ಟೆಂಬರ್‌ನಲ್ಲಿ ಶೇ 13.92ರಷ್ಟು ಇತ್ತು. ಇದು 2026ರ ಮಾರ್ಚ್ 31ರ ಹೊತ್ತಿಗೆ ಶೇ 16.70ಕ್ಕೆ ಹೆಚ್ಚಳ ಕಂಡಿದೆ. ಅಲ್ಲದೆ ಮೇ 22ರ ಸುಮಾರಿಗೆ ಶೇ 16.85ಕ್ಕೆ ಜಾಸ್ತಿ ಆಗಿದೆ ಎಂದು ಆರ್‌ಬಿಐ ತಿಳಿಸಿದೆ.



ಈ ವರ್ಷದ ಮಾರ್ಚ್ 31ಕ್ಕೆ ರಿಸರ್ವ್ ಬ್ಯಾಂಕ್ ಬಳಿ ಇದ್ದ ಒಟ್ಟು ಚಿನ್ನದ ಪ್ರಮಾಣ 880.52 ಟನ್ ಆಗಿತ್ತು. ಹಿಂದಿನ ವರ್ಷದ ಇದೇ ಹೊತ್ತಿನಲ್ಲಿ ಇದ್ದ ಚಿನ್ನ 879.58 ಟನ್ ಆಗಿತ್ತು.

ಸೇವಾ ವಲಯ ಪ್ರಗತಿ ಏರಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಬೆಳವಣಿಗೆ ಮೇ ತಿಂಗಳಿನಲ್ಲಿ ಆರು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ತಿಳಿಸಿದೆ.

ಏಪ್ರಿಲ್ ತಿಂಗಳಿನಲ್ಲಿ ಸೂಚ್ಯಂಕವು 58.8ರಷ್ಟು ದಾಖಲಾಗಿತ್ತು. ಇದು ಮೇ ತಿಂಗಳಿನಲ್ಲಿ 59.8ಕ್ಕೆ ಏರಿಕೆ ಆಗಿದೆ. ಸೇವಾ ವಲಯಕ್ಕೆ ಹೊಸ ಕಾರ್ಯಾದೇಶ ಬರುವುದು ಹೆಚ್ಚಳವಾಗಿದೆ. ಇದು ವಲಯದ ಪ್ರಗತಿಗೆ ಕಾರಣ ಎಂದು ತಿಳಿಸಿದೆ.

ಸೂಚ್ಯಂಕವು 50ಕ್ಕಿಂತ ಮೇಲಿದ್ದರೆ ಬೆಳವಣಿಗೆಯು ಸಶಕ್ತವಾಗಿದೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿದೆ ಎಂದು ಅರ್ಥ.

‘ಮೇ ತಿಂಗಳಿನಲ್ಲಿ ಸೇವಾ ವಲಯದ ಸೂಚ್ಯಂಕವು ವಿಸ್ತರಣೆಯ ಹಾದಿಯಲ್ಲಿದೆ. ವಿದೇಶದಿಂದ ದೇಶದ ಸೇವಾ ವಲಯಕ್ಕೆ ಹೆಚ್ಚಿನ ಬೇಡಿಕೆ ಬಂದಿರುವುದು ವಲಯವು ತ್ವರಿತವಾಗಿ ಪ್ರಗತಿಯಾಗಲು ಕಾರಣವಾಗಿದೆ’ ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಸಾಗಣೆ, ಡಿಜಿಟಲ್ ಸಲ್ಯೂಷನ್ಸ್, ಇ–ಕಾಮರ್ಸ್, ಮನರಂಜನೆ ಮತ್ತು ಮಾಹಿತಿ ತಂತ್ರಜ್ಞಾನ ವಲಯವು ಹೊಸ ವ್ಯವಹಾರದ ಹೆಚ್ಚಳಕ್ಕೆ ಉತ್ತೇಜನ ನೀಡಿವೆ. ಇದರಿಂದ ಕಂಪನಿಗಳು ಉದ್ಯೋಗಿಗಳನ್ನು ನೇಮಕ ಮಾಡಿಕೊಂಡವು ಎಂದು ತಿಳಿಸಿದ್ದಾರೆ.

ಕಿಯಾ ವಾಹನ ಮಾರಾಟದಲ್ಲಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ವಾಹನ ತಯಾರಿಕಾ ಕ್ಷೇತ್ರದ ಪ್ರಮುಖ ಕಂಪನಿಗಳ ಪೈಕಿ ಒಂದಾಗಿರುವ ಕಿಯಾ ಇಂಡಿಯಾ ಮೇ ತಿಂಗಳಲ್ಲಿ ಸಗಟು ರೂಪದಲ್ಲಿ 27,586 ವಾಹನಗಳನ್ನು ಮಾರಾಟ ಮಾಡಿದೆ.

ಇದು ಹಿಂದಿನ ವರ್ಷದ ಇದೇ ತಿಂಗಳಿನಲ್ಲಿ ಮಾರಾಟವಾಗಿದ್ದ 22,315 ವಾಹನಗಳಿಗೆ ಹೋಲಿಸಿದರೆ ಶೇ 23.6ರಷ್ಟು ಹೆಚ್ಚು. ಕಂಪನಿಯು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿದ ನಂತರದಲ್ಲಿ ದಾಖಲಾಗಿರುವ ಸಾರ್ವಕಾಲಿಕ ಗರಿಷ್ಠ ಮಾರಾಟ ಇದು ಎಂದು ಪ್ರಕಟಣೆ ತಿಳಿಸಿದೆ.

‘2026ರಲ್ಲಿ ಇಂದಿನವರೆಗೆ ಒಟ್ಟು 1,39,197 ವಾಹನಗಳನ್ನು ಮಾರಾಟ ಮಾಡಲಾಗಿದೆ. ಇದು 2025ರ ಇದೇ ಅವಧಿಯಲ್ಲಿನ ಮಾರಾಟ ಸಂಖ್ಯೆಯಾದ 1,21,514ಕ್ಕೆ ಹೋಲಿಸಿದರೆ ಶೇ 14.6ರಷ್ಟು ಹೆಚ್ಚು’ ಎಂದು ಹೇಳಿದೆ.

‘ರೆಪೊ ದರದ ಯಥಾಸ್ಥಿತಿಯಿಂದ ಆರ್ಥಿಕ ಪ್ರಗತಿಯಲ್ಲಿ ಸ್ಥಿರತೆ’



ಸಿ.ಎಸ್. ಸೆಟ್ಟಿ

ಮುಂಬೈ (ಪಿಟಿಐ): ‘ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರದಲ್ಲಿ ಬದಲಾವಣೆ ಮಾಡದಿದ್ದರೆ ಆರ್ಥಿಕ ಬೆಳವಣಿಗೆಯಲ್ಲಿ ಸ್ಥಿರತೆ ಕಾಣಲು ಸಾಧ್ಯ’ ಎಂದು ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ಹೇಳಿದ್ದಾರೆ.

ಆರ್ಥಿಕತೆಯ ಬೆಳವಣಿಗೆ ಮತ್ತು ಹಣದುಬ್ಬರದ ಕುರಿತಾದ ಸಂಗತಿಗಳು ಹೆಚ್ಚು ಮುಖ್ಯವಾಗಿವೆ. ಸುಗಮ ಬೆಳವಣಿಗೆಯ ದರ ಖಚಿತಪಡಿಸಿ ಕೊಳ್ಳಲು ರೆಪೊ ದರದ ಯಥಾಸ್ಥಿತಿಯು ಖಂಡಿತವಾಗಿ ಸಹಾಯಕವಾಗಲಿದೆ ಎಂದು ಬುಧವಾರ ನಡೆದ ‘ಸಿಟಿ ಇಂಡಿಯಾ–2026’ರ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ರೆಪೊ ದರದ ಬಗ್ಗೆ ಸುದ್ದಿಸಂಸ್ಥೆ ಆರ್ಥಿಕ ತಜ್ಞರ ಪ್ರತಿಕ್ರಿಯೆ ಪಡೆದಿದೆ. ರೆಪೊ ದರದಲ್ಲಿ ಆರ್‌ಬಿಐ ಈ ಬಾರಿ ಯಥಾಸ್ಥಿತಿ ಕಾಯ್ದುಕೊಳ್ಳಲಿದೆ ಎಂದು ಹೆಚ್ಚಿನವರು ಅಭಿಪ್ರಾಯ-ಪಟ್ಟಿದ್ದಾರೆ. ಹೆಚ್ಚುತ್ತಿರುವ ಹಣದುಬ್ಬರದಿಂದ 2026–27ರ ಆರ್ಥಿಕ ವರ್ಷದ ಬಳಿಕ ಆರ್‌ಬಿಐ, ನಿಯಮಗಳನ್ನು ಕಠಿಣಗೊಳಿಸಲು ಆರಂಭಿಸಲಿದೆ ಎಂದು ಹೇಳಿದ್ದಾರೆ.

‘ಎಸ್‌ಬಿಐ ಫಂಡ್ಸ್ ಮ್ಯಾನೇಜ್‌ಮೆಂಟ್‌ನ ಪ್ರಸ್ತಾವಿತ ಸಾರ್ವಜನಿಕ ಷೇರು ಹಂಚಿಕೆಯು (ಐಪಿಒ) ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ನಡೆಸುವ ಗುರಿ ಹೊಂದಲಾಗಿದೆ. ಈಗಾಗಲೇ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ ಐಪಿಒ ಕುರಿತ ಕರಡು ದಾಖಲೆಗಳನ್ನು (ಡಿಎಚ್‌ಆರ್‌ಪಿ) ಸಲ್ಲಿಸಲಾಗಿದ್ದು, ಅನುಮತಿಗಾಗಿ ಕಾಯುತ್ತಿದ್ದೇವೆ’ ಎಂದು ಪ್ರಶ್ನೆಯೊಂದಕ್ಕೆ ಸೆಟ್ಟಿ ಪ್ರತಿಕ್ರಿಯಿಸಿದ್ದಾರೆ.

ತೈಲೋತ್ಪನ್ನ ಕಂಪನಿಗಳಿಗೆ ₹10 ಸಾವಿರ ಕೋಟಿ ಸಾಲ

ಎಟಿಎಫ್ ಸ್ಥಿರೀಕರಣ ನಿಧಿಗೆ ಒಪ್ಪಿಗೆ



ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷದಿಂದ ಹೆಚ್ಚುತ್ತಿರುವ ಇಂಧನ ದರ ಏರಿಕೆಯಿಂದ ದೇಶದ ವಿಮಾನಯಾನ ಕಂಪನಿಗಳಿಗೆ ರಕ್ಷಣೆ ನೀಡಲು ₹10 ಸಾವಿರ ಕೋಟಿ ಮೊತ್ತದ ವಿಮಾನ ಇಂಧನ (ಎಟಿಎಫ್) ಸ್ಥಿರೀಕರಣ ನಿಧಿ ಸ್ಥಾಪಿಸಲು ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ.

ವಿಮಾನದ ಟಿಕೆಟ್ ದರದಲ್ಲಿನ ಏರಿಳಿತವನ್ನು ಕಡಿಮೆ ಮಾಡುವ ಉದ್ದೇಶವನ್ನು ಈ ನಿಧಿಯು ಹೊಂದಿದೆ.

ಈ ಯೋಜನೆಯ ಅಡಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರುಕಟ್ಟೆ ಕಂಪನಿಗಳಿಗೆ ಬಡ್ಡಿ ರಹಿತ ಸಾಲ ದೊರೆಯಲಿದೆ. ಇದರಿಂದ ದೇಶ ಮತ್ತು ಅಂತರ ರಾಷ್ಟ್ರೀಯ ಮಾರ್ಗದಲ್ಲಿ ಸಂಚರಿಸುವ ದೇಶದ ವಿಮಾನ ಗಳಿಗೆ ಸ್ಥಿರವಾದ ದರದಲ್ಲಿ ವಿಮಾನ ಇಂಧನವನ್ನು ಪೂರೈಸಲು ಅವುಗಳಿಗೆ ಸಾಧ್ಯವಾಗಿಸುತ್ತದೆ ಎಂದು ಸರ್ಕಾರ ತಿಳಿಸಿದೆ.

‘ಈ ನಿಧಿಯು ಎಟಿಎಫ್ ದರ ಸ್ಥಿರವಾಗಿಸಲು ಮತ್ತು ವಿಮಾನಗಳ ಕಾರ್ಯಾಚರಣೆಯಲ್ಲಿನ ಅಡಚಣೆಗಳನ್ನು ತಡೆಯಲು ನೆರವಾಗಲಿದೆ’ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಪಶ್ಚಿಮ ಏಷ್ಯಾದ ಬಿಕ್ಕಟ್ಟು ಮುಗಿದ ನಂತರ, ವಿಮಾನಯಾನ ಸಂಸ್ಥೆಗಳು ಮೊತ್ತವನ್ನು ಮರುಪಾವತಿ ಮಾಡಬೇಕಾಗುತ್ತದೆ. ಹೆಚ್ಚುತ್ತಿರುವ ಇಂಧನ ಬೆಲೆಯಿಂದ ವಿಮಾನ ಟಿಕೆಟ್ ದರದ ಏರಿಕೆಯ ಬಿಸಿ ಪ್ರಯಾಣಿಕರಿಗೆ ತಾಕದಂತೆ ರಕ್ಷಿಸಲಿದೆ. ಅಲ್ಲದೆ, ವಿಮಾನಯಾನ ವಲಯವನ್ನು ಅವಲಂಬಿಸಿರುವ 77 ಲಕ್ಷ ಉದ್ಯೋಗಗಳನ್ನು ರಕ್ಷಿಸಲಿದೆ ಎಂದು ತಿಳಿಸಿದ್ದಾರೆ.

ರಷ್ಯಾ ತೈಲ ಸಂಗ್ರಹಣಾ ಕೇಂದ್ರದ ಮೇಲೆ ದಾಳಿ

ಕೀವ್ (ಎಪಿ): ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿರುವ ತೈಲ ಸಂಗ್ರಹಣಾ ಕೇಂದ್ರದ ಮೇಲೆ ಉಕ್ರೇನ್‌ನ ಡ್ರೋನ್‌ಗಳು ದಾಳಿ ಮಾಡಿದ್ದು, ಅದನ್ನು ನಾಶಗೊಳಿಸಿವೆ ಎಂದು ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಬುಧವಾರ ಹೇಳಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನೇತೃತ್ವದಲ್ಲಿ ವಾರ್ಷಿಕ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನವು ನಗರದಲ್ಲಿ ನಡೆಯುತ್ತಿರುವಾಗಲೇ ಈ ದಾಳಿ ನಡೆದಿದೆ.

ದೂರಗಾಮಿ ಡ್ರೋನ್‌ಗಳು 1,000 ಕಿ.ಮೀ.ಗಿಂತಲೂ ಹೆಚ್ಚು ಹಾರಾಟ ನಡೆಸಿ ಸಂಗ್ರಹಣಾ ಕೇಂದ್ರದ ಮೇಲೆ ದಾಳಿ ನಡೆಸಿವೆ ಎಂದು ಝೆಲೆನ್‌ಸ್ಕಿ ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ದಾಳಿಯ ನಂತರ ನಗರದ ಬಂದರಿನ ಮೇಲೆ ಕಪ್ಪು ಹೊಗೆಯ ಮೋಡಗಳು ಕಾಣಿಸಿಕೊಂಡವು.



ಸೈಂಟ್ ಪೀಟರ್ಸ್‌ಬರ್ಗ್‌ನ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನ ನಡೆಯುವ ಪ್ರದೇಶದ ಬಳಿಯ ತೈಲ ಸಂಗ್ರಾಹಕ ಕೇಂದ್ರದ ಮೇಲೆ ಉಕ್ರೇನ್‌ನ ಡ್ರೋನ್‌ಗಳ ದಾಳಿಯಿಂದ ದಟ್ಟ ಹೊಗೆ ಎದ್ದಿತು —ಎಎಫ್‌ಪಿ ಚಿತ್ರ

ನಗರದ ಮೂಲಸೌಕರ್ಯವನ್ನು ಗುರಿಯಾಗಿಸಿ ಉಕ್ರೇನ್‌ನ ಡ್ರೋನ್‌ಗಳು ದಾಳಿ ನಡೆಸಿವೆ ಎಂದು ರಷ್ಯಾ ಅಧಿಕಾರಿಗಳು ಹೇಳಿದ್ದು, ಹೆಚ್ಚಿನ ಮಾಹಿತಿಯನ್ನು ನೀಡಿಲ್ಲ. ದಾಳಿಯಿಂದಾಗಿ ಸೇಂಟ್ ಪೀಟರ್ಸ್‌ಬರ್ಗ್‌ನ ವಿಮಾನನಿಲ್ದಾಣದಲ್ಲಿ ರಾತ್ರಿಯಿಡೀ ವಿಮಾನ ಹಾರಾಟವನ್ನು ತಾತ್ಕಾಲಿಕವಾಗಿ ಸ್ಥಗಿತ ಗೊಳಿಸಲಾಗಿತ್ತು. ಅಲ್ಲದೆ, ಮೊಬೈಲ್ ಇಂಟರ್‌ನೆಟ್ ಸೇವೆಯನ್ನೂ ಸ್ಥಗಿತಗೊಳಿಸಲಾಗಿತ್ತು.

ಶುಕ್ರವಾರ ನಡೆಯಲಿರುವ ಸಮ್ಮೇಳನದಲ್ಲಿ ಪುಟಿನ್ ಮಾತನಾಡಲಿದ್ದಾರೆ. ರಷ್ಯಾ ಇದನ್ನು ಪ್ರತಿಷ್ಠೆಯ ಕಾರ್ಯಕ್ರಮವೆಂದು ಪರಿಗಣಿಸಿದೆ. ಆದಾಗ್ಯೂ, ರಷ್ಯಾವು ಉಕ್ರೇನ್ ಮೇಲೆ ಆಕ್ರಮಣ ನಡೆಸಿದ ನಾಲ್ಕು ವರ್ಷದಿಂದ ಪ್ರಮುಖ ಪಾಶ್ಚಾತ್ಯ ಹೂಡಿಕೆದಾರರು, ಅಧಿಕಾರಿಗಳು ಕಾರ್ಯಕ್ರಮದಿಂದ ದೂರ ಉಳಿದಿದ್ದಾರೆ. ಈ ವರ್ಷ ಸೌದಿ ಅರೇಬಿಯಾ ವಿಶೇಷ ಅತಿಥಿ ರಾಷ್ಟ್ರವಾಗಿದ್ದು, ವ್ಯಾಪಾರಿಗಳ ನಿಯೋಗವನ್ನು ರಷ್ಯಾಗೆ ಕಳುಹಿಸಿದೆ.

ಇ85 ಇಂಧನ ನೀತಿ ಪರಿಶೀಲನೆ: ಪುರಿ

ನವದೆಹಲಿ (ಪಿಟಿಐ): ಶೇಕಡ 85ರಷ್ಟು ಎಥೆನಾಲ್ ಹೊಂದಿರುವ ಪೆಟ್ರೋಲ್ ಬಳಕೆಗೆ ಬೆಂಬಲ ನೀಡುವ ನೀತಿಯನ್ನು ಕೇಂದ್ರ ಸರ್ಕಾರ ಪರಿಶೀಲಿಸು-ತ್ತಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಹೀರೊ ಮೋಟೊಕಾರ್ಪ್ ಕಂಪನಿಯ ಕಾರ್ಯಕ್ರಮವೊಂದರಲ್ಲಿ ಅವರು ಮಾತನಾಡಿದ್ದಾರೆ. ಕಂಪನಿಯು ಇ85 ಇಂಧನ (ಶೇ 85ರಷ್ಟು ಎಥೆನಾಲ್, ಶೇ 15ರಷ್ಟು ಪೆಟ್ರೋಲ್ ಇರುವ ಇಂಧನ) ಬಳಸುವ ದ್ವಿಚಕ್ರ ವಾಹನ ಸಿದ್ಧಪಡಿಸಿದ್ದು ಅದನ್ನು ಸಚಿವ ಪುರಿ ಅನಾವರಣ ಮಾಡಿದರು.

ಇ85 ಇಂಧನವು ಮಾಮೂಲಿ ಇಂಧನಕ್ಕಿಂತ ಬಹಳ ಕಡಿಮೆ ಬೆಲೆಗೆ ಲಭ್ಯವಾಗಲಿದೆ ಎಂದು ಹೇಳಿದ್ದಾರೆ.

2026–27ರಲ್ಲಿ ಇ85 ಇಂಧನ ವನ್ನು ಶೇ 1ರಷ್ಟು ಪ್ರಮಾಣದಲ್ಲಿ ಬಳಸಿದರೂ 4 ಕೋಟಿ ಲೀಟರ್ ಎಥೆನಾಲ್‌ಗೆ ಬೇಡಿಕೆ ಸೃಷ್ಟಿಯಾಗಲಿದೆ. ‘ರೈತರು ಈಗ ಅನ್ನದಾತರಾಗಿದ್ದಾರೆ, ಅವರು ಇಂಧನದಾತರೂ ಆಗುತ್ತಾರೆ’ ಎಂದು ಹೇಳಿದ್ದಾರೆ.

‘ಹುಚ್ಚು ಹಿಡಿದಿದೆಯೇ’ ಎಂದಿದ್ದು ನಿಜ: ಟ್ರಂಪ್

ಬೈರೂತ್ (ಎಪಿ): ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ‘ನಿಮಗೆ ಹುಚ್ಚು ಹಿಡಿದಿದೆಯೇ’ ಎಂದು ಕೇಳಿದ್ದು ನಿಜ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಖಚಿತಪಡಿಸಿದ್ದಾರೆ.

ಆದಾಗ್ಯೂ ನೆತನ್ಯಾಹು ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದಾಗಿ ಅವರು ಸಂದರ್ಶನವೊಂದರಲ್ಲಿ ಬುಧವಾರ ಸ್ಪಷ್ಟಪಡಿಸಿದ್ದಾರೆ.

‘ಲೆಬನಾನ್ ಜೊತೆಗಿನ ಇಸ್ರೇಲ್ ಸಂಘರ್ಷದಿಂದಾಗಿಯೇ ಅಮೆರಿಕ–ಇರಾನ್ ಶಾಂತಿ ಒಪ್ಪಂದಕ್ಕೆ ಧಕ್ಕೆಯಾಗುತ್ತಿದೆ ಎಂದು ಅಸಮಾಧಾನಗೊಂಡಿದ್ದೆ. ಹೀಗಾಗಿ ಆ ರೀತಿ ಮಾತನಾಡಿದೆ’ ಎಂದು ಟ್ರಂಪ್ ತಿಳಿಸಿದ್ದಾರೆ.

ನೆತನ್ಯಾಹು ಅವರಿಗೆ ಟ್ರಂಪ್ ಸೋಮವಾರ ದೂರವಾಣಿ ಕರೆ ಮಾಡಿ, ಬೈರೂತ್ ಮೇಲಿನ ದಾಳಿ ನಿಲ್ಲಿಸುವಂತೆ ತಾಕೀತು ಮಾಡಿದ್ದರು. ಈ ಸಂದರ್ಭದಲ್ಲಿ ಅವಾಚ್ಯ ಮತ್ತು ಅಶ್ಲೀಲ ಪದಗಳನ್ನು ಬಳಸಿದ್ದರು ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಲೆಬನಾನ್ ಮೇಲಿನ ದಾಳಿಯನ್ನು ನಿಲ್ಲಿಸುವಂತೆ ತಾಕೀತು ಮಾಡಿರುವುದು, ಇರಾನ್‌ನೊಂದಿಗಿನ ಯುದ್ಧವನ್ನು ಅಂತ್ಯಗೊಳಿಸಲು ಟ್ರಂಪ್ ಅವರ ಮೇಲಿರುವ ಒತ್ತಡದ ಸೂಚನೆಯಾಗಿದೆ. ಇಂಧನ ದರ ಏರಿಕೆ, ಆರ್ಥಿಕ ಅನಿಶ್ಚಿತತೆ ಮುಂತಾದ ಬೆಳವಣಿಗೆಗಳು ಟ್ರಂಪ್ ಅವರ ಮೇಲಿನ ಒತ್ತಡಕ್ಕೆ ಮುಖ್ಯ ಕಾರಣಗಳಾಗಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಕುವೈತ್, ಬಹರೇನ್ ಮೇಲೆ ದಾಳಿ • ಇರಾನ್ ಮೇಲೆ ಪ್ರತಿದಾಳಿ ನಡೆಸಿದ ಅಮೆರಿಕ

ಇರಾನ್ ದಾಳಿ: ಭಾರತೀಯ ಸಾವು

ದುಬೈ (ಎಪಿ/ಪಿಟಿಐ): ಕುವೈತ್ ಮತ್ತು ಬಹರೇನ್ ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ ಎಂದು ಅಮೆರಿಕ ಸೇನೆ ತಿಳಿಸಿದೆ.

ಕುವೈತ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇರಾನ್ ನಡೆಸಿದ ವೈಮಾನಿಕ ದಾಳಿಯಲ್ಲಿ ಭಾರತೀಯ ಪ್ರಜೆಯೊಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

‘ದುಃಖಿತ ಕುಟುಂಬ ಮತ್ತು ಗಾಯಾಳುಗಳಿಗೆ ಸಾಧ್ಯವಾದಷ್ಟು ನೆರವು ನೀಡಲು ಕುವೈತ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ’ ಎಂದು ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ತಿಳಿಸಿದೆ.

ಪ್ರತ್ಯುತ್ತರ- ಅಮೆರಿಕ: ‘ಕುವೈತ್‌ನತ್ತ ಎರಡು ಕ್ಷಿಪಣಿಗಳನ್ನು ಹಾರಿಸಲಾಗಿತ್ತು, ಗುರಿ ತಲುಪುವ ಮುನ್ನವೇ ಅವುಗಳನ್ನು ಹೊಡೆದುರುಳಿಸಲಾಗಿದೆ. ಹಾಗೆಯೇ ಬಹರೇನ್‌ನತ್ತ ಹಾರಿಸಿದ್ದ ಕ್ಷಿಪಣಿಗಳನ್ನೂ ಅಮೆರಿಕ ಮತ್ತು ಬಹರೇನ್ ಸೇನಾ ಪಡೆಗಳು ಜಂಟಿಯಾಗಿ ವಿಫಲಗೊಳಿಸಿವೆ’ ಎಂದು ಅಮೆರಿಕ ಸೇನೆ ತಿಳಿಸಿದೆ.

‘ಈ ದಾಳಿಗಳಿಗೆ ಪ್ರತ್ಯುತ್ತರವಾಗಿ ಇರಾನ್‌ನ ಸೇನಾ ನೆಲೆ ಮೇಲೆ ದಾಳಿ ನಡೆಸಲಾಗಿದೆ’ ಎಂದೂ ಅಮೆರಿಕದ ಕೇಂದ್ರ ಕಮಾಂಡ್ ತಿಳಿಸಿದೆ.

‘ಇರಾನ್ ನಡೆಸಿದ ಡ್ರೋನ್ ದಾಳಿಯಿಂದಾಗಿ ದೇಶದ ವಿಮಾನ ನಿಲ್ದಾಣಕ್ಕೆ ಭಾರಿ ಪ್ರಮಾಣದಲ್ಲಿ ಹಾನಿಯಾಗಿದೆ. ಭಾರತ ಮೂಲದ ಒಬ್ಬ ವ್ಯಕ್ತಿ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ’ ಎಂದು ಕುವೈತ್ ತಿಳಿಸಿದೆ.

ಈ ದಾಳಿಯ ಬೆನ್ನಲ್ಲೇ ವಾಣಿಜ್ಯ ವಿಮಾನಗಳ ಹಾರಾಟವನ್ನು ಕುವೈತ್ ಬುಧವಾರ ಸ್ಥಗಿತಗೊಳಿಸಿದೆ’ ಎಂದು ಕುವೈತ್ ನಾಗರಿಕ ವಿಮಾನಯಾನ ಅಧಿಕಾರಿಗಳು ತಿಳಿಸಿದ್ದಾರೆ.

‘ಬಹರೇನ್ ಮತ್ತು ಮತ್ತೊಂದು ದೇಶದಲ್ಲಿನ (ಕುವೈತ್ ಹೆಸರು ಉಲ್ಲೇಖಿಸದೆ) ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಇರಾನ್ ತಲುಪಲು ಯತ್ನಿಸುತ್ತಿದ್ದ ಮತ್ತೊಂದು ತೈಲ ಟ್ಯಾಂಕರ್ ಮೇಲೆ ಅಮೆರಿಕ ಕ್ಷಿಪಣಿ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಈ ದಾಳಿ ನಡೆಸಲಾಗಿದೆ’ ಎಂದು ಇರಾನ್ ಸೇನಾಪಡೆ ತಿಳಿಸಿದೆ.

ಅಮೆರಿಕ ಮತ್ತು ಇಸ್ರೇಲ್ ಜತೆಗಿನ ಕದನ ವಿರಾಮದ ವಿಸ್ತರಣೆಗೆ ಸಂಬಂಧಿಸಿದಂತೆ ಮಧ್ಯಸ್ಥಿಕೆಗಾರ-ರೊಂದಿಗಿನ ಮಾತುಕತೆಯನ್ನು ಇರಾನ್ ಮೊಟಕುಗೊಳಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಆದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ವರದಿಗಳನ್ನು ತಳ್ಳಿಹಾಕಿದ್ದು, ‘ಮಾತುಕತೆ ಇನ್ನೂ ಮುಂದುವರಿದಿದೆ’ ಎಂದು ಒತ್ತಿ ಹೇಳಿದ್ದಾರೆ.



ಇರಾನ್ ದಾಳಿಯಿಂದ ವಿಮಾನ ನಿಲ್ದಾಣದಲ್ಲಿ ಉಂಟಾದ ಹಾನಿಯನ್ನು ಕುವೈತ್ ಪ್ರಧಾನಿ ಶೇಖ್ ಅಹ್ಮದ್ ಅಲ್–ಅಬ್ದುಲ್ಲಾ–ಅಲ್ ಸಬಾಹ್ ಅವರು ಪರಿಶೀಲಿಸಿದರು —ಎಎಫ್‌ಪಿ ಚಿತ್ರ

ನಾಗರಿಕರ ಗುರಿಯಾಗಿಸಿ ದಾಳಿ: ಭಾರತ ಖಂಡನೆ

ಕುವೈತ್ ವಿಮಾನ ನಿಲ್ದಾಣದ ಮೇಲಿನ ದಾಳಿಯಲ್ಲಿ ಭಾರತೀಯ ಪ್ರಜೆ ಮೃತಪಟ್ಟಿರುವುದಕ್ಕೆ ಭಾರತ ಖಂಡನೆ ವ್ಯಕ್ತಪಡಿಸಿದೆ.

‘ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದಾಗಿನಿಂದಲೂ ನಾಗರಿಕರು ಮತ್ತು ನಾಗರಿಕರ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸಬಾರದು ಎಂದು ಹೇಳುತ್ತಲೇ ಬಂದಿದ್ದೇವೆ. ಇಂಥ ದಾಳಿಗಳನ್ನು ಕೂಡಲೇ ನಿಲ್ಲಿಸುವಂತೆ ಮತ್ತೊಮ್ಮೆ ಹೇಳುತ್ತೇವೆ’ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

‘ದಾಳಿಯಲ್ಲಿ ಗಾಯಗೊಂಡವರಿಗೆ ಭಾರತ ಸರ್ಕಾರ ಸಾಧ್ಯವಾದಷ್ಟು ನೆರವು ನೀಡಲಿದೆ. ಭಾರತೀಯರ ಸುರಕ್ಷತೆ ದೃಷ್ಟಿಯಿಂದ ಸರ್ಕಾರವು ಸ್ಥಳೀಯ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದೆ’ ಎಂದು ತಿಳಿಸಿದೆ.

ಲೆಬನಾನ್ ಮೇಲೆ ಇಸ್ರೇಲ್ ದಾಳಿ

ಬೈರೂತ್: ದಕ್ಷಿಣ ಬೈರೂತ್‌ನ ಜನನಿಬಿಡ ಹೆದ್ದಾರಿಯಲ್ಲಿ ಕಾರೊಂದರ ಮೇಲೆ ಇಸ್ರೇಲ್ ಬುಧವಾರ ದಾಳಿ ನಡೆಸಿದೆ.

ಅಮೆರಿಕದಲ್ಲಿ ಇಸ್ರೇಲ್ ಮತ್ತು ಲೆಬನಾನ್ ಮಧ್ಯೆ ಎರಡನೇ ದಿನ ಶಾಂತಿ ಮಾತುಕತೆ ಆರಂಭವಾಗುವ ಕೆಲವೇ ಗಂಟೆಗಳ ಮೊದಲು ಈ ದಾಳಿ ನಡೆದಿದೆ. ಯಾವುದೇ ಎಚ್ಚರಿಕೆಯನ್ನು ನೀಡದೆಯೇ ದಾಳಿ ನಡೆಸಲಾಗಿದೆ.

ಅಮೆರಿಕದ ಮಧ್ಯಸ್ಥಿಕೆಯಲ್ಲಿ ಇಸ್ರೇಲ್ ಮತ್ತು ಲೆಬನಾನ್ ಮಧ್ಯೆ ಮಂಗಳವಾರ ಮೊದಲ ಹಂತದ ಶಾಂತಿ ಮಾತುಕತೆ ನಡೆದಿತ್ತು. ಎರಡೂ ದೇಶಗಳು ಪರಸ್ಪರ ದಾಳಿ ನಡೆಸದಿರಲು ಒಪ್ಪಿಕೊಂಡಿವೆ ಎಂದು ಟ್ರಂಪ್ ಘೋಷಿಸಿದ್ದರು.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ			
ಚಿಪ್ಪು	29569-33509	ಸರಕು	56859-98896	ಕೆಂಪುಗೋಟು	33889-35799
ಕೋಕ	15869-31869	ಬೆಟ್ಟೆ	58499-65859	ರಾಶಿ	47899-52569
ಫ್ಯಾಕ್ಟರಿ	10370-25901	ರಾಶಿ	46199-53911	ತಟ್ಟಿಬೆಟ್ಟೆ	38509-49899
ಹಳೆಚಾಲಿ	44789-47198	ಗೊರಬಲು	22159-42001	**ಶಿರಸಿ**	
ಹೊಸಚಾಲಿ	40539-47399	**ಸಿದ್ದಾಪುರ**		ಬೆಟ್ಟೆ	40869-48689
ಪುತ್ತೂರು		ಬಿಳಿಗೋಟು	28699-33539	ಬಿಳಿಗೋಟು	25200-35729
ಕೋಕ	20000-33500	ಚಾಲಿ	40000-47499	ಚಾಲಿ	44111-49099
ಹೊಸತು	30000-46000	ಕೋಕ	22099-30109	ಕೆಂಪುಗೋಟು	30211-35199
ಹಳತು	49000-54000			ರಾಶಿ	50261-53299

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-2000
ಮಧ್ಯಮ	₹800-1200
ಸಣ್ಣ	₹400-800



ಅತ್ಯುತ್ತಮ ಚಿತ್ರ ವಿಭಾಗದಲ್ಲಿ ಪ್ರಬಲ ಪೈಪೋಟಿ

4ನೇ ಆವೃತ್ತಿ ಜೂನ್ 19ಕ್ಕೆ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿ ಜೂನ್ 19ರಂದು ನಡೆಯಲಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ ‘ಅತ್ಯುತ್ತಮ ಚಿತ್ರ’ ವಿಭಾಗದಲ್ಲಿ ನಾಮನಿರ್ದೇಶಿತಗೊಂಡ ಚಿತ್ರಗಳನ್ನು ಪರಿಚಯಿಸುವ ಸಮಯ.

ಕಾಂತಾರ: ಅಧ್ಯಾಯ–1



ಕರಾವಳಿಯ ದೈವ ನರ್ತನದಿಂದ ಜಗತ್ತಿನ ಗಮನ ಸೆಳೆದ ಚಿತ್ರ ‘ಕಾಂತಾರ’. ಆ ದೈವ ನರ್ತನದ ಇತಿಹಾಸ ಹೇಳುವ ‘ಕಾಂತಾರ: ಅಧ್ಯಾಯ–1’ ಕಳೆದ ವರ್ಷದ ಸೂಪರ್ ಹಿಟ್ ಚಿತ್ರ. ನಟ ರಿಷಬ್ ಶೆಟ್ಟಿ ಚಿತ್ರದಲ್ಲಿ ಕಥಾನಾಯಕ ಬೆರ್ಮೆಯಾಗಿ ಕಾಣಿಸಿಕೊಂಡಿದ್ದಾರೆ. ಜತೆಗೆ ನಿರ್ದೇಶನವೂ ಅವರದ್ದೆ. ಕನಕವತಿಯಾಗಿ ರುಕ್ಮಿಣಿ ವಸಂತ್ ರಿಷಬ್‌ಗೆ ಜೋಡಿಯಾಗಿದ್ದಾರೆ. ಕ್ರಿ.ಶ.4-5 ಶತಮಾನದ ಕದಂಬರ ಆಳ್ವಿಕೆಯ ಸಮಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಸೃಷ್ಟಿಯಾದ ಈಶ್ವರನ ಹೂದೋಟದಲ್ಲಿ ಇಡೀ ಕಥೆ ಸಾಗುತ್ತದೆ. ಈ ಚಿತ್ರದ ಹೈಲೆಟ್ ಎಂದರೆ ಮೇಕಿಂಗ್. ಸುಂದರ ದೃಶ್ಯಗಳು, ಅದ್ದೂರಿ ಗ್ರಾಫಿಕ್ಸ್‌ನಿಂದ ಚಿತ್ರ ನೋಡುಗರ ಗಮನ ಸೆಳೆಯುತ್ತದೆ. ಬಾಂಗ್ರಾ ರಾಜ ಮನೆತನದ ಅರಸನಾಗಿ ಜಯರಾಮ್ ಮತ್ತು ಅವರ ಮಗ ‘ಕುಲಶೇಖರ’ನಾಗಿ ಗುಲ್ಶನ್ ದೇವಯ್ಯ ನಟಿಸಿದ್ದಾರೆ. ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತ, ಅರವಿಂದ್ ಕಶ್ಯಪ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಹೊಂಬಾಳೆ ಫಿಲ್ಮ್ಸ್ ಬಂಡವಾಳ ಹೂಡಿದೆ.

ಸು ಫ್ರಂ ಸೋ



ವಿಶಿಷ್ಟ ಶೀರ್ಷಿಕೆ, ವಿಭಿನ್ನ ಪೋಸ್ಟರ್‌ನಿಂದಲೇ ಜನರನ್ನು ಸಾಗರೋಪಾದಿಯಲ್ಲಿ ಚಿತ್ರಮಂದಿರಗಳಿಗೆ ಸೆಳೆದ ಚಿತ್ರವಿದು. ‘ಸುಲೋಚನಾ ಫ್ರಮ್ ಸೋಮೇಶ್ವರ’ ಹಾಸ್ಯದೊಂದಿಗೆ ತುಸು ಹಾರರ್ ಮಿಶ್ರಣವಾದ ಭರ್ಜರಿ ಮನರಂಜನೆಯ ಬಾಡೂಟ ನೀಡಿದ ಚಿತ್ರ. ತುಳುನಾಡಿನ ಊರು, ಸಂಸ್ಕೃತಿ, ಆಚಾರ–ವಿಚಾರ, ಮಾತುಗಳೇ ಇಡೀ ಕಥೆಯ ಜೀವಾಳ. ನಿರ್ದೇಶಕ ಜೆ.ಪಿ.ತೂಮಿನಾಡು ತಮ್ಮ ಚೊಚ್ಚಲ ಕನ್ನಡ ಸಿನಿಮಾದಲ್ಲಿಯೇ ಭರ್ಜರಿ ಯಶಸ್ಸು ಕಂಡುಕೊಂಡರು. ಚಿತ್ರದ ‘ಭಾವ ಬಂದರು’ ಹಾಡಿನಿಂದ ಯುವ ಸಂಗೀತ ನಿರ್ದೇಶಕ ಸುಮೇಧ್ ಕೆ. ಜನಮನ್ನಣೆ ಗಳಿಸಿದರು. ಕರಾವಳಿಯ ಕಾಲ್ಪನಿಕ ಮರ್ಲೂರಿನಲ್ಲಿ ನಡೆಯುವ ಕಥೆಯಲ್ಲಿ ‘ರವಿಯಣ್ಣ’ನಾಗಿ ಶನೀಲ್ ಗೌತಮ್ ಗಮನ ಸೆಳೆದರು. ಕರುಣಾಕರ ಗುರೂಜಿಯಾಗಿ ರಾಜ್ ಬಿ.ಶೆಟ್ಟಿ ಪ್ರೇಕ್ಷಕರನ್ನು ನಗಿಸಿದರು. ‘ಭಾನು’ ಆಗಿ ಸಂಧ್ಯಾ ಅರೆಕೆರೆ ಜನಪ್ರಿಯರಾದರು. ಸಂದೀಪ್ ತುಳಸಿದಾಸ್ ಹಿನ್ನೆಲೆ ಸಂಗೀತ, ಎಸ್.ಚಂದ್ರಸೇಖರನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

45



ಉಪೇಂದ್ರ, ಶಿವರಾಜ್‌ಕುಮಾರ್, ರಾಜ್ ಬಿ.ಶೆಟ್ಟಿ ಅಭಿನಯದ ಚಿತ್ರ ದೃಶ್ಯ ವೈಭವದಿಂದಲೇ ಗಮನ ಸೆಳೆದಿತ್ತು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಚಿತ್ರ ಹುಟ್ಟು, ಸಾವಿನ ಕುರಿತು ವಿಭಿನ್ನ ಕಲ್ಪನೆಯ ಕಥೆಯನ್ನು ಹೊಂದಿದೆ. ಗರುಡ ಪುರಾಣದ ಸಾರವೇ ಒಟ್ಟಾರೆ ಚಿತ್ರದ ಕಥಾವಸ್ತು. ಈ ಚಿತ್ರದಲ್ಲಿ ಉಪೇಂದ್ರ ಖಳನಾಯಕ. ಶಿವರಾಜ್‌ಕುಮಾರ್ ಬರುವುದೇ ದ್ವಿತೀಯಾರ್ಧದಲ್ಲಿ. ರಾಜ್ ಬಿ ಶೆಟ್ಟಿಯದ್ದು ಸಾಮಾನ್ಯರಲ್ಲಿ ಸಾಮಾನ್ಯ ಎಂಬಂಥ ಪಾತ್ರ. ಸ್ಟಾರ್ ನಟರು ಕಂಟೆಂಟ್ ಆಧಾರಿತ ಸಿನಿಮಾ ಮಾಡುತ್ತಿಲ್ಲ ಎಂಬ ಕೊರತೆಯನ್ನು ನೀಗಿಸಿದ ಚಿತ್ರವಿದು. ಕಥೆ, ಚಿತ್ರಕಥೆಗಿಂತಲೂ ಚಿತ್ರದ ಮೇಕಿಂಗ್ ಹೆಚ್ಚು ಗಮನ ಸೆಳೆದಿತ್ತು. ಪ್ರತಿ ದೃಶ್ಯವೂ ಅದ್ದೂರಿಯಾಗಿತ್ತು. ರಾಯಪ್ಪನಾಗಿ ಉಪೇಂದ್ರ ವಿಭಿನ್ನ ಗೆಟಪ್, ಹಾವಭಾವದಿಂದ ಗಮನ ಸೆಳೆದರೆ, ಶಿವರಾಜ್‌ಕುಮಾರ್ ಗಂಭೀರ, ಸೈಲೆಂಟ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸೂರಜ್ ಪ್ರೊಡಕ್ಷನ್ಸ್ ಮೂಲಕ ರಮೇಶ್ ರೆಡ್ಡಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಏಳುಮಲೆ



ಬಾಕ್ಸಾಫೀಸ್‌ನಲ್ಲಿ ನಿರೀಕ್ಷಿತ ಗಳಿಕೆ ಕಾಣದಿದ್ದರೂ, ಎಲ್ಲೆಡೆ ವ್ಯಾಪಕ ಪ್ರಶಂಸೆ ಪಡೆದ ಚಿತ್ರವಿದು. ತಮಿಳಿನ ‘ಕೈಥಿ’, ಕನ್ನಡದ ‘ಮ್ಯಾಕ್ಸ್’ ರೀತಿಯಲ್ಲಿಯೇ ಒಂದು ರಾತ್ರಿಯಲ್ಲಿ ನಡೆದ ಘಟನೆಗಳ ಸುತ್ತ ಕಟ್ಟಿದ ಕಥೆಯುಳ್ಳ ಸಿನಿಮಾವಿದು. ಪುನೀತ್ ರಂಗಸ್ವಾಮಿ ನಿರ್ದೇಶನದ ಸಾಮರ್ಥ್ಯವನ್ನೂ ಪರಿಚಯಿಸಿಕೊಟ್ಟ ಸಿನಿಮಾ ಕೂಡ. ಚೊಚ್ಚಲ ಸಿನಿಮಾದಲ್ಲೇ ಬಹಳ ಸೂಕ್ಷ್ಮವಾಗಿ ಚಿತ್ರಕಥೆಯನ್ನು ರಚಿಸಿದ್ದರು ಪುನೀತ್. 2004ರಲ್ಲಿ ನಡೆದ ‘ಆಪರೇಷನ್ ಕುಕೂನ್’ ಎಂಬ ನೈಜ ಘಟನೆಯೊಂದನ್ನು ಆಧಾರವಾಗಿಟ್ಟುಕೊಂಡು ಕಾಲ್ಪನಿಕ ಕಥೆ ಹೆಣೆದಿರುವ ನಿರ್ದೇಶಕರು ಹಲವು ವಿಷಯಗಳನ್ನು ಪ್ರಸ್ತುತಪಡಿಸಿದರೂ ಕಥೆಯು ಬೇರೆಡೆ ಹೊರಳದಂತೆ ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಪ್ರೀತಿಯೇ ಶ್ರೇಷ್ಠ ಎಂಬುದನ್ನು ಉಲ್ಲೇಖಿಸುವ ಈ ಕಥೆಯಲ್ಲಿ ಅದಕ್ಕೆ ತಕ್ಕ ಹಾಗೆ ನಟಿಸಿದ್ದಾರೆ ನಾಯಕ ರಾಣಾ ಹಾಗೂ ನಾಯಕಿ ಪ್ರಿಯಾಂಕಾ. ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ಡಿ.ಇಮ್ಮಾನ್ ಹಿನ್ನೆಲೆ ಸಂಗೀತ ಎಲ್ಲವೂ ಚಿತ್ರವನ್ನು ಮತ್ತೊಂದು ಎತ್ತರಕ್ಕೆ ತೆಗೆದುಕೊಂಡು ಹೋಗಿವೆ. ತರುಣ್ ಕಿಶೋರ್ ಸುಧೀರ್ ನಿರ್ಮಾಣದ ಸಿನಿಮಾವಿದು.

ಮಾದೇವ



ವಿನೋದ್ ಪ್ರಭಾಕರ್ ನಟನೆಯ ಈ ಚಿತ್ರ ವಿಭಿನ್ನ ಕಥಾವಸ್ತುವಿನಿಂದಲೇ ಗಮನ ಸೆಳೆದಿದೆ. ನಟ ವಿನೋದ್ ಪ್ರಭಾಕರ್ ಎಂದರೆ ಕೇವಲ ಫೈಟ್ಸ್, ನಟಿ ಶ್ರುತಿ ಎಂದರೆ ಕಣ್ಣೀರು ಎಂಬುವುದು ಬದಲಾಗುವುದಕ್ಕೆ ದಾರಿ ಮಾಡಿಕೊಟ್ಟ ಸಿನಿಮಾವಿದು. ತಮ್ಮೊಳಗಿನ ನಟನೆಯ ಸಾಮರ್ಥ್ಯವನ್ನು ಇವರಿಬ್ಬರೂ ಈ ಸಿನಿಮಾದಲ್ಲಿ ಪ್ರದರ್ಶಿಸಿದ್ದಾರೆ. ಅನನುಕ್ರಮಣಿಕೆ (non linear) ಮಾದರಿಯ ಚಿತ್ರಕಥೆಯಲ್ಲಿ ‘ಮಾದೇವ’ನ ಪಾತ್ರವನ್ನು ಇಲ್ಲಿ ತೆರೆದಿಡಲಾಗಿದೆ. ಕಥಾನಾಯಕ ಕೇಂದ್ರ ಕಾರಾಗೃಹದಲ್ಲಿ ಅಪರಾಧಿಗಳನ್ನು ನೇಣುಗಂಬಕ್ಕೇರಿಸುವಾತ. ಭಾವನೆಗಳಿಲ್ಲದ, ಯಾರೊಂದಿಗೂ ಮಾತನಾಡದ, ಮೃಗದ ಲಕ್ಷಣಗಳುಳ್ಳ ಜೀವಂತ ಶವದಂತೆ ಈತನ ಬದುಕು. ಈತ ಯಾವ ಕಾರಣಕ್ಕಾಗಿ ಹೀಗಾದ ಎನ್ನುವುದಕ್ಕೂ ಕಥೆಯೊಳಗೊಂದು ಕಥೆ ಇದೆ. ನವೀನ್ ರೆಡ್ಡಿ ಬಿ. ನಿರ್ದೇಶನದ ಸಿನಿಮಾ ಒಂದಷ್ಟು ಪ್ರೇಕ್ಷಕರನ್ನು ಚಿತ್ರಮಂದಿರದತ್ತ ಸೆಳೆಯಲು ಯಶಸ್ವಿಯಾಗಿತ್ತು. ಅದಕ್ಕಿಂತ ಹೆಚ್ಚಾಗಿ ವಿಮರ್ಶಕ ವಲಯದಲ್ಲಿ ಚಿತ್ರದ ಕುರಿತು ಒಳ್ಳೆಯ ಮಾತುಗಳು ಕೇಳಿಬಂದಿದ್ದವು. ಸೋನಲ್ ಮೊಂತೆರೋ, ಶ್ರೀನಗರ ಕಿಟ್ಟಿ, ಶ್ರುತಿ, ಮಾಲಾಶ್ರೀ, ಅಚ್ಯುತ್ ಕುಮಾರ್ ಎಲ್ಲರೂ ತಮ್ಮ ಪಾತ್ರಗಳಿಂದ ಗಮನ ಸೆಳೆದಿದ್ದರು.

ಗ್ರೀನ್ ಗರ್ಲ್



ಸಾರ್ಥಕ್ ಹೆಗ್ಡೆ ನಿರ್ದೇಶನದ ಚಿತ್ರ ಸಾಕಷ್ಟು ಚಿತ್ರೋತ್ಸವಗಳಲ್ಲಿ ಮೆಚ್ಚುಗೆ ಪಡೆದಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವ ಕಥೆ. ಹಿಂದೂ ಹುಡುಗ ಜೀವನ್ ಮತ್ತು ಮುಸ್ಲಿಂ ಯುವತಿ ಅಮೀನಾ ನಡುವಿನ ಪ್ರೇಮಕಥೆಯೇ ಕಥಾವಸ್ತು. ದಕ್ಷಿಣ ಕನ್ನಡದ ಕೋಮು ಸೌಹಾರ್ದತೆ ಮತ್ತು ಭಿನ್ನ ಧರ್ಮದ ಪ್ರೇಮಿಗಳು ಎದುರಿಸುವ ಸಾಮಾಜಿಕ-ರಾಜಕೀಯ ಸವಾಲುಗಳನ್ನು ನಿರ್ದೇಶಕರು ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ. ವಿಮರ್ಶಕ ವಲಯದಿಂದ ಚಿತ್ರಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿತ್ತು. ಮಯೂರ್ ಗೌಡ, ಸುಚರಿತ, ಸುದರ್ಶನ್ ಆಚಾರ್ಯ ಯೆಕ್ಕಾರ್ ಮುಂತಾದ ಹೊಸ ನಟರಿಂದ ಕೂಡಿರುವ ಚಿತ್ರ ಸಾಕಷ್ಟು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿಯೂ ಪ್ರದರ್ಶನ ಕಂಡು, ಒಂದಷ್ಟು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ.

ಎಕ್ಕ



ಪುನೀತ್ ರಾಜ್‌ಕುಮಾರ್ ನಟನೆಯ ‘ಜಾಕಿ’ ಸಿನಿಮಾದ ಆರಂಭಿಕ ಶೀರ್ಷಿಕೆ ‘ಎಕ್ಕ’ ಆಗಿತ್ತು. ಅದೇ ‘ಎಕ್ಕ’ವನ್ನು ಹೊಸ ಕಥೆಯೊಂದಿಗೆ ರೋಹಿತ್ ಪದಕಿ ಇಲ್ಲಿ ಹೆಣೆದಿದ್ದಾರೆ. ಭಾವನಾತ್ಮಕ ದೃಶ್ಯಗಳಿಂದ ಚಿತ್ರ ಗಮನ ಸೆಳೆದಿದೆ. ಚಿತ್ರದ ‘ಬ್ಯಾಂಗಲ್ ಬಂಗಾರಿ’ ಹಾಡು ಎಲ್ಲೆಡೆ ಮನೆಮಾತಾಗಿದೆ. ಚಿತ್ರದಲ್ಲಿ ನಾಯಕ ಯುವ ರಾಜ್‌ಕುಮಾರ್ ಮುತ್ತುವಾಗಿ ಕಾಣಿಸಿಕೊಂಡಿದ್ದಾರೆ. ಆತನ ತಾಯಿ ಪಾರ್ವತಿಪುರದ ‘ರತ್ನ’ ಆಗಿ ಶ್ರುತಿ ಗಮನ ಸೆಳೆದಿದ್ದರು. ಸಂಜನಾ ಆನಂದ್, ಸಂಪದಾ ನಾಯಕಿರಾಗಿ ಜತೆಯಾಗಿದ್ದಾರೆ. ತಾಯಿ–ಮಗನ ಬಾಂಧವ್ಯದ ಜತೆಗೆ ಆ್ಯಕ್ಷನ್ ಮಾಸ್ ಕಥೆ ಹೊಂದಿದ್ದ ಚಿತ್ರ ಬಾಕ್ಸಾಫೀಸ್‌ನಲ್ಲಿಯೂ ತಕ್ಕಮಟ್ಟಿಗೆ ಯಶಸ್ಸು ಕಂಡಿದೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೊಸ್ ಹಾಗೂ ಜಯಣ್ಣ ಕಂಬೈನ್ಸ್ ಚಿತ್ರಕ್ಕೆ ಬಂಡವಾಳ ಹೂಡಿದೆ.

ವನ್ಯಾ



ಬಡಿಗೇರ ದೇವೇಂದ್ರ ನಿರ್ದೇಶನದ ಈ ಚಿತ್ರ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಸಾಕಷ್ಟು ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಪಡೆದುಕೊಂಡಿದೆ. ಪ್ರಕೃತಿ ಮತ್ತು ಮಾನವನ ನಡುವಿನ ಸಂಬಂಧವನ್ನು ಬಿಂಬಿಸುವ ಈ ಚಿತ್ರವು, ತಾನಿದ್ದ ಕಾಡಿನಲ್ಲಿಯೇ ಉಳಿಯಲು ಓರ್ವ ವೃದ್ಧ ನಡೆಸುವ ಹೋರಾಟದ ಕಥೆಯನ್ನು ಒಳಗೊಂಡಿದೆ. ವೈಜನಾಥ್ ಬಿರಾದಾರ್, ಮೇಘನಾ ಬೆಳವಾಡಿ ಮತ್ತು ಪ್ರಕಾಶ್ ಬೆಳವಾಡಿ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ.

‘ಅರಾವಳಿ’ ಪರಿಶೀಲನೆಗೆ ಸಮಿತಿ

ಕಾಂಚನ್ ದೇವಿ ನೇತೃತ್ವದಲ್ಲಿ ಸಮಿತಿ ರಚಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಅರಾವಳಿ ಪರ್ವತ ಶ್ರೇಣಿಯ ವ್ಯಾಖ್ಯಾನ ಮತ್ತು ನಿರೂಪಣೆ ಕುರಿತು ಕೇಂದ್ರ ಸರ್ಕಾರವು ಸಲ್ಲಿಸಿರುವ ವರದಿಯನ್ನು ಸ್ವತಂತ್ರವಾಗಿ ಪರಿಶೀಲಿಸಲು ಸುಪ್ರೀಂಕೋರ್ಟ್ ಉನ್ನತಾಧಿಕಾರ ಸಮಿತಿಯೊಂದನ್ನು ರಚಿಸಿದೆ.

ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಮಂಡಳಿಯ ಮಹಾನಿರ್ದೇಶಕರಾದ ಕಾಂಚನ್ ದೇವಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. 2026ರ ಆಗಸ್ಟ್ 31ರ ಒಳಗಾಗಿ ಸಮಗ್ರ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಹಿಂದಿನ ವರದಿಯಲ್ಲಿ ‘ಪ್ರಮುಖ ದ್ವಂದ್ವ’ ಎಂದು ಉಲ್ಲೇಖಿಸಿರುವ ಅಂಶಗಳನ್ನು ಪರಿಹರಿಸುವಂತೆಯೂ ನ್ಯಾಯಾಲಯ ನಿರ್ದೇಶಿಸಿದೆ.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಸಿದ್ಧಪಡಿಸಿದ ವರದಿಯ ಅನುಷ್ಠಾನವನ್ನು ಸುಪ್ರೀಂ ಕೋರ್ಟ್ ಕಳೆದ ಡಿಸೆಂಬರ್ 29ರಂದು ತಡೆಹಿಡಿದಿತ್ತು. ಹೊಸ ವೈಜ್ಞಾನಿಕ ಮತ್ತು ಪರಿಸರ ಮೌಲ್ಯಮಾಪನವನ್ನು ಕೈಗೊಳ್ಳಲು ಸ್ವತಂತ್ರ ತಜ್ಞರ ಮಂಡಳಿಯ ಅಗತ್ಯವನ್ನು ಒತ್ತಿ ಹೇಳಿತ್ತು.

ಭಾರತೀಯ ಅರಣ್ಯ ಸರ್ವೇಕ್ಷಣೆಯ ನಿವೃತ್ತ ಮಹಾನಿರ್ದೇಶಕ ಡಾ. ಸುಭಾಷ್ ಅಶುತೋಷ್, ಭಾರತೀಯ ಭೂ ಸರ್ವೇಕ್ಷಣೆಯ ನಿವೃತ್ತ ನಿರ್ದೇಶಕ ಡಾ. ರಾಜೇಂದ್ರ ಕುಮಾರ್ ಶರ್ಮ, ಪರಿಸರ ಸಚಿವಾಲಯದ ನಿವೃತ್ತ ಜಂಟಿ ಕಾರ್ಯದರ್ಶಿ ಬ್ರಿಜ್ ಮೋಹನ್ ಸಿಂಗ್ ರಾಥೋಡ್ ಮತ್ತು ದೆಹಲಿ ವಿಶ್ವವಿದ್ಯಾಲಯದ ಸಸ್ಯವಿಜ್ಞಾನ ವಿಭಾಗದ ನಿವೃತ್ತ ಮುಖ್ಯಸ್ಥ ಪ್ರೊ. ಅಶೋಕ್ ಕೆ. ಭಟ್ನಾಗರ್ ಅವರನ್ನು ಸಮಿತಿಯ ಸದಸ್ಯರಾಗಿ ನೇಮಿಸಲಾಗಿದೆ.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಫಾರ್ ಹ್ಯೂಮನ್ ಸೆಟಲ್‌ಮೆಂಟ್ಸ್‌ನ ಪ್ರಾಧ್ಯಾಪಕ ಜಗದೀಶ್ ಕೃಷ್ಣಮೂರ್ತಿ ಮತ್ತು ಹರಿಯಾಣ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಲಕ್ಷ್ಮೀಕಾಂತ್ ಶರ್ಮ ಅವರನ್ನು ಅಗತ್ಯ ಸಮಯದಲ್ಲಿ ಸಮಿತಿಗೆ ನೆರವು ನೀಡಲು ವಿಶೇಷ ಆಹ್ವಾನಿತರಾಗಿ ನ್ಯಾಯಾಲಯ ನೇಮಿಸಿದೆ.

ಸಮಿತಿಯ ಸದಸ್ಯ ಕಾರ್ಯದರ್ಶಿ ಸ್ಥಾನಕ್ಕೆ ನಿರ್ದೇಶಕರ ಶ್ರೇಣಿಯ ಅಧಿಕಾರಿಯೊಬ್ಬರನ್ನು ನಾಮನಿರ್ದೇಶನ ಮಾಡುವಂತೆ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ನ್ಯಾಯಾಲಯ ನಿರ್ದೇಶನ ನೀಡಿದೆ.

2025 ಅಕ್ಟೋಬರ್‌ನಲ್ಲಿ ಸಲ್ಲಿಕೆಯಾಗಿರುವ ವರದಿಯ ಬಗ್ಗೆ ಎದ್ದಿರುವ ಹಲವು ಪ್ರಶ್ನೆಗಳ ಕುರಿತು ಪರಿಶೀಲನೆ ನಡೆಸುವ ಹೊಣೆಗಾರಿಕೆ ಹೊಸ ಸಮಿತಿಯ ಮೇಲಿದೆ.

2025ರ ವರದಿಯಲ್ಲಿ ಅರಾವಳಿ ಬೆಟ್ಟಗಳನ್ನು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಬೆಟ್ಟಗಳ ನಡುವಿನ 500 ಮೀಟರ್ ಒಳಗಿನ ಪ್ರದೇಶಕ್ಕೆ ಸೀಮಿತಗೊಳಿಸಿರುವುದರಿಂದ ಸಂರಕ್ಷಿತ ಪ್ರದೇಶದ ವ್ಯಾಪ್ತಿ ಕಿರಿದಾಗುತ್ತದೆ ಮತ್ತು ಇದರಿಂದ ಗಣಿಗಾರಿಕೆ ಮತ್ತು ಮಾನವಹಸ್ತಕ್ಷೇಪ ಆಗುತ್ತದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸುವ ಜವಾಬ್ದಾರಿಯನ್ನು ಸಮಿತಿಗೆ ನೀಡಲಾಗಿದೆ.

ದಾಂಪತ್ಯದ ಹಕ್ಕು ನಿರಾಕರಣೆ ಕ್ರೌರ್ಯ: ‘ಸುಪ್ರೀಂ’



ನವದೆಹಲಿ: ‘ಸಕಾರಣವಿಲ್ಲದೇ ಸಂಭೋಗ ನಿರಾಕರಣೆ ಸೇರಿದಂತೆ ನಿರಂತರವಾಗಿ ದಾಂಪತ್ಯದ ಹಕ್ಕುಗಳನ್ನು ನಿರಾಕರಿಸುವುದು ಮಾನಸಿಕ ಕ್ರೌರ್ಯ. ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 13 (1) (ಐಎ) ಅನುಸಾರ ಇದು ವಿಚ್ಛೇದನಕ್ಕೆ ಬಲವಾದ ಆಧಾರವಾಗಿದೆ’ ಎಂದು ಸುಪ್ರೀಂ ಕೋರ್ಟ್ ಬುಧವಾರ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು, ‘ದೈಹಿಕ ಸಂಬಂಧ ತಡೆಯುವುದು ಭಾವನಾತ್ಮಕ ಒತ್ತಡಗಳಿಗೆ ಆಸ್ಪದವಾಗಲಿದೆ. ಅಲ್ಲದೆ, ವಿವಾಹದ ಉದ್ದೇಶಕ್ಕೆ ಧಕ್ಕೆ ತರಲಿದೆ’ ಎಂದಿದೆ.

‘ಕಾನೂನು ಮತ್ತು ಸಾಂವಿಧಾನಿಕ ಆಯಾಮದ ದೃಷ್ಟಿಯಿಂದ ವಿವಾಹವನ್ನು, ವೈಯಕ್ತಿಕ ಹಕ್ಕುಗಳಿಗೆ ಸೀಮಿತಗೊಳಿಸಲಾಗದು. ವಿವಾಹವು ನೇರವಾಗಿ ಪರಸ್ಪರ ಗೌರವ ಹಾಗೂ ನಿರೀಕ್ಷೆ, ಹೊಣೆಗಾರಿಕೆಯ ಸಮಾನ ಹಂಚಿಕೆಯ ಆಧಾರದಲ್ಲಿ ಮೂಡುವ ವೈಯಕ್ತಿಕ, ಸಾಮಾಜಿಕ ಪಾಲುದಾರಿಕೆ ಆಗಿದೆ’ ಎಂದು ಹೇಳಿತು.

‘ದಾಂಪತ್ಯದ ಹಕ್ಕು ಮತ್ತು ಕರ್ತವ್ಯಗಳು ಭಿನ್ನವಲ್ಲ’ ಎಂದು ಪೀಠ ಅಭಿಪ್ರಾಯಪಟ್ಟಿತು. ಇದೇ ವೇಳೆ, ದಾಂಪತ್ಯದ ಹಕ್ಕು ನಿರಾಕರಣೆ ಮಾನಸಿಕ ಕ್ರೌರ್ಯ ಎಂಬ ಆಧಾರದಲ್ಲಿ, 2025ರ ಜನವರಿ 2ರಂದು ರಾಜಸ್ಥಾನ ಹೈಕೋರ್ಟ್ ನೀಡಿದ್ದ ವಿಚ್ಛೇದನ ಆದೇಶವನ್ನು ಸುಪ್ರೀಂ ಪೀಠವು ಎತ್ತಿಹಿಡಿಯಿತು.

‘ದಂಪತಿ 15 ವರ್ಷದಿಂದ ಪ್ರತ್ಯೇಕವಾಗಿ ಇದ್ದರು. ಮಕ್ಕಳಿರಲಿಲ್ಲ. ಕೋರ್ಟ್‌ಗಳ ಪುನರಾವರ್ತಿತ ಯತ್ನಗಳ ನಂತರವೂ ಸಮನ್ವಯ ಮೂಡಿರಲಿಲ್ಲ’ ಎಂದು ರಾಜಸ್ಥಾನ ಹೈಕೋರ್ಟ್ ವಿಚ್ಛೇದನ ಪ್ರಕರಣದ ತೀರ್ಪು ನೀಡುವಾಗ ಅಭಿಪ್ರಾಯಪಟ್ಟಿತ್ತು.

ಉಲ್ಲೇಖಿತ ಪ್ರಕರಣದಲ್ಲಿ ದಂಪತಿ 2007ರಲ್ಲಿ ವಿವಾಹವಾಗಿದ್ದರು. ಪತಿ–ಪತ್ನಿ ಇಬ್ಬರೂ ಸರ್ಕಾರಿ ವೈದ್ಯರಾಗಿದ್ದರು. ಪತ್ನಿಯು ಗುಜರಾತ್‌ನಲ್ಲಿ ಹಾಗೂ ಪತಿ ರಾಜಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಹೈಕೋರ್ಟ್‌ನ ತೀರ್ಪು ಪ್ರಶ್ನಿಸಿ ಪತ್ನಿಯು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದರು.

ಸಂವಿಧಾನದ 142ನೇ ವಿಧಿ ಅನುಸಾರ ದತ್ತವಾದ ಅಧಿಕಾರದಡಿ, ವಿವಾಹವನ್ನು ಅಮಾನ್ಯಗೊಳಿಸಿದ ಪೀಠವು, ‘ಇಂತಹ ‘ಮೃತ ಸಂಬಂಧ’ವನ್ನು ಮುಂದುವರಿಸುವುದು ಇನ್ನಷ್ಟು ಮಾನಸಿಕ ಹಿಂಸೆ ಮತ್ತು ಜುಗುಪ್ಸೆಗೆ ಕಾರಣ ಆಗುವುದಲ್ಲದೇ ಮತ್ತೇನೂ ಆಗುವುದಿಲ್ಲ’ ಎಂದು ಅಭಿಪ್ರಾಯಪಟ್ಟಿತು.

44 ಸಾವಿರ ವಿದ್ಯಾರ್ಥಿಗಳಿಂದ ಅರ್ಜಿ

ಸಿಬಿಎಸ್‌ಇ

ನವದೆಹಲಿ (ಪಿಟಿಐ): ಬುಧವಾರ ಮಧ್ಯಾಹ್ನದವರೆಗೆ ಅಂದಾಜು 43,980 ಸಾವಿರ ವಿದ್ಯಾರ್ಥಿಗಳು ಯಾವುದೇ ಅಡ್ಡಿ ಇಲ್ಲದೆ ಉತ್ತರ ಪತ್ರಿಕೆ ಪರಿಶೀಲನೆ ಮತ್ತು ಮರು ಮೌಲ್ಯಮಾಪನ ಸೌಲಭ್ಯವನ್ನು ಪಡೆದುಕೊಂಡಿದ್ದು, ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದಾರೆ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ತಿಳಿಸಿದೆ.

‘ಪೋರ್ಟಲ್‌ನಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಮತ್ತು ಇಂಡಿಯನ್ ಬ್ಯಾಂಕ್‌ಗಳ ಪಾವತಿ ಸೌಲಭ್ಯ ಒದಗಿಸಲಾಗಿದ್ದು, ವಿದ್ಯಾರ್ಥಿಗಳು ಈ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿರದಿದ್ದರೂ ಶುಲ್ಕ ಪಾವತಿಗೆ ತೊಂದರೆ ಆಗುವುದಿಲ್ಲ’ ಎಂದು ಸ್ಪಷ್ಟಪಡಿಸಿದೆ.

‘ಜೂನ್ 6ರವರೆಗೆ ಪೋರ್ಟಲ್ ಕಾರ್ಯನಿರ್ವಹಿಸಲಿದ್ದು, ವಿದ್ಯಾರ್ಥಿಗಳು ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬೇಕು. ಮರು ಮೌಲ್ಯಮಾಪನದ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಆಯಾ ಅರ್ಜಿಗೆ ಸಂಬಂಧಿಸಿದ ಮಾಹಿತಿ ನೀಡಲಾಗುವುದು’ ಎಂದಿದೆ.

‘ಭ್ರಷ್ಟ, ಅಸಮರ್ಥ ಸಚಿವಾಲಯ’

‘ಆನ್‌ಸ್ಕ್ರೀನ್ ಮಾರ್ಕಿಂಗ್’ಗೆ ಸಂಬಂಧಿಸಿದಂತೆ ಉಂಟಾದ ಸಮಸ್ಯೆ ಕುರಿತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ವಿರುದ್ಧ ಕಾಂಗ್ರೆಸ್ ಬುಧವಾರ ಹರಿಹಾಯ್ದಿದೆ.

‘ಮಂಡಳಿಯ ಅಧಿಕಾರಿಗಳನ್ನು ವರ್ಗಾವಣೆ ಮಾಡಿರಬಹುದು. ಆದರೆ ಶಿಕ್ಷಣ ಸಚಿವರು ಮಾತ್ರ ನಾಚಿಕೆಯಿಲ್ಲದೇ ಇನ್ನೂ ಸಚಿವಾಲಯದಲ್ಲಿ ಬೀಡುಬಿಟ್ಟಿದ್ದಾರೆ. ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಯಾವ ಕಾರಣಕ್ಕಾಗಿ ರಕ್ಷಿಸುತ್ತಿದ್ದಾರೆ’ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ತಮ್ಮ ‘ಎಕ್ಸ್’ ಖಾತೆಯಲ್ಲಿ ಪ್ರಶ್ನಿಸಿದ್ದಾರೆ. ‘ಮಂತ್ರಿ ಪ್ರಧಾನ್’ ಅವರು ಭ್ರಷ್ಟ, ಅಸಮರ್ಥ ಮತ್ತು ಜಡ್ಡುಗಟ್ಟಿದ ಸಚಿವಾಲಯವನ್ನು ಮುನ್ನಡೆಸುತ್ತಿದ್ದಾರೆ. ದಿಗ್ವಿಜಯ್ ಸಿಂಗ್ ನೇತೃತ್ವದ ಸಂಸದೀಯ ಸಮಿತಿ ಎತ್ತಿದ ಪ್ರಶ್ನೆಗಳಿಗೆ ಸಚಿವಾಲಯ ಉತ್ತರ ನೀಡಿಲ್ಲ. ಇದು ಹೊಣೆಗಾರಿಕೆಯ ಕೊರತೆಯನ್ನು ತೋರಿಸುತ್ತಿದೆ’ ಎಂದು ಅವರು ಆರೋಪಿಸಿದ್ದಾರೆ.

‘ಕೇಂದ್ರದ ಬೇಜವಾಬ್ದಾರಿ’

ತಿರುವನಂತಪುರ: ನೀಟ್ ಮತ್ತು ಸಿಬಿಎಸ್‌ಇ ವಿಚಾರದಲ್ಲಿ ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಬೇಜವಾಬ್ದಾರಿ ತೋರಿದೆ ಎಂದು ಕೇರಳಂ ರಾಜ್ಯದ ಶಿಕ್ಷಣ ಸಚಿವ ಎನ್.ಸಂಶುದ್ದೀನ್ ಆರೋಪಿಸಿದ್ದಾರೆ. ‘ಎರಡೂ ಪರೀಕ್ಷೆಗಳು ಕೇಂದ್ರ ಸರ್ಕಾರದ ಅಧೀನಕ್ಕೆ ಬರುವುದರಿಂದ ನಾವು ಮಧ್ಯ ಪ್ರವೇಶಿಸುವುದು ಸಾಧ್ಯವಿಲ್ಲ’ ಎಂದಿರುವ ಅವರು, ‘ಕೇಂದ್ರದ ನಡೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪೆಟ್ಟು ಬಿದ್ದಿದೆ. ಶೀಘ್ರವೇ ಸಮಸ್ಯೆ ಪರಿಹರಿಸುವಂತೆ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ’ ಎಂದಿದ್ದಾರೆ.

₹1,601 ಕೋಟಿಗೆ ‘ಏರ್ ಇಂಡಿಯಾ’ ಕಟ್ಟಡ ಖರೀದಿಸಿದ ‘ಮಹಾ’ ಸರ್ಕಾರ



ಮುಂಬೈ (ಪಿಟಿಐ): ನಗರದ ಹೆಗ್ಗುರುತುಗಳಲ್ಲಿ ಒಂದಾಗಿರುವ, ‘ಏರ್ ಇಂಡಿಯಾ’ದ ಐತಿಹಾಸಿಕ ಬಹುಮಹಡಿ ಕಟ್ಟಡವನ್ನು ಮಹಾರಾಷ್ಟ್ರ ಸರ್ಕಾರವು ಬುಧವಾರ ಒಟ್ಟು ₹1,601 ಕೋಟಿ ಮೊತ್ತಕ್ಕೆ ಖರೀದಿಸಿದೆ.

ಏರ್ ಇಂಡಿಯಾ ಅಸೆಟ್ ಹೋಲ್ಡಿಂಗ್ ಕಂಪನಿ (ಎಐಎಎಚ್‌ಎಲ್) ಮತ್ತು ರಾಜ್ಯದ ಲೋಕೋಪಯೋಗಿ ಇಲಾಖೆ ನಡುವೆ ಕಟ್ಟಡದ ಮಾಲೀಕತ್ವ ವರ್ಗಾವಣೆಯ ದಾಖಲೆಗಳ ವಿನಿಮಯವು ಸಚಿವಾಲಯದ ಕಟ್ಟಡದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಉಪಸ್ಥಿತಿಯಲ್ಲಿ ಬುಧವಾರ ನಡೆಯಿತು ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ದಕ್ಷಿಣ ಮುಂಬೈನ ನರಿಮನ್ ಪಾಯಿಂಟ್‌ನಲ್ಲಿ ಇರುವ, ಸಮುದ್ರ ಮುಖಿಯಾಗಿರುವ 23 ಅಂತಸ್ತುಗಳ ಈ ಕಟ್ಟಡವನ್ನು 1974ರಲ್ಲಿ ನಿರ್ಮಿಸಲಾಗಿದೆ. ಇದು, ಆರಂಭದ ವರ್ಷಗಳಲ್ಲಿ ಜನಾಕರ್ಷಣೆಯ ಕೇಂದ್ರವೂ ಆಗಿತ್ತು. ಖಾಸಗೀಕರಣದ ಬಳಿಕ ಏರ್ ಇಂಡಿಯಾ ಕಂಪನಿಯನ್ನು ಟಾಟಾ ಸಮೂಹ ಸಂಸ್ಥೆಯು ತನ್ನ ಸ್ವಾಧೀನಕ್ಕೆ ಪಡೆದಿತ್ತು. ಅದರ ನಂತರ ಈ ಕಟ್ಟಡದ ಮಾಲೀಕತ್ವವು ಎಐಎಎಚ್‌ಎಲ್ ಬಳಿಯೇ ಉಳಿದಿತ್ತು.

ದಕ್ಷಿಣ ಮುಂಬೈ ವಲಯದಲ್ಲಿ ಸರ್ಕಾರಿ ಕಚೇರಿಗಳಿಗಾಗಿ ಸ್ಥಳಾವಕಾಶದ ಕೊರತೆ ಎದುರಿಸುತ್ತಿರುವ ಮಹಾರಾಷ್ಟ್ರ ಸರ್ಕಾರವು ಈ ಕಟ್ಟಡವನ್ನು ಸ್ವಾಧೀನಕ್ಕೆ ಪಡೆಯುವ ಕುರಿತು 2021ರಿಂದಲೂ ಮಾತುಕತೆಯನ್ನು ನಡೆಸುತ್ತಿತ್ತು.

₹1,601 ಕೋಟಿಗೆ ಸ್ವಾಧೀನಕ್ಕೆ ಪಡೆಯಲು 2023ರಲ್ಲಿ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಒಪ್ಪಂದದ ಭಾಗವಾಗಿ ಎಐಎಎಚ್‌ಎಲ್ ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿದ್ದ ₹298 ಕೋಟಿಯನ್ನು ಮನ್ನಾ ಮಾಡಲು ಸಮ್ಮತಿಸಿತ್ತು. ಆಸ್ತಿ ವರ್ಗಾವಣೆಗೆ ಸಂಬಂಧಿಸಿ ಕೇಂದ್ರ ಸರ್ಕಾರವು 2024ರ ಮಾರ್ಚ್‌ನಲ್ಲಿ ಅಂತಿಮ ಅನುಮೋದನೆ ನೀಡಿತ್ತು.

‘ಗರಿಷ್ಠ ಮತದಾನ: ವಿಶ್ವಾಸದ ದ್ಯೋತಕ’

ನವದೆಹಲಿ (ಪಿಟಿಐ): ‘ಐದು ರಾಜ್ಯಗಳಲ್ಲಿ ಈಚೆಗೆ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಅತ್ಯಧಿಕವಾಗಿ ಮತ ಚಲಾವಣೆ ಆಗಿದ್ದು, ಇದು ಮತದಾರರು ಚುನಾವಣಾ ವ್ಯವಸ್ಥೆಯ ಮೇಲಿಟ್ಟಿರುವ ವಿಶ್ವಾಸದ ದ್ಯೋತಕವಾಗಿದೆ’ ಎಂದು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಪ್ರತಿಪಾದಿಸಿದ್ದಾರೆ.

‘ಜಾಗತಿಕವಾಗಿ ಅತ್ಯುತ್ತಮ ಚುನಾವಣಾ ಮಾಧ್ಯಮ ಪ್ರಚಾರ ಅಭಿಯಾನ’ ಕುರಿತು ಬುಧವಾರ ಇಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ದೇಶದಲ್ಲಿ 100 ಕೋಟಿಗೂ ಅಧಿಕ ಮತದಾರರ ಜೊತೆ ಸಂಪರ್ಕ ಹೊಂದಲು ಆಯೋಗವು ಕೆಳಮಟ್ಟದಲ್ಲಿ ಬಿಎಲ್‌ಒ, ಬಿಎಲ್‌ಎಗಳಿಗೆ ತರಬೇತಿ ನೀಡಿತ್ತು’ ಎಂದರು.

ಆಯೋಗದ ದತ್ತಾಂಶಗಳ ಪ್ರಕಾರ, ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಪುದುಚೆರಿಯಲ್ಲಿ ಇತ್ತೀಚೆಗೆ ನಡೆದಿದ್ದ ಚುನಾವಣೆಗಳಲ್ಲಿ, 1951ರ ನಂತರ ಅತ್ಯಧಿಕ ಪ್ರಮಾಣದಲ್ಲಿ ಮತ ಚಲಾವಣೆ ಆಗಿದೆ.

ಮೊನಾಲಿಸಾ ಅಪಹರಣ ಆರೋಪ: ಪತಿಗೆ ಜಾಮೀನು



ಮೊನಾಲಿಸಾ, ಫರ್ಮಾನ್ ಖಾನ್

ಕೊಚ್ಚಿ (ಪಿಟಿಐ): ಪ್ರಯಾಗ್‌ರಾಜ್‌ನ ಕುಂಭಮೇಳದ ವೇಳೆ ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಸೃಷ್ಟಿಸಿದ್ದ ಮೊನಾಲಿಸಾ ಭೋಂಸ್ಲೆಯನ್ನು ಅಪಹರಿಸಿದ ಆರೋಪದಡಿ ದಾಖಲಾಗಿದ್ದ ಪ್ರಕರಣದಲ್ಲಿ ಆಕೆಯ ಪತಿ ಫರ್ಮಾನ್ ಖಾನ್ ಅವರಿಗೆ, ಕೇರಳ ಹೈಕೋರ್ಟ್ ಒಂದು ತಿಂಗಳವರೆಗೆ ಪ್ರಯಾಣ ಜಾಮೀನು ನೀಡಿದೆ.

‘ಅಪ್ರಾಪ್ತ ವಯಸ್ಸಿನವಳಾಗಿರುವ ಮೊನಾಲಿಸಾಳನ್ನು ಫರ್ಮಾನ್ ಅಪಹರಿಸಿ ವಿವಾಹವಾಗಿದ್ದಾನೆ’ ಎಂದು ಆರೋಪಿಸಿ ಆಕೆಯ ತಂದೆ ದೂರು ನೀಡಿದ್ದರು.

ಮೊನಾಲಿಸಾಳ ಜನನ ಪ್ರಮಾಣ ಪತ್ರದಲ್ಲಿ, 2008ರ ಜನವರಿ 1 ಜನ್ಮ ದಿನಾಂಕ ಎಂಬ ಉಲ್ಲೇಖವಿದೆ. ಹಲವು ದಾಖಲೆಗಳನ್ನು ಗಮನಿಸಿದಾಗ ಈಕೆ ಅಪ್ರಾಪ್ತ ವಯಸ್ಸಿನವಳಲ್ಲ ಎಂದು ತಿಳಿದು ಬಂದಿದೆ ಎಂದು ನ್ಯಾಯಾಲಯವು ಹೇಳಿತು. ಮಧ್ಯಪ್ರದೇಶ ಪೊಲೀಸರ ಪರ ಹಾಜರಾಗಿದ್ದ ಭಾರತದ ಸಾಲಿಸಿಟರ್ ಜನರಲ್ ಎಸ್.ವಿ ರಾಜು ಅವರು, ‘ಮೊನಾಲಿಸಾ ಅಪ್ರಾಪ್ತ ವಯಸ್ಸಿನವಳಾಗಿದ್ದು, ಆಕೆಯ ಜನನ ಪ್ರಮಾಣ ಪತ್ರವು ನಕಲಿಯಾಗಿದೆ’ ಎಂದು ನ್ಯಾಯಾಲಯಕ್ಕೆ ಹೇಳಿದರು.

ಈ ವಾದವನ್ನು ಒಪ್ಪದ ನ್ಯಾಯಾಲಯವು ‘ಇದು ತನಿಖೆ ಮಾಡಬೇಕಾದ ವಿಷಯ’ ಎಂದಿತು.

‘ಒಂದು ತಿಂಗಳವರೆಗೆ ಆರೋಪಿಯನ್ನು ಬಂಧಿಸಬಾರದು’ ಎಂದು ಆದೇಶಿಸಿರುವ ಕೋರ್ಟ್, ‘ಮಧ್ಯಪ್ರದೇಶದ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸ ಬಹುದು’ ಎಂದು ಅನುಮತಿ ನೀಡಿತು.

ಸಂಕ್ಷಿಪ್ತ ಸುದ್ದಿ

ಸಿಜೆಪಿಗೆ 3 ವಕ್ತಾರರ ನೇಮಕ

ನವದೆಹಲಿ (ಪಿಟಿಐ): ಸಾಮಾಜಿಕ ಮಾಧ್ಯಮದಲ್ಲಿ ಸಂಚಲನ ಸೃಷ್ಟಿಸಿರುವ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಶಿಕ್ಷಣ ಕ್ಷೇತ್ರದಲ್ಲಿನ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ವಿರೋಧಿಸಿ ಹಮ್ಮಿಕೊಂಡಿರುವ ಪ್ರತಿಭಟನೆಯ ಹೊತ್ತಿನಲ್ಲೇ ತನ್ನ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸುವ ಗುರಿಯೊಂದಿಗೆ ಮೂವರು ವಕ್ತಾರರನ್ನು ನೇಮಿಸಿದೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಸಿಜೆಪಿ, ‘ತನಿಖಾ ಪತ್ರಕರ್ತ ಸೌರವ್ ದಾಸ್ ಸಂಘಟನೆಯ ಮುಖ್ಯ ವಕ್ತಾರರಾಗಿ ಕಾರ್ಯನಿರ್ವಹಿಸಲಿದ್ದಾರೆ. ರಾಜಕೀಯ ಸಂಶೋಧಕ ಹಾಗೂ ಚಿತ್ರ ನಿರ್ಮಾಪಕ ವಿಜೇತ ದಹಿಯಾ, ಮಾಜಿ ಮ್ಯಾನೇಜ್‌ಮೆಂಟ್ ಸಲಹೆಗಾರ ಅಶುತೋಷ್ ರಂಕಾ ಅವರು ಸಾರ್ವಜನಿಕರು ಮತ್ತು ಮಾಧ್ಯಮಗಳ ಮುಂದೆ ಸಂಘಟನೆಯನ್ನು ಪ್ರತಿನಿಧಿಸಲಿದ್ದಾರೆ’ ಎಂದು ಹೇಳಿದೆ.

‘ಭಾರತದ ರಾಜಕೀಯ ದಿಕ್ಕನ್ನು ಬದಲಾಯಿಸಲು ಸಿಜೆಪಿ ಸಿದ್ಧವಾಗಿದೆ’ ಎಂದೂ ಹೇಳಿದೆ. ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಸಿಬಿಎಸ್‌ಇ ಪರೀಕ್ಷಾ ವ್ಯವಸ್ಥೆಯಲ್ಲಿನ ಲೋಪಗಳನ್ನು ಖಂಡಿಸಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ದೆಹಲಿಯಲ್ಲಿ ಶಾಂತಿಯುತ ಪ್ರತಿಭಟನೆ ಪ್ರಾರಂಭಿಸುವುದಾಗಿ ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಘೋಷಿಸಿದ್ದಾರೆ.

‘ಆದಿವಾಸಿಗಳ ಹಕ್ಕುಗಳ ಮೇಲೆ ಬಿಜೆಪಿ–ಆರ್‌ಎಸ್‌ಎಸ್ ಕಣ್ಣು’

ನವದೆಹಲಿ (ಪಿಟಿಐ): ‘ಆದಿವಾಸಿ ವಿರೋಧಿ ನಿಲುವು ಹೊಂದಿರುವ ಬಿಜೆಪಿ ಮತ್ತು ಆರ್‌ಎಸ್‌ಎಸ್, ಅವರ ಹಕ್ಕುಗಳನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿವೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಆರೋಪಿಸಿದ್ದಾರೆ.

‘ಬುಡಕಟ್ಟು ಜನರ ಜಲ, ಜಮೀನು, ಅರಣ್ಯದ ಮೇಲೆ ಅವರ ಕಣ್ಣು ಬಿದ್ದಿದೆ. ನಿಮಗೆ ವನವಾಸಿಗಳು ಎಂಬ ಹಣೆಪಟ್ಟಿ ನೀಡುವ ಮೂಲಕ ನಿಮ್ಮ ಹಕ್ಕುಗಳನ್ನು ಕಿತ್ತುಕೊಳ್ಳಲು ಮುಂದಾಗಿದ್ದಾರೆ’ ಎಂದು ಆದಿವಾಸಿ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ ಆದಿವಾಸಿ ವೃತ್ತಿಪರರ ಸಮ್ಮೇಳನದಲ್ಲಿ ಪಾಲ್ಗೊಂಡ ಬಳಿಕ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘ಆದಿವಾಸಿಗಳೇ ಭಾರತದ ಮೂಲ ಪಾಲಕರು, ದೇಶದ ಐತಿಹಾಸಿಕ ಪ್ರಜ್ಞೆ ಮತ್ತು ಬೌದ್ಧಿಕತೆಯನ್ನು ಸಾಕಾರಗೊಳಿಸಿದ ಜನರು. ಇದೇ ಸತ್ಯ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ನಾನು ಮತ್ತು ಕಾಂಗ್ರೆಸ್ ಪಕ್ಷವು ನಿಮ್ಮ ಹಕ್ಕುಗಳನ್ನು ಗೌರವಿಸುತ್ತೇವೆ. ನಿಮ್ಮ ಹಕ್ಕುಗಳನ್ನು ರಕ್ಷಿಸಲು ಅಗತ್ಯವಿರುವ ಹೋರಾಟಕ್ಕೆ ಸಿದ್ಧತೆ ಮಾಡಿಕೊಂಡಿದ್ದೇವೆ’ ಎಂದು ಅವರು ತಿಳಿಸಿದ್ದಾರೆ.

ಎಡ ಪಕ್ಷಗಳ ಸಭೆ: ಡಿ. ರಾಜಾ ಪ್ರಸ್ತಾವ

ನವದೆಹಲಿ (ಪಿಟಿಐ): ‘ಎಡಪಂಥೀಯ ಚಳವಳಿಯು ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚಿಸಲು ಮತ್ತು ಸಾಮಾನ್ಯ ಕಾರ್ಯಸೂಚಿಯನ್ನು ರೂಪಿಸಲು ನವದೆಹಲಿಯಲ್ಲಿ ಶೀಘ್ರದಲ್ಲೇ ಸಭೆ ಸೇರಬೇಕು ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಅವರು ಎಡ ಪಕ್ಷಗಳಿಗೆ ಪತ್ರ ಬರೆದಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ, ಸಿಪಿಎಂಎಲ್‌ನ ದೀಪಂಕರ್ ಭಟ್ಟಾಚಾರ್ಯ, ಫಾರ್ವರ್ಡ್ ಬ್ಲಾಕ್‌ನ ಜಿ. ದೇವರಾಜನ್ ಮತ್ತು ಆರ್‌ಎಸ್‌ಪಿಯ ಮನೋಜ್ ಭಟ್ಟಾಚಾರ್ಯ ಅವರಿಗೆ ಪತ್ರ ಬರೆದಿದ್ದು, ಶೀಘ್ರದಲ್ಲೇ ಸಭೆಯ ದಿನಾಂಕ ನಿಗದಿಯಾಗಲಿದೆ’ ಎಂದು ತಿಳಿಸಲಾಗಿದೆ. ದೇಶವು ರಾಜಕೀಯ ಸವಾಲು, ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಈ ಸಭೆ ಸಕಾಲಿಕ ಹಾಗೂ ಅತ್ಯಗತ್ಯವೂ ಆಗಿದೆ ಎಂದು ರಾಜಾ ಅವರು ತಿಳಿಸಿದ್ದಾರೆ. ಜೂನ್ ಮೊದಲ ವಾರದಲ್ಲೇ ದೆಹಲಿಯಲ್ಲಿ ಸಭೆ ಸೇರುವ ಕುರಿತು ಅವರು ಪ್ರಸ್ತಾಪಿಸಿದ್ದಾರೆ. ಅದಕ್ಕೂ ಪೂರ್ವದಲ್ಲಿ ಪಕ್ಷಗಳ ಪ್ರಮುಖರ ಅನೌಪಚಾರಿಕ ಭೇಟಿಯೂ ನಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ.

ಡಿಯಾನಾ ಆಟಕ್ಕೆ ಸಬಲೆಂಕಾ ಚಿತ್

ಫ್ರೆಂಚ್ ಓಪನ್ ಟೆನಿಸ್: ನಾಲ್ಕರ ಘಟ್ಟಕ್ಕೆ ಯಾಕೂಬ್ ಮೆನ್ಸಿಕ್, ಮಾಯಾ ಕಲ್ಡಿನ್‌ಸ್ಕಾ

ಪ್ಯಾರಿಸ್ (ಎಎಫ್‌ಪಿ): ಫ್ರೆಂಚ್ ಓಪನ್‌ನಲ್ಲಿ ಚೊಚ್ಚಲ ಪ್ರಶಸ್ತಿ ಗೆಲ್ಲುವ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರ ಕನಸು ಕ್ವಾರ್ಟರ್ ಫೈನಲ್‌ನಲ್ಲಿಯೇ ಭಗ್ನಗೊಂಡಿತು. 25ನೇ ಶ್ರೇಯಾಂಕದ ಆಟಗಾರ್ತಿ, ರಷ್ಯಾದ ಡಿಯಾನಾ ಶ್ನೈಡರ್ ಅವರು 3-6, 7-5, 6-0ಯಿಂದ ಬೆಲರೂಸ್‌ನ ಆಟಗಾರ್ತಿಗೆ ಆಘಾತ ನೀಡಿದರು.

ಪುರುಷರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಆಟಗಾರ ಯಾನಿಕ್ ಸಿನ್ನರ್ ಅವರು ಎರಡನೇ ಸುತ್ತಿನಲ್ಲಿ ನಿರ್ಗಮಿಸಿದ್ದರು. ಇದೀಗ, ಮಹಿಳೆಯರ ಸಿಂಗಲ್ಸ್‌ನಲ್ಲೂ ಅಗ್ರ ಶ್ರೇಯಾಂಕದ ಆಟಗಾರ್ತಿಯೂ ಟೂರ್ನಿಯಿಂದ ಹೊರ ಬಿದ್ದಂತಾಯಿತು. ಪುರುಷರ ಅಥವಾ ಮಹಿಳೆಯರ ಸಿಂಗಲ್ಸ್‌ನಲ್ಲಿ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಜಯಿಸಿದ್ದ ತಾರೆಯರ ಹೋರಾಟವೂ ಅಂತ್ಯಗೊಂಡಿತು. ಅದರೊಂದಿಗೆ, ಈ ಬಾರಿಯ ಫ್ರೆಂಚ್ ಓಪನ್ ಟೆನಿಸ್ ಕಿರೀಟ ಹೊಸಬರ ಮುಡಿಗೇರುವುದು ಖಚಿತವಾಯಿತು.

ಫಿಲಿಪ್ ಶಾಟ್ರಿಯೆ ಕೋರ್ಟ್‌ನಲ್ಲಿ ಬುಧವಾರ ನಡೆದ ಮಹಿಳೆಯರ ಸಿಂಗಲ್ಸ್ ಎಂಟರ ಘಟ್ಟದ ಪಂದ್ಯದಲ್ಲಿ ಸಬಲೆಂಕಾ ಮೊದಲ ಸೆಟ್‌ನಲ್ಲಿ ಸುಲಭವಾಗಿ ಮೇಲುಗೈ ಸಾಧಿಸಿದ್ದರು. ಗಾಳಿ ಜೋರಾಗಿ ಬೀಸುತ್ತಿದ್ದು, ಈ ಪಂದ್ಯದ ಎರಡನೇ ಸೆಟ್‌ನಲ್ಲಿ ಇಬ್ಬರೂ ಆಟಗಾರ್ತಿಯರು ತೀವ್ರ ಹೋರಾಟದಲ್ಲಿ ಭಾಗಿಯಾದರು. ಅಂತಿಮ ಸೆಟ್ ವೇಳೆಗೆ ಆಯಾಸಗೊಂಡಂತೆ ಕಂಡ ಸಬಲೆಂಕಾ, ಪದೇಪದೆ ತಪ್ಪುಗಳನ್ನು ಎಸಗಿದರು. ಒಂದೂ ಗೇಮ್ ಗೆಲ್ಲದೆ ಕೊನೆಯ ಸೆಟ್ ಕಳೆದುಕೊಂಡರು.

ಸಬಲೆಂಕಾ ಅವರು ಸತತ 14ನೇ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಸತತ ಏಳು 'ಪ್ರಮುಖ ಟೂರ್ನಿ'ಗಳಲ್ಲಿ ನಾಲ್ಕರ ಘಟ್ಟ ಪ್ರವೇಶಿಸಿದ್ದ ಅಮೆರಿಕದ ದಿಗ್ಗಜ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರ ದಾಖಲೆ ಸರಿಗಟ್ಟುವ ಸಬಲೆಂಕಾ ಯತ್ನ ಕೈಗೂಡಲಿಲ್ಲ.

ಮಾಯಾ ಯಶಸ್ಸಿನ ಓಟ: 24 ವರ್ಷ ವಯಸ್ಸಿನ ಶ್ನೈಡರ್ ಅವರು ನಾಲ್ಕರ ಘಟ್ಟದಲ್ಲಿ ಪೋಲೆಂಡ್‌ನ ಮಾಯಾ ಕಲ್ಡಿನ್‌ಸ್ಕಾ ಅವರನ್ನು ಎದುರಿಸಲಿದ್ದಾರೆ. ಮಾಯಾ ಅವರು ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ 7-6 (7-3), 6-3ರಿಂದ 22ನೇ ಶ್ರೇಯಾಂಕದ ಆಟಗಾರ್ತಿ ಆನಾ ಕಲಿನ್‌ಸ್ಕಾಯಾಗೆ ಆಘಾತ ನೀಡಿದರು. ಟೂರ್ನಿಯ ಇತಿಹಾಸದಲ್ಲಿ ಅರ್ಹತಾ ಸುತ್ತು ಆಡಿ, ಸೆಮಿಫೈನಲ್ ತಲುಪಿದ ಎರಡನೇ ಆಟಗಾರ್ತಿ ಎಂಬ ಹಿರಿಮೆಗೂ 24 ವರ್ಷ ವಯಸ್ಸಿನ ಮಾಯಾ ಪಾತ್ರರಾದರು.


ಮಾಯಾ ಕಲ್ಡಿನ್‌ಸ್ಕಾ

ಅರ್ಜೆಂಟೀನಾದ ನಾಡಿಯಾ ಪೊಡೊರೊಸ್ಕಾ ಅವರು 2020ರಲ್ಲಿ ಅರ್ಹತಾ ಸುತ್ತು ಆಡಿ, ಮುಖ್ಯಸುತ್ತಿನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದರು. ರಷ್ಯಾದ ಆಟಗಾರ್ತಿ ಕಲಿನ್‌ಸ್ಕಾಯ ಅವರು ಈ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದರು.

ಬಾಲಾಜಿ–ಮಾರ್ಸೆಲೊ ಜೋಡಿ ನಿರ್ಗಮನ

ಪ್ಯಾರಿಸ್ (ಪಿಟಿಐ): ಫ್ರೆಂಚ್ ಓಪನ್ ಪುರುಷರ ಡಬಲ್ಸ್‌ನಲ್ಲಿ ಭಾರತದ ಎನ್.ಶ್ರೀರಾಮ್ ಬಾಲಾಜಿ ಮತ್ತು ಅವರ ಬ್ರೆಜಿಲ್‌ನ ಮಾರ್ಸೆಲೊ ಡೆಮೊಲಿನರ್ ಜೋಡಿಯ ಯಶಸ್ಸಿನ ಓಟ ಕ್ವಾರ್ಟರ್‌ಫೈನಲ್‌ನಲ್ಲಿ ಅಂತ್ಯಗೊಂಡಿತು.

ಈ ಜೋಡಿ ಕ್ವಾರ್ಟರ್ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಹ್ಯಾರಿ ಹೆಲಿಯೊವಾರ (ಫಿನ್ಲೆಂಡ್)– ಹೆನ್ರಿ ಪ್ಯಾಟೆನ್ (ಬ್ರಿಟನ್) ಜೋಡಿಗೆ 3-6, 4-6 ರಲ್ಲಿ ಮಣಿಯಿತು.

ಆದರೆ ಟೂರ್ನಿಯಲ್ಲಿ ಬಾಲಾಜಿ– ಮಾರ್ಸೆಲೊ ಜೋಡಿಯ ಓಟ ಗಮನಸೆಳೆಯಿತು. ಜೂನಿಯರ್ ಬಾಲಕರ ಸಿಂಗಲ್ಸ್‌ನಲ್ಲಿ ಆರ್ಣವ್ ಪಾಪರ್ಕರ್ ಮೂರನೇ ಸುತ್ತಿನಲ್ಲಿ ಸೋತರೆ, ಬಾಲಕಿಯರ ಸಿಂಗಲ್ಸ್‌ನಲ್ಲಿ ಮಾಯಾ ರಾಜೇಶ್ವರನ್ ರೇವತಿ ಎರಡನೇ ಸುತ್ತಿನಲ್ಲಿ ಹೊರಬಿದ್ದಿದ್ದರು.



ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಸಬಲೆಂಕಾ ಅವರನ್ನು ಸೋಲಿಸಿದ ರಷ್ಯಾದ ಡಿಯಾನಾ ಶ್ನೈಡರ್ ಎಎಫ್‌ಪಿ ಚಿತ್ರ

ಸೆಮಿಫೈನಲ್‌ನಲ್ಲಿ ಜ್ವರೇವ್– ಮೆನ್ಸಿಕ್ ಮುಖಾಮುಖಿ

ಜೆಕ್ ಗಣರಾಜ್ಯದ ಉದಯೋನ್ಮುಖ ಆಟಗಾರ ಯಾಕೂಬ್ ಮೆನ್ಸಿಕ್ ಅವರು ಪುರುಷರ ಸಿಂಗಲ್ಸ್ ಎರಡನೇ ಕ್ವಾರ್ಟರ್ ಫೈನಲ್‌ನಲ್ಲಿ ಬ್ರೆಜಿಲ್‌ನ ಜೊವೊ ಫೊನ್ಸೆಕಾ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿದರು. ಆ ಮೂಲಕ ಸೆಮಿಫೈನಲ್ ನಲ್ಲಿ ಎರಡನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ಅವರೊಂದಿಗೆ ಸೆಣಸಾಡಲು ವೇದಿಕೆ ಸಿದ್ಧಪಡಿಸಿಕೊಂಡರು.

ಬುಧವಾರ ನಡೆದ ಪಂದ್ಯದಲ್ಲಿ ಮೆನ್ಸಿಕ್ 6-4, 6-3, 7-6 (7-3)ರಿಂದ ಫೊನ್ಸೆಕಾ ಅವರನ್ನು ಹಿಮ್ಮೆಟ್ಟಿಸಿದರು. 19 ವರ್ಷ ವಯಸ್ಸಿನ ಆಟಗಾರ ಜೊವೊ, ಮೂರನೇ ಸುತ್ತಿನಲ್ಲಿ ಸರ್ಬಿಯಾದ ದಿಗ್ಗಜ ಆಟಗಾರ ನೊವಾಕ್ ಜೊಕೊವಿಕ್ ಅವರಿಗೆ ಆಘಾತ ನೀಡಿ ಗಮನ ಸೆಳೆದಿದ್ದರು.

ಮೆನ್ಸಿಕ್ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ನಾಲ್ಕರ ಘಟ್ಟ ತಲುಪಿದರು. ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ ಜೆಕ್ ಗಣರಾಜ್ಯದ ಅತಿ ಕಿರಿಯ ಆಟಗಾರ ಎಂಬ ಗೌರವಕ್ಕೂ ಅವರು ಪಾತ್ರರಾದರು.

ಕೊಬೊಲಿ ಮುನ್ನಡೆ: ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಇಟಲಿಯ ಫ್ಲಾವಿಯೊ ಕೊಬೊಲಿ ಅವರು ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು, 4-6, 6-4, 6-4, 6-4ರಿಂದ ನಾಲ್ಕನೇ ಶ್ರೇಯಾಂಕದ ಆಟಗಾರ ಫೆಲಿಕ್ಸ್ ಊಜರ್ ಆಲಿಯಾಸಿಮ್ ಅವರಿಗೆ ಆಘಾತ ನೀಡಿದರು.

ಅಫ್ಗಾನಿಸ್ತಾನ ವಿರುದ್ಧ ಟೆಸ್ಟ್: ಪ್ರಸಿದ್ಧ, ಸಿರಾಜ್ ಅಭ್ಯಾಸ

ಬಿಸಿಲಲ್ಲಿ ಆಟಗಾರರ ತಾಲೀಮು

ಮುಲ್ಲನಪುರ (ಪಿಟಿಐ): ಕರ್ನಾಟಕದ ವೇಗಿ ಪ್ರಸಿದ್ಧಕೃಷ್ಣ ಮತ್ತು ಹೈದರಾಬಾದಿನ ಮೊಹಮ್ಮದ್ ಸಿರಾಜ್ ಅವರು ಮುಂಬರುವ ಟೆಸ್ಟ್ ಕ್ರಿಕೆಟ್ ಪಂದ್ಯಕ್ಕಾಗಿ ಪೂರ್ವಾಭ್ಯಾಸ ಆರಂಭಿಸಿದರು.

ಮುಲ್ಲನಪುರದ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶನಿವಾರದಿಂದ ಅಫ್ಗಾನಿಸ್ತಾನ ಎದುರು ಟೆಸ್ಟ್ ನಡೆಯಲಿದೆ. ಅದಕ್ಕಾಗಿ ಬುಧವಾರ ಭಾರತ ತಂಡದ ಆಟಗಾರರು ಅಭ್ಯಾಸ ಆರಂಭಿಸಿದರು. ಪ್ರಸಿದ್ಧ ಮತ್ತು ಸಿರಾಜ್ ಅವರು ಬಿಸಿಲಿನ ಧಗೆಯಲ್ಲಿಯೇ ಸುಮಾರು 25 ನಿಮಿಷ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಿದರು.

ಎರಡು ತಿಂಗಳುಗಳ ಕಾಲ ಐಪಿಎಲ್‌ನಲ್ಲಿ ಆಡಿದ್ದ ಆಟಗಾರರು ನೇರವಾಗಿ ದ್ವಿಪಕ್ಷೀಯ ಸರಣಿಯಲ್ಲಿ ಕಣಕ್ಕಿಳಿಯಲಿದ್ದಾರೆ. ಇದರಿಂದಾಗಿ ಅವರ ಕಾರ್ಯಭಾರ ಒತ್ತಡದ ಕುರಿತು ಚರ್ಚೆಗಳು ಗರಿಗೆದರಿವೆ. ಅನುಭವಿ ವೇಗಿ ಸಿರಾಜ್ ಅವರಿಗೆ ಫಿಟ್‌ನೆಸ್ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳು ಇಲ್ಲ. ಆದರೆ ಈ ಭಾಗದಲ್ಲಿ ಸದ್ಯ ಬೇಸಿಗೆಯು ಏರುಗತಿಯಲ್ಲಿದೆ. ತಂಡದಲ್ಲಿ ಸ್ಥಾನ ಪಡೆದಿರುವ ಆರೂವರೆ ಅಡಿ ಎತ್ತರದ ಬಲಗೈ ವೇಗಿ ಗುರ್ನೂರ್ ಬ್ರಾರ್ ಅವರಿಗೆ ಪದಾರ್ಪಣೆಯ ಅವಕಾಶ ಸಿಗುವುದೇ ಎಂಬ ಕುತೂಹಲ ಗರಿಗೆದರಿದೆ. ಉತ್ತಮ ಲೆಂಗ್ತ್‌ನಲ್ಲಿ ಮೊನಚಾದ ಬೌನ್ಸರ್‌ಗಳನ್ನು ಪ್ರಯೋಗಿಸುವಲ್ಲಿ ಸಮರ್ಥರಾಗಿದ್ದಾರೆ.

ನೆಟ್ ಬೌಲರ್ ಆಗಿ ಅವಕಾಶ ಪಡೆದಿರುವ ಜಮ್ಮು–ಕಾಶ್ಮೀರದ ವೇಗಿ ಅಕೀಬ್ ನಬಿ ಕೂಡ ಬೌಲಿಂಗ್ ಅಭ್ಯಾಸ ಮಾಡಿದರು. ಲೈನ್ ಮತ್ತು ಲೆಂಗ್ತ್ ನಿರ್ವಹಿಸುವಲ್ಲಿ ನಿಖರತೆ ಸಾಧಿಸಿದರು.

ಈ ಸಂದರ್ಭದಲ್ಲಿ ಎಡಗೈ ಸ್ಪಿನ್ – ಆಲ್‌ರೌಂಡರ್ ಹರ್ಷ ದುಬೆ ಅವರಿಗೆ ಹೆಚ್ಚು ಹೊತ್ತು ಬ್ಯಾಟಿಂಗ್ ಅಭ್ಯಾಸ ನಡೆಸಲು ಅವಕಾಶ ಕೊಡಲಾಯಿತು. ಇನ್ನೊಬ್ಬ ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಕೂಡ ತಂಡದಲ್ಲಿದ್ದಾರೆ. ಆದ್ದರಿಂದ ಅಂತಿಮ 11ರ ಬಳಗದಲ್ಲಿ ಸ್ಥಾನ ಪಡೆಯಲು ದುಬೆ ಮತ್ತು ಸುತಾರ್ ಅವರಲ್ಲಿ ಪೈಪೋಟಿ ಇದೆ. ಸುತಾರ್ ಕೂಡ ಅಭ್ಯಾಸ ನಡೆಸಿದರು. ಇವರಿಬ್ಬರ ಅಭ್ಯಾಸದ ಮೇಲೆ ಮುಖ್ಯ ಕೋಚ್ ಗೌತಮ್ ಗಂಭೀರ್ ನಿಗಾ ವಹಿಸಿದ್ದರು.

ನಾಯಕ ಶುಭಮನ್ ಗಿಲ್ ಅವರು ಪ್ರಿನ್ಸ್ ಯಾದವ್ ಸೇರಿದಂತೆ ಬೇರೆ ಬೇರೆ ಬೌಲರ್‌ಗಳ ಎಸೆತಗಳನ್ನು ಎದುರಿಸಿದರು. ವೇಗಿ ಮಯಂಕ್ ಯಾದವ್ ಕೂಡ ಈ ಸಂದರ್ಭದಲ್ಲಿ ಇದ್ದರು. ಆದರೆ ಅವರು ಹೆಚ್ಚು ಬೌಲಿಂಗ್ ಮಾಡಲಿಲ್ಲ. ಫಿಟ್‌ನೆಸ್ ವ್ಯಾಯಾಮಗಳಲ್ಲಿ ತೊಡಗಿಕೊಂಡಿದ್ದರು.


ಶುಭಮನ್ ಗಿಲ್ ಹಾಗೂ ರಿಷಭ್ ಪಂತ್ ಅವರು ಬುಧವಾರ ತಾಲೀಮು ವೇಳೆ ಕುಶಲೋಪರಿಯಲ್ಲಿ ತೊಡಗಿದ್ದು ಕಂಡುಬಂತು ಪಿಟಿಐ ಚಿತ್ರ

'ಟೆಸ್ಟ್ ತಂಡದಲ್ಲಿ ಅಕೀಬ್ ನಬಿಗೆ ಅವಕಾಶ ಕೊಡಬೇಕಿತ್ತು'


ಅಕೀಬ್ ನಬಿ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನ ಎದುರಿನ ಏಕೈಕ ಟೆಸ್ಟ್ ಪಂದ್ಯದಲ್ಲಿ ಆಡುವ ಭಾರತ ತಂಡದಲ್ಲಿ ಜಮ್ಮು–ಕಾಶ್ಮೀರದ ವೇಗಿ ಅಕೀಬ್ ನಬಿ ದಾರ್ ಅವರಿಗೆ ಅವಕಾಶ ನೀಡಿಲ್ಲ. ಆದರೆ ಅವರಿಗೆ ನೆಟ್ ಬೌಲರ್ ಆಗಿ ನೇಮಕ ಮಾಡಲಾಗಿದೆ. ಈ ಕುರಿತು ಕ್ರಿಕೆಟಿಗ ಇಶಾಂತ್ ಶರ್ಮಾ ಅವರ ಕೋಚ್ ಶ್ರವಣ್ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ನಬಿ ಅವರು ಕಳೆದ ರಣಜಿ ಋತುವಿನಲ್ಲಿ ಒಟ್ಟು 60 ವಿಕೆಟ್ ಗಳಿಸಿದರು. ಅವರ ಅಮೋಘ ಆಟದಿಂದಾಗಿ ಜಮ್ಮು–ಕಾಶ್ಮೀರ ತಂಡವು ಮೊದಲ ಬಾರಿಗೆ ರಣಜಿ ಟ್ರೋಫಿ ಜಯಿಸಿತು. ಆದರೆ ಅವರನ್ನು ಟೆಸ್ಟ್ ಪಂದ್ಯದ ತಂಡಕ್ಕೆ ಆಯ್ಕೆ ಮಾಡಿಲ್ಲ. ಅವರನ್ನು ಮೀಸಲು ಬೌಲರ್ ಆಗಿ ತೆಗೆದುಕೊಳ್ಳುವುದು ಯಾವ ಪದ್ಧತಿ' ಎಂದು ಪ್ರಶ್ನಿಸಿದ್ದಾರೆ.

'ಮೀಸಲು ಬೌಲರ್ ಹೆಸರಿನಲ್ಲಿ ಅವರನ್ನು ನೆಟ್ ಬೌಲರ್ ಮಾಡಿದ್ದೀರಿ. ಇದು ದಿಗ್ಭ್ರಮೆಗೊಳಿಸುವಂತಹ ಸಂಗತಿ. ಅವರು ಮಾಡಿರುವ ಸಾಧನೆಯನ್ನು ಯಾಕೆ ಗುರುತಿಸಲಿಲ್ಲ. ಅವರಿಗಿಂತ ಕಡಿಮೆ ವಿಕೆಟ್ ಪಡೆದವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ಇದು ಸಮ್ಮತವಲ್ಲ' ಎಂದು ಶ್ರವಣ್ ಹೇಳಿದ್ದಾರೆ.

ದೆಹಲಿಯ ಶ್ರವಣ್ ಅವರು ಹಲವು ವರ್ಷಗಳಿಂದ ಇಶಾಂತ್ ಶರ್ಮಾ ಸೇರಿ ಹಲವು ಖ್ಯಾತ ಕ್ರಿಕೆಟಿಗರ ಬಾಲ್ಯದ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಪ್ರಜ್ಞಾನಂದಗೆ ಮತ್ತೆ ಮಣಿದ ಮ್ಯಾಗ್ನಸ್

ನಾರ್ವೆ ಚೆಸ್: ಸೋಲಿನೊಡನೆ ಗುಕೇಶ್ ಪ್ರಶಸ್ತಿ ಆಸೆ ಭಗ್ನ

ಓಸ್ಲೊ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ನಾರ್ವೆ ಚೆಸ್ ಟೂರ್ನಿಯಲ್ಲಿ ಎರಡನೇ ಬಾರಿ ಸೋಲಿಸಿದರು. ಭಾನುವಾರ ಎಂಟನೇ ಸುತ್ತಿನ ಪಂದ್ಯವನ್ನು ಗೆದ್ದ ಪ್ರಜ್ಞಾನಂದ ಅವರು ಈ ಪ್ರತಿಷ್ಠಿತ ಟೂರ್ನಿಯಲ್ಲಿ ಕಿರೀಟ ಧರಿಸಿದ ಭಾರತದ ಮೊದಲ ಆಟಗಾರನಾಗುವ ಕನಸಿಗೆ ಜೀವ ತುಂಬಿದರು.

ಆದರೆ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರ ಪ್ರಶಸ್ತಿ ಕನಸು ಭಗ್ನಗೊಂಡಿತು. ಅವರು ಎಂಟನೇ ಸುತ್ತಿನಲ್ಲಿ ಫ್ರಾನ್ಸ್‌ನ ಗ್ರ್ಯಾಂಡ್‌ಮಾಸ್ಟರ್ ಅಲಿರೇಝಾ ಫಿರೋಝ್‌ಜಾ ಅವರಿಗೆ ಕ್ಲಾಸಿಕಲ್ ಪಂದ್ಯದಲ್ಲಿ ಮಣಿದರು. ಆರು ಆಟಗಾರರ ಈ ಟೂರ್ನಿಯಲ್ಲಿ ಎಂಟು ಅಂಕಗಳೊಡನೆ ಗುಕೇಶ್ ಕೊನೆಯ ಸ್ಥಾನದಲ್ಲಿದ್ದಾರೆ. ವಿಶ್ವ ಚಾಂಪಿಯನ್ ಪಟ್ಟ ಉಳಿಸಿಕೊಳ್ಳಲು ವರ್ಷಾಂತ್ಯಕ್ಕೆ ಫೈನಲ್ ಆಡಲಿರುವ ಅವರಿಗೆ ಈಗಿನ ಲಯವು ಕಳವಳ ಮೂಡಿಸಿದೆ.

ಈ ವರ್ಷ ಕ್ಲಾಸಿಕಲ್ ಮಾದರಿಯಲ್ಲಿ ಕಾರ್ಲ್‌ಸನ್ ಅವರನ್ನು ಎರಡು ಬಾರಿ ಸೋಲಿಸಿದ ಏಕೈಕ ಆಟಗಾರ ಎಂಬ ಹಿರಿಮೆ ಪ್ರಜ್ಞಾನಂದ ಅವರದಾಯಿತು. ಇನ್ನು ಎರಡು ಸುತ್ತುಗಳು ಉಳಿದಿರುವಂತೆ 20 ವರ್ಷ ವಯಸ್ಸಿನ ಪ್ರಜ್ಞಾನಂದ ಅವರು 12 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೇರಿದರು.

ಜರ್ಮನಿಯ ವಿನ್ಸೆಂಟ್ ಕೀಮರ್ ವಿರುದ್ಧ ಆರ್ಮ್‌ಗೆಡನ್ ಟೈಬ್ರೇಕರ್‌ನಲ್ಲಿ ಗೆಲುವು ಸಾಧಿಸಿದ ವೆಸ್ಲಿ ಸೊ 14 ಅಂಕ ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ. ಅಲಿರೇಝಾ (13) ಎರಡನೇ ಸ್ಥಾನದಲ್ಲಿದ್ದಾರೆ. ಹಾಲಿ ಚಾಂಪಿಯನ್ ಕಾರ್ಲ್‌ಸನ್ 9 ಮತ್ತು ಕೀಮರ್ 10 ಅಂಕ ಗಳಿಸಿದ್ದಾರೆ.

'ನನಗೆ ಈ ಹಂತದಲ್ಲಿ ಗೆಲುವು ಮುಖ್ಯವಾಗಿತ್ತು. ಅದು ಮ್ಯಾಗ್ನಸ್ ವಿರುದ್ಧ ಬಂದಿದ್ದು ಖುಷಿ ನೀಡಿದೆ' ಎಂದು ಕಪ್ಪುಕಾಯಿಗಳಲ್ಲಿ ಆಡಿದ ಪ್ರಜ್ಞಾನಂದ ಪಂದ್ಯದ ನಂತರ ಪ್ರತಿಕ್ರಿಯಿಸಿದರು.

ಕಾರ್ಲ್‌ಸನ್ ಅವರ ಹಿನ್ನಡೆಯು ಅವರ ಯುಗ ಅಂತ್ಯಗೊಳ್ಳುತ್ತಿರುವ ಸೂಚನೆಯೇ ಎಂಬ ಪ್ರಶ್ನೆಗೆ, 'ಅವರು ಈಗಲೂ ಉತ್ತಮ ಆಟಗಾರನೇ. 20 ವಿಶ್ವ ಪ್ರಶಸ್ತಿಗಳನ್ನು ಅವರು ಗೆದ್ದುಕೊಂಡಿದ್ದು, ಯಾರೂ ಅವರ ಹತ್ತಿರ ಬಂದಿಲ್ಲ. ನಾನು ಕಳೆದ ಕೆಲವು ತಿಂಗಳಲ್ಲಿ ಕೆಲವು ಪಂದ್ಯಗಳನ್ನು ಗೆದ್ದಿದ್ದೇನೆ. ಆದರೆ ಮ್ಯಾಗ್ನಸ್ ಅವರನ್ನು ಎದುರಿಸುವುದು ಸುಲಭವಲ್ಲ' ಎಂದರು.

ಗುರುವಾರ ನಡೆಯುವ 9ನೇ ಸುತ್ತಿನಲ್ಲಿ ಪ್ರಜ್ಞಾನಂದ, ಗುಕೇಶ್ ಅವರನ್ನು ಎದುರಿಸಲಿದ್ದಾರೆ.

ಅಸೌಬಯೇವಾ ಹಿಡಿತ: ಮಹಿಳೆಯರ ವಿಭಾಗದಲ್ಲಿ ಎರಡು ನಿರ್ಣಾಯಕ ಫಲಿತಾಂಶಗಳು ಬಂದರೆ, ಒಂದರಲ್ಲಿ ಆರ್ಮ್‌ಗೆಡನ್ ಮೂಲಕ ಫಲಿತಾಂಶ ನಿರ್ಧಾರವಾಯಿತು.

ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ (15.5 ಅಂಕ) ಅವರು ಭಾರತದ ದಿವ್ಯಾ ದೇಶಮುಖ್ (10) ಅವರನ್ನು ಸೋಲಿಸಿ ಅಗ್ರಸ್ಥಾನವನ್ನು ಬಲಪಡಿಸಿಕೊಂಡರು.

ಚೀನಾದ ಝು ಜಿನೆರ್ (10) ಇನ್ನೊಂದು ಪಂದ್ಯದಲ್ಲಿ ವಿಶ್ವ ಚಾಂಪಿಯನ್, ಸ್ವದೇಶದ ಜು ವೆನ್‌ಜುನ್ (9) ಅವರನ್ನು ಸೋಲಿಸಿದರು. ಭಾರತದ ಕೋನೇರು ಹಂಪಿ (8) ಅವರು ಆರ್ಮ್‌ಗೆಡನ್‌ನಲ್ಲಿ ಹಾಲಿ ಚಾಂಪಿಯನ್, ಉಕ್ರೇನ್‌ನ ಅನ್ನಾ ಮುಝಿಚುಕ್ (10.5) ಅವರನ್ನು ಸೋಲಿಸಿದರು.



ಎಂಟನೇ ಸುತ್ತಿನಲ್ಲಿ ಮುಖಾಮುಖಿಯಾದ ಮ್ಯಾಗ್ನಸ್ ಕಾರ್ಲ್‌ಸನ್ (ಬಲಗಡೆ) ಮತ್ತು ಪ್ರಜ್ಞಾನಂದ ಫಿಡೆ ಚಿತ್ರ

ಇಂದಿನಿಂದ ರಾಜ್ಯ ಅಥ್ಲೆಟಿಕ್ ಕೂಟ

ಬೆಂಗಳೂರು: ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಆಶ್ರಯದಲ್ಲಿ ಇಲ್ಲಿನ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟ ಗುರುವಾರ ಆರಂಭವಾಗಲಿದೆ. ಎರಡು ದಿನಗಳ ಈ ಕೂಟವು ಇದೇ ತಿಂಗಳ ಕೊನೆಯಲ್ಲಿ ನಡೆಯಲಿರುವ ಅಂತರ ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ಸ್‌ಗೆ ಟ್ರಯಲ್ಸ್ ಆಗಿದೆ.

ಪ್ರತಿಯೊಂದು ಸ್ಪರ್ಧೆಗಳಲ್ಲಿ ಮೊದಲ ಮೂರು ಸ್ಥಾನ ಗಳಿಸಿದವರು ಭುವನೇಶ್ವರದಲ್ಲಿ ಇದೇ 24 ರಿಂದ 28ರವರೆಗೆ ನಡೆಯಲಿರುವ ಅಂತರ ರಾಜ್ಯ ಕೂಟದಲ್ಲಿ ಭಾಗವಹಿಸುವ ಅರ್ಹತೆ ಪಡೆಯುತ್ತಾರೆ. ಅಂತರ ರಾಜ್ಯ ಕೂಟವು ಸೆಪ್ಟೆಂಬರ್ –ಅಕ್ಟೋಬರ್‌ನಲ್ಲಿ ನಿಗದಿಯಾಗಿರುವ ಏಷ್ಯನ್ ಗೇಮ್ಸ್‌ಗೆ ಅಂತಿಮ ಟ್ರಯಲ್ಸ್ ಆಗಿದೆ.

ಆದರೆ 100 ಮತ್ತು 400 ಮೀ. ಓಟಗಳಲ್ಲಿ ಅಗ್ರ ಓಟಗಾರರು, ಓಟಗಾರ್ತಿಯರು ಇಲ್ಲಿ ಕಣಕ್ಕಿಳಿಯುವುದಿಲ್ಲ. ಅವರಿಗೆ ಇದೇ 20 ಮತ್ತು 21ರಂದು ಚೀನಾದಲ್ಲಿ ನಡೆಯಲಿರುವ ಏಷ್ಯನ್ ರಿಲೇ ಚಾಂಪಿಯನ್‌ಷಿಪ್ ಸೇರಿದಂತೆ ವಿವಿಧ ಕಾರಣಗಳಿಂದ ಅವರಿಗೆ ವಿನಾಯಿತಿ ನೀಡುವಂತೆ ಭಾರತ ಅಥ್ಲೆಟಿಕ್ ಫೆಡರೇಷನ್ ಮನವಿ ಮಾಡಿದೆ.

ಎಸ್.ಎಸ್.ಸ್ನೇಹಾ (100 ಮೀ.), ಎಂ.ಆರ್.ಪೂವಮ್ಮ, ವಿಜಯಕುಮಾರಿ ಜಿ.ಕೆ., ನಿಹಾಲ್ ಜೋಯೆಲ್ ವಿಲಿಯಮ್ (400 ಮೀ. ಓಟ) ಅವರು ಏಷ್ಯನ್ ರಿಲೇ ಕೂಟಕ್ಕೆ ಪೂರ್ವಭಾವಿಯಾಗಿ ನಡೆಯುವ ರಾಷ್ಟ್ರೀಯ ಶಿಬಿರದಲ್ಲಿದ್ದಾರೆ.

ಯಶಸ್ ಪಿ. (400 ಮೀ. ಹರ್ಡಲ್ಸ್), ಕೃಷಿಕ್ ಎಂ. (100 ಮೀ. ಹರ್ಡಲ್ಸ್) ಮತ್ತು ಮಣಿಕಂಠ ಹೋಬಳಿದಾರ್ (100 ಮೀ. ಓಟ) ಅವರು ಚೇತರಿಕೆಯ ಹಾದಿಯಲ್ಲಿದ್ದಾರೆ.

ಫಿಫಾ ಫುಟ್‌ಬಾಲ್ ವಿಶ್ವಕಪ್ ಆಡಲಿರುವ ಸರಪ್ರೀತ್ ಸಿಂಗ್

ಕಣದಲ್ಲಿ ಭಾರತ ಮೂಲದ ನಾಲ್ವರು

ನವದೆಹಲಿ (ಪಿಟಿಐ): ಈ ಸಲವೂ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅರ್ಹತೆಯನ್ನು ಗಿಟ್ಟಿಸುವಲ್ಲಿ ಭಾರತ ವಿಫಲವಾಗಿದೆ. ಆದರೆ ಅಮೆರಿಕದಲ್ಲಿ ನಡಯಲಿರುವ 23ನೇ ಆವೃತ್ತಿಯ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಮೂಲದ ನಾಲ್ವರು ಆಟಗಾರರು ಕಣಕ್ಕಿಳಿಯಲಿದ್ದಾರೆ.

ಸರಪ್ರೀತ್ ಸಿಂಗ್, ಸ್ಯಾಮ್ಯುವೆಲ್ ಮುತ್ತುಸ್ವಾಮಿ, ನಿಶಾನ್ ವೇಲುಪಿಳ್ಳೈ ಮತ್ತು ತಹಸೀನ್ ಮೊಹಮ್ಮದ್ ಅವರು ಈ ಬಾರಿ ಆಡಲಿದ್ದಾರೆ. 2006ರ ವಿಶ್ವಕಪ್ ಟೂರ್ನಿಯಲ್ಲಿ ಭಾರತೀಯ ಮೂಲದ ವಿಕಾಶ್ ದೊರಾಸೂ ಅವರು ಫ್ರಾನ್ಸ್ ತಂಡದಲ್ಲಿ ಮಿಡ್‌ಫೀಲ್ಡರ್ ಆಗಿದ್ದರು. ಆಂಧ್ರಪ್ರದೇಶದ ವಿಜಯನಗರಂ ಮೂಲದ ವಿಕಾಶ್ ಅವರ ಅಜ್ಜನ ಕುಟುಂಬ ಫ್ರಾನ್ಸ್‌ಗೆ ತೆರಳಿ ಅಲ್ಲಿಯೇ ನೆಲಸಿತ್ತು.

ಈ ಸಲ ಕಣಕ್ಕಿಳಿಯಲಿರುವ ನಾಲ್ವರು ಆಟಗಾರರು ಬೇರೆ ಬೇರೆ ದೇಶಗಳ ತಂಡಗಳನ್ನು ಪ್ರತಿನಿಧಿಸಲಿದ್ದಾರೆ.

ಪಂಜಾಬ್ ಮೂಲದ ಸರಪ್ರೀತ್ ಸಿಂಗ್ ಅವರು ನ್ಯೂಜಿಲೆಂಡ್ ತಂಡದಲ್ಲಿದ್ದಾರೆ. ಅವರು ಆಕ್ಲೆಂಡ್‌ನಲ್ಲಿ ಜನಿಸಿದ್ದಾರೆ. 2018ರಲ್ಲಿ ಮುಂಬೈನಲ್ಲಿ ನಡೆದಿದ್ದ ಇಂಟರ್‌ಕಾಂಟಿನೆಂಟರ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿಯೂ ಆಡಿದ್ದರು. ಕಿವೀಸ್ ತಂಡವು 2–1ರಿಂದ ಭಾರತ ಎದುರು ಜಯಿಸುವಲ್ಲಿ ಸರಪ್ರೀತ್ ಅವರ ಕಾಣಿಕೆಯೂ ಇತ್ತು.

2019ರಲ್ಲಿ ಬಾಯನ್ ಮ್ಯೂನಿಕ್ ತಂಡವನ್ನು ಪ್ರತಿನಿಧಿಸಿದ್ದರು. ಆ ಮೂಲಕ ಜರ್ಮನಿಯ ಮೊದಲ ಡಿವಿಷನ್ ಲೀಗ್‌ನಲ್ಲಿ ಆಡಿದ ಮೊದಲ ಭಾರತೀಯನೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಮ್ಯಾನೇಜರ್ ಹ್ಯಾನ್ಸಿ ಫ್ಲಿಕ್ ಅವರ ಮಾರ್ಗದರ್ಶನದಲ್ಲಿ ಮೊದಲ ಬಾರಿಗೆ ಅವರು ಬಾಯನ್ ಮ್ಯೂನಿಕ್ ಸೀನಿಯರ್ ತಂಡಕ್ಕೆ 2020ರಲ್ಲಿ ಪದಾರ್ಪಣೆ ಮಾಡಿದರು.

ಅವರು ಕಿವೀಸ್ ಬಳಗದಲ್ಲಿ ಒಟ್ಟು 24 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದ್ದಾರೆ. 2017 ಹಾಗೂ 2019ರಲ್ಲಿ 20 ವರ್ಷದೊಳಗಿನವರ ಫಿಫಾ ವಿಶ್ವಕಪ್ ಟೂರ್ನಿಗಳಲ್ಲಿಯೂ ಸ್ಯಾಮುವೆಲ್ ಮುತ್ತುಸಾಮಿ ಅವರು ಕಾಂಗೊ ದೇಶವನ್ನು ಪ್ರತಿನಿಧಿಸಲಿದ್ದಾರೆ. ಅವರು ಫ್ರಾನ್ಸ್‌ನಲ್ಲಿ ಜನಿಸಿದ್ದರು. ತಂದೆ ತಮಿಳುನಾಡಿನವರು ಹಾಗೂ ತಾಯಿ ಕಾಂಗೋ ದೇಶದವರು. 19ನೇ ಶತಮಾನದಲ್ಲಿ ದಕ್ಷಿಣ ಭಾರತದಿಂದ ಫ್ರಾನ್ಸ್‌ಗೆ ವಲಸೆ ಹೋದವರಲ್ಲಿ ಸ್ಯಾಮುವೆಲ್ ಕುಟುಂಬದ ಪೂರ್ವಜರಿದ್ದರೆನ್ನಲಾಗಿದೆ.

ಫಿಫಾ ನಿಯಮದ ಪ್ರಕಾರ ತಾಯಿ ಅಥವಾ ತಂದೆಯ ತವರು ದೇಶವನ್ನು ಪ್ರತಿನಿಧಿಸುವ ಅವಕಾಶವನ್ನು ನೀಡಲಾಗುತ್ತದೆ. ಆದ್ದರಿಂದ ಸ್ಯಾಮುವೆಲ್ ಅವರು ತಾಯಿಯ ತವರು ಕಾಂಗೊ ದೇಶವನ್ನು ಆಯ್ಕೆ ಮಾಡಿಕೊಂಡಿದ್ದಾರೆ.


29 ವರ್ಷದ ಮಿಡ್‌ಫೀಲ್ಡರ್ ಪ್ರಸ್ತುತ ಗ್ರೀಕ್ ಸೂಪರ್ ಲೀಗ್ ಕ್ಲಬ್‌ನಲ್ಲಿ ಆಡುತ್ತಿದ್ದಾರೆ. ಇದಕ್ಕೂ ಮುನ್ನ ಅವರು ಫ್ರಾನ್ಸ್‌ನ ಎಫ್‌ಸಿ ನಾಂತೆಸ್ ಮತ್ತು ಟರ್ಕಿಯ ಓಜಬೆಲೆಸನ್ ಸಿವಾಸ್‌ಪೊರ್ ತಂಡದಲ್ಲಿ ಆಡಿದ್ದಾರೆ.

ಆಸ್ಟ್ರೇಲಿಯಾ ತಂಡದಲ್ಲಿರುವ ನಿಶಾನ್ ವೇಲುಪಿಳ್ಳೈ ಅವರಿಗೆ ಈಗ 25 ವರ್ಷ. ಮೆಲ್ಬರ್ನ್‌ನಲ್ಲಿ ಜನಿಸಿದ್ದಾರೆ. ಆಂಗ್ಲೊ–ಇಂಡಿಯನ್ ತಾಯಿ ಮತ್ತು ತಂದೆಯು ಶ್ರೀಲಂಕಾ ತಮಿಳು ಮೂಲದವರಾಗಿದ್ದು ಮಲೇಷ್ಯಾ ಪ್ರಜೆಯಾಗಿದ್ದಾರೆ. ಇದೇ ಮೊದಲ ಬಾರಿ ವಿಶ್ವಕಪ್ ಟೂರ್ನಿಯಲ್ಲಿ ಆಡ ಲಿರುವ ಆಸ್ಟ್ರೇಲಿಯಾ ತಂಡದಲ್ಲಿ ವಿಂಗರ್ ಆಗಿದ್ದಾರೆ. 2024ರಲ್ಲಿ ಆಸ್ಟ್ರೇಲಿಯಾ ತಂಡದಲ್ಲಿ ಪದಾರ್ಪಣೆ ಮಾಡಿದ್ದರು.


ಕತಾರ್ ತಂಡದಲ್ಲಿರುವ ತಹಸೀನ್ ಮೊಹಮ್ಮದ್ ಜಮಶೇದ್ ಅವರು ಕೇರಳದ ಕಣ್ಣೂರಿನವರು. ಮಲೆಯಾಳಿ ದಂಪತಿಯು 2006ರಲ್ಲಿ ದೋಹಾಗೆ ತೆರಳಿದ್ದರು. ತಹಸೀನ್ ಅವರಿಗೆ ಈಗ 20 ವರ್ಷ ವಯಸ್ಸು. ಅವರ ತಂದೆ ಜಮಶೇದ್ ಅವರು ಕತಾರ್‌ನಲ್ಲಿ ಲೆಕ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಮಶೇದ್ ಅವರು ತಲಸ್ಸೇರಿಯವರು ಹಾಗೂ ತಾಯಿ ಶೀಮಾ ಅವರು ವೇಲಪಟ್ಟಣಂನವರು.

ಕತಾರ್ ಸ್ಟಾರ್ಸ್ ಲೀಗ್‌ನಲ್ಲಿ ಆಡಿದ ಮೊದಲ ಭಾರತೀಯ ಆಟಗಾರನೆಂಬ ಹೆಗ್ಗಳಿಕೆ ಅವರದ್ದು.ವಿಂಗರ್ ಆಗಿರುವ ತಹಸೀನ್ 2024ರಲ್ಲಿ ಏಷ್ಯನ್ ಕ್ವಾಲಿಫಯರ್ ಗ್ರುಪ್ ಪಂದ್ಯದಲ್ಲಿ ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ಕತಾರ್ ತಂಡಕ್ಕೆ ಪದಾರ್ಪಣೆ ಮಾಡಿದ್ದರು.


ಸರಪ್ರೀತ್ ಸಿಂಗ್


ಸ್ಯಾಮ್ಯುವೆಲ್ ಮುತ್ತುಸ್ವಾಮಿ


ನಿಶಾನ್ ವೇಲುಪಿಳ್ಳೈ


ತಹಸೀನ್ ಮೊಹಮ್ಮದ್

ಇಂಗ್ಲೆಂಡ್ ವನಿತೆಯರಿಗೆ ಸರಣಿ

ಟಾಂಟನ್ (ಬ್ರಿಟನ್, ಪಿಟಿಐ): ಅಲೀಸ್ ಕ್ಯಾಪ್ಸಿ ಹಾಗೂ ಹೀದರ್ ನೈಟ್ ಅವರ ಶತಕದ ಜೊತೆಯಾಟದ ಬಲದಿಂದ ಆತಿಥೇಯ ಇಂಗ್ಲೆಂಡ್ ಮಹಿಳಾ ತಂಡವು ಭಾರತ ವಿರುದ್ಧದ ಟಿ20 ಕ್ರಿಕೆಟ್ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಜಯಿಸಿತು. ಅದರೊಂದಿಗೆ, 2–1ರಿಂದ ಸರಣಿ ಕೈವಶ ಮಾಡಿಕೊಂಡಿತು.

ಇಂಗ್ಲೆಂಡ್ ತಂಡದ ನಾಯಕಿ ಶಾರ್ಲಿ ಡೀನ್ ಅವರು ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡರು. ನಾಯಕಿ ಹರ್ಮನ್ ಪ್ರೀತ್ ಕೌರ್ ಅವರ ಅಜೇಯ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 180 ರನ್ ಪೇರಿಸಿತು. ಲಾರೆನ್ ಬೆಲ್ (36ಕ್ಕೆ2) ಪರಿಣಾಮಕಾರಿ ಬೌಲಿಂಗ್ ಮಾಡಿದರು.

ಸವಾಲಿನ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು 38 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ವೇಳೆ ಜೊತೆಯಾದ ಅಲೀಸ್ (82; 43ಎ) ಹಾಗೂ ಹೀದರ್ (ಔಟಾಗದೇ 70; 42ಎ) ನಾಲ್ಕನೇ ವಿಕೆಟ್‌ಗೆ 137 ರನ್ ಸೇರಿಸಿದರು. ಡೀನ್ ಪಡೆ 18.3 ಓವರ್‌ಗಳಲ್ಲಿ 4 ವಿಕೆಟ್‌ಗೆ 184 ರನ್ ಬಾರಿಸಿ ಸಂಭ್ರಮಿಸಿತು. ಅರುಂಧತಿ ರೆಡ್ಡಿ ಹಾಗೂ ಕ್ರಾಂತಿ ಗೌಡ್ ತಲಾ ಎರಡು ವಿಕೆಟ್ ಪಡೆದರು.

ಅಲೀಸ್ ಅವರು ಪಂದ್ಯದ ಹಾಗೂ ಸರಣಿಯ ಆಟಗಾರ್ತಿ ಗೌರವಕ್ಕೆ ಪಾತ್ರರಾದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 180 (ಯಸ್ತಿಕಾ ಭಾಟಿಯಾ 32, ಹರ್ಮನ್ ಪ್ರೀತ್ ಕೌರ್ 56, ದೀಪ್ತಿ ಶರ್ಮಾ 32; ಲಾರೆನ್ ಬೆಲ್ 36ಕ್ಕೆ2). ಇಂಗ್ಲೆಂಡ್: 18.3 ಓವರ್‌ಗಳಲ್ಲಿ 4 ವಿಕೆಟ್‌ಗೆ 184 (ಅಲೀಸ್ ಕ್ಯಾಪ್ಸಿ 82, ಹೀದರ್ ನೈಟ್ ಔಟಾಗದೇ 70; ಅರುಂಧತಿ ರೆಡ್ಡಿ 31ಕ್ಕೆ2, ಕ್ರಾಂತಿ ಗೌಡ್ 40ಕ್ಕೆ2).

ಹಾಕಿ: ಭಾರತ ತಂಡಗಳಿಗೆ ಭರ್ಜರಿ ಜಯ

ಕಾಕಾಮಿಗಹರಾ (ಜಪಾನ್), (ಪಿಟಿಐ): ಭಾರತ ಪುರುಷರ ಮತ್ತು ಮಹಿಳಾ ತಂಡಗಳು, ಏಷ್ಯನ್ 18 ವರ್ಷದೊಳಗಿನವರ ಹಾಕಿ ಟೂರ್ನಿಯ 'ಎ' ಗುಂಪಿನ ಪಂದ್ಯಗಳಲ್ಲಿ ಬುಧವಾರ ಗೋಲಿನ ಮಳೆಗರೆದು ಎದುರಾಳಿ ತಂಡಗಳನ್ನು ಸುಲಭವಾಗಿ ಮಣಿಸಿದವು.

ಪುರುಷರ ವಿಭಾಗದಲ್ಲಿ ಭಾರತ ತಂಡ, ಗುಂಪು ಹಂತದ ಕೊನೆಯ ಪಂದ್ಯದಲ್ಲಿ 13–1 ಗೋಲುಗಳಿಂದ ಚೀನಾ ತೈಪೆ ತಂಡವನ್ನು ಸೋಲಿಸಿ, ಸೆಮಿಫೈನಲ್‌ಗೆ ಪ್ರವೇಶ ಪಡೆಯಿತು. ಮಹಿಳಾ ತಂಡವು ತನ್ನ ಗುಂಪು ಹಂತದ ಕೊನೆಯ ಪಂದ್ಯದಲ್ಲಿ 25–0 ಗೋಲುಗಳಿಂದ ಸಿಂಗಪುರ ತಂಡವನ್ನು ಸದೆಬಡಿಯಿತು. ಆ ಮೂಲಕ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೆಮಿಫೈನಲ್ ತಲುಪಿತು.

ಏಷ್ಯನ್ ರಿಲೆ ಚಾಂಪಿಯನ್‌ಷಿಪ್: ಗುರಿಂದರ್‌ವೀರ್ ಸಿಂಗ್ ನಾಯಕ

ನವದೆಹಲಿ (ಪಿಟಿಐ): ಪುರುಷರ 100 ಮೀಟರ್ಸ್ ಓಟದಲ್ಲಿ ರಾಷ್ಟ್ರೀಯ ದಾಖಲೆ ಮಾಡಿರುವ ಗುರಿಂದರ್‌ವೀರ್ ಸಿಂಗ್ ಅವರು ಚೀನಾದಲ್ಲಿ ನಡೆಯಲಿರುವ ಏಷ್ಯನ್ ರಿಲೆ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸುವರು. ಈ ತಂಡದಲ್ಲಿ ಕರ್ನಾಟಕದ ತೀರ್ಥೇಶ್ ಶೆಟ್ಟಿ, ವಿಜಯ ಕುಮಾರಿ ಜಿ.ಕೆ ಹಾಗೂ ಎಂ.ಆರ್. ಪೂವಮ್ಮ ಅವರೂ ಸ್ಥಾನ ಪಡೆದಿದ್ದಾರೆ.

ತೀರ್ಥೇಶ್ ಅವರು ಪುರುಷರ 4x400 ಮೀಟರ್ ಮತ್ತು 4x400 ಮೀಟರ್ ಮಿಶ್ರ ರಿಲೇ ವಿಭಾಗಗಳಲ್ಲಿ ಸ್ಪರ್ಧಿಸುವರು. ಅನುಭವಿ ಅಥ್ಲೀಟ್‌ಗಳಾದ ಪೂವಮ್ಮ ಮತ್ತು ವಿಜಯಕುಮಾರಿ ಮಹಿಳಾ ವಿಭಾಗಗಳಲ್ಲಿ ಕಣಕ್ಕಿಳಿಯಲಿದ್ದಾರೆ.

ಪುರುಷರು: (4x400 ಮೀಟರ್ ಮತ್ತು 4x400 ಮೀಟರ್ ಮಿಶ್ರ ರಿಲೇ): ತೀರ್ಥೇಶ್ ಪಿ. ಶೆಟ್ಟಿ, ಅವಿನಾಶ್ ಕುಮಾರ್, ಸೇತು ಮಿಶ್ರಾ, ನಿಹಾಲ್ ವಿಲಿಯಂ, ಎಸ್. ಸಂತೋಷ್, ರಿನ್ಸ್ ಜೋಸೆಫ್, ಸೂರಜ್ ಅಳಗರ್ ರಾಜಾ, ಮೋಹಿತ್ ಕುಮಾರ್, ಭರತ್ ಶ್ರೀಧರ್ **(4x100 ಮೀಟರ್ ಮತ್ತು 4x100 ಮೀಟರ್ ಮಿಶ್ರ):** ಅನಿಮೇಶ್ ಕುಜೂರ್, ಗುರಿಂದರ್‌ವೀರ್ ಸಿಂಗ್, ಹರ್ಷ ಸಂತೋಷ್ ರಾವತ್, ಪ್ರಣವ್ ಪ್ರಮೋದ್ ಗೌರವ್, ರಾಗುಲ್ ಕುಮಾರ್ ಗಣೇಶ್ ಕುಮಾರ್, ಸೆಂಥಿಲ್ ಕುಮಾರ್ ತಮಿಳರಸು.

ಮಹಿಳೆಯರು: (4x400 ಮೀಟರ್ ಮತ್ತು 4x00 ಮೀಟರ್ ಮಿಶ್ರ): ರಶ್ದೀಪ್, ಪೂವಮ್ಮ ಎಂ.ಆರ್, ಅನ್ನಾ ಬಾಬು, ವಿಜಯ ಕುಮಾರಿ ಜಿ.ಕೆ, ಸಲೋನಿ ನಗರ್, ನೀರೂ ಪಾಠಕ್, ಶುಭಾ ವಿ, ಗೌರಿನಂದನ. **(4x100 ಮೀ ಮತ್ತು 4x100 ಮೀ ರಿಲೇ):** ನಿತ್ಯಾ ಗಂಧೆ, ತಮನ್ನಾ, ಸ್ನೇಹಾ ಎಸ್.ಎಸ್., ಸುದೇಷ್ಣಾ ಶಿವಂಕರ್, ಅಭಿನಯ ರಾಜರಾಜನ್.

ಕಿವೀಸ್, ಭಾರತ ಐತಿಹಾಸಿಕ ಸರಣಿಗೆ ವೇದಿಕೆ ಸಜ್ಜು

ಆಕ್ಲೆಂಡ್ (ಪಿಟಿಐ): ಭಾರತ ಮತ್ತು ನ್ಯೂಜಿಲೆಂಡ್ ದೇಶಗಳ ಕ್ರೀಡಾ ಬಾಂಧವ್ಯಕ್ಕೆ 100 ವರ್ಷಗಳು ತುಂಬಲಿವೆ. ಈ ಸಂದರ್ಭದಲ್ಲಿ ಉಭಯ ತಂಡಗಳ ನಡುವಣ ದೀರ್ಘ ಅವಧಿಯ ಕ್ರಿಕೆಟ್ ಸರಣಿಯು ನಡೆಯಲಿದೆ.

ಉಭಯ ತಂಡಗಳ ಸರಣಿಯು ಅಕ್ಟೋಬರ್ 22 ರಿಂದ ಡಿಸೆಂಬರ್ 1ರವರೆಗೆ ನಡೆಯಲಿದೆ. ಒಟ್ಟು 12 ಪಂದ್ಯಗಳು ಇರಲಿವೆ. ಅದರಲ್ಲಿ ಎರಡು ಟೆಸ್ಟ್ ಹಾಗೂ ಸೀಮಿತ ಓವರ್‌ಗಳ (ವೈಟ್‌ಬಾಲ್) ಹತ್ತು ಪಂದ್ಯಗಳು ನಡೆಯಲಿವೆ. ಒಟ್ಟು 40 ದಿನಗಳ ಪ್ರವಾಸ ಇದಾಗಿದೆ.


ಟಿ20 ಪಂದ್ಯದೊಂದಿಗೆ ಕ್ರೈಸ್ಟ್‌ಚರ್ಚ್‌ನಲ್ಲಿ ಸರಣಿ ಆರಂಭವಾಗುವುದು. ಚುಟುಕು ಮಾದರಿಯ ಸರಣಿಯ ನಂತರ ಏಕದಿನ ಕ್ರಿಕೆಟ್ ಸರಣಿಯು ನವೆಂಬರ್ 4ರಿಂದ ಆಕ್ಲೆಂಡ್‌ನಲ್ಲಿ ಶುರುವಾಗಲಿದೆ.

ವೆಲ್ಲಿಂಗ್ಟನ್‌ನಲ್ಲಿ ನವೆಂಬರ್ 19 ರಿಂದ 23ರವರೆಗೆ ಮೊದಲ ಟೆಸ್ಟ್ ಮತ್ತು ಕ್ರೈಸ್ಟ್‌ಚರ್ಚ್‌ನ ಹೆಗ್ಲೆ ಓವಲ್‌ನಲ್ಲಿ ನವೆಂಬರ್ 27 ರಿಂದ ಡಿಸೆಂಬರ್ 1ರವರೆಗೆ ಎರಡನೇ ಟೆಸ್ಟ್ ನಡೆಯಲಿವೆ.

'ಇದು ಕ್ರಿಕೆಟ್ ಸರಣಿಯಷ್ಟೇ ಅಲ್ಲ. ನ್ಯೂಜಿಲೆಂಡ್ ಮತ್ತು ಭಾರತದ ಕ್ರೀಡಾಸಂಬಂಧವನ್ನು ಸಂಭ್ರಮಿಸುವ ಸಂದರ್ಭವಾಗಿದೆ. ಇದೊಂದು ಸಾಂಸ್ಕೃತಿಕ ಮಹತ್ವ ಇರುವ ಸರಣಿಯಾಗಿದೆ' ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮಾರುಕಟ್ಟೆ ಮತ್ತು ವಾಣಿಜ್ಯ ವಿಭಾಗದ ಮುಖ್ಯ ಅಧಿಕಾರಿ ಗ್ಲೆನ್ ಕ್ರಿಚ್ಲೆ ಹೇಳಿದ್ದಾರೆ.

2019–20ರಲ್ಲಿ ಭಾರತವು ಕೊನೆಯ ಬಾರಿಗೆ ಕಿವೀಸ್ ನೆಲದಲ್ಲಿ ಟೆಸ್ಟ್ ಸರಣಿಯನ್ನು ಆಡಿತ್ತು. ಅದರ ನಂತರ ನ್ಯೂಜಿಲೆಂಡ್ ತಂಡವು ಎರಡು ಬಾರಿ ಭಾರತದಲ್ಲಿ ಸರಣಿ ಆಡಿತ್ತು.

'ಭಾರತದ ಎದುರು ಆಡುವುದು ವಿಶೇಷವಾದ ಸಂದರ್ಭವಾಗಿದೆ. ಪ್ರತಿಭಾವಂತ ಮತ್ತು ಖ್ಯಾತನಾಮ ಆಟಗಾರರು ಇರುವ ತಂಡ ಭಾರತದ್ದು. ಪ್ರತಿ ಬಾರಿ ಅವರನ್ನು ಎದುರಿಸುವಾಗಲೂ ಸವಾಲು ಕಠಿಣವಾಗಿಯೇ ಇರುತ್ತದೆ. ಕಳೆದ ಕೆಲವು ವರ್ಷಗಳಿಂದ ಉಭಯ ತಂಡಗಳ ನಡುವೆ ಬೆಳೆದಿರುವ ಪೈಪೋಟಿಯು ರೋಚಕವಾಗಿದೆ. ಮುಂಬರುವ ಸರಣಿಯಲ್ಲಿಯೂ ಇಂತಹ ರೋಚಕತೆಗಳು ಇರುವ ನಿರೀಕ್ಷೆ ಇದೆ' ಎಂದು ಕಿವೀಸ್ ತಂಡದ ಸ್ಪಿನ್ನರ್ ಈಶ್ ಸೋಧಿ ಹೇಳಿದ್ದಾರೆ.



ಈಶ್ ಸೋಧಿ

ವೇಳಾಪಟ್ಟಿ ಇಂತಿದೆ

ಟಿ20 ಪಂದ್ಯಗಳು: ಕ್ರೈಸ್ಟ್‌ಚರ್ಚ್ (ಅ.22), ಕ್ರೈಸ್ಟ್‌ಚರ್ಚ್ (ಅ.24), ವೆಲ್ಲಿಂಗ್ಟನ್ (ಅ.27), ಆಕ್ಲೆಂಡ್ (ಅ.30), ಹ್ಯಾಮಿಲ್ಟನ್ (ನ.1).

ಏಕದಿನ ಪಂದ್ಯಗಳು: ಆಕ್ಲೆಂಡ್ (ನ.4), ವೆಲ್ಲಿಂಗ್ಟನ್ (ನ.7), ಹ್ಯಾಮಿಲ್ಟನ್ (ನ.10), ಮೌಂಟ್ ಮಾಂಗನೂಯಿ (ನ.13), ಮೌಂಟ್ ಮಾಂಗನೂಯಿ (ನ.15)

ಟೆಸ್ಟ್ ಪಂದ್ಯ: ವೆಲ್ಲಿಂಗ್ಟನ್ (ನ.19–23), ಕ್ರೈಸ್ಟ್‌ಚರ್ಚ್ (ನ.27 –ಡಿ.1)

ವಿಶ್ವ ಯೋಗ ಚಾಂಪಿಯನ್‌ಷಿಪ್ ಇಂದಿನಿಂದ

ಅಹಮದಾಬಾದ್ (ಪಿಟಿಐ): ಸುಮಾರು 60 ದೇಶಗಳ 400ಕ್ಕೂ ಹೆಚ್ಚು ಮಂದಿ, ಗುರುವಾರ ಇಲ್ಲಿ ಆರಂಭವಾಗುವ ಮೊತ್ತಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್ 2026 (ಡಬ್ಲ್ಯುವೈಸಿ 2026)ರಲ್ಲಿ ಭಾಗವಹಿಸಲಿದ್ದಾರೆ. ಈ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ದೇಶಗಳಲ್ಲಿ ಅಮೆರಿಕ, ಘಾನಾ, ಕೆನ್ಯಾ, ಮಲೇಷ್ಯಾ, ಶ್ರೀಲಂಕಾ, ಉಜ್ಬೇಕಿಸ್ತಾನ ಸೇರಿವೆ.

ಭಾರತದ ಪ್ರಾಚೀನ ಪರಂಪರೆಯ ಭಾಗವಾಗಿದ್ದ ಯೋಗಾಸನ, ಜಾಗತಿಕವಾಗಿ ಕ್ರೀಡಾ ಸ್ಪರ್ಧೆಯಾಗಿ ಬೆಳವಣಿಗೆಗೊಂಡ ಹಾದಿಗೆ ಈ ಚಾಂಪಿಯನ್‌ಷಿಪ್ ಸಾಕ್ಷಿಯಾಗಲಿದೆ. ಒಲಿಂಪಿಕ್ ಆಂದೋಲನದ ಭಾಗವಾಗುವುದಕ್ಕೆ ಮಾನ್ಯತೆ ಪಡೆಯುವ ಪ್ರಯತ್ನಕ್ಕೆ ಈ ಚಾಂಪಿಯನ್‌ಷಿಪ್ ಬಲ ನೀಡಲಿದೆ.

ಕ್ರೀಡಾ ಸಚಿವಾಲಯ, ಆಯುಷ್ ಸಚಿವಾಲಯ, ಭಾರತ ಕ್ರೀಡಾ ಪ್ರಾಧಿಕರ, ಗುಜರಾತ್ ಕ್ರೀಡಾ ಪ್ರಾಧಿಕಾರ, ಗುಜರಾತ್ ಪ್ರವಾಸೋದ್ಯಮ ಮತ್ತು ಗುಜರಾತ್ ಯೋಗಾಸನ ಕ್ರೀಡಾ ಸಂಸ್ಥೆ ಈ ಐದು ದಿನಗಳ ಚಾಂಪಿಯನ್‌ಷಿಪ್‌ಗೆ ಸಹಭಾಗಿತ್ವ ನೀಡಿವೆ.

ಆತಿಥೇಯ ಭಾರತವು ಆರು ವಯೋವರ್ಗಗಳಲ್ಲಿ ಒಟ್ಟು 122 ಮಂದಿಯ ತಂಡವನ್ನು ಕಣಕ್ಕಿಳಿಸಲಿದೆ. ಸಬ್ ಜೂನಿಯರ್ ಬಾಲಕರು ಮತ್ತು ಬಾಲಕಿಯರು (10 ರಿಂದ 14 ವರ್ಷ), ಜೂನಿಯರ್ ಬಾಲಕರು– ಬಾಲಕಿಯರು (14 ರಿಂದ 18 ವರ್ಷ), ಸೀನಿಯರ್ ಎ (28– 35 ವರ್ಷ), ಸೀನಿಯರ್ ಬಿ (35 –45 ವರ್ಷ) ಮತ್ತು ಸೀನಿಯರ್ ಸಿ (45–55 ವರ್ಷ) ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಅಥ್ಲೀಟುಗಳು (ಯೋಗ ಪಟುಗಳು) ತಮ್ಮ ಕೌಶಲಗಳನ್ನು ಪ್ರದರ್ಶಿಸಲಿದ್ದು, ಮೊದಲ ಬಾರಿ ಎಲೆಕ್ಟ್ರಾನಿಕ್ ಸ್ಕೋರಿಂಗ್ ವ್ಯವಸ್ಥೆ ಪರಿಚಯಿಸಲಾಗಿದೆ. ಪ್ರತಿದಿನ ಬೆಳಿಗ್ಗೆ 9 ರಿಂದ ರಾತ್ರಿ 9ರ ವರೆಗೆ ದೂರದರ್ಶನ ಟಿ.ವಿ. ಚಾನೆಲ್ ಮತ್ತು ದೂರದರ್ಶನದ ಯೂಟ್ಯೂಬ್ ಚಾನೆಲ್‌ನಲ್ಲಿ ನೇರ ಪ್ರಸಾರವನ್ನು ವೀಕ್ಷಿಸಬಹುದಾಗಿದೆ.

ಆಯುಷ್ ಶೆಟ್ಟಿಗೆ ಅಮೋಘ ಗೆಲುವು

ಜಕಾರ್ತಾ (ಪಿಟಿಐ): ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿಕೊಂಡ ಭಾರತದ ಯುವ ತಾರೆ ಆಯುಷ್ ಶೆಟ್ಟಿ, ಚೀನಾದ ಎದುರಾಳಿಯನ್ನು ಸೋಲಿಸಿ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಪ್ರಿ-ಕ್ವಾರ್ಟರ್‌ಫೈನಲ್ ತಲುಪಿದರು. ಆದರೆ ಡಬಲ್ಸ್‌ನಲ್ಲಿ ಭಾರತದ ಅಗ್ರ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ-ಚಿರಾಗ್ ಶೆಟ್ಟಿ ಅವರು ಬುಧವಾರ ಮೊದಲ ಗೇಮ್‌ನ ಅರ್ಧದಲ್ಲೇ ಪಂದ್ಯದಿಂದ ನಿವೃತ್ತರಾಗಬೇಕಾಯಿತು.

ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಆಯುಷ್ ಶೆಟ್ಟಿ ಮೊದಲ ಸುತ್ತಿನಲ್ಲಿ 8-21, 22-20, 21-15 ರಿಂದ 15ನೇ ಕ್ರಮಾಂಕದ ಹಾಂಗ್ ಯಾಂಗ್ ವೆಂಗ್ ಅವರನ್ನು ಸೋಲಿಸಿದರು. ಈ ಪಂದ್ಯ 66 ನಿಮಿಷ ನಡೆಯಿತು.

ಮೊದಲ ಗೇಮ್‌ಅನ್ನು ಸುಲಭವಾಗಿ ಕಳೆದುಕೊಂಡಿದ್ದ ಆಯುಷ್ ಎರಡನೆಯದರಲ್ಲಿ 11-15ರಲ್ಲಿ ಹಿನ್ನಡೆಯಲ್ಲಿದ್ದು ಸೋಲಿನ ಆತಂಕದಲ್ಲಿದ್ದರು. ಆದರೆ ಅಮೋಘ ರ‍್ಯಾಲಿಗಳ ಮೂಲಕ ಆ ಗೇಮ್ ಗೆದ್ದ ಆಯುಷ್ ನಿರ್ಣಾಯಕ ಗೇಮ್‌ಗೆ ಪಂದ್ಯ ವಿಸ್ತರಿಸಿದರು. ಬ್ಯಾಡ್ಮಿಂಟನ್ ಏಷ್ಯಾ ಕೂಟದಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಆಯುಷ್ ಈ ಗೇಮ್‌ನಲ್ಲಿ ಬಿಗಿ ಹಿಡಿತ ಸಾಧಿಸಿದರು.

ಭಾರತದ ಆಟಗಾರ ಎರಡನೇ ಸುತ್ತಿನಲ್ಲಿ ಹಾಂಗ್‌ಕಾಂಗ್‌ನ ಲೀ ಚಿಯುಕ್ ಯಿಯು ಅವರನ್ನು ಎದುರಿಸಲಿದ್ದಾರೆ.

ಇದೇ ವೇಳೆ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಭುಜದ ನೋವಿನಿಂದ ಬಳಲಿದ ಭಾರತದ ಡಬಲ್ಸ್ ಜೋಡಿ (ಚಿರಾಗ್ ಶೆಟ್ಟಿ ಜೊತೆಗಾರ) ಮೊದಲ ಸುತ್ತಿನ ಪಂದ್ಯದಲ್ಲಿ ಹಿಂದೆಸರಿದರು. ಆಗ ಮಲೇಷ್ಯಾದ ಕಾಂಗ್ ಖಾಯಿ ಶಿಂಗ್–ಆರನ್ ತಾಜ್ ಜೋಡಿ 11-6 ರಿಂದ ಮುನ್ನಡೆ ಸಾಧಿಸಿತ್ತು.

ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ 17-21, 21-16, 19-21 ರಲ್ಲಿ ಐರ್ಲೆಂಡ್‌ನ ನಾಟ್ ನುಯೆನ್ ಅವರಿಗೆ ಸೋತರು.

ಮಿಶ್ರ ಡಬಲ್ಸ್‌ನಲ್ಲಿ 41ನೇ ಕ್ರಮಾಂಕದ ರೋಹನ್ ಕಪೂರ್–ರುತ್ವಿಕಾ ಗದ್ದೆ ಜೋಡಿ 21-14, 21-14 ರಿಂದ ಚೀನಾ ತೈಪಿಯ ಪೊ ಸುವಾನ್ ಯಾಂಗ್– ಲಿಂಗ್ ಪಾಂಗ್ ಹು ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆಯಿತು.